

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ
ಫೆಬ್ರವರಿ 15 ಭಾನುವಾರ 2026
ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871
ಸಂಪುಟ: 46 | ಸಂಚಿಕೆ: 297 | ಪುಟಗಳು: 12
ಜಾಹೀರಾತು: ad@mysurumithra.com, website: www.mysurumithra.com
ಸುದ್ದಿ, ಫೋಟೋಗೆ: news@mysurumithra.com
₹4



ಕೆ.ಸಿ.ನಗರ ಕೆರೆ ರಕ್ಷಣೆ

ತಹಶೀಲ್ದಾರ್ ಕೆ.ಎಂ.ಮಹೇಶ್‌ಕುಮಾರ್ ನೇತೃತ್ವದಲ್ಲಿ ಅತಿಕ್ರಮಣ ತೆರವು

- ಘರ್ಜಿಸಿದ ಜೆಸಿಬಿ ಯಂತ್ರಗಳು, ಭಾಗಶಃ ಕಾಂಪೌಂಡ್ ನೆಲಸಮ
- 'ಖಾಸಗಿ ಆಸ್ತಿ' ಫಲಕ ಕಿತ್ತೆಸೆದ ಅಧಿಕಾರಿಗಳು
- 6 ಎಕರೆ 10 ಗುಂಟೆ ಕೆರೆ ಭೂಮಿ ಸಂರಕ್ಷಣೆ
- ಸ್ವಯಂ ತೆರವಿಗೆ ಒಂದು ದಿನ ಕಾಲಾವಕಾಶ

ಮೈಸೂರು,ಫೆ.14(ಬಿಎಲ್‌ಯು)– ಮೈಸೂರಿನ ಚಾಮುಂಡಿ ಬೆಟ್ಟ ತಪ್ಪಲಿನ ಕೆ.ಸಿ.ನಗರದ ಕೆರೆ ಅತಿಕ್ರಮಣವನ್ನು ಮೈಸೂರು ಜಿಲ್ಲಾಡಳಿತ ಕೊನೆಗೂ ತೆರವುಗೊಳಿಸಿದೆ. ಈ ಮೂಲಕ ಖಾಸಗಿಯವರ ಪಾಲಾಗುತ್ತಿದ್ದ ಕೋಟ್ಯಾಂತರ ರೂ. ಮೌಲ್ಯದ ಸರ್ಕಾರಿ ಭೂಮಿಯನ್ನು ಉಳಿಸಲಾಗಿದೆ. ಕೆರೆ ಒತ್ತುವರಿ ಬಗ್ಗೆ 'ಮೈಸೂರು ಮಿತ್ರ'ನ ಸರಣಿ ವರದಿ ಫಲಿಸಿದೆ.

ಇಂದು ಕೆ.ಸಿ.ನಗರದ ಸದರಿ ಕೆರೆ ಸ್ಥಳಕ್ಕೆ ಭೇಟಿ ನೀಡಿದ ಮೈಸೂರು ತಾಲೂಕು ತಹಶೀಲ್ದಾರ್ ಮಹೇಶ್ ಕುಮಾರ್ ನೇತೃತ್ವದ ತಂಡ ಜೆಸಿಬಿ ಯಂತ್ರಗಳ ಮೂಲಕ ಒತ್ತುವರಿ ಮಾಡಿಕೊಂಡು ನಿರ್ಮಾಣ ಮಾಡಲಾಗಿದ್ದ ಕಾಂಪೌಂಡ್ ತೆರವು ಕಾರ್ಯ ಆರಂಭಿಸಿದರು. ಅದರಂತೆ ಜೆಸಿಬಿ ಯಂತ್ರಗಳ ಮೂಲಕ ಕಾಂಪೌಂಡ್ ಗೋಡೆ ▶ 6ನೇ ಪುಟಕ್ಕೆ



ಮೈಸೂರಿನ ಕೆ.ಸಿ.ನಗರದ ಕೆರೆ ಒತ್ತುವರಿಯನ್ನು ಶನಿವಾರ ಜೆಸಿಬಿ ಯಂತ್ರದ ಮೂಲಕ ತೆರವುಗೊಳಿಸಲಾಯಿತು.

'ಮೈಸೂರು ಮಿತ್ರ'ನ ಪ್ರಯತ್ನ ಫಲಿಸಿದೆ. ಕಂಡವರ ಪಾಲಾಗುತ್ತಿದ್ದ ಕೋಟ್ಯಾಂತರ ರೂ. ಬೆಲೆ ಬಾಳುವ ಕೆರೆ ಜಾಗ ರಕ್ಷಣೆ ಆಗಿದೆ. ಈ ಕಾರ್ಯದಲ್ಲಿ 'ಮಿತ್ರ'ನಿಗೆ ಒತ್ತಾಸೆಯಾದವರೆಲ್ಲರಿಗೂ ವಂದನೆಗಳು.

ಕೆರೆ ಒತ್ತುವರಿ ಮಾಡಿಕೊಂಡವರ ವಿರುದ್ಧ ಕಾನೂನು ಕ್ರಮ ಏಕಿಲ್ಲ!?

ಕೆರೆ ಒತ್ತುವರಿಯನ್ನು ತಾಲೂಕು ಆಡಳಿತವೇನೋ ತೆರವು ಮಾಡಿದೆ. ಆದರೆ ಸರ್ಕಾರಿ ಆಸ್ತಿಯನ್ನು ಕಬಳಿಸಿದವರ ವಿರುದ್ಧ ಯಾವುದೇ ಕಾನೂನು ಕ್ರಮ ಕೈಗೊಳ್ಳದಿರುವುದು ಸೋಜಿಗದ ಸಂಗತಿ. ಸರ್ಕಾರಿ ಭೂಮಿ ಅತಿಕ್ರಮಣ ಮಾಡಿದರೆ ಯಾವ ಕಾನೂನು ಕ್ರಮ ಇಲ್ಲವೇ? ಇದ್ದರೂ ಅಧಿಕಾರಿಗಳು ಏಕೆ ಕ್ರಮಕ್ಕೆ ಮುಂದಾಗುತ್ತಿಲ್ಲ! ಪ್ರಭಾವಿಗಳ ಒತ್ತಡಕ್ಕೆ ಮಣಿದು ಮೌನವಾಗಿದ್ದಾರೆಯೇ ಎಂಬ ಸಂಶಯಗಳು ಜನರ ಕಾಡದೇ ಇರದು. ಕೆ.ಸಿ.ನಗರ ಕೆರೆಯ ಒತ್ತುವರಿ ಇಂದು, ನಿನ್ನೆಯದ್ದಲ್ಲ, ಹತ್ತಾರು ವರ್ಷಗಳಿಂದ ಹೀಗೆ ಒತ್ತುವರಿ ಮಾಡಿಕೊಳ್ಳುತ್ತಲೇ ಬರಲಾಗಿದೆ. ಆ ವೇಳೆಯಲ್ಲಿ ಹೋರಾಟ ರೂಪುಗೊಂಡಾಗ ಒತ್ತುವರಿ ತೆರವು ಮಾಡಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಸರ್ಕಾರಿ ಆಸ್ತಿ ಅತಿಕ್ರಮಣ ಮಾಡುವವರಿಗೆ ಎಚ್ಚರಿಕೆ ಗಂಟೆಯಾಗಿ ಕಾನೂನು ಕ್ರಮ ಕೈಗೊಳ್ಳುವ ಅಗತ್ಯವಿದೆ. ಇಲ್ಲದಿದ್ದರೆ ಭೂ ಮಾಫಿಯಾ ತನ್ನ ಕರಾಮತ್ತು ತೋರುತ್ತಲೇ ಇರುತ್ತದೆ ಎಂಬುದು ಸಾರ್ವಜನಿಕರ ಅಭಿಪ್ರಾಯ.



"ಕೆರೆ ಜಾಗ ಕಬಳಿಸಿ, ಕಾಂಪೌಂಡ್ ನಿರ್ಮಿಸಿದವರೇ ಮುಂದೆ ಬಂದು, ತಾವೇ ಕಾಂಪೌಂಡ್ ತೆರವುಗೊಳಿಸುತ್ತೇವೆ ಎಂದು ಹೇಳಿರುವುದರಲ್ಲಿ ಏನೋ ಮಸಲತ್ತು ಇರಬಹುದು. ಹೀಗೆ ಕಾಲಾವಕಾಶ ಪಡೆಯುವುದೇ ಕರಾಮತ್ತು ತೋರಿಸಲು ಎಂಬ ಅರಿವು ನಮ್ಮ ಅಧಿಕಾರಿ ವರ್ಗಕ್ಕಿರಬೇಕಿದೆ. ಕೋರ್ಟ್‌ಗೆ ಹೋಗಿ ತಡೆ ಯಾಜ್ಞೆ ತರುವ ಪ್ರಯತ್ನವೂ ನಡೆಯಬಹುದು. ಹಾಗಾಗಿ, ಅತಿಕ್ರಮಣಕ್ಕೆ ಹಾಕಿರುವ ಕಾಂಪೌಂಡ್ ಅನ್ನು ನಾಳೆಯೇ ಧ್ವಂಸಗೊಳಿಸುವಂತೆ ನಮ್ಮ ಅಧಿಕಾರಿಗಳನ್ನು ಆಗ್ರಹಿಸುತ್ತೇನೆ. ಒಂದು ವೇಳೆ ಅತಿಕ್ರಮಣಕಾರರು ಕೋರ್ಟ್ ಮೊರೆ ಹೋದರೆ ನಮ್ಮ ಅಧಿಕಾರಿಗಳ ವಿರುದ್ಧ ಕ್ರಮಕ್ಕೆ ಸರ್ಕಾರವನ್ನು ಆಗ್ರಹಿಸುತ್ತೇನೆ. –ಟಿ.ಎಸ್.ಶ್ರೀವತ್ಸ, ಶಾಸಕರು.



"ಕೆ.ಸಿ.ನಗರದ ಕೆರೆ ಒತ್ತುವರಿ ತೆರವುಗೊಳಿಸಿದಂತೆ ಅತಿಕ್ರಮಣ ಮಾಡಿಕೊಂಡಿರುವ ಸರ್ಕಾರದ ಇತರೆ ಆಸ್ತಿಯನ್ನು ಹಂತ–ಹಂತವಾಗಿ ತೆರವುಗೊಳಿಸುತ್ತೇವೆ. ಇಂದು ಕೆ.ಸಿ.ನಗರದ ಕೆರೆ ಒತ್ತುವರಿ ತೆರವು ಕಾರ್ಯಾಚರಣೆ ಕೈಗೆತ್ತಿಕೊಳ್ಳಲಾಗಿತ್ತು. ಈ ವೇಳೆ ಪೀಟರ್ ಫಾರ್ಮ್ ಪ್ರತಿನಿಧಿ ಮನು ಎಂಬುವರು ಸ್ಥಳಕ್ಕೆ ಬಂದು, ಲಕ್ಷಾಂತರ ರೂಪಾಯಿ ವೆಚ್ಚ ಮಾಡಿ ಕಾಂಪೌಂಡ್ ನಿರ್ಮಾಣ ಮಾಡಿದ್ದೇವೆ. ಜೆಸಿಬಿ ಯಂತ್ರಗಳಿಂದ ತೆರವು ಮಾಡಿದರೆ ಕಾಂಪೌಂಡ್‌ನ ಸ್ಲ್ಯಾಬ್‌ಗಳು ಪುಡಿ ಪುಡಿಯಾಗುತ್ತದೆ. ಈ ಹಿನ್ನೆಲೆಯಲ್ಲಿ ನಾವೇ ಕಾಂಪೌಂಡ್ ತೆರವು ಮಾಡುತ್ತೇವೆ. ನಾಳೆ ಸಂಜೆವರೆಗೆ ಅವಕಾಶ ಕೊಡಿ ಎಂದು ಸಮಯ ಕೇಳಿದರು. ಮಾತಿನಂತೆ ನಾಳೆ ಸಂಜೆಯೊಳಗೆ ಕಾಂಪೌಂಡ್ ಗೋಡೆ ತೆರವು ಮಾಡಬೇಕು. ಇಲ್ಲವೆಂದರೆ ಸೋಮವಾರ ಬೆಳಿಗ್ಗೆ ನಾವೇ ಕಾರ್ಯಾಚರಣೆ ನಡೆಸಿ ಕಾಂಪೌಂಡ್ ಗೋಡೆ ತೆರವುಗೊಳಿಸುತ್ತೇವೆ. ಲ್ಯಾಂಡ್ ಬೀಟ್ ಸರ್ವೆ ಆಪ್‌ನಲ್ಲಿ ಸರ್ಕಾರದ ಆಸ್ತಿ ಅತಿಕ್ರಮಣದ ಬಗ್ಗೆ ಮಾಹಿತಿ ಇದೆ. ಈ ಬಗ್ಗೆ ದಾಖಲಾತಿ ಸಮೇತ ಸಮಗ್ರವಾಗಿ ಪರಿಶೀಲನೆ ನಡೆಸಿ ಅತಿಕ್ರಮಣವನ್ನು ಹಂತ ಹಂತವಾಗಿ ತೆರವು ಮಾಡುತ್ತೇವೆ. – ಮಹೇಶ್‌ಕುಮಾರ್, ತಹಶೀಲ್ದಾರ್, ಮೈಸೂರು ತಾಲೂಕು

ಮೈತ್ರಿ ವಿಚಾರದಲ್ಲಿ ಗೊಂದಲವಿಲ್ಲ; ಸಿಎಂ ಯಾರಾಗಬೇಕೆಂಬ ಚರ್ಚೆಗಿದು ಸಮಯವಲ್ಲ

ರಾಜ್ಯದಲ್ಲಿರುವ ಭ್ರಷ್ಟ ಸರ್ಕಾರ ತೆಗೆಯುವುದೇ ನನ್ನ ಅಜೆಂಡಾ

ಕೇಂದ್ರ ಸಚಿವ ಕುಮಾರಸ್ವಾಮಿ ಖಡಕ್ ನುಡಿ

ಬೆಂಗಳೂರು, ಫೆ.14–ಯಾರು ಮುಖ್ಯಮಂತ್ರಿ ಆಗಬೇಕೆಂದು ಚರ್ಚೆ ಮಾಡುವ ಸಮಯ ಇದಲ್ಲ. ಅದಕ್ಕೆ ಇನ್ನೂ ಸಮಯ ಇದೆ. ಈಗಲೇ ಮಾತನಾಡಿದರೆ ಕೂಸು ಹುಟ್ಟುವ ಮುನ್ನವೇ ಕುಲಾವಿ ಹೊಲೆಸಿದಂತೆ ಆಗುತ್ತದೆ ಎಂದು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಹೇಳಿದ್ದಾರೆ.




ಪಕ್ಷದ ರಾಜ್ಯ ಕಚೇರಿಯಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ನಾವು ಇನ್ನೂ ಮಾಡಬೇಕಾದ ಕೆಲಸ ಬೇಕಾದಷ್ಟಿದೆ. ಈಗಲೇ ಮುಖ್ಯಮಂತ್ರಿ ವಿಚಾರದ ಬಗ್ಗೆ ಮಾತನಾಡುವುದು ಸರಿಯಲ್ಲ. ರಾಜ್ಯದಲ್ಲಿ ಅತ್ಯಂತ ಕೆಟ್ಟ ಸರ್ಕಾರ ಇದೆ. ಅದನ್ನು ತೊಲಗಿಸಿ ಜನಪರ ಸರ್ಕಾರ ತರಬೇಕು ಎನ್ನುವುದು ನನ್ನ ಉದ್ದೇಶ. ಈ ಕೆಟ್ಟ ಸರಕಾರವನ್ನು ತೆಗೆಯುವುದೇ ನನ್ನ ಅಜೆಂಡಾ. ಜೆಡಿಎಸ್ ಮತ್ತು ಬಿಜೆಪಿ ಪಕ್ಷಗಳು ಸೇರಿ ಈ ಕೆಲಸ ಮಾಡುತ್ತೇವೆ ಎಂದರು.

ನಾನು ಇಲ್ಲಿವರೆಗೂ ಅನೇಕ ಸಲ ಹೇಳಿದ್ದೇನೆ. ರಾಜ್ಯದಲ್ಲಿ ಇರುವ ಜನ ವಿರೋಧಿ ಸರ್ಕಾರ ತೆಗೆಯಬೇಕು ಎನ್ನುವುದು ನನ್ನ ಉದ್ದೇಶವಾಗಿದೆ. ಮೊದಲಿನಿಂದಲೂ ಇದನ್ನೇ ಹೇಳುತ್ತಿದ್ದೇನೆ. ಕೆಲವರು ಮೈತ್ರಿ, ಮುಖ್ಯಮಂತ್ರಿ ಸ್ಥಾನದ ಬಗ್ಗೆ ಮಾತನಾಡುತ್ತಿದ್ದಾರೆ. ಅವರಿಗೆ ಉತ್ತರಿಸಬೇಕು ಎಂದು ನನಗೆ ಅನ್ನಿಸುತ್ತಿಲ್ಲ. ಒಂದು ವೇಳೆ ನಾನು ಅವರಿಗೆಲ್ಲಾ ಉತ್ತರ ನೀಡುತ್ತಾ ಹೋದರೆ ನನಗೆ ಪ್ರಬುದ್ಧತೆ ಇಲ್ಲ ಎಂದು ಜನ ಅಂದುಕೊಳ್ಳುತ್ತಾರೆ. ಹೀಗಾಗಿ ನಾನು ಆ ಬಗ್ಗೆ ಮಾತಾಡುವುದಿಲ್ಲ. ಒಟ್ಟಾಗಿ ಮೈತ್ರಿಕೂಟ ಬಲಪಡಿಸುತ್ತೇವೆ, ಒಟ್ಟಾಗಿ ಚುನಾವಣೆ ಎದುರಿಸುತ್ತೇವೆ. ಜನಪರ ಸರ್ಕಾರ ತರುತ್ತೇವೆ ಎಂದು ಸ್ಪಷ್ಟಪಡಿಸಿದರು.

ಕೆಲ ವ್ಯಕ್ತಿಗಳ ಹೇಳಿಕೆ ಬಗ್ಗೆ ನಾನು ಚರ್ಚೆ ಮಾಡಲು ಹೋಗಲ್ಲ. ಒಂದೊಂದು ಪಕ್ಷದಲ್ಲಿ ಒಂದೊಂದು ರೀತಿ ಚರ್ಚೆ ಮಾಡುತ್ತಾರೆ. ಇದೇ ಅಂತಿಮ ಅಲ್ಲ. ವಿಧಾನಸಭೆ ಚುನಾವಣೆಗೆ ಇನ್ನೂ ಎರಡು ವರ್ಷ ಇದೆ. ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಇನ್ನೂ ನಾಲ್ಕೈದು ತಿಂಗಳು ಇದೆ. ಸ್ಥಳೀಯ ಸಂಸ್ಥೆಗಳು ಅಥವಾ ಗ್ರೇಟರ್ ಬೆಂಗಳೂರು ಚುನಾವಣೆಗೆ ▶ 6ನೇ ಪುಟಕ್ಕೆ


ಶುಭಾಶಯಗಳು



ನಾಡಿನ ಸಮಸ್ತರಿಗೂ ಮಹಾ ಶಿವರಾತ್ರಿ ಶುಭಾಶಯಗಳು

ಬಿಡುವು

ಮಹಾಶಿವರಾತ್ರಿ ಹಬ್ಬದ ಪ್ರಯುಕ್ತ ಇಂದು ನಮ್ಮ ಕಾರ್ಯಾಲಯಕ್ಕೆ ರಜೆ ಇರುವುದರಿಂದ 16–02–2026ರ ಸೋಮವಾರದ 'ಮೈಸೂರು ಮಿತ್ರ' ಸಂಚಿಕೆ ಪ್ರಕಟವಾಗುವುದಿಲ್ಲ.
–ವ್ಯವಸ್ಥಾಪಕರು



'ಮೈಸೂರು ಮಿತ್ರ'ನ ಸೋದರ 'ಸ್ಟಾರ್ ಆಫ್ ಮೈಸೂರ್'ನ 49ನೇ ವಾರ್ಷಿಕೋತ್ಸವದ ಅಂಗವಾಗಿ ಫೆ.16ರಂದು 72 ಪುಟಗಳ ವಿಶೇಷಾಂಕವನ್ನು ಹೊರತರಲಾಗುತ್ತಿದೆ

ಅಧಿಕಾರ ಹಂಚಿಕೆ ವಿಚಾರದಲ್ಲಿ ವರಿಷ್ಠರ ತೀರ್ಮಾನದಂತೆ ನಡಿತೀನಿ...!

- ಸಿಎಂ ಸಿದ್ದರಾಮಯ್ಯ ಸ್ಪಷ್ಟನೆ
- ಪಕ್ಷದ ಎಲ್ಲರೂ ವರಿಷ್ಠರು ಹೇಳಿದಂತೆ ನಡೀಬೇಕು

ಬೆಂಗಳೂರು, ಫೆ.14(ಕೆಎಂಶಿ)– ಅಧಿಕಾರ ಹಂಚಿಕೆ ಕುರಿತು ವರಿಷ್ಠರ ತೀರ್ಮಾನದಂತೆ ನಡೆದುಕೊಳ್ಳಲಾಗುವುದು. ಅವರು ಹೇಳಿದಂತೆ ಪಕ್ಷದ ಎಲ್ಲರೂ ನಡೆದುಕೊಳ್ಳಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡುತ್ತಾ, ಶಾಸಕರ ಟ್ವೀಟ್ ಬಗ್ಗೆ ಪ್ರತಿಕ್ರಿಯಿಸಿ, ಪಕ್ಷದ ವರಿಷ್ಠರು ಟ್ವೀಟ್ ಮಾಡಿದ್ದಾರಾ, ಶಿವರಾತ್ರಿ ನಂತರ ನಾಯಕತ್ವದಲ್ಲಿ ಬದಲಾವಣೆ ಎಂಬುದಾಗಿ ಹೈಕಮಾಂಡ್ ಹೇಳಿದೆಯೇ ಎಂದು ಪ್ರಶ್ನಿಸಿದರು.

ದೆಹಲಿಗೆ ಕರೆದಾಗ ಹೋಗುವೆ. ಅಧಿಕಾರ ಹಂಚಿಕೆ ಕುರಿತು ಈಗಾಗಲೇ ಉತ್ತರಿಸಿದ್ದು, ಪದೇ ಪದೆ ಅದೇ ಪ್ರಶ್ನೆ ಕೇಳಬೇಡಿ ಎಂದು ಮಾಧ್ಯಮದ ಮೇಲೆಯೇ ಹರಿಹಾಯ್ದರು.

ರಾಜ್ಯ ಕಾಂಗ್ರೆಸ್ ಸರ್ಕಾರದ ಆಡಳಿತ 1000 ದಿನ ಪೂರೈಸಿದ್ದಕ್ಕೆ ಸಮಾವೇಶ ಮಾಡುತ್ತಿರುವುದು ಮೈಲಿಗಲ್ಲು ಅಲ್ಲ. ದೇಶದ ಬಡವರು, ಮಹಿಳೆಯರು, ದಲಿತರು, ಅಲ್ಪಸಂಖ್ಯಾತರು, ಹಿಂದುಳಿದವರಿಗೆ ಆರ್ಥಿಕ, ಸಾಮಾಜಿಕ ಶಕ್ತಿ ತುಂಬುವ ಕಾರ್ಯಕ್ರಮ ಮುಂದುವರಿಸಲು. ಇದುವರೆಗೆ ಕೊಟ್ಟ ಮಾತಿನಂತೆ ನಡೆದುಕೊಂಡಿದ್ದು, ಮುಂದೆಯೂ ನಡೆದುಕೊಳ್ಳುತ್ತೇವೆ. ಬಿಜೆಪಿ ಹೊಟ್ಟೆಕಿಚ್ಚಿನಿಂದ ಸಮಾವೇಶ ವಿರೋಧಿಸುತ್ತಿದೆ. ಅವರು ಅಧಿಕಾರದಲ್ಲಿದ್ದ ನಾಲ್ಕು ವರ್ಷ ಏನೂ ಮಾಡಿರಲಿಲ್ಲ.



ನಮ್ಮನ್ನು ಟೀಕಿಸಲು ಬಿಜೆಪಿಗೆ ನೈತಿಕ ಹಕ್ಕಿಲ್ಲ. 2018ರಲ್ಲಿ 600 ಭರವಸೆ ಕೊಟ್ಟಿದ್ದರು. ಶೇ.10 ರಷ್ಟನ್ನೂ ಈಡೇರಿಸಿಲ್ಲ. ನಾವು ನೀಡಿದ್ದ 592 ಭರವಸೆಗಳ ಪೈಕಿ ಎರಡೂವರೆ ವರ್ಷಗಳ ಆಡಳಿತದಲ್ಲಿ 243 ಈಡೇರಿಸಿದ್ದೇವೆ. ಉಳಿದವನ್ನೂ ಈಡೇರಿಸಲು ಪ್ರಯತ್ನಿಸುತ್ತೇವೆ. ಕಾಂಗ್ರೆಸ್ ಸರ್ಕಾರ ವಚನ ಭ್ರಷ್ಟ ಎಂಬ ಸಂಸದ ಬಿ.ವೈ. ರಾಘವೇಂದ್ರ ಆರೋಪ ಸುಳ್ಳು. ಬೇಡ್ತಿ–ವರದಾ ನದಿ ಜೋಡಣೆ ಸಂಬಂಧ ಕೇಂದ್ರ ಸರ್ಕಾರಕ್ಕೆ ಡಿಪಿಆರ್ ಕಳುಹಿಸಿದ್ದು, ಕೇಂದ್ರ ಯಾವುದೇ ತೀರ್ಮಾನ ಮಾಡುತ್ತಿಲ್ಲ. ತೀರ್ಮಾನ ಕೈಗೊಳ್ಳುವ ಭರವಸೆಯಾಗಲಿ, ನಂಬಿಕೆಯಾಗಲಿ ಇಲ್ಲ. ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆ ವರದಿ ಶೀಘ್ರದಲ್ಲಿ ಸಲ್ಲಿಕೆಯಾಗಲಿದ್ದು, ನಂತರ ಸರ್ಕಾರ ತೀರ್ಮಾನ ಕೈಗೊಳ್ಳಲಿದೆ ಎಂದರು.

ಮೈಸೂರಲ್ಲಿ ಸಾವಿರಾರು ಕಂಠದಿಂದ ಮೊಳಗಿದ

ಹನುಮಾನ್ ಚಾಲೀಸಾ ಪಾರಾಯಣ

ರಾಮ–ಲಕ್ಷ್ಮಣ, ಜಾನಕಿ ಜೈ, ಬೋಲೋ ಹನುಮಾನ್ ಕಿ ಜೈ, ರಾಮ ರಾಮ ಘೋಷಣೆಗಳ ಝೇಂಕಾರ

- 18 ಬಾರಿ ಹನುಮಾನ್ ಚಾಲೀಸಾ ಪಠಣ
- ರಾಮ ನಾಮ ಜಪದಲ್ಲಿ ಸಾವಿರಾರು ಭಕ್ತರು ತಲ್ಲೀನ
- ಪಾರಾಯಣದ ಹಿನ್ನೆಲೆ ವಿವರಿಸಿದ ಶ್ರೀಗಳು
- ಹೋಮ, ಹವನ ನಡೆದು, ಪೂರ್ಣಾಹುತಿ ಅರ್ಪಣೆ



ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಶನಿವಾರ ನಡೆದ ಶ್ರೀ ಹನುಮಾನ್ ಚಾಲೀಸ ಪಾರಾಯಣದ ವೇಳೆ ಅವಧೂತ ದತ್ತ ಪೀಠದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರು ಭಕ್ತರ ಬಳಿ ಬಂದು ಆಶೀರ್ವದಿಸಿದರು.

ಮೈಸೂರು,ಫೆ.14(ಬಿಎಲ್‌ಯು)– ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಶನಿವಾರ ಅವಧೂತ ದತ್ತ ಪೀಠದಿಂದ ಆಯೋಜಿಸಿದ್ದ ಶ್ರೀ ಹನುಮಾನ್ ಚಾಲೀಸಾ ಸಾಮೂಹಿಕ ಪಾರಾಯಣದಲ್ಲಿ ಸಾವಿರಾರು ಆಸ್ತಿಕ ಬಾಂಧವರು ಪಾಲ್ಗೊಂಡು ಭಕ್ತಿ–ಭಾವದಿಂದ ಪಾರಾಯಣ ಮಾಡಿದರು.

ಅವಧೂತ ದತ್ತ ಪೀಠದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ರಾಮ ನಾಮ ಘೋಷಣೆಗಳನ್ನು ಮೊಳಗಿಸುವ ಮೂಲಕ ಹನುಮಾನ್ ಚಾಲೀಸ ಪಾರಾಯಣಕ್ಕೆ ವಿಧ್ಯುಕ್ತ ಚಾಲನೆ ನೀಡಿದರು. ರಾಮ ಲಕ್ಷ್ಮಣ ಜಾನಕಿ ಕಿ ಜೈ, ಬೋಲೋ ಹನುಮಾನ್ ಕಿ ಜೈ ಎಂಬ ಘೋಷ ವಾಕ್ಯವನ್ನು ಶ್ರೀಗಳು ಮೊಳಗಿಸಿದಾಗ ಸಾವಿರಾರು ಸಂಖ್ಯೆಯಲ್ಲಿ ರಾಮ ಭಕ್ತರು ಕೂಡ ಧ್ವನಿಯಾದರು. ಹೀಗೆ 18 ಬಾರಿ ಹನುಮಾನ್ ಚಾಲೀಸಾ ಪಠಣ ಮಾಡಲಾಯಿತು.

ಸಹಸ್ರಾರು ಸಂಖ್ಯೆಯಲ್ಲಿದ್ದ ಭಕ್ತರ ಸಿರಿ ಕಂಠದಲ್ಲಿ ಹನುಮ ಸ್ಮರಣೆ ಮಾಡಲಾಯಿತು. ಈ ವೇಳೆ ಶಾಸಕರಾದ ಕೆ.ಹರೀಶ್‌ಗೌಡ, ಟಿ.ಎಸ್. ಶ್ರೀವತ್ಸ, ಜಿ.ಟಿ.ದೇವೇಗೌಡ, ನಗರ ಬಿಜೆಪಿ ಅಧ್ಯಕ್ಷ ಎಲ್.ನಾಗೇಂದ್ರ ಸೇರಿದಂತೆ ಹಲವು ಗಣ್ಯರು ಭಾಗಿಯಾಗಿದ್ದರು. ಈ ವೇಳೆ ಮಾತನಾಡಿದ ಗಣಪತಿ ಸಚ್ಚಿದಾನಂದ ಸ್ವಾಮೀಜಿ, ರಾಮ ಭಂಟ ಆಂಜನೇಯನನ್ನು ಭಕ್ತಿಯಿಂದ ಪೂಜಿಸಿದರೆ, ಪ್ರೀತಿಸಿದರೆ ಅಷ್ಟೈಶ್ವರ್ಯ, ನೆಮ್ಮದಿ, ಶಾಂತಿ ಲಭಿಸುತ್ತದೆ, ಯಾವುದೇ ▶ 6ನೇ ಪುಟಕ್ಕೆ

ಪೆಟ್ರೋಲ್ ಬಂಕ್ ಸಿಬ್ಬಂದಿ ಮೇಲೆ ಹಲ್ಲೆ; ಹಣ ಸುಲಿಗೆ


ಪೆಟ್ರೋಲ್ ಬಂಕ್ ಉದ್ಯೋಗಿಗೆ ಚಾಕು ತೋರಿಸಿ ಬೆದರಿಕೆ ಹಾಕುತ್ತಿರುವ ದೃಶ್ಯ

ಬಿಳಿಕೆರೆ ಸಮೀಪ ಹುಣಸೂರು ರಸ್ತೆಯಲ್ಲಿ ಗುರುವಾರ ರಾತ್ರಿ ಘಟನೆ

ಮೈಸೂರು,ಫೆ.14(ಆರ್‌ಕೆ)– ಪೆಟ್ರೋಲ್ ಬಂಕ್ ಮೇಲೆ ಸಿನಿಮೀಯ ಶೈಲಿಯಲ್ಲಿ ದಾಳಿ ನಡೆಸಿದ ಐವರು ದುಷ್ಕರ್ಮಿಗಳು ಸಿಬ್ಬಂದಿಗಳಿಬ್ಬರ ಮೇಲೆ ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿ, 15,300 ರೂ. ನಗದು ಸುಲಿಗೆ ಮಾಡಿ, ಪರಾರಿಯಾಗಿರುವ ಘಟನೆ ಬಿಳಿಕೆರೆ ಸಮೀಪ ಹುಣಸೂರು ರಸ್ತೆಯಲ್ಲಿ ಸಂಭವಿಸಿದೆ.

ಹುಣಸೂರು ರಸ್ತೆಯ ಕರಿಮುದ್ದನಹಳ್ಳಿ ಗ್ರಾಮದ ಬಳಿಯ ಸ್ವಾಮಿ ಸರ್ವೀಸ್ ಸ್ಟೇಷನ್ ಇಂಡಿಯನ್ ಆಯಿಲ್ ಪೆಟ್ರೋಲ್ ಬಂಕ್‌ನಲ್ಲಿ ಈ ಘಟನೆ ನಡೆದಿದ್ದು, ಕ್ಯಾಷಿಯರ್ ಅಜಯ್‌ಕುಮಾರ್ ಹಾಗೂ ಸಿಬ್ಬಂದಿ ದಿನೇಶ್, ದರೋಡೆ ಕೋರರಿಂದ ಹಲ್ಲೆಗೊಳಗಾಗಿದ್ದಾರೆ. ಗುರುವಾರ ರಾತ್ರಿ ಸುಮಾರು 9.40 ಗಂಟೆಯಲ್ಲಿ 27 ವರ್ಷದ ವ್ಯಕ್ತಿಯೋರ್ವ ಬಂಕ್‌ಗೆ ಬಂದು ಅಲ್ಲಿರುವ ನಲ್ಲಿಯಲ್ಲಿ ವಾಟರ್ ಕ್ಯಾನ್‌ಗೆ ನೀರು ತುಂಬಿಸಿಕೊಂಡು ಹೋಗಿದ್ದು, ನಂತರ ರಾತ್ರಿ 10 ಗಂಟೆಗೆ ಮತ್ತೆ ಬಂದ ಆ ವ್ಯಕ್ತಿ ಡೀಸೆಲ್ ಇದೆಯೇ ಎಂದು ಕೇಳಿದ್ದಾರೆ. ಈಗಾಗಲೇ ಪಂಪ್ ಆಫ್ ಮಾಡಿರುವುದರಿಂದ ಡೀಸೆಲ್ ಸಿಗಲ್ಲ ಆದರೆ, ನಾವು ತೆಗೆದಿಟ್ಟಿರುವ 5 ಲೀಟರ್ ಡೀಸೆಲ್ ಕ್ಯಾನ್‌ನಲ್ಲಿ ಇದೆ. ಬೇಕಾದರೆ ಕೊಡುತ್ತೇವೆ ಎಂದು ಕ್ಯಾಷಿಯರ್ ಹೇಳಿದ್ದಾರೆ.

ಆಗ ಕ್ಯಾಷಿಯರ್‌ರವರ ಪೇಟಿಎಂ ಸ್ಕ್ಯಾನರ್ ಫೋಟೋ ತೆಗೆದುಕೊಂಡ ಆತ, ಹತ್ತೇ ನಿಮಿಷದಲ್ಲಿ ಹಣ ಹಾಕುತ್ತಾರೆ ನಂತರ ಬಂದು ಡೀಸೆಲ್ ಹಾಕಿಸಿಕೊಳ್ಳುತ್ತೇವೆ ಎಂದು ಹೇಳಿ ಬಂಕ್‌ನಿಂದ ಹೊರ ಹೋಗಿದ್ದಾನೆ. ಮತ್ತೆ ರಾತ್ರಿ ಸುಮಾರು 10.22ರಲ್ಲಿ ಆ ವ್ಯಕ್ತಿಯೊಂದಿಗೆ ನಾಲ್ವರು ಯುವಕರು ನಂಬರ್ ಪ್ಲೇಟ್ ಇಲ್ಲದ ಗ್ರೇಕಲರ್ ಸ್ಕೋಡಾ ಸ್ಲೇವಿಯ ಕಾರಿನಲ್ಲಿ ಬಂದು ಡೀಸೆಲ್ ಹಾಕಿಸಿಕೊಳ್ಳುವಂತೆ ವರ್ತಿಸಿದ್ದಾರೆ.

ರಾತ್ರಿ 10.33 ಗಂಟೆ ವೇಳೆಗೆ ಎಲ್ಲರೂ ಡ್ರ್ಯಾಗರ್ ಮತ್ತು ಮಚ್ಚುಗಳನ್ನು ಹಿಡಿದು ಏಕಾಏಕಿ ಪೆಟ್ರೋಲ್ ಬಂಕ್‌ನ ಕಚೇರಿಯೊಳಗೆ ನುಗ್ಗಿ ಕ್ಯಾಷಿಯರ್ ಅಜಯ್ ಕುಮಾರ್ ಮೇಲೆರಗಿದ್ದಾರೆ. ಬೆದರಿಕೆ ಹಾಕಿ, ಹಲ್ಲೆ ನಡೆಸಿದ್ದಾರೆ. ಇದನ್ನು ಗಮನಿಸಿದ ಬಂಕ್‌ನ ಮತ್ತೋರ್ವ ಸಿಬ್ಬಂದಿ ದಿನೇಶ್ ಕ್ಯಾಷಿಯರ್ ನೆರವಿಗೆ ಬಂದಿದ್ದಾನೆ. ಆತನ ಮೇಲೂ ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿ, ಬೆದರಿಸಿದ ದುಷ್ಕರ್ಮಿಗಳು ಕ್ಯಾಷ್ ಡ್ರಾನಲ್ಲಿದ್ದ 15,300 ರೂ.ಗಳನ್ನು ತೆಗೆದುಕೊಂಡು ತಾವು ತಂದಿದ್ದ ಮಚ್ಚೊಂದನ್ನು ಅಲ್ಲಿಯೇ ಬಿಟ್ಟು ಕಾರಿನಲ್ಲಿ ಪರಾರಿಯಾಗಿದ್ದಾರೆ.

ವಿಷಯ ತಿಳಿಯುತ್ತಿದ್ದಂತೆಯೇ ಘಟನಾ ಸ್ಥಳಕ್ಕೆ ಧಾವಿಸಿದ ಬಿಳಿಕೆರೆ ಠಾಣೆ ಪೊಲೀಸರು ಮಹಜರು ನಡೆಸಿದ್ದಾರೆ. ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ, ಎಎಸ್ಪಿ ಗಳಾದ ನಾಗೇಶ್ ಸಿ.ಮಲ್ಲಿಕ್, ಹುಣಸೂರು ಉಪವಿಭಾಗದ ಡಿವೈಎಸ್ಪಿ ರವಿ ಸ್ಥಳಕ್ಕೆ ಧಾವಿಸಿ ಪರಿಶೀಲನೆ ನಡೆಸಿದ್ದಾರೆ. ಜಿಲ್ಲಾ ಬೆರಳಚ್ಚು ಮುದ್ರಾ ಘಟಕ ಹಾಗೂ ಶ್ವಾನದಳ ಸಿಬ್ಬಂದಿ ಪೆಟ್ರೋಲ್ ಬಂಕ್‌ಗೆ ತೆರಳಿ ಸಾಕ್ಷ್ಯ ಸಂಗ್ರಹಿಸಿದ್ದಾರೆ.

ಪ್ರಕರಣ ದಾಖಲಿಸಿಕೊಂಡಿರುವ ಬಿಳಿಕೆರೆ ಪೊಲೀಸರು ಪೆಟ್ರೋಲ್ ಬಂಕ್ ಮತ್ತು ಹುಣಸೂರು ರಸ್ತೆಯ ಸಿಸಿ ಕ್ಯಾಮರಾ ದೃಶ್ಯಾವಳಿಗಳನ್ನು ಪಡೆದು ದರೋಡೆಕೋರರ ಪತ್ತೆಗೆ ತೀವ್ರ ಶೋಧ ನಡೆಸುತ್ತಿದ್ದಾರೆ.

ಹನುಮಾನ್ ಚಾಲೀಸಾ ಮಹಾಯಜ್ಞದಲ್ಲಿ ವಸಿಷ್ಠಸಿಂಹ ದಂಪತಿ ಭಾಗಿ


ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರ ನೇತೃತ್ವದಲ್ಲಿ ಮೈಸೂರು ನಗರದ ಮಹಾರಾಜ ಮೈದಾನದಲ್ಲಿ ನಡೆದ ಶ್ರೀ ಹನುಮಾನ್ ಚಾಲೀಸಾ ಪಾರಾಯಣ ಮಹಾ ಯಜ್ಞದಲ್ಲಿ ಭಾಗಿಯಾದ ಚಲನಚಿತ್ರ ನಟ ವಸಿಷ್ಠ ಸಿಂಹ, ನಟಿ ಹರಿಪ್ರಿಯ ದಂಪತಿ ಮಗನೊಂದಿಗೆ ಭಾಗಿಯಾಗಿ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಗಳ ಆಶೀರ್ವಾದ ಪಡೆದರು. ನಂತರ ಹನುಮಾನ್ ಚಾಲೀಸಾ ಪಠಿಸುವ ಮೂಲಕ ಎಲ್ಲರ ಗಮನ ಸೆಳೆದರು. ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ, ಶಾಸಕ ಟಿ.ಎಸ್.ಶ್ರೀವತ್ಸ, ಬಿಜೆಪಿ ಮುಖಂಡರಾದ ರಾಜೇಂದ್ರ, ಹೊಯ್ಸಳ ಕರ್ನಾಟಕ ಸಂಘದ ಅಧ್ಯಕ್ಷರಾದ ಕೆ.ಆರ್ ಸತ್ಯನಾರಾಯಣ್, ಕಡಕೊಳ ಜಗದೀಶ್, ಮುಖಂಡ ಪ್ರದೀಪ್ ಕುಮಾರ್, ಕೇಬಲ್ ಮಹೇಶ್, ಮುಖಂಡರಾದ ವಿಕ್ರಂ ಅಯ್ಯಂಗಾರ್, ಅಜಯ್ ಶಾಸ್ತ್ರಿ, ವಿಕಾಸ್ ಶಾಸ್ತ್ರಿ, ಟಿ.ಎಸ್.ಅರುಣ್, ರಾಜಕುಮಾರ್ ಇತರರಿದ್ದರು.

ಚಿನ್ನ, ಬೆಳ್ಳಿ ಬೆಲೆ ಏರಿಕೆ ಹಿಂದೆಯೇ ಮೈಸೂರು ರೇಷ್ಮೆ ಸೀರೆ ಕೂಡ ದುಬಾರಿ

■ ಚಿನ್ನ, ಬೆಳ್ಳಿ, ಶುದ್ಧ ರೇಷ್ಮೆ ಬಳಸಿ ಸೀರೆ ತಯಾರಿಕೆ ■ ಸಾಂಪ್ರದಾಯಿಕ, ಕಲಾತ್ಮಕ ವಿನ್ಯಾಸ ■ 19 ಸಾವಿರದಿಂದ 2.5 ಲಕ್ಷದ ವಿವಿಧ ರೇಷ್ಮೆ ಸೀರೆಗಳು ■ ಬೆಲೆ ಹೆಚ್ಚಾದರೂ ಬೇಡಿಕೆ ಕಡಿಮೆಯಾಗಿಲ್ಲ ■ ಸೀರೆ ಖರೀದಿಗೆ ಮುಗಿ ಬೀಳುವ ವನಿತೆಯರು

ಮೈಸೂರು, ಫೆ.14(ಬಿಎಲ್‌ಯು)– ಚಿನ್ನ ಮತ್ತು ಬೆಳ್ಳಿ ಬೆಲೆ ಗಗನಕ್ಕೇರಿರುವ ಹಿನ್ನೆಲೆಯಲ್ಲಿ ಮೈಸೂರು ರೇಷ್ಮೆ ಸೀರೆಗಳ ಬೆಲೆ ಕೂಡ ದುಬಾರಿಯಾಗಿದೆ. ವಿಶಿಷ್ಟ ಬಣ್ಣ ಮತ್ತು ಆಕರ್ಷಕ ವಿನ್ಯಾಸದ ಕಾರಣ ಬೆಲೆ ದುಬಾರಿಯಾದರೂ ಗ್ರಾಹಕರು ಮುಗಿ ಬಿದ್ದು ಮೈಸೂರು ರೇಷ್ಮೆ ಸೀರೆಯನ್ನು ಖರೀದಿಸುತ್ತಿದ್ದಾರೆ.

ಕನ್ಯಾಕುಮಾರಿಯಿಂದ ಜಮ್ಮು-ಕಾಶ್ಮೀರದವರೆಗೆ ವಿವಿಧ ರೇಷ್ಮೆ ಸೀರೆಗಳು ತಯಾರಾಗುತ್ತವೆ. ತಮಿಳುನಾಡಿನ ಕಾಂಜೀವರಂ, ವಾರಣಾಸಿಯ ಬನಾರಸ್, ಮಹಾರಾಷ್ಟ್ರದ ಪೈಠಣಿ, ಗುಜರಾತ್ ನ ಪಟೋಲ, ಅಸ್ಸಾಂನ ಮುಗಾ ರೇಷ್ಮೆಯ ನೇಯ್ಗೆ ಸೀರೆ ತಯಾರಾಗುತ್ತವೆ.

ಬೆಲೆ ಹೆಚ್ಚಳ ಅನಿವಾರ್ಯ

“ಚಿನ್ನ ಮತ್ತು ಬೆಳ್ಳಿ ಬೆಲೆ ಹೆಚ್ಚಳ ಆಗಿರುವ ಹಿನ್ನೆಲೆಯಲ್ಲಿ ಅನಿವಾರ್ಯವಾಗಿ ನಾವು ಕೂಡ ಕೆಎಸ್‌ಐಸಿ ರೇಷ್ಮೆ ಸೀರೆ ಬೆಲೆ ಹೆಚ್ಚಳ ಮಾಡಬೇಕಾಯಿತು. ಶುದ್ಧ ಚಿನ್ನ, ಬೆಳ್ಳಿ ಹಾಗೂ ರೇಷ್ಮೆಯಿಂದ ಮೈಸೂರು ರೇಷ್ಮೆ ಸೀರೆ ತಯಾರಿಸಲಾಗುತ್ತದೆ. ಕಚ್ಚಾ ವಸ್ತುಗಳ ಬೆಲೆ ದುಬಾರಿಯಾಗಿದೆ ಎಂಬ ಮಾತ್ರಕ್ಕೆ ನಾವು ಎಂದಿಗೂ ಗುಣಮಟ್ಟದಲ್ಲಿ ರಾಜಿ ಆಗಿಲ್ಲ. ಸ್ವಲ್ಪ ಮಟ್ಟಿಗೆ ಬೆಲೆ ಹೆಚ್ಚಳ ಮಾಡಿ ಗುಣಮಟ್ಟದ ಸೀರೆ ಮಾರಾಟ ಮಾಡುತ್ತಿದ್ದೇವೆ. ಪ್ರತಿ ರೇಷ್ಮೆ ಸೀರೆಯ ಬೆಲೆ ಶೇಕಡ 8ರಿಂದ 10ರಷ್ಟು ಹೆಚ್ಚಳ ಮಾಡಿದ್ದೇವೆ. ಬೆಲೆ ಹೆಚ್ಚಳ ಮಾಡಿರುವುದರಿಂದ ಮಾರಾಟ ಕಡಿಮೆಯಾಗಿಲ್ಲ. ಮೈಸೂರು ರೇಷ್ಮೆ ಸೀರೆಗೆ ಈ ಮೊದಲು ಇದ್ದ ಬೇಡಿಕೆ ಈಗಲೂ ಇದೆ.

–ಬಿ.ಎ.ವಿನಯ್, ವ್ಯವಸ್ಥಾಪಕರು (ಹಣಕಾಸು, ಲೆಕ್ಕ) ಕೆಎಸ್‌ಐಸಿ



ಆದರೆ, ಮೈಸೂರು ರೇಷ್ಮೆ ಸೀರೆ ಬೇರೆ ರಾಜ್ಯದ ಯಾವುದೇ ರೇಷ್ಮೆ ಸೀರೆಗಳು ಸಾಟಿ ಇಲ್ಲದೆ ದಾಖಲೆ ಬರೆದಿವೆ. ಇವುಗಳನ್ನು ಚಿನ್ನ ಮತ್ತು ಬೆಳ್ಳಿಯ ಝರಿಯೊಂದಿಗೆ ತಯಾರಿಸಲಾಗುತ್ತದೆ. ಇದರ ತಯಾರಿ ಸಾಂಪ್ರದಾಯಿಕ ಹಾಗೂ ಅತ್ಯಂತ ಕಲಾತ್ಮಕವಾಗಿದೆ.

ಅಪ್ಪಟ ಚಿನ್ನ ಮತ್ತು ಬೆಳ್ಳಿಯ ಝರಿಯಿಂದ ತಯಾರಾಗುವ ಭಾರತದ ಏಕೈಕ ರೇಷ್ಮೆ ಸೀರೆಯಾಗಿದೆ ಎಂಬ ಹೆಮ್ಮೆ ಇದೆ. ದೇಶದ ವಿವಿಧ ರಾಜ್ಯಗಳಲ್ಲಿ ರೇಷ್ಮೆ ಸೀರೆಗಳು ತಯಾರಾದರೂ ಮೈಸೂರು ರೇಷ್ಮೆ ಸೀರೆಯಷ್ಟು ಗುಣಮಟ್ಟ ಖಾತರಿ ಇಲ್ಲ.

ಮೈಸೂರು ರೇಷ್ಮೆ ಸೀರೆಗೂ ಬೇರೆ ರಾಜ್ಯದ ರೇಷ್ಮೆ ಸೀರೆಗೂ ಭಾರೀ ವ್ಯತ್ಯಾಸವಿದೆ. ಹಗುರ, ಸರಳ ಹಾಗೂ ಐಷ ರಾಮಿ ವಿನ್ಯಾಸ ಹೊಂದಿರುತ್ತವೆ. ಒಂದು ರೀತಿಯ ಸಾಫ್ಟ್ ಸಿಲ್ಕ್ ಸೀರೆ ಎನ್ನಬಹುದು.

ಶುದ್ಧ ರೇಷ್ಮೆ ದಾರದೊಂದಿಗೆ ಚಿನ್ನ ಹಾಗೂ ಬೆಳ್ಳಿ ಲೇಪಿತ ಝರಿ ಬಳಸಿ ವಿನ್ಯಾಸಗೊಳಿಸುವ ಸೀರೆಗೆ ಭಾರೀ ಬೇಡಿಕೆ ಇದೆ. ಬೇರೆ ರಾಜ್ಯದ ರೇಷ್ಮೆ ಸೀರೆಗಳಿಗಿಂತ ಮೈಸೂರು ರೇಷ್ಮೆ ಸೀರೆ ಬೆಲೆ ದುಬಾರಿಯಾಗಿದೆ. 19 ಸಾವಿರದಿಂದ ಆರಂಭವಾಗಿ 2.5 ಲಕ್ಷದವರೆಗೆ ವಿವಿಧ ರೀತಿಯ ರೇಷ್ಮೆ ಸೀರೆಗಳಿವೆ.

ಚಿನ್ನ, ಬೆಳ್ಳಿ ಬೆಲೆ ದುಬಾರಿಯಾಗಿರುವ ಹಿನ್ನೆಲೆಯಲ್ಲಿ ಇದರ ಬೆಲೆ ಕೂಡ ಹೆಚ್ಚಳವಾಗಿದೆ. ಶೇಕಡ 8ರಿಂದ 10ರಷ್ಟು ಏರಿಕೆ ಮಾಡಲಾಗಿದೆ. ಬೆಲೆ ದುಬಾರಿಯಾಗಿದೆ ಎಂದು ಜನರು ಸೀರೆ ಖರೀದಿಯಿಂದ ಹಿಂದೆ ಬಿದ್ದಿಲ್ಲ. ಮುಗಿಬಿದ್ದು ಈಗಲೂ ಸೀರೆ ಖರೀದಿಸುತ್ತಿದ್ದಾರೆ.

ಸಾಮಾನ್ಯವಾಗಿ ಯಾವುದಾದರೊಂದು ವಸ್ತುವಿನ ಬೆಲೆ ದುಬಾರಿಯಾದಾಗ ಜನರು ಖರೀದಿಯಿಂದ ಹಿಂದೆ ಸರಿಯುತ್ತಾರೆ. ಆದರೆ ಮೈಸೂರು ರೇಷ್ಮೆ ಸೀರೆ ವಿಷಯದಲ್ಲಿ ಈ ಮಾತು ತದ್ವಿರುದ್ಧ. ಬೆಲೆ ಹೆಚ್ಚಾದರೂ ಪೈಪೋಟಿಗಿಳಿದು ಸೀರೆ ಖರೀದಿ ಮಾಡುತ್ತಿದ್ದಾರೆ.

ಮೈಸೂರು ರೇಷ್ಮೆ ಸೀರೆ ಧರಿಸುವುದು ಅಂದರೆ ಪ್ರತಿಷ್ಠೆಯ ವಿಷಯವಾಗಿದೆ. ಮದುವೆ, ಆರತಕ್ಷತೆ ಸೇರಿದಂತೆ ಇತರೆ ಸಭೆ ಸಮಾರಂಭಗಳಲ್ಲಿ ಮೈಸೂರು ಸಿಲ್ಕ್ ಸೀರೆ ಧರಿಸುವುದು ಐಷರಾಮಿಯ ಹೆಗ್ಗುರುತಾಗಿದೆ. ಮಾತ್ರವಲ್ಲ, ವಿಶೇಷ ಘನತೆ ಗೌರವ. ಮೈಸೂರು ಸಿಲ್ಕ್ ಸೀರೆ ಧರಿಸಿದವರು ಆಕರ್ಷಕವಾಗಿ ಕಾಣುತ್ತಾರೆ.

ಮೈಸೂರಿನ ಮಾನಂದವಾಡಿಯ ಕೆಎಸ್‌ಐಸಿ (ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ ನಿಯಮಿತ) ಯಲ್ಲಿ ಮೈಸೂರು ರೇಷ್ಮೆ ಸೀರೆ ತಯಾರಿಸಲಾಗುತ್ತದೆ. ಸೀರೆ ಖರೀದಿಸಲೆಂದು ಜನರು ಪ್ರತಿ ನಿತ್ಯ ಮುಂಜಾನೆ 4 ಗಂಟೆಗೇ ಕ್ಯೂ ನಿಲ್ಲುತ್ತಿದ್ದಾರೆ. ಸರದಿ ಸಾಲಿನಲ್ಲಿ ನಿಲ್ಲುವ ಎಲ್ಲರಿಗೂ ಸೀರೆ ದೊರೆಯುತ್ತದೆ ಎಂಬ ಖಾತರಿ ಇಲ್ಲ. ಮುಂಚೂಣಿಯಲ್ಲಿರುವ ಕೆಲವರಿಗೆ ಸೀರೆ ದೊರೆತರೆ, ಕೆಲವರು ಬರಿಗೈನಲ್ಲಿ ವಾಪಸ್ಸು ಹೋಗುವ ನಿದರ್ಶನಗಳಿವೆ. ಅಷ್ಟರ ಮಟ್ಟಿಗೆ ಮೈಸೂರು ರೇಷ್ಮೆ ಸೀರೆಗೆ ಬೇಡಿಕೆ ಇದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

15.2.2026 ಭಾನುವಾರ, ಮಳೆ ನಕ್ಷತ್ರ: ಧನಿಷ್ಠ 6.02.2026 ರಿಂದ 18.02.2026
ವಿಶ್ವಾವಸು ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಮಾಘ ಮಾಸ, ಕೃಷ್ಣ ಪಕ್ಷ,
ತಿಥಿ: ತ್ರಯೋದಶಿ, ನಕ್ಷತ್ರ: ಉತ್ತರಾಷಾಢ,
ರಾಹುಕಾಲ: ಸಂಜೆ 4.30ರಿಂದ 6ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಮಾಲತಿ ಹೆಗಡೆ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸಿನಿಮಾ ಯಾನ–ಜನ ಮೆಚ್ಚಿದ ಕನ್ನಡ ಚಿತ್ರಗಳ ನೆನಪಿನ ಮಾಲೆ, ಪ್ರಸ್ತುತಿ : ಶ್ರೀನಿವಾಸ್ ಪ್ರಸಾದ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ : ಜಯಂತಿ ವಿ. ಭಟ್ ಮತ್ತು ಡಿ. ಪುರುಷೋತ್ತಮ್, ವ್ಯಾಖ್ಯಾನ–ಡಾ. ಕಬ್ಬಿನಾಲೆ ವಸಂತ ಭಾರದ್ವಾಜ್, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ, ಡಾ.ಎಸ್.ಎಲ್.ಭೈರಪ್ಪ ಅವರ 'ದೂರ ಸರಿದರು' ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ–ಉಮೇಶ್ ಎಸ್.ಎಸ್., 8.30 ಚಿತ್ರಗೀತೆಗಳು, 9.30 ನಮ್ಮ ಆರೋಗ್ಯ–ಅಂತರಾಷ್ಟ್ರೀಯ ಮಕ್ಕಳ ಕ್ಯಾನ್ಸರ್ ದಿನದ ಸಂದರ್ಭದಲ್ಲಿ ಮಕ್ಕಳಲ್ಲಿ ಕ್ಯಾನ್ಸರ್ ಕುರಿತು ಮಾಹಿತಿ ನೀಡಲಿದ್ದಾರೆ ಮಕ್ಕಳ ತಜ್ಞರಾದ ಡಾ ಶಿವು ಪಿ, ಮಕ್ಕಳ ಕ್ಯಾನ್ಸರ್ ತಜ್ಞರಾದ ಡಾ ತರಂಗಿಣಿ ದುರ್ಗಪ್ಪ ಮತ್ತು ಡಾ.ಸೌಮ್ಯಾ.ಜೆ. ಇವರೊಂದಿಗೆ ಭಾಗವಹಿಸುತ್ತಾರೆ– ತೇಜಸ್ವಿನಿ ಗಿರೀಶ್, 10.00 ಕೇಳಿಗಿಳಿಗಳೇ–ಕಥೆ ಹೇಳ್ತಿಯೋ ಹಾಡು ಹೇಳ್ತಿಯೋ ನೇರ ಫೋನ್ ಇನ್ ಕಾರ್ಯಕ್ರಮ 10.30 ಮಕ್ಕಳ ಮಂಟಪ, ಪರೀಕ್ಷೆಗೆ ಸಿದ್ಧರಾಗೋಣ ಬನ್ನಿ ಎಸ್.ಎಸ್.ಎಲ್.ಸಿ ಪರೀಕ್ಷಾ ಸಿದ್ಧತೆ ಕುರಿತು ಬಾನುಲಿ ಸರಣಿ ಕಾರ್ಯಕ್ರಮ. ವಿಷಯ–ಗಣಿತ, ಭಾಗವಹಿಸುವವರು–ಸದ್ವಿದ್ಯಾ ಶಾಲೆಯ ಶಿಕ್ಷಕರಾದ ಪ್ರದೀಪ್.ಕೆ.ಆರ್ ಇವರೊಂದಿಗೆ ಭಾಗವಹಿಸುತ್ತಾರೆ–ದಿಗ್ವಿಜಯ್.ಬಿ., 11.00 ಮಿಶ್ರಮಾಧುರ್ಯ

ಮಧ್ಯಾಹ್ನ: 12.05 ವನಿತಾ ವಿಹಾರ–ಶಿವರಾತ್ರಿ ವಿಶೇಷ ಕಾರ್ಯಕ್ರಮ. ಪ್ರಸ್ತುತಿ: ಲಲಿತಾ ಭಜನಾ ಮಂಡಳಿ, 12.35 ಭಕ್ತಿಗೀತೆಗಳು: ಮೇಧಾ ಮಂಜುನಾಥ್, 12.45 ಜನಪದ ಸಂಗೀತ: ಮೈಸೂರು ಯರಗನಹಳ್ಳಿಯ ಸಣ್ಣಮ್ಮ ಮತ್ತು ಸಂಗಡಿಗರಿಂದ ಸೋಬಾನೆಪದ, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ –ಪ್ರಧಾನ ಮಂತ್ರಿ ಮತ್ಸ್ಯ ಸಂಪದ ಯೋಜನೆ ಈ ಕುರಿತು ಮಾಹಿತಿ, 1.20 ಭಾವಗೀತೆಗಳು– ಶ್ರೇಯಾ.ಕೆ.ಭಟ್, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ಕನ್ನಡ ಚಲನಚಿತ್ರ ಧ್ವನಿವಾಹಿನಿ–ಧರಣಿ ಮಂಡಲ ಮಧ್ಯದೊಳಗೆ, 3.40 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ. ರವೀಂದ್ರಕುಮಾರ್, 3.45 ಹರಿಕಥೆ, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.30 ICC T20 ಪುರುಷರ ವಿಶ್ವಕಪ್ ಪಂದ್ಯಾವಳಿ–2026 ಭಾರತ ಹಾಗೂ ಪಾಕಿಸ್ತಾನ ತಂಡಗಳ ನಡುವೆ ಕೊಲೊಂಬೋದ ಆರ್.ಪ್ರೇಮದಾಸ ಕ್ರೀಡಾಂಗಣದಲ್ಲಿ ನಡೆಯುವ ಪಂದ್ಯದ ವೀಕ್ಷಕ ವಿವರಣೆ

■ **ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯ:** ಸಂಸ್ಥೆಯ 90ನೇ ವಾರ್ಷಿಕೋತ್ಸವ ಹಾಗೂ ಮಹಾಶಿವರಾತ್ರಿ ಪ್ರಯುಕ್ತ ಗುಜರಾತಿನ ಸುಪ್ರಸಿದ್ಧ ಶ್ರೀ ಸೋಮನಾಥ ದಿವ್ಯ ದರ್ಶನ, ಮಹಾ ಶಿವರಾತ್ರಿ ಕಾರ್ಯಕ್ರಮ, ಸಾನ್ನಿಧ್ಯ: ಮೈಸೂರು ಉಪ ವಲಯ ಮುಖ್ಯ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಾ ಕುಮಾರಿ ಡಾ.ಲಕ್ಷ್ಮೀಜಿ, ಮುಖ್ಯ ಅತಿಥಿಗಳು: ಕಾವೇರಿ ಇಂಜಿನಿಯರಿಂಗ್ ಕಾಲೇಜು ಪ್ರಿನ್ಸಿಪಾಲ್ ಡಾ.ಆರ್.ದೀಪು, ಕೇಂದ್ರ ಕಾರಾಗೃಹ ಸಹಾಯಕ ಅಧೀಕ್ಷಕರಾದ ದೀಪಾ ಎಂ., ಭಾರತ್ ಇಂಟರ್ ನ್ಯಾಷನಲ್ ಟ್ರಾವೆಲ್ಸ್ ಸ್ಥಾಪಕ ಮಹೇಂದ್ರ ಸಾಲಿಯಾನ್, ಜಯಪ್ರಕಾಶ್ ರಾಜೇ ಅರಸ್, ಅಶೋಕ್ ಗೋವಿಂದೇಗೌಡ, ಡಾ. ಅನಿಲ್ ಥಾಮಸ್, ಸ್ಥಳ: ಐಶ್ವರ್ಯ ಪೆಟ್ರೋಲ್ ಬಂಕ್ ಎದುರು, ಸಂಜೆ 6.30ಕ್ಕೆ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಕೊಲೆಸ್ಟ್ರಾಲ್ ಚಿಕಿತ್ಸಾ ಶಿಬಿರ, ಪಾರ್ಕಿನ್‌ಸನ್ಸ್ ಕಾಯಿಲೆ, ಮೈಗ್ರೇನ್ ಹಾಗೂ ಕಣ್ಣು–ಮೂಗಿನ ಅಲರ್ಜಿಗೆ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ, ಬೆಳಗ್ಗೆ 9 ರಿಂದ.

■ **ಕಾವೇರಿ ಆಯುರ್ವೇದ ಆಸ್ಪತ್ರೆ:** ಮಂಡಿ ನೋವು, ಮೂಲವ್ಯಾಧಿ ಕುರಿತು ತಪಾಸಣೆ, ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10 ರಿಂದ.

■ **ಶ್ರೀ ಅವಧೂತ ದತ್ತ ಪೀಠ, ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ:** ಮಹಾಶಿವರಾತ್ರಿ, ಬೆಳಗ್ಗೆ 6.00 ಮಹಾ ರುದ್ರ ಹೋಮ ಪ್ರಾರಂಭ, 9.00 ಶ್ರೀ ಚಕ್ರಪೂಜೆ ಮತ್ತು ಮಹಾರುದ್ರ ಹೋಮ ಪೂರ್ಣಾಹುತಿ, 10.00 ಪೂಜ್ಯ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಯವರಿಗೆ ವೇದಿಕ್ ವೆಲ್ನೆಸ್ ಯೂನಿವರ್ಸಿಟಿ, ಫ್ಲೋರಿಡಾ, ಅಮೇರಿಕಾ–ಇವರಿಂದ ಆನರರಿ ಡಾಕ್ಟರೇಟ್ ಬಿರುದು ಪ್ರದಾನ, 11.00 ಭಕ್ತಾದಿಗಳಿಂದ ಮಹಾ ರುದ್ರಾಭಿಷೇಕ, ಸಂಜೆ 3.00 –ಮೂಲಿಕೇಶ್ವರ ಮೂರ್ತಿಗೆ ಪೂಜೆ, ಸಂಜೆ 6.30 ಪೂಜ್ಯ ಶ್ರೀ ಸ್ವಾಮೀಜಿಯವರಿಂದ ಸಚ್ಚಿದಾನಂದೇಶ್ವರ ಶಿವಲಿಂಗಕ್ಕೆ ರುದ್ರಾಭಿಷೇಕ, 7.00 ಭಕ್ತರಿಂದ ಶಿವಲಿಂಗಕ್ಕೆ ಸಹಸ್ರ ಕಳಶಾಭಿಷೇಕ, ಸಾಂಸ್ಕೃತಿಕ ಕಾರ್ಯಕ್ರಮಗಳು, 7.00 ಕರ್ನಾಟಕ ದ್ವಂದ್ವ ಪಿಟೀಲು ವಾದನ –ಜೆಜೆ ಸಹೋದರರು ವಿ॥ ಜಿತಿನ್ ಗುಡಿಪುಡಿ ಮತ್ತು ವಿ॥ ಜಸ್ಟಿನ್ ಗುಡಿಪುಡಿ, ವಿ॥ ಚಂದ್ರ ಕಾಂತ್ ಎಮ್–ಮೃದಂಗ, ವಿ॥ ನರೇಶ್–ರಿಥಮ್ ಪ್ಯಾಡ್ 10.00 ಕರ್ನಾಟಕ ಸಂಗೀತ ಗಾಯನ – ವಿ॥ ಅರ್ಜುನ್ ರಾಮ್‌ಕುಮಾರ್. ವಿ॥ ಮದುಸೂದನ್ – ಪಿಟೀಲು, ವಿ॥ ತಪನ್ ಶಂಕರ್ ಆರ್ –ಮೃದಂಗ, ವಿ॥ ಮಂಜುನಾಥ್ ಆರ್–ಘಟಂ, ವಿ॥ ರಾಮಾನುಜಂ– ಮೊರ್ಸಿಂಗ್, 11.00 – ಸಚ್ಚಿದಾನಂದೇಶ್ವರ ಶಿವಲಿಂಗಕ್ಕೆ 11 ಬಾರಿ ರುದ್ರ ಪ್ರಶ್ನ ವೇದ ಮಂತ್ರಗಳೊಂದಿಗೆ ರುದ್ರಾಭಿಷೇಕ ಮತ್ತು ವಿವಿಧ ಅಲಂಕಾರಗಳು, ಸ್ಥಳ: ಮಹಾರಾಜ ಕಾಲೇಜು ಮೈದಾನ, ಮೈಸೂರು.

■ **ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್, ಕನ್ನೇಗೌಡ ಕೊಪ್ಪಲು ಮರುಳೇಶ್ವರ ದೇವಸ್ಥಾನದ ಧರ್ಮದರ್ಶಿ ಟ್ರಸ್ಟ್ ಹಾಗೂ ನೇಗಿಲಯೋಗಿ ಮಹಿಳೆಯರ ಹಿತೈಷಿಗಳ ಸೇವಾ ಬಳಗ :** ಶಿವದೀಪೋತ್ಸವದ ಅಂಗವಾಗಿ ರಂಗೋಲಿ ಸ್ಪರ್ಧೆ, ಸ್ಥಳ: ಮರುಳೇಶ್ವರ ದೇವಸ್ಥಾನದ ಆವರಣ, ಆದಿಚುಂಚನಗಿರಿ ರಸ್ತೆ, 3ನೇ ಎಡ ತಿರುವು, ಜಯನಗರ, ಸಂಜೆ 4 ಗಂಟೆಯಿಂದ 6 ಗಂಟೆಯವರೆಗೆ

■ **ಶ್ರೀ ಮಲೆ ಮಹದೇಶ್ವರಸ್ವಾಮಿ ದೇವಸ್ಥಾನ ಟ್ರಸ್ಟ್ :** ಮಹಾಶಿವರಾತ್ರಿ ಪೂಜಾ ಮಹೋತ್ಸವ, ಬೆಳಗ್ಗೆ 6ಕ್ಕೆ ಶ್ರೀ ಮಹದೇಶ್ವರಸ್ವಾಮಿಯವರ ಪ್ರಾಣಲಿಂಗಕ್ಕೆ ಮಹಾರುದ್ರಾಭಿಷೇಕ, ಹಾಲಭಿಷೇಕ, ಬಿಲ್ವಾರ್ಚನೆ, ನಿವೇದನೆ, ದೂಪದಾರತಿ, ತುಪ್ಪದಾರತಿ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸಂಜೆ 6ಕ್ಕೆ ವಿಶೇಷ ಮಹಾರುದ್ರಾಭಿಷೇಕ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸಂಜೆ 7ಕ್ಕೆ ಶ್ರೀ ಶಿವಪಾರ್ವತಿ, ಶ್ರೀ ಸ್ವಾಮಿಯ ಉತ್ಸವಮೂರ್ತಿ ಹಾಗೂ ಸುವರ್ಣ ಕೊಳಗದ ಮೆರವಣಿಗೆ, ಸ್ಥಳ: ಶ್ರೀ ಮಲೆ ಮಹದೇಶ್ವರ ಸ್ವಾಮಿ ದೇವಸ್ಥಾನ, ಲಷ್ಕರ್ ಮೊಹಲ್ಲಾ.

■ **ಶ್ರೀ ಚಂದ್ರಮೌಳೀಶ್ವರಸ್ವಾಮಿ ದೇವಸ್ಥಾನ :** ಮಹಾಶಿವರಾತ್ರಿ ಉತ್ಸವ, ಸಂಜೆ 6 ರಿಂದ ಬೆಳಗ್ಗೆ 6 ರವರೆಗೆ ದರ್ಶನ, ಸ್ಥಳ: ದೇವಸ್ಥಾನ, ವಿ.ವಿ. ಮೊಹಲ್ಲಾ.

■ **ದಕ್ಷಿಣ ಕನ್ನಡ ವೈದ್ಯರ ಸಾಂಸ್ಕೃತಿಕ ಸಂಘ :** ದಕ್ಷಿಣ ಕನ್ನಡದ ಸುಪ್ರಸಿದ್ಧ ಕಲಾವಿದರಾದ ವಿಠಲ ನಾಯಕ್ ಕಲ್ಲಡ್ಕ ಮತ್ತು ಬಳಗದವರಿಂದ ಗೀತಾ ಸಾಹಿತ್ಯ ಸಂಭ್ರಮ, ಸ್ಥಳ: ಜಗನ್ಮೋಹನ ಅರಮನೆ ಸಭಾಂಗಣ, ಸಂಜೆ 6ಕ್ಕೆ.

■ **ಶ್ರೀ ಮುಕ್ಕಣ್ಣೇಶ್ವರಸ್ವಾಮಿಯುವರ ದೇವಸ್ಥಾನ :** 58ನೇ ವರ್ಷದ ಮಹಾಶಿವರಾತ್ರಿ, ಬೆಳಗ್ಗೆ 6ರಿಂದಶ್ರೀ ಗಣಪತಿ ಪೂಜೆ, ಕಳಸ ಸ್ಥಾಪನೆ, ನವಗ್ರಹ ಪೂಜೆ, ಶ್ರೀ ಮುಕ್ಕಣ್ಣೇಶ್ವರಸ್ವಾಮಿಗೆ ಪಂಚಾಮೃತ, ರುದ್ರಾಭಿಷೇಕ, ಅರ್ಚನೆ, ಮಹಾಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಸಂಜೆ 4.30ಕ್ಕೆ ಶ್ರೀ ಮುಕ್ಕಣ್ಣೇಶ್ವರಸ್ವಾಮಿಯವರ ವೈಭವದ ಉತ್ಸವ, ರಾತ್ರಿ 7.30ಕ್ಕೆ ಇಡೀ ರಾತ್ರಿ ಅಖಂಡ ಭಜನೆ, ಸ್ಥಳ: ಶ್ರೀ ಮುಕ್ಕಣ್ಣೇಶ್ವರಸ್ವಾಮಿ ದೇವಸ್ಥಾನ, ಅಶೋಕ ರಸ್ತೆ

■ **ನಾಗರಿಕ ವೇದಿಕೆ, ಶ್ರೀ ಪ್ರಸನ್ನ ಶಿವಲಿಂಗೇಶ್ವರಸ್ವಾಮಿ ದೇವಸ್ಥಾನ :** ಮಹಾಶಿವರಾತ್ರಿ ಪ್ರಯುಕ್ತ ವಿಶೇಷ ಪೂಜಾ ಕಾರ್ಯಕ್ರಮಗಳು, ಬೆಳಗ್ಗೆ 5.30 ರಿಂದ ರುದ್ರಾಭಿಷೇಕ, ಮಹಾಮಂಗಳಾರತಿ, ಸಂಜೆ 7ಕ್ಕೆ ಕಲಾವಿದರಾದ ಡಾ. ಎ.ಡಿ. ಶ್ರೀನಿವಾಸ್ ಮತ್ತು ತಂಡದವರಿಂದ ಭಕ್ತಿಗೀತೆ, ಭಾವಗೀತೆ ಕಾರ್ಯಕ್ರಮ, ಸ್ಥಳ: ದೇವಸ್ಥಾನ, ವಿಶ್ವಮಾನವ ಜೋಡಿ ರಸ್ತೆ, ಕುವೆಂಪುನಗರ.

■ **ಶ್ರೀ ಕಾಮೇಶ್ವರ ಕಾಮೇಶ್ವರಿ ದೇವಸ್ಥಾನ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಕೈಂಕರ್ಯ ಸಭಾ :** ಮಹಾ ಶಿವರಾತ್ರಿ ಆಚರಣೆ, ಬೆಳಗ್ಗೆ 8ಕ್ಕೆ ಸಂಕಲ್ಪ ವಿಜಯ ವಿಶ್ವೇಶ್ವರಸ್ವಾಮಿಯವರಿಗೆ ಏಕದಶಾವಾರ ರುದ್ರಾಭಿಷೇಕ, ಬೆಳಗ್ಗೆ 11.30ಕ್ಕೆ ಸಂಸದ ಯದುವೀರ್ ಒಡೆಯರ್ ಅವರಿಂದ ಪೂಜೆ, ಮಧ್ಯಾಹ್ನ 12.30ಕ್ಕೆ ಶ್ರೀ ಸ್ವಾಮಿಯವರ ಪ್ರಾಕಾರೋತ್ಸವ ಅಷ್ಟಾವಧಾನ ಸೇವೆ, ಮಧ್ಯಾಹ್ನ 1ಕ್ಕೆ ಮಹಾ ಮಂಗಳಾರತಿ, ಸಂಜೆ 6ರಿಂದ ನಾಲ್ಕು ಆಯಾಮಗಳಲ್ಲಿ ಅಭಿಷೇಕ ಮತ್ತು ವಿಶೇಷ ಪೂಜೆಗಳು, ಸ್ಥಳ: ದೇವಸ್ಥಾನ, ರಾಮಾನುಜ ರಸ್ತೆ.

■ **ತರಳಬಾಳು ಸಮಾಗಮ :** ಮಹಾಶಿವರಾತ್ರಿ, ಸಂಜೆ 7.30 ರಿಂದ ಕುಮಾರ ರುತ್ವಿಕ್ ಸಿ.ರಾಜ್ ಅವರಿಂದ ವಚನಗಾಯನ, ಮುಖ್ಯ ಅತಿಥಿಗಳು: ಕಾಲೇಜು ಶಿಕ್ಷಣ ವಿಭಾಗದ ನಿರ್ದೇಶಕ ಪ್ರೊ. ಮೊರಬದ ಮಲ್ಲಿಕಾರ್ಜುನ, ಅಧ್ಯಕ್ಷತೆ : ತರಳಬಾಳು ಸಮಾಗಮದ ಅಧ್ಯಕ್ಷ ಡಿ.ಎನ್.ಲೋಕಪ್ಪ, ಸ್ಥಳ: ತರಳಬಾಳು ಶಿಕ್ಷಣ ಸಂಸ್ಥೆ, ತೊಣಚಿಕೊಪ್ಪಲು, ಸಂಜೆ 7.30ಕ್ಕೆ.

ಸುತ್ತೂರು ಶ್ರೀಕ್ಷೇತ್ರ, ನಂಜನಗೂಡು ತಾ.

■ **ಸುತ್ತೂರು ಶ್ರೀಕ್ಷೇತ್ರ :** ಮಹಾಶಿವರಾತ್ರಿ ಕಾರ್ಯಕ್ರಮ, ಸಾನ್ನಿಧ್ಯ : ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿ, ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಕರ್ತೃಗದ್ದುಗೆಯಲ್ಲಿ ಭಾನುವಾರ ಬೆಳಗ್ಗೆ 6.00ರಿಂದ ಸೋಮವಾರ ಬೆಳಗ್ಗೆ 6.00ರವರೆಗೆ ನಾಲ್ಕು ಜಾವಗಳಲ್ಲಿಯೂ ವಿಶೇಷ ಪೂಜೆ, ಸಂಜೆ 7.00ಕ್ಕೆ ಶಿವದೀಕ್ಷೆ ಮತ್ತು ರಾತ್ರಿ 9.30ಕ್ಕೆ ಬೆಳ್ಳಿರಥ ಪ್ರಾಕಾರೋತ್ಸವ, ಶ್ರೀ ಮಹದೇಶ್ವರ ಸನ್ನಿಧಿ, ಶ್ರೀ ಸೋಮೇಶ್ವರ, ಶ್ರೀ ವೀರಭದ್ರೇಶ್ವರ, ಶ್ರೀ ನಂಜುಂಡೇಶ್ವರ ಮತ್ತು ಶ್ರೀ ನಾರಾಯಣಸ್ವಾಮಿ ದೇವಸ್ಥಾನಗಳಲ್ಲಿಯೂ ವಿಶೇಷ ಪೂಜೆ, ಸಂಜೆ 5.30ಕ್ಕೆ ಜೆಎಸ್‌ಎಸ್ ವಸತಿ ಶಾಲೆಯ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು, ರಾತ್ರಿ 8.00ಕ್ಕೆ ಮೈಸೂರಿನ ವಿಜಯನಗರದ ಶ್ರೀಮತಿ ಜೆ.ಆರ್. ಅನುಷಾ ಮತ್ತು ತಂಡದವರಿಂದ ಭಕ್ತಿಗೀತೆಗಳು, ರಾತ್ರಿ 10.30ಕ್ಕೆ ಮೈಸೂರಿನ ಕೃಷ್ಣಮೂರ್ತಿಪುರಂನ ಶ್ರೀ ಲಲಿತಾ ಉಳಿಯಾರು ಅವರಿಂದ ಶಿವಕಥೆ, ರಾತ್ರಿ 1.00ಕ್ಕೆ ಚಾಮರಾಜನಗರ ಜಿಲ್ಲೆಯ ರಾಮಸಮುದ್ರ ಗ್ರಾಮದ ಶ್ರೀ ಕಾಳಪ್ಪ ಮತ್ತು ತಂಡ ದವರಿಂದ ನೀಲಗಾರರ ಮೇಳ, ಪ್ರಾತಃಕಾಲ 5.00ಕ್ಕೆ ಹೊರಳವಾಡಿಯ ಶ್ರೀ ಬಸವೇಶ್ವರ ಭಜನಾ ತಂಡದವರಿಂದ ಭಜನೆ ಕಾರ್ಯಕ್ರಮ

ಜಿ.ಬಿ. ಸರಗೂರಿನಲ್ಲಿಂದು

■ **ಶ್ರೀ ಕಾಶಿ ವಿಶ್ವನಾಥ ದೇವಸ್ಥಾನ :** ಶಿವರಾತ್ರಿ ಪೂಜಾ ಮಹೋತ್ಸವ, ಸಂಜೆ 6.30ಕ್ಕೆ ಗಣಪತಿ ಪೂಜೆ, ಪಂಚಾಮೃತ ಅಭಿಷೇಕ, ಆರತಿ ವಿಶೇಷ ಪೂಜೆ, ವಿಭೂತಿ ಅಭಿಷೇಕ ಅರ್ಪಣೆ, ಬಿಲ್ವಪತ್ರೆ ಸೇವೆ, ರಸಾಯನ ಅಭಿಷೇಕ, ವಸ್ತ್ರಾಲಂಕಾರ, ಕುಂಕುಮಾರ್ಚನೆ, ಅಭಿಷೇಕ, ಪಂಚ ಕಜ್ಜಾಯ ಅರ್ಪಣೆ, ಗಾಯಕ ಸಿದ್ದು ಬದನಾಳ್ ತಂಡದಿಂದ ಗೀತೆ ಗಾಯನ ಕಾರ್ಯಕ್ರಮ.

ಮೈಸೂರು ಹಾಗೂ ಸುತ್ತಮುತ್ತ ನಾಳೆ...



ನಾಳಿನ ಪಂಚಾಂಗ

16.2.2026 ಸೋಮವಾರ, ಮಳೆ ನಕ್ಷತ್ರ: ಧನಿಷ್ಠ 6.02.2026 ರಿಂದ 18.02.2026
ವಿಶ್ವಾವಸು ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಮಾಘ ಮಾಸ, ಕೃಷ್ಣ ಪಕ್ಷ,
ತಿಥಿ: ಚತುರ್ದಶಿ, ನಕ್ಷತ್ರ: ಶ್ರವಣ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಪ್ರೊ.ಪ್ರಸನ್ನಕುಮಾರ್ ಕೆರಗೋಡು, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸಸ್ಯ ಸಿರಿ ಮನೆಯಂಗಳ ದಲ್ಲಿರುವ ಔಷಧೀಯ ಸಸ್ಯಗಳು, ಪ್ರಸ್ತುತಿ : ಡಾ.ಟಿ.ಶಿವಕುಮಾರ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ : ಎ.ಎಸ್.ನಾಗಲಕ್ಷ್ಮಿ ಹಾಗೂ ಡಾ.ಪಿ.ಎಸ್.ಮುರಳೀಧರ್, ವ್ಯಾಖ್ಯಾನ–ಡಾ. ಬಿ.ವಿ.ವಸಂತಕುಮಾರ್, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 7.45 ಚಿತ್ರಗೀತೆಗಳು, 8.30 ಕನ್ನಡ ಚಿತ್ರಗೀತೆಗಳು, 9.00 ನೆನಪಿನಂಗಳ (ಧ್ವನಿ ಭಂಡಾರದಿಂದ) ಮಾಸ್ತಿ ಅವರನ್ನು ಕುರಿತು ಡಾ.ಹಾ.ಮಾ.ನಾಯಕ್ ಮಾಡಿದ್ದ ಸಂಸ್ಮರಣಾ ಭಾಷಣದ ಧ್ವನಿಮುದ್ರಣ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಸುಮಂತ್ ಮಂಜುನಾಥ್–ವೈಯೋಲಿನ್ ವಾದನ, 10.30 ಹಿಂದಿ ಚಿತ್ರಗೀತೆಗಳು, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಗೇಮ್ ಷೋ – ಪ್ರಸ್ತುತಿ: ಬಿ.ದಿಗ್ವಿಜಯ್

ಮಧ್ಯಾಹ್ನ: 12.05 ವನಿತಾ ವಿಹಾರ: ಕಥೆ – 'ಇಂಪೋಸ್ಟರ್ ಸಿಂಡ್ರೋಮ್' ಬರೆದು ಪ್ರಸ್ತುತ ಪಡಿಸುತ್ತಾರೆ ಪುಷ್ಪಾ ಹಾಲಭಾವಿ. ನಂತರ 'ಪರೋಪಕಾರಾರ್ಥಂ ಇದಂ ಶರೀರಂ' ಮಾತನಾಡುತ್ತಾರೆ ಜಯಶ್ರೀ ಅಬ್ಬಿಗೇರಿ, 12.35 ದೇವರನಾಮ–ಅದಿತಿ.ಎ, 12.45 ನಮ್ಮ ಆರೋಗ್ಯ–ರೇಡಿಯೇಷನ್ ಬಗ್ಗೆ ಇರುವ ತಪ್ಪು ಕಲ್ಪನೆಗಳು ಮತ್ತು ವಾಸ್ತವಾಂಶ ಕುರಿತು ಮೈಸೂರಿನ ನಾರಾಯಣ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯ ಕನ್ಸಲ್ಟಂಟ್ ರೇಡಿಯೇಷನ್ ಆಂಕಾಲಜಿಸ್ಟ್ ಡಾ.ವಿದ್ಯಾ.ಜಿ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ – ಡಾ.ಕುಲದೀಪ್.ಎನ್, 1.00 ಪ್ರಗತಿ ಪಥ ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ. ಪ್ರಧಾನಮಂತ್ರಿ ಸ್ವಾಸ್ಥ್ಯ ಸುರಕ್ಷಾ ಯೋಜನೆ ಕುರಿತು ಮಾಹಿತಿ ನೀಡುತ್ತಾರೆ ಪ್ರಕಾಶ್.ಬಿ, 1.20 ಭಾವಗೀತೆಗಳು– ಕೃಪಾ ನಾಡಿಗ್, 2.30 ಪ್ರದೇಶ ಸಮಾಚಾರ, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಜಿ.ಉಷಾ–ಹಾಡುಗಾರಿಕೆ, 4.00 ಮಹಿಳಾ ರಂಗ–ನನ್ನ ಹಕ್ಕು ನನ್ನ ಜವಾಬ್ದಾರಿ ಮಹಿಳಾ ಕಾನೂನು ಜಾಗೃತಿ ಕಾರ್ಯಕ್ರಮ. ಭಾಗವಹಿಸುತ್ತಾರೆ–ಬೆಂಗಳೂರು ಉಚ್ಚ ನ್ಯಾಯಾಲಯದ ವಕೀಲರಾದ ಮೈತ್ರೇಯಿ.ಕೆ, ಪ್ರಸ್ತುತಿ : ಸಹನಾ, 4.30 ಹಿಂದಿ ಚಿತ್ರಗೀತೆಗಳು, 4.45 ಹಿಂದಿ ಪಾಠ, ಪ್ರಸ್ತುತಿ : ಡಾ.ಜಯಂತಿ ಪ್ರಸಾದ್ ನೌಟಿಯಾಲ್, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ–ಕೃಷಿ ದೀವಿಗೆ ಸಂಶೋಧನಾ ಸಂಸ್ಥೆಯೊಂದಿಗೆ ಕೃಷಿ ಕಲಿಕೆ ಕುರಿತ ಬಾನುಲಿ ಸರಣಿ ಕಾರ್ಯಕ್ರಮ. ಬೇಸಿಗೆ ಬೆಳೆಯಲ್ಲಿ ನೀರು ನಿರ್ವಹಣೆ ಈ ಕುರಿತು ಮಂಡ್ಯದ ವಿ.ಸಿ.ಫಾರಂ ವಲಯ ಕೃಷಿ ಸಂಶೋ ಧನಾ ಕೇಂದ್ರದ ಸಹಪ್ರಾಧ್ಯಾಪಕರಾದ ಡಾ.ಎಂ.ಎ.ಅನಂತಕುಮಾರ್ ಅವರೊಂದಿಗೆ ಸಂದರ್ಶನ. ಸಂದರ್ಶಕರು – ಎನ್. ಕೇಶವಮೂರ್ತಿ, 7.45 ಚಿತ್ರಗೀತೆಗಳು, 8.00 ಯುವವಾಣಿ : ಪರೀಕ್ಷೆಗೆ ಸಿದ್ಧರಾಗೋಣ ಬನ್ನಿ ದ್ವಿತೀಯ ಪಿ.ಯು.ಸಿ ಪರೀಕ್ಷಾ ಸಿದ್ಧತೆ ಕುರಿತು ಬಾನುಲಿ ಸರಣಿ ಕಾರ್ಯಕ್ರಮ. ವಿಷಯ–ಗಣಿತ, ಭಾಗವಹಿಸುತ್ತಾರೆ–ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲೂಕು ಹಲಗೂರಿನ ಸರಕಾರಿ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕರಾದ ಮಹಂತೇಶ್.ಎಂ., ಪ್ರಸ್ತುತಿ–ದಿಗ್ವಿಜಯ್.ಬಿ, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, ಎಸ್.ಶಂಕರ್–ಹಾಡುಗಾರಿಕೆ, 10.00 ಆಕಾಶವಾಣಿ ಸಂಗೀತ ಸಮ್ಮೇಳನ, ಶ್ರೀಮತಿ ಶಕುಂತಲಾ ಭರ್ಣೆ ಅವರಿಂದ ಕೊಂಕಣಿ ಲಘು ಸಂಗೀತ, ಶ್ರೀಮತಿ ಪ್ರಾಚಿ ಜಾತರ್ ಅವರಿಂದ ಮರಾಠಿ ನಾಟ್ಯ ಗೀತ್

■ **ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯ:** ಸಂಸ್ಥೆಯ 90ನೇ ವಾರ್ಷಿಕೋತ್ಸವ ಹಾಗೂ ಮಹಾಶಿವರಾತ್ರಿ ಪ್ರಯುಕ್ತ ಗುಜರಾತಿನ ಸುಪ್ರಸಿದ್ಧ ಶ್ರೀ ಸೋಮನಾಥ ದಿವ್ಯ ದರ್ಶನ, ಸಂಜೆ 6.15ರಿಂದ ಬಿ.ಕೆ.ಯೋಗೇಶ್ವರಿ ಅವರಿಂದ ಆರೋಗ್ಯಕರ ಜೀವನ ಶೈಲಿ ಕುರಿತು ಪ್ರವಚನ, ಸಂಜೆ 7 ರಿಂದ ಡಾ.ಡಿ.ಎಸ್.ಗುರು ಅವರಿಂದ ತಾಂತ್ರಿಕ ಯುಗದಲ್ಲಿ ಒಳಗೊಳ್ಳುವಿಕೆ ಸಂಸ್ಕೃತಿಯ ಅಗತ್ಯತೆ ಕುರಿತು ಉಪನ್ಯಾಸ, ಸಂಜೆ 8 ರಿಂದ ನಾಟ್ಯ ನೂಪುರ ತಂಡದಿಂದ ಸಾಂಸ್ಕೃತಿಕ ಕಾರ್ಯಕ್ರಮ, ಸ್ಥಳ: ಹುಣಸೂರು ರಸ್ತೆ, ಐಶ್ವರ್ಯ ಪೆಟ್ರೋಲ್ ಬಂಕ್ ಎದುರು, ಬೆಳಗ್ಗೆ 8 ರಿಂದ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಕೊಲೆಸ್ಟ್ರಾಲ್ ಚಿಕಿತ್ಸಾ ಶಿಬಿರ, ಪಾರ್ಕಿನ್‌ಸನ್ಸ್ ಕಾಯಿಲೆ, ಮೈಗ್ರೇನ್ ಹಾಗೂ ಕಣ್ಣು–ಮೂಗಿನ ಅಲರ್ಜಿಗೆ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ, ಬೆಳಗ್ಗೆ 9 ರಿಂದ.

■ **ಕಾವೇರಿ ಆಯುರ್ವೇದ ಆಸ್ಪತ್ರೆ:** ಸೋರಿಯಾಸಿಸ್, ಹಿಯರಿಂಗ್ ಮತ್ತು ಹಿಯರ್ ಕೇರ್ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10 ರಿಂದ.

■ **ಭಾರತೀಯ ಅಂಚೆ ಇಲಾಖೆ :** 38ನೇ ಅಖಿಲ ಭಾರತ ಅಂಚೆ ಸಾಂಸ್ಕೃತಿಕ ಸಮಾವೇಶ, ಮುಖ್ಯ ಅತಿಥಿಗಳು : ಖ್ಯಾತ ವಯೋಲಿನ್ ವಾದಕ ವಿದ್ವಾನ್ ಮೈಸೂರು ಎಂ.ನಾಗರಾಜ್, ವಿದ್ವಾನ್ ಡಾ. ಮೈಸೂರು ಎಂ.ಮಂಜುನಾಥ್, ಉಪಸ್ಥಿತರು : ಅಂಚೆ ಸೇವೆಗಳ ಮಹಾನಿರ್ದೇಶಕ ಜಿತೇಂದ್ರ ಗುಪ್ತಾ, ಸ್ಥಳ : ಕಾವೇರಿ ಸಭಾಂಗಣ, ಬೆಳಗ್ಗೆ 10ಕ್ಕೆ.

■ **ಶ್ರೀ ಅವಧೂತ ದತ್ತ ಪೀಠ, ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ:** ಹನುಮಾನ್ ಚಾಲೀಸಾ ಪಾರಾಯಣ, ಬೆಳಗ್ಗೆ 12.10 ಕರ್ನಾಟಕ ಕೊಳಲು ವಾದನ – ವಿ॥ ಅಮಿತ್ ನಾಡಿಗ್. ವಿದುಷಿ ಪೃಥ್ವಿ ಬಾಸ್ಕರ್– ಪಿಟೀಲು, ವಿ॥ ಬಿ.ಸಿ. ಮಂಜುನಾಥ್–ಮೃದಂಗ, ವಿ॥ ಸುಮುಖ್ ಕಾರಂತ್–ಕಂಜೀರ, ವಿ॥ ರೂಪಕ್ ಕಲ್ಲುರ್ಕರ್ –ತಬಲ, ವಿ॥ ಸ್ಕಂದ ಮಂಜುನಾಥ್–ಘಟಂ, ಬೆಳಗ್ಗೆ 3.00 – ಪರಮ ಪೂಜ್ಯ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರಿಂದ ಶಿವ ಭಜನೆ, ದಿವ್ಯನಾಮ ಸಂಕೀರ್ತನೆ ಮತ್ತು ಉಪನ್ಯಾಸ, 6.00 ಸಚ್ಚಿದಾನಂದೇಶ್ವರ ಶಿವಲಿಂಗಕ್ಕೆ ಮಹಾಮಂಗಳಾರತಿ, ತೀರ್ಥ–ಪ್ರಸಾದ ವಿನಿಯೋಗ. ಸ್ಥಳ: ಮಹಾರಾಜ ಕಾಲೇಜು ಮೈದಾನ, ಮೈಸೂರು.

■ **ಶ್ರೀ ಮುಕ್ಕಣ್ಣೇಶ್ವರಸ್ವಾಮಿಯುವರ ದೇವಸ್ಥಾನ :** 58ನೇ ವರ್ಷದ ಮಹಾಶಿವರಾತ್ರಿ, ಮಧ್ಯಾಹ್ನ 12ಕ್ಕೆ ಮಹಾಮಂಗಳಾರತಿ, ತೀರ್ಥಪ್ರಸಾದ, ಮಹಾ ಅನ್ನಸಂತರ್ಪಣೆ, ಸ್ಥಳ: ಶ್ರೀ ಮುಕ್ಕಣ್ಣೇಶ್ವರಸ್ವಾಮಿ ದೇವಸ್ಥಾನ, ಅಶೋಕ ರಸ್ತೆ.


■ **ಶ್ರೀ ಚಂದ್ರಮೌಳೀಶ್ವರಸ್ವಾಮಿ ದೇವಸ್ಥಾನ :** ಮಹಾಶಿವರಾತ್ರಿ ಉತ್ಸವ, ಬೆಳಗ್ಗೆ 8 ರಿಂದ ಮಧ್ಯಾಹ್ನ 1.15 ರವರೆಗೆ ಮತ್ತು ಸಂಜೆ 6 ರಿಂದ ಬೆಳಗ್ಗೆ 6 ರವರೆಗೆ ರಾತ್ರಿ ಪೂರ್ತಿ ಭಜನೆ, ನೃತ್ಯ ಕಾರ್ಯಕ್ರಮ, ಸ್ಥಳ: ದೇವಸ್ಥಾನ, ವಿ.ವಿ. ಮೊಹಲ್ಲಾ.

■ **ವರ್ಧಮಾನ್ ಜೈನ್ ಮಿಲನ್, ಮೈಸೂರು:** ಅಖಂಡ ಓಂಕಾರ ಮಂತ್ರ ಪಠಣಾ ಕಾರ್ಯಕ್ರಮ, ಸ್ಥಳ: 1008 ಶ್ರೀ ಶಾಂತಿನಾಥ ಬಸದಿ ಒಳಾಂಗಣ, ನ್ಯೂ ಸಯ್ಯಾಜಿರಾವ್ ರಸ್ತೆ, ಬೆಳಗ್ಗೆ 8 ರಿಂದ.

ಸ್ವಯಂ ನಿವೃತ್ತಿ ಪಡೆದು ಸ್ವಾಮೀಜಿಯಾದವರಿಗೂ 'ಬಡ್ತಿ' ನೀಡಿದ ಸರ್ಕಾರ

●ಸಿಎಂ ಸಿದ್ದರಾಮಯ್ಯ ಸರ್ಕಾರದ ಮತ್ತೊಂದು ಎಡವಟ್ಟು! ●ವಿಪಕ್ಷ ನಾಯಕ ಆರ್.ಅಶೋಕ್ ವ್ಯಂಗ್ಯ

ಬೆಂಗಳೂರು, ಫೆ.14– ಸ್ವಯಂ ನಿವೃತ್ತಿ ಪಡೆದು ಸ್ವಾಮೀಜಿಯಾದ ಕೆಎಎಸ್ ಅಧಿಕಾರಿಗೂ ಬಡ್ತಿ ನೀಡುವ ಮೂಲಕ ರಾಜ್ಯ ಸರ್ಕಾರ ಮಹಾ ಎಡವಟ್ಟು ಮಾಡಿದೆ ಎನ್ನಲಾಗಿದೆ.



ಈ ಬಗ್ಗೆ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ದಾಖಲೆ ಬಹಿರಂಗ ಪಡಿಸಿದ್ದು, ಆರೋಗ್ಯಾಧಿಕಾರಿ ವರ್ಗಾವಣೆ ಕುರಿತು ಸಿಎಂ ನಕಲಿ ಪತ್ರ ವೈರಲ್ ಬೆನ್ನಲ್ಲೇ ಅಧಿಕಾರಿಗಳ ಬಡ್ತಿಯಲ್ಲೂ ಎಡವಟ್ಟಾಗಿರುವ ಆರೋಪ ಕೇಳಿಬಂದಿದೆ.

ರಾಜ್ಯ ಸರ್ಕಾರವು ನಿನ್ನೆಯಷ್ಟೇ 20ಕ್ಕೂ ಅಧಿಕ ಕೆಎಎಸ್ ಅಧಿಕಾರಿಗಳಿಗೆ ಬಡ್ತಿ ನೀಡಿ, ಆದೇಶ ಹೊರಡಿಸಿದೆ. ಇದರಲ್ಲಿ ಸ್ವಯಂ ನಿವೃತ್ತಿ ಪಡೆದ ಹೆಚ್.ಎಲ್.ನಾಗರಾಜ ಅವರ ಹೆಸರು ಇದೆ. ನಿವೃತ್ತಿ ಪಡೆದ ಅಧಿಕಾರಿಗೆ ಸರ್ಕಾರ ಯಾಕೆ ಬಡ್ತಿ ನೀಡಿದೆ ಎಂದು ಬಿಜೆಪಿ ನಾಯಕರು ಪ್ರಶ್ನೆ ಮಾಡಿದ್ದು, ಇದು ಆಡಳಿತ ವೈಫಲ್ಯವೆಂದು ಕಿಡಿಕಾರಿದೆ.

ಈ ಬಗ್ಗೆ ಆರ್.ಅಶೋಕ್ ಟ್ವೀಟ್ ಮಾಡಿ, ಸಾವಿರ ಎಡವಟ್ಟುಗಳ ಕಾಂಗ್ರೆಸ್ ಸರ್ಕಾರದಲ್ಲಿ ನಿವೃತ್ತ ಅಧಿಕಾರಿಗೂ ಸಿಗ್ತು ಸರ್ವಿಸ್ ಬಡ್ತಿ! ರಾಜ್ಯ ಸರ್ಕಾರ ಇತ್ತೀಚೆಗೆ 20 ಕೆಎಎಸ್ ಅಧಿಕಾರಿಗಳಿಗೆ ಬಡ್ತಿ ನೀಡಿ ಅಧಿಕೃತ ಆದೇಶ ಹೊರಡಿಸಿದೆ. ಈ ಪಟ್ಟಿಯಲ್ಲಿ ಹಿರಿಯ ಶ್ರೇಣಿಯ ಅಧಿಕಾರಿಗಳಿಗೆ ಪದೋನ್ನತಿ ನೀಡಲಾಗಿದೆ. ಆದರೆ, ಅಚ್ಚರಿಯ ವಿಷಯವೆಂದರೆ ಈ ಪಟ್ಟಿಯಲ್ಲಿ ಈಗಾಗಲೇ ಸರ್ಕಾರಿ ಸೇವೆಯಿಂದ ಸ್ವಯಂ ನಿವೃತ್ತಿ ಪಡೆದಿರುವ ಹೆಚ್. ಎಲ್.ನಾಗರಾಜ (ಪ್ರಸ್ತುತ ಶ್ರೀ ನಿಶ್ಚಲಾ ನಂದನಾಥ ಸ್ವಾಮೀಜಿ) ಅವರ ಹೆಸರೂ ಸೇರಿದೆ ಎಂದು ವ್ಯಂಗ್ಯವಾಡಿದ್ದಾರೆ.

ಸಿಎಂ ಸಿದ್ದರಾಮಯ್ಯನವರೇ ನಿಮ್ಮ ಕಾಂಗ್ರೆಸ್ ಸರ್ಕಾರದ ಅದಕ್ಷತೆ, ಅಸಮರ್ಥತೆ ಈಗ ಯಾವ ಮಟ್ಟಕ್ಕೆ ತಲುಪಿದೆ ಗೊತ್ತಾ ಸೇವೆಯಿಂದ ಸ್ವಯಂನಿವೃತ್ತರಾಗಿ ಕಾವಿ ಧರಿಸಿ ಪೀಠಾಧಿಪತಿಯಾಗಿರುವವರಿಗೂ "ಬಡ್ತಿ ಭಾಗ್ಯ" ನೀಡುವ ಮಟ್ಟಕ್ಕೆ! ಒಬ್ಬ ಅಧಿಕಾರಿ ಸೇವೆಯಿಂದ ನಿವೃತ್ತರಾಗಿ, ಸನ್ಯಾಸ ಸ್ವೀಕರಿಸಿ, ಆಧ್ಯಾತ್ಮಿಕ ಜೀವನ ನಡೆಸುತ್ತಿದ್ದರೂ, ನಿಮ್ಮ ಸರ್ಕಾರದ ದಾಖಲೆಗಳಲ್ಲಿ ಅವರು ಇನ್ನೂ ಸೇವೆಯಲ್ಲಿರುವ ಅಧಿಕಾರಿ! ನಿಮ್ಮ ಘನಂದಾರಿ ಆಡಳಿತದಲ್ಲಿ ಮುಖ್ಯಮಂತ್ರಿಗಳು, ಸಚಿವರು, ಅಧಿಕಾರಿಗಳು ಸಹಿ ಮಾಡುವ ಮುನ್ನ ಫೈಲುಗಳನ್ನು ಓದುತ್ತಾರೋ ಕಣ್ಣು ಮುಚ್ಚಿಕೊಂಡು ಸಹಿ ಹಾಕುತ್ತಾರೋ ಎಂದು ಪ್ರಶ್ನೆ ಮಾಡಿದ್ದಾರೆ.

ನಿಮ್ಮ ಕಾಂಗ್ರೆಸ್ ಸರ್ಕಾರಕ್ಕೆ ಯಾವ ಅಧಿಕಾರಿಗಳು ಸೇವೆಯಲ್ಲಿ ಇದ್ದಾರೆ, ಯಾರು ನಿವೃತ್ತರಾಗಿದ್ದಾರೆ ಅನ್ನುವ ಕನಿಷ್ಠ ಮಾಹಿತಿಯೂ ಇಲ್ಲವೇ. ಹೀಗಾದರೆ ರಾಜ್ಯದ ಜನತೆ ಆಡಳಿತ ಮತ್ತು ಅಭಿವೃದ್ಧಿ ವಿಚಾರದಲ್ಲಿ ನಿಮ್ಮ ಸರ್ಕಾರದ ಮೇಲೆ ಹೇಗೆ ವಿಶ್ವಾಸ ಇಡಬೇಕು ಸ್ವಾಮಿ. ನಿವೃತ್ತರಾಗಿರುವ ಅಧಿಕಾರಿಯೊಬ್ಬರಿಗೆ ಬಡ್ತಿ ನೀಡಿದ್ದೀರಿ, ನಾಳೆ ನಿಧನ ಹೊಂದಿರುವ ಅಧಿಕಾರಿಗೆ ವರ್ಗಾವಣೆ ಆದೇಶ ಹೊರಡಿಸಿದರೂ ಆಶ್ಚರ್ಯವಿಲ್ಲ! ಇದು ಕೇವಲ ಒಂದು ಆಕಸ್ಮಿಕ ಎಡವಟ್ಟು ಅಲ್ಲ, ಇದು ಆಡಳಿತ ವ್ಯವಸ್ಥೆಯ ಸಂಪೂರ್ಣ ಕುಸಿತದ ಸೂಚನೆ. ದಿನಕ್ಕೊಂದು ಎಡವಟ್ಟು, ಕ್ಷಣಕ್ಕೊಂದು ಮುಖಭಂಗ. ಇನ್ನೆಷ್ಟು ದಿನ ಸ್ವಾಮಿ ಈ ಎಡವಟ್ಟು ಸರ್ಕಾರಕ್ಕೆ ಎಡವಟ್ಟು ಮುಖ್ಯಮಂತ್ರಿ ಆಗಿ ತಮ್ಮ ಗೌರವ ಕಳೆದುಕೊಳ್ಳುತ್ತೀರಿ. ಸಾಕು ಮಾಡಿ ಈ ಭಂಡ ಬಾಳು. ರಾಜೀನಾಮೆ ಕೊಟ್ಟು ಕರ್ನಾಟಕದ ಗೌರವ ಉಳಿಸಿ, ತಮ್ಮ ಇರೋಬರೋ ಅಲ್ಪ ಸ್ವಲ್ಪ ಗೌರವವನ್ನಾದರೂ ಉಳಿಸಿಕೊಳ್ಳಿ ಎಂದು ವಾಗ್ದಾಳಿ ನಡೆಸಿದ್ದಾರೆ.



ನಿಶ್ಚಲಾನಂದ ಶ್ರೀ

ಟಿಪ್ಪಣಿ ವೈರಲ್ ಆಗಿತ್ತು: ಮಂಡ್ಯ ಜಿಲ್ಲೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯಾದ ಡಾ||ಕೆ.ಮೋಹನ್ ಅವರನ್ನು ಮೈಸೂರು ಗ್ರಾಮಾಂತರದ ಅಬಕಾರಿ ಉಪ ಆಯುಕ್ತರಾಗಿ ವರ್ಗಾವಣೆ ಮಾಡಲು ಸಿಎಂ ಶಿಫಾರಸು ಮಾಡಿದ್ದಾರೆಂಬ ಟಿಪ್ಪಣಿ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿತ್ತು ಈ ಬಗ್ಗೆ ಬಿಜೆಪಿ ವಾಗ್ದಾಳಿ ನಡೆಸಿದ ಬೆನ್ನಲ್ಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟನೆ ನೀಡಿದ್ದರಲ್ಲದೆ, ಅವರ ಕಚೇರಿಯಿಂದ ವಿಧಾನ ಸೌಧ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಇದೀಗ 20 ಕೆಎಎಸ್ ಅಧಿಕಾರಿಗಳ ಬಡ್ತಿ ವಿಷಯವೂ ಚರ್ಚೆಗೆ ಗುರಿಯಾಗಿದೆ.


ಟಿಪ್ಪಣಿ ಮೂಲಕ ಸ್ಪಷ್ಟನೆ

ಡಾ.ಎಚ್.ಎಲ್.ನಾಗರಾಜ್, ಕೆ.ಎ.ಎಸ್ (ಹಿರಿಯ ಶ್ರೇಣಿ) ಅಧಿಕಾರಿಯವರು ಸ್ವಯಂ ನಿವೃತ್ತಿಗಾಗಿ ಸರ್ಕಾರಕ್ಕೆ ಅರ್ಜಿ ಸಲ್ಲಿಸಿದ್ದು, ಆ ಅರ್ಜಿಯು ಪರಿಶೀಲನೆಯ ಹಂತದಲ್ಲಿರುತ್ತದೆ. ಪ್ರಸ್ತುತ, ಅವರ ಸ್ವಯಂ ನಿವೃತ್ತಿಯ ಕೋರಿಕೆಯು ಇದುವರೆಗೆ ಅಂಗೀಕೃತವಾಗದೇ ಇರುವುದರಿಂದ ಅವರು ಸರ್ಕಾರಿ ಸೇವೆಯಿಂದ ಬಿಡುಗಡೆ ಹೊಂದಿರುವುದಿಲ್ಲ. ಆದುದರಿಂದ ಚಾಲ್ತಿಯಲ್ಲಿರುವ ನಿಯಮಗಳ ಅನುಸಾರ ಡಾ.ಎಚ್.ಎಲ್.ನಾಗರಾಜ್ ಅವರನ್ನು ಮುಂಬಡ್ತಿಗೆ ಪರಿಗಣಿಸಲಾಗಿದೆ. ಆದರೆ ವಾಸ್ತವವಾಗಿ ಡಾ.ಎಚ್.ಎಲ್.ನಾಗರಾಜ್ ಅವರು ವಹಿಸಲಾಗುವ ಹುದ್ದೆಯ ಪ್ರಭಾರವನ್ನು ವಹಿಸಿಕೊಂಡಾಗ ಮಾತ್ರ ಅವರಿಗೆ ಮುಂಬಡ್ತಿ ದೊರೆಯುತ್ತದೆ ಎಂದು ಅಧಿಕೃತ ಸಿಎಂ ಮೀಡಿಯಾ ಗ್ರೂಪ್ ವಾಟ್ಸಾಪ್ ಗುಂಪಿನಲ್ಲಿ ಟಿಪ್ಪಣಿ ಮೂಲಕ ಸ್ಪಷ್ಟನೆ ನೀಡಲಾಗಿದೆ.

ಮಾದಕ ವಸ್ತು ಮಾರಾಟ; ಮೂವರ ಬಂಧನ

●ಲಕ್ಷಾಂತರ ರೂ. ಮೌಲ್ಯದ 44.45 ಗ್ರಾಂ ಎಂಡಿಎಂಎ ವಶಕ್ಕೆ ●ಮಂಡಿ ಪೊಲೀಸರ ಕಾರ್ಯಾಚರಣೆ

ಮೈಸೂರು, ಫೆ.14(ಎಂಕೆ)– ಮಾದಕ ವಸ್ತು ಮಾರಾಟ ಮತ್ತು ಸಾಗಾಟ ಸಂಬಂಧ ಕಾರ್ಯಾಚರಣೆ ಮುಂದುವರೆಸಿರುವ ಮಂಡಿ ಠಾಣೆ ಪೊಲೀಸರು, ಮೂವರನ್ನು ಬಂಧಿಸಿ ಅವರಿಂದ ಲಕ್ಷಾಂತರ ರೂ. ಮೌಲ್ಯದ 44.45 ಗ್ರಾಂ ಎಂಡಿಎಂಎ ಮಾದಕ ವಸ್ತು ವಶಪಡಿಸಿಕೊಂಡಿದ್ದಾರೆ.



ಮೊಹಮ್ಮದ್ ರೋಷನ್

ಗೌಸಿಯಾನಗರ ನಿವಾಸಿಯಾದ ಕಾರ್ ಸ್ಪ್ರೇ ಪೇಂಟಿಂಗ್ ಕೆಲಸಗಾರ ಮೊಹಮ್ಮದ್ ರೋಷನ್ ಅಲಿಯಾಸ್ ಬೋಂಡಾ (22), ಮಂಡಿ ಮೊಹಲ್ಲಾದ ಮೊಹಮ್ಮದ್ ಕರೀಂ (30), ಕಲ್ಯಾಣಗಿರಿಯ ರಾಘವೇಂದ್ರನಗರದ ನಿಷಾದ್ ಪಾಷ (36) ಬಂಧಿತ ಆರೋಪಿಗಳು.

ಫೆ.11ರಂದು ಮಾದಕ ವಸ್ತು ಮಾರಾಟದಲ್ಲಿ ತೊಡಗಿದ್ದ ಮೊಹಮ್ಮದ್ ಕರೀಂ ಹಾಗೂ ನಿಷಾದ್ ಪಾಷನನ್ನು ಬಂಧಿಸಿದ್ದ ಮಂಡಿ ಠಾಣೆ ಪೊಲೀಸರು, ಬಂಧಿತರಿಂದ 3.14 ಗ್ರಾಂ ಎಂಡಿಎಂಎ ಮಾದಕ ವಸ್ತು ವಶಕ್ಕೆ ಪಡೆದು, ಪ್ರಕರಣ ದಾಖಲಿಸಿ ಈ ಇಬ್ಬರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದರು. ಈ ಪ್ರಕರಣ ಸಂಬಂಧ ಕಾರ್ಯಾಚರಣೆ ಮುಂದುವರೆಸಿ, ನಿಷಾದ್ ಪಾಷ ಎಂಬಾತನಿಗೆ ಎಂಡಿಎಂಎ ಮಾದಕ ವಸ್ತು ಮಾರಾಟ ಮಾಡಿ ತಲೆಮರೆಸಿಕೊಂಡಿದ್ದ ಮೊಹಮ್ಮದ್ ರೋಷನ್‌ನನ್ನು ಬಂಧಿಸಿ, ಆತನಿಂದ 4 ಲಕ್ಷ ರೂ. ಮೌಲ್ಯದ 41.31 ಗ್ರಾಂ ಪ್ರಮಾಣದ ಎಂಡಿಎಂಎ ಮಾದಕ ವಸ್ತು ವಶಪಡಿಸಿಕೊಂಡು ಈತನನ್ನೂ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಮೊಹಮ್ಮದ್ ರೋಷನ್ ವಿರುದ್ಧ ಈ ಹಿಂದೆ ಉದಯ ಗಿರಿ ಪೊಲೀಸ್ ಠಾಣೆಯಲ್ಲೂ ಎನ್‌ಡಿಪಿಎಸ್ ಪ್ರಕರಣ ದಾಖಲಾಗಿದ್ದು, ಇನ್‌ಸ್ಟಾಗ್ರಾಂ ಮೂಲಕ ಅಪರಿಚಿತ ವ್ಯಕ್ತಿಯಿಂದ ಎಂಡಿಎಂಎ ಮಾದಕ ವಸ್ತುವನ್ನು ಬೆಂಗಳೂರಿನಿಂದ ತಂದು ಮೈಸೂರಿನಲ್ಲಿ ಮಾರಾಟ ಮಾಡುತ್ತಿದ್ದ ಎಂಬುದು ತನಿಖೆಯಿಂದ ತಿಳಿದುಬಂದಿದೆ. ಕಾರ್ಯಾಚರಣೆಯಲ್ಲಿ ಮಂಡಿ ಪೊಲೀಸ್ ಠಾಣೆ ಇನ್‌ಸ್ಪೆಕ್ಟರ್ ಆರ್.ದಿವಾಕರ್, ಪಿಎಸ್ಐ ರಾಜು ಕೋನಕೇರಿ ಹಾಗೂ ಸಿಬ್ಬಂದಿ ಭಾಗವಹಿಸಿದ್ದರು.

ಐದು ವಿಕೆಟ್‌ಗಳಿಂದ ಸ್ಕಾಟ್ಲೆಂಡ್ ಸೋಲಿಸಿದ ಇಂಗ್ಲೆಂಡ್

ಕೋಲ್ಕೊತ್ತಾ, ಫೆ.14(ವಿವಿಹೆಚ್)– ಇಲ್ಲಿನ ಈಡನ್ ಗಾರ್ಡನ್ಸ್‌ನಲ್ಲಿ ನಡೆದ ಐಸಿಸಿ ಟಿ ಟ್ವೆಂಟಿ ವಿಶ್ವಕಪ್ 2026ರ ಗ್ರೂಪ್ ಹಂತದ 23ನೇ ಪಂದ್ಯದಲ್ಲಿ ಇಂಗ್ಲೆಂಡ್ ತಂಡ ಸ್ಕಾಟ್ಲೆಂಡ್ ವಿರುದ್ಧ 5 ವಿಕೆಟ್‌ಗಳ ಗೆಲುವು ದಾಖಲಿಸಿತು.



ಇದರೊಂದಿಗೆ ಟೂರ್ನಿಯಲ್ಲಿ ಎರಡನೇ ಗೆಲುವು ಕಂಡು ನಾಲ್ಕು ಅಂಕಗಳೊಂದಿಗೆ ಸಿ ಗುಂಪಿನ ಅಂಕಪಟ್ಟಿಯಲ್ಲಿ ಎರಡನೇ ಸ್ಥಾನಕ್ಕೆ ಏರಿಕೆ ಕಂಡಿತು.

ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಸ್ಕಾಟ್ಲೆಂಡ್ 19.4 ಓವರ್‌ಗಳಲ್ಲಿ 152 ರನ್‌ಗಳಿಗೆ ಆಲೌಟ್ ಆಯಿತು. ಈ ಗುರಿಯನ್ನು ಬೆನ್ನತ್ತುವಲ್ಲಿ ಯಶಸ್ವಿಯಾದ ಇಂಗ್ಲೆಂಡ್ 18.2 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 155 ರನ್ ಕಲೆಹಾಕಿತು.

ಸ್ಕಾಟ್ಲೆಂಡ್ ಇನ್ನಿಂಗ್ಸ್: ತಂಡದ ಪರ ಜಾರ್ಜ್ ಮುನ್ಸೆ 4, ಮೈಕೆಲ್ ಜೋನ್ಸ್ 33, ಬ್ರಾಂಡನ್ ಮೆಕ್‌ಮುಲೆನ್ ಡಕ್‌ಔಟ್, ರಿಚಿ ಬೆರಿಂಗ್ಟನ್ 49, ಟಾಮ್ ಬ್ರೂಸ್ 24, ಮೈಕೆಲ್ ಲೀಸ್ಕ್ 1, ಮ್ಯಾಥ್ಯೂ ಕ್ರಾಸ್ 8, ಮಾರ್ಕ್ ವ್ಯಾಟ್ 2, ಬ್ರಾಡ್ ವೀಲ್ 2, ಬ್ರಾಡ್ ಕರಿ 2 ರನ್ ಹಾಗೂ ಓಲಿವರ್ ಡೇವಿಡ್ ಸನ್ ಅಜೇಯ 20 ರನ್ ಬಾರಿಸಿದರು.

ಇಂಗ್ಲೆಂಡ್ ಪರ ಆದಿಲ್ ರಶೀದ್ 3 ವಿಕೆಟ್, ಲಿಯಾಮ್ ಡಾಸನ್ ಹಾಗೂ ಜೋಫ್ರಾ ಆರ್ಚರ್ ತಲಾ 2 ವಿಕೆಟ್, ಜೇಮಿ ಓವರ್ಟನ್ ಹಾಗೂ ಸ್ಯಾಮ್ ಕರನ್ ತಲಾ ಒಂದೊಂದು ವಿಕೆಟ್ ಪಡೆದರು.

ಇಂಗ್ಲೆಂಡ್ ಇನ್ನಿಂಗ್ಸ್: ಸಾಧಾರಣ ಗುರಿ ಬೆನ್ನತ್ತಿದ ಇಂಗ್ಲೆಂಡ್‌ಗೆ ಆರಂಭಿಕ ಆಘಾತ ಎದುರಾಯಿತು. ಸಾಲ್ಟ್ 2 ರನ್‌ಗೆ ವಿಕೆಟ್ ಒಪ್ಪಿಸಿದರೆ, ಬಟ್ಲರ್ 3 ರನ್ ಗಳಿಸಿ ಪೆವಿಲಿಯನ್ ಸೇರಿಕೊಂಡರು. ಬಳಿಕ ಜೊತೆಯಾದ ಜೇಕಬ್ ಬೆಥೆಲ್ ಹಾಗೂ ಟಾಮ್ ಬ್ಯಾಂಟನ್ 66 ರನ್‌ಗಳ ಜತೆಯಾಟವಾಡುವ ತಂಡಕ್ಕೆ ಮೂಲಕ ಆಸರೆಯಾದರು. ಬೆಥೆಲ್ 32 ರನ್ ಗಳಿಸಿ ಔಟ್ ಆದರೆ, ಬ್ಯಾಂಟನ್ 41 ಎಸೆತಗಳಲ್ಲಿ 4ಬೌಂಡರಿ, 3 ಸಿಕ್ಸರ್ ಸಹಿತ 63ರನ್ ಗಳಿಸಿ ಅಜೇಯರಾಗಿ ಉಳಿದರು.

ಉಳಿದಂತೆ ನಾಯಕ ಹ್ಯಾರಿ ಬ್ರೂಕ್ 4 ರನ್, ಸ್ಯಾಮ್ ಕರನ್ 28 ರನ್ ಹಾಗೂ ವಿಲ್ ಜ್ಯಾಕ್ಸ್ ಅಜೇಯ 16ಗಳಿಸಿ ತಂಡದ ಗೆಲುವಿಗೆ ನೆರವಾದರು.

ಸ್ಕಾಟ್ಲೆಂಡ್ ಪರ ಬ್ರಾಂಡನ್ ಮೆಕ್‌ಮುಲೆನ್, ಬ್ರಾಡ್ ಕರಿ, ಬ್ರಾಡ್ ವೀಲ್, ಮೈಕೆಲ್ ಲೀಸ್ಕ್ ಹಾಗೂ ಓಲಿವರ್ ಡೇವಿಡ್‌ಸನ್ ತಲಾ ಒಂದೊಂದು ವಿಕೆಟ್ ಪಡೆದರು.

ಉತ್ತಮ ಬ್ಯಾಟಿಂಗ್ ಮೂಲಕ ತಂಡಕ್ಕೆ ಗೆಲುವು ತಂದುಕೊಟ್ಟ ಟಾಮ್ ಬ್ಯಾಂಟನ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಓಮನ್ ವಿರುದ್ಧ ಐರ್ಲೆಂಡ್‌ಗೆ 96 ರನ್‌ಗಳ ಭರ್ಜರಿ ಜಯ



ಶ್ರೀಲಂಕಾ ಫೆ.14(ವಿವಿಹೆಚ್)– ಇಲ್ಲಿನ ಸಿನ್ಹಳೀಸ್ ಕ್ರೀಡಾಂಗಣದಲ್ಲಿ ನಡೆದ ಐಸಿಸಿ ಟಿ ಟ್ವೆಂಟಿ ವಿಶ್ವಕಪ್ 2026ರ ಗ್ರೂಪ್ ಹಂತದ 22ನೇ ಪಂದ್ಯದಲ್ಲಿ ಐರ್ಲೆಂಡ್ ಓಮನ್ ವಿರುದ್ಧ 96 ರನ್‌ಗಳ ಗೆಲುವು ದಾಖಲಿಸಿದೆ.

ಮೊದಲು ಬ್ಯಾಟಿಂಗ್ ಮಾಡಿದ ಐರ್ಲೆಂಡ್ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 235 ರನ್ ಕಲೆಹಾಕಿತು. ಈ ಗುರಿ ಮುಟ್ಟುವಲ್ಲಿ ವಿಫಲವಾದ ಓಮನ್ 18 ಓವರ್‌ಗಳಲ್ಲಿ 139 ರನ್‌ಗೆ ಆಲೌಟ್ ಆಗುವ ಮೂಲಕ ಸೋಲೊಪ್ಪಿಕೊಂಡಿತು.

ಇದು ಓಮನ್ ಪಾಲಿಗೆ ಟೂರ್ನಿಯಲ್ಲಿ ಸಿಕ್ಕ ಮೂರನೇ ಸೋಲಾಗಿದ್ದು, ಆಡಿದ ಎಲ್ಲಾ ಪಂದ್ಯಗಳಲ್ಲೂ ಸೋತು ಟೂರ್ನಿಯಿಂದ ಹೊರಬಿದ್ದ ಮೊದಲ ತಂಡವಾಗಿದೆ.

51 ಎಸೆತಗಳಲ್ಲಿ ಅಜೇಯ 94 ರನ್ ಗಳಿಸಿ ತಂಡದ ಗೆಲುವಿಗೆ ಪ್ರಮುಖ ಪಾತ್ರ ವಹಿಸಿದ ಲಾರ್ಕನ್ ಟಕ್ಕರ್ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದುಕೊಂಡರು.

ಸಂಕ್ಷಿಪ್ತ ಸ್ಕೋರ್

ಐರ್ಲೆಂಡ್: 235/5 (20 ಓವರ್)– ಲಾರ್ಕನ್ ಟಕ್ಕರ್ 94(51 ಎ, 10ಬೌ, 4ಸಿ), ಗ್ಯಾರೆಥ್ ಡೆಲಾನಿ 56(30), ಜಾರ್ಜ್ ಡಾಕ್ರೆಲ್ 35(9ಎ, 5ಸಿ), ಶಕೀಲ್ ಅಹ್ಮದ್ 33ಕ್ಕೆ3, ಅಮೀರ್ ಕಲೀಂ 29ಕ್ಕೆ1

ಓಮನ್: 13910 (18 ಓವರ್)– ಅಮೀರ್ ಕಲೀಂ 50(29ಎ, 5ಬೌ, 2ಸಿ), ಹಮ್ಮದ್ ಮಿರ್ಜಾ46(37), ಜೋಶ್ವ ಲಿಟಲ್ 16ಕ್ಕೆ3, ಬ್ಯಾರಿ ಮೆಕ್‌ಕಾರ್ಟಿ 32ಕ್ಕೆ2, ಮ್ಯಾಥ್ಯು ಹಂಪ್ರೈಸ್ 27ಕ್ಕೆ2.

ಇಂದು ಭಾರತ–ಪಾಕ್ ಹೈವೋಲ್ಟೇಜ್ ಪಂದ್ಯ

ಕೊಲಂಬೊ, ಫೆ.14(ವಿವಿಹೆಚ್)– ಬಹುನಿರೀಕ್ಷಿತ ಭಾರತ ಮತ್ತು ಪಾಕಿಸ್ತಾನ ನಡುವಣ ಟಿ20 ವಿಶ್ವಕಪ್‌ನ ಲೀಗ್ ಹಂತದ ಪಂದ್ಯ ಭಾನುವಾರ (ಫೆಬ್ರವರಿ 15) ನಡೆಯಲಿದೆ. ಕ್ರಿಕೆಟ್ ಪ್ರೇಮಿಗಳ ಪಾಲಿಗೆ ದೊಡ್ಡ ದಿನವಾಗಿದ್ದು, ಪ್ರಸ್ತುತ ನಡೆಯುತ್ತಿರುವ ಐಸಿಸಿ ಟಿ ಟ್ವೆಂಟಿ ವಿಶ್ವಕಪ್ 2026ರ ಟೂರ್ನಿಯಲ್ಲಿ ಬದ್ಧ ಎದುರಾಳಿಗಳಾದ ಭಾರತ ಹಾಗೂ ಪಾಕಿಸ್ತಾನ ತಂಡಗಳು ಮುಖಾಮುಖಿಯಾಗಲಿವೆ.

ಭಾರತ ಹಾಗೂ ಪಾಕಿಸ್ತಾನ ಈವರೆಗೆ ಟೂರ್ನಿಯಲ್ಲಿ ಆಡಿರುವ ಎರಡು ಪಂದ್ಯಗಳಲ್ಲಿ ಎರಡರಲ್ಲೂ ಗೆಲುವು ಕಂಡಿದ್ದು ತಲಾ ನಾಲ್ಕು ಅಂಕಗಳೊಂದಿಗೆ ಅಂಕಪಟ್ಟಿಯಲ್ಲಿ ಕ್ರಮವಾಗಿ ಮೊದಲ ಹಾಗೂ ಎರಡನೇ ಸ್ಥಾನದಲ್ಲಿವೆ. ಈ ಮೂಲಕ ನಾಳಿನ ಪಂದ್ಯದಲ್ಲಿ ಗೆಲುವು ಸಾಧಿಸುವ ತಂಡ ಅಂಕಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರುವುದು ಮಾತ್ರವಲ್ಲದೇ ಸೂಪರ್ 8 ಸುತ್ತಿಗೆ ಅರ್ಹತೆಯನ್ನು ಗಿಟ್ಟಿಸಿಕೊಳ್ಳಲಿದೆ.

ಹೀಗೆ ಬದ್ಧ ವೈರಿಗಳ ಕಾಳಗ ಎಂಬ ಕಾರಣಕ್ಕೆ ಮಾತ್ರವಲ್ಲದೇ ಟೂರ್ನಿಯಲ್ಲಿ ಮುಂದಿನ ಹಂತಕ್ಕೆ ತಲುಪುವ ಕಾರಣಕ್ಕೂ ಈ ಪಂದ್ಯ ಕ್ರಿಕೆಟ್ ಪ್ರಿಯರಲ್ಲಿ ಭಾರೀ ಕುತೂಹಲವನ್ನು ಹುಟ್ಟುಹಾಕಿದೆ.

ಇನ್ನು ಕಳೆದ ಪಂದ್ಯದಲ್ಲಿ ಹೊಟ್ಟೆ ನೋವಿನ ಕಾರಣದಿಂದಾಗಿ ಅಲಭ್ಯರಾಗಿದ್ದ ಅಭಿಷೇಕ್ ಶರ್ಮಾ ಈ ಪಂದ್ಯಕ್ಕೆ ವಾಪಸ್ಸಾಗಲಿದ್ದಾರೆ ಎನ್ನುವ ಸುದ್ದಿ ಕೇಳಿಬಂದಿದ್ದು, ಈ ಕಾರಣದಿಂದಾಗಿ ಭಾರತದ ಬಳಗದಲ್ಲಿ ಬದಲಾವಣೆಯಾಗಲಿದೆ.

ಅಭಿಷೇಕ್ ಶರ್ಮಾ ತಂಡಕ್ಕೆ ಮರಳುವ ಕಾರಣ ಕಳೆದ ಪಂದ್ಯದಲ್ಲಿ ಅವರ ಸ್ಥಾನದಲ್ಲಿ ಕಣಕ್ಕಿಳಿದಿದ್ದ ಸಂಜು ಸ್ಯಾಮ್ಸನ್ ಈ ಪಂದ್ಯದಿಂದ ಹೊರಬೀಳಲಿದ್ದಾರೆ. ಅಲ್ಲದೇ ಮತ್ತೋರ್ವ ಸ್ಫೋಟಕ ಬ್ಯಾಟ್ಸ್‌ಮನ್ ರಿಂಕು ಸಿಂಗ್ ಸ್ಥಾನ ಕಳೆದುಕೊಳ್ಳಲಿದ್ದು, ಅವರ ಜಾಗಕ್ಕೆ ಈ ಹಿಂದಿನ ಪಂದ್ಯಗಳಲ್ಲಿ ಪಾಕಿಸ್ತಾನಕ್ಕೆ ಕಾಟ ಕೊಟ್ಟಿದ್ದ ಕುಲ್‌ದೀಪ್ ಯಾದವ್ ಬರಬಹುದು. ಕುಲ್‌ದೀಪ್ ಅಲ್ಲದೇ ಆಲ್‌ರೌಂಡರ್ ವಾಷಿಂಗ್ಟನ್ ಸುಂದರ್ ಹೆಸರು ರಿಂಕು ಸಿಂಗ್ ಜಾಗಕ್ಕೆ ಕೇಳಿಬಂದಿದೆ.

ಒಟ್ಟಾರೆ ಐಸಿಸಿ ಟಿ20 ವಿಶ್ವಕಪ್ ಪಂದ್ಯಾವಳಿಯಲ್ಲಿ ಇತ್ತಂಡಗಳ ಮುಖಾಮುಖಿ ನೋಡುವುದಾದರೆ, ಭಾರತವೇ ಮೇಲುಗೈ ಸಾಧಿಸಿದೆ. ಈವರೆಗೆ 8 ಬಾರಿ ಇತ್ತಂಡಗಳು ಎದುರಾಗಿದ್ದು, ಭಾರತ 7 ಬಾರೀ ಪರಾಕ್ರಮ ಮೆರೆದಿದ್ದರೆ, ಪಾಕಿಸ್ತಾನ 1 ಬಾರಿ ಮಾತ್ರ ಗೆಲುವು ದಾಖಲಿಸಿದೆ.

ಇತ್ತೀಚೆಗಿನ ರಾಜಕೀಯ ಬೆಳವಣಿಗೆಗಳು ಹಾಗೂ ಏಷ್ಯಾಕಪ್ ಟೂರ್ನಿ ವೇಳೆ ಉಂಟಾದ ಕಲಹದಿಂದಾಗಿ ಈ ಪಂದ್ಯ ಅತೀ ಮಹತ್ವ ಪಡೆದುಕೊಂಡಿದೆ. ಭಾರತದಲ್ಲಿ ಟೂರ್ನಿ ಆಡುವುದಿಲ್ಲ ಎಂದು ಬಾಂಗ್ಲಾದೇಶ ಹೊರನಡೆದ ಬೆನ್ನಲ್ಲೇ ಭಾರತದ ವಿರುದ್ಧ ಪಂದ್ಯ ನಿಷೇಧ ಹೇರಿದ್ದ ಪಾಕಿಸ್ತಾನ, ಮನಸ್ಸು ಬದಲಾಯಿಸಿಕೊಂಡು ಭಾರತ ವಿರುದ್ಧ ಆಡಲು ಸಜ್ಜಾಗಿದೆ. ಶ್ರೀಲಂಕಾದಲ್ಲಿ ನಡೆಯುವ ಈ ಪಂದ್ಯಕ್ಕೆ ಈಗಾಗಲೇ ಎಲ್ಲಾ ಟಿಕೆಟ್‌ಗಳು ಸೋಲ್ಡ್‌ಔಟ್ ಆಗಿದ್ದು, ಭಾರೀ ಕುತೂಹಲ ಹುಟ್ಟಿಸಿದೆ.

ನಕ್ಕರೆ ಅದೇ ಸ್ವರ್ಗ

ಬೆಳಗ್ಗೆ ಡ್ಯೂಟಿಗೆ ಬಂದ ಜೈಲರ್‌ಗೆ ಪೇದೆಯೊಬ್ಬ ಗಾಬರಿಯಿಂದ ಹೇಳಿದ. ಸರ್ ನಿನ್ನೆ ರಾತ್ರಿ ಕೈದಿಗಳೆಲ್ಲ ಸೇರಿ ರಾಮಲೀಲಾ ಉತ್ಸವ ನಡೆಸಿದರು.

ಜೈಲರ್ : ಬೇಷ್, ಅದಕ್ಯಾಕೆ ಇಷ್ಟು ಗಾಬರಿ.

ಪೇದೆ : ಸರ್, ಹನುಮಂತನ ಪಾತ್ರ ಮಾಡಿದವನು ಸಂಜೀವಿನಿ ತೆಗೆದುಕೊಂಡು ಬರ್ತೀನಿ ಅಂದ. ಹೋದವನು ಇನ್ನೂ ವಾಪಸ್ ಬಂದಿಲ್ಲ.

ಮೈಸೂರು ಮಿತ್ರ

ಭಾನುವಾರ, ಫೆಬ್ರವರಿ 15, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ..........

ಸಾಧ್ಯವಾದದ್ದನ್ನು ಮಾಡಲು ಶಕ್ತಿ ಸಾಕು. ಅಸಾಧ್ಯವಾದುದನ್ನು ಮಾಡಲು ವಿಶ್ವಾಸ ಮುಖ್ಯ. ಶಕ್ತಿ ವಿಶ್ವಾಸಗಳಿಂದ ಎಲ್ಲವೂ ಸಾಧ್ಯ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಬೆಕ್ಕು ಕಣ್ಮುಚ್ಚಿ ಹಾಲು ಕುಡಿದರೆ ಜಗತ್ತಿಗೆ ಗೊತ್ತಾಗಲ್ವಾ?

ನಿಮ್ಮ ಪತ್ರಗಳು

ಮುಖ್ಯಮಂತ್ರಿಗಳ 'ಖೋಟಾ' ಪತ್ರ ಮತ್ತು 'ಖೋಟಾ' ಸಹಿ ಹಗರಣ

ಮಾನ್ಯರೆ,

ಇಲ್ಲೊಂದು ತಮಾಷೆಯ ಅಷ್ಟೇ ಗಂಭೀರವಾದ ವಿಷಯ. ಕುಟುಂಬ ಕಲ್ಯಾಣ ಇಲಾಖೆಯ ವ್ಯಕ್ತಿಯನ್ನು ಅಬಕಾರಿ ಉಪ ಆಯುಕ್ತರಾಗಿ ನಿಯೋಜಿಸಿರುವ ಬಗ್ಗೆ ಸಿದ್ದರಾಮಯ್ಯರವರ ಟಿಪ್ಪಣಿ ಪತ್ರ ಸುದ್ದಿಯೊಂದು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ. ಅದಕ್ಕೆ ಕೆಲವು ಬುದ್ಧಿವಂತರು ಮತ್ತು ಬುದ್ಧಿಜೀವಿಗಳು ಅದರಲ್ಲಿ ಪತ್ರದ ಸಂಖ್ಯೆ ಇಲ್ಲ. ಹಾಗಾಗಿ ಇದು fake, ಇದನ್ನು ಬಿಜೆಪಿಯವರು ಅತೀ ಹೆಚ್ಚು ಪ್ರಚಾರ ಮಾಡುತ್ತಿದ್ದಾರೆ ಎಂದು ಈ ಯುಗದಲ್ಲಿ ಜನರನ್ನು ನಂಬಿಸುತ್ತಿದ್ದಾರೆ.

ಅದಕ್ಕೆ ಪ್ರತಿಯಾಗಿ ಮುಖ್ಯಮಂತ್ರಿಗಳ ಆಡಳಿತ ಜಂಟಿ ಕಾರ್ಯದರ್ಶಿ ಅರುಣ್ ಫರ್ಟಾಡೋ ಎಂಬುವರು ವಿಧಾನಸೌಧ ಪೊಲೀಸರಿಗೆ ದೂರು ದಾಖಲಿಸಿದ್ದಾರೆ. ಆದರೇ ಇದು ಎಷ್ಟು ಗಂಭೀರವಾದ ವಿಷಯ ಎಂದರೆ...

ಒಬ್ಬ ರಾಜ್ಯದ ಮುಖ್ಯಮಂತ್ರಿಯ ಪತ್ರವನ್ನು ನಕಲಿ ಸೃಷ್ಟಿ ಮಾಡಿ ಮುಖ್ಯಮಂತ್ರಿ ಸಹಿಯನ್ನು ಫೋರ್ಜರಿ ಮಾಡಬಹುದಾದರೆ.... ಎಷ್ಟು ದೊಡ್ಡ crime ಮಾಡಿದ್ದಾರೆ. ಈ ಫೋರ್ಜರಿ ವಿಚಾರ ಆ ದೂರಿನಲ್ಲಿ ಬಳಸಿಲ್ಲ....

ಒಬ್ಬ ಮುಖ್ಯಮಂತ್ರಿಯ ಪತ್ರ ಮತ್ತು ಸಹಿ ಫೋರ್ಜರಿ ಆಗಬಹುದಾದರೆ.... ನಿಯೋಜನೆ ಮತ್ತು ವರ್ಗಾವಣೆಯ ದಂಧೆ ತನ್ನ ಕರಾಳತೆಯನ್ನು ಎಷ್ಟರ ಮಟ್ಟಿಗೆ ಚಾಚಿದೆ ಎಂಬ ಬಗ್ಗೆ ಜನರು ಬೆರಗಾಗಬೇಕಿದೆ ಮತ್ತು ಇದು ಸರಿಯಾದ ರೀತಿಯಲ್ಲಿ ತನಿಖೆಯಾಗಿ ಸತ್ಯ ಹೊರಬರಲೇಬೇಕಿದೆ.

ಮುಖ್ಯಮಂತ್ರಿಗಳ ಈ 'ಖೋಟಾ' ಪತ್ರ – 'ಖೋಟಾ' ಸಹಿ ಪ್ರಕರಣ...

'ಖೋಟಾ' ನೋಟು – 'ಖೋಟಾ' ಚಾಪಾ ಕಾಗದ ಪ್ರಕರಣಕ್ಕಿಂತ ದೊಡ್ಡ ಹಗರಣ... ಈ'ಖೋಟಾ' ಪತ್ರ – 'ಖೋಟಾ' ಸಹಿಯಿಂದ ಅದೆಷ್ಟು ವರ್ಗಾವಣೆ ಮತ್ತು ನಿಯೋಜನೆಯಾಗಿದೆ ಒಮ್ಮೆ ಮರು ಪರಿಶೀಲನೆಯಾಗಬೇಕಿದೆ.

–ಪರಮಾನಂದ.ಎಂ.ಎಸ್, ರಾಜ್ಯ ಕಾರ್ಯದರ್ಶಿ, ಎಸ್.ಸಿ. ಮೋರ್ಚಾ, ಬಿಜೆಪಿ.

ಹಟ್ಟಿ ಮಾರಮ್ಮ ದೇವಸ್ಥಾನದ ಸುತ್ತ ಕಾಂಪೌಂಡ್ ನಿರ್ಮಿಸಿ

ಮಾನ್ಯರೆ,

ಸರಿಸುಮಾರು 150–200 ವರ್ಷಗಳ ಇತಿಹಾಸ ಇರುವಂತಹ ನಂಜನಗೂಡಿನ ಪಟ್ಟಣದಲ್ಲಿರುವ ಹಟ್ಟಿ ಮಾರಮ್ಮ ದೇವಸ್ಥಾನಕ್ಕೆ ಅತ್ಯಗತ್ಯವಾಗಿ ಪ್ರಮುಖ ಕೆಲಸವೊಂದು ಆಗಬೇಕಾಗಿದೆ! ಈ ದೇವಸ್ಥಾನ ನಂಜನಗೂಡು ಪಟ್ಟಣದ ಶ್ರೀರಾಮಪುರ (ಚಕ್ರ ಹಟ್ಟಿ) ಚಕ್ರ ಬಳಗ ಸಮಿತಿ ಸುಪರ್ದಿಯಲ್ಲಿದ್ದು ಶತಮಾನಗಳಿಂದಲೂ ಈ ಮನೆತನದವರೇ ಧಾರ್ಮಿಕ ಪೂಜಾ ಕೈಂಕರ್ಯಗಳನ್ನು ನೆರವೇರಿಸಿಕೊಂಡು ಬಂದಿರುತ್ತಾರೆ. ಪ್ರತಿ ವರ್ಷ ಫೆಬ್ರವರಿ, ಮಾರ್ಚ್ ತಿಂಗಳಲ್ಲಿ ಅದ್ದೂರಿಯಾಗಿ ಕೆಂಡ ಉತ್ಸವ, ಜಾತ್ರೆ ಕೂಡ ನಡೆಯುತ್ತದೆ.

ಈ ದೇಗುಲಕ್ಕೆ ಸುತ್ತಮುತ್ತಲಿನ ಗ್ರಾಮಸ್ಥರು,ಅಕ್ಕ ಪಕ್ಕದ ಜಿಲ್ಲೆ, ನೆರೆಯ ತಮಿಳುನಾಡು ರಾಜ್ಯದಿಂದಲೂ ಭಕ್ತಾದಿಗಳು ಬರುವುದುಂಟು. ತಾಲೂಕು ಸಾರ್ವಜನಿಕ ಆಸ್ಪತ್ರೆ, ಕೇಂದ್ರ ಬಸ್ ನಿಲ್ದಾಣ, ಅಂಬೇಡ್ಕರ್ ಸರ್ಕಲ್, ಆಸು ಪಾಸಿನಲ್ಲೇ ಈ ದೇವಸ್ಥಾನ ಇದೆ. ಹೀಗೆ, ಕಾಂಪೌಂಡ್ ನಿರ್ಮಿಸದೆ ನಿರ್ಲಕ್ಷ್ಯ ಮುಂದುವರೆದರೆ ಈ ಸ್ಥಳ ಮುಂದಿನ ದಿನಗಳಲ್ಲಿ ಅಪಘಾತ ವಲಯವಾಗಿ ಪರಿಣಮಿಸಬಹುದು.

ಕಳೆದ ಎರಡು ಮೂರು ದಶಕಗಳಿಂದ ಸ್ಥಳೀಯ ಆಡಳಿತವಾದ ನಗರಸಭೆ ಹಾಗೂ ಶಾಸಕರಿಗೆ ಈ ವಿಚಾರ ಸಂಬಂಧ ಮನವಿ ಸಲ್ಲಿಸಿದರೂ ಆಶ್ವಾಸನೆ ಸಿಗುತ್ತದೆ ವಿನಃ ಯಾವುದೇ ಕಾರ್ಯ ಜಾರಿ ಆಗದಿರುವುದು ದೇವಸ್ಥಾನ ಆಡಳಿತ ಮಂಡಳಿಯ ಶ್ರೀರಾಮಪುರ ಜನರಿಗೆ ಯಕ್ಷಪ್ರಶ್ನೆಯಾಗಿ ಉಳಿದಿದೆ.ಇನ್ನಾದರೂ ಸಂಬಂಧಪಟ್ಟ ನಗರ ಸಭೆಯ ಅಧಿಕಾರಿ ವರ್ಗ, ಜನಪ್ರತಿನಿಧಿಗಳು, ಸ್ಥಳೀಯ ಶಾಸಕರಾದ ದರ್ಶನ್ ಧ್ರುವನಾರಾಯಣ್ ತುರ್ತಾಗಿ ಗಮನವಹಿಸಿ ಆದ್ಯತೆ ಮೇರೆಗೆ ದೇಗುಲದ ಹೊರಾಂಗಣದ ಸುತ್ತ ಕಾಂಪೌಂಡ್ ನಿರ್ಮಾಣಕ್ಕೆ ಚಾಲನೆ ನೀಡಬೇಕಿದೆ. **–ಅನಿಲ್ ಕುಮಾರ್, ನಂಜನಗೂಡು.**

ಶ್ರೀ ರಾಮಕೃಷ್ಣ ಪರಮಹಂಸರ ಪ್ರತಿಮೆಗೆ ರಕ್ಷಣೆ ಕಲ್ಪಿಸಿ

ಮಾನ್ಯರೆ,

ಶ್ರೀ ರಾಮಕೃಷ್ಣ ನಗರ ವೃತದಲ್ಲಿ ಪ್ರತಿಷ್ಠಾಪಿಸಿರುವ ಶ್ರೀ ರಾಮಕೃಷ್ಣ ಪರಮಹಂಸರ ಭವ್ಯವಾದ ಮೂರ್ತಿಯು ಸಾಂಸ್ಕೃತಿಕ ಹಾಗೂ ಆಧ್ಯಾತ್ಮಿಕ ನಗರ ಮೈಸೂರಿಗೆ ಒಂದು ಅಭೂತಪೂರ್ವವಾದ ಕೊಡುಗೆ. ಸುಂದರವಾದ ಮೂರ್ತಿಯು ವೃತ್ತದ ಸುತ್ತಲೂ ರಸ್ತೆಯಲ್ಲಿ ಚಲಿಸುವ ಸಾವಿರಾರು ಜನರ ಕಣ್ಣುಗಳಿಗೆ, ಹೃನ್ಮನಗಳಿಗೆ ಆಧ್ಯಾತ್ಮಿಕತೆ ಹಾಗೂ ಶಾಂತಿಯ ಚೈತನ್ಯವನ್ನು ನಿತ್ಯವೂ ಬೆಳಗುತ್ತಿದೆ.

ಆದರೆ ಬಿಸಿಲಿನ ಸಮಯದಲ್ಲಿ (ಅದರಲ್ಲೂ ಮುಖ್ಯವಾಗಿ ಬೆಳಗ್ಗೆ ಮತ್ತು ಮಧ್ಯಾಹ್ನದ) ಸೂರ್ಯನ ನೇರವಾದ ಕಿರಣಗಳು ಶ್ರೀರಾಮಕೃಷ್ಣರ ಪ್ರತಿಮೆ ಮೇಲೆ ಬೀಳುತ್ತಿರುವುದನ್ನು ಗಮನಿಸಿದ್ದೇನೆ. ಈ ರೀತಿ ನೇರವಾಗಿ ಪ್ರತಿಮೆಗೆ ಬಿಸಿಲು ಬೀಳುವುದರಿಂದ ಪ್ರತಿಮೆಗೆ ಏನು ತೊಂದರೆಯಾಗುವುದಿಲ್ಲವೇ? ಮುಂದಿನ ದಿನಗಳಲ್ಲಿ ಬೇಸಿಗೆ ಸಮೀಪಿಸುವುದರಿಂದ ಬಿಸಿಲಿನ ಝಳ ಹೆಚ್ಚಾಗಿರುತ್ತದೆ. ಆದ್ದರಿಂದ ಸಾಧ್ಯವಾದಷ್ಟು ಬಿಸಿಲು ನೇರವಾಗಿ ಪ್ರತಿಮೆಗೆ ಬೀಳದಂತೆ ವ್ಯವಸ್ಥೆ ಮಾಡಬಹುದು ಎಂದಾದರೆ ಸಂಬಂಧಪಟ್ಟವರು ಅದರ ಕಡೆಗೆ ಗಮನಹರಿಸಬೇಕೆಂದು ಶ್ರೀರಾಮಕೃಷ್ಣ ಆಶ್ರಮದ ಭಕ್ತರಲ್ಲೊಬ್ಬರಾಗಿ ವಿನಂತಿಸಿಕೊಳ್ಳುತ್ತೇನೆ.

–ಶಿವಕುಮಾರ್ ಕೆ., ಯಾದವಗಿರಿ, ಮೈಸೂರು

ವಂದೇ ಮಾತರಂಗೆ ರಾಷ್ಟ್ರಗೀತೆಯ ಮನ್ನಣೆ

ಮಾನ್ಯರೆ,

ಬಂಕಿಮ ಚಂದ್ರ ಚಟರ್ಜಿ ರಚನೆ ಮಾಡಿರುವ ನಾಡಗೀತೆಗೆ 150 ವರ್ಷದ ಹಿನ್ನೆಲೆ ಕೇಂದ್ರ ಸರ್ಕಾರ ಮಾರ್ಗಸೂಚಿ ನಿಯಮದ ಪ್ರಕಾರ ರಾಷ್ಟ್ರಗೀತೆಗೆ ಮುನ್ನ ನಿಂತು ವಂದೇ ಮಾತರಂ ಹಾಡಬೇಕು. ಇದು ರಾಷ್ಟ್ರಗೀತೆಗೆ ಸಮಾನ ಮೂರು ನಿಮಿಷ 10 ಸೆಕೆಂಡ್‌ಗಳಲ್ಲಿ ಆರು ಸಾಲುಗಳನ್ನು ಹಾಡಿ ನಂತರ ರಾಷ್ಟ್ರಗೀತೆ ಹಾಡಬೇಕು. ಶಾಲೆ ಸರ್ಕಾರದ ಕಾರ್ಯಕ್ರಮ ರಾಷ್ಟ್ರೀಯ ಹಬ್ಬ ಗಣ್ಯರ ಆಗಮನ ಹೀಗೆ ಅನೇಕ ಸಂದರ್ಭಗಳಲ್ಲಿ ಗೌರವದಿಂದ ಈ ಸಾಲುಗಳನ್ನು ಹೇಳುವಾಗ ಎದ್ದು ನಿಂತು ಗೌರವ ಸೂಚಿಸಬೇಕು. ಇದರಿಂದ ಮಕ್ಕಳಿಂದಲೇ ದೇಶಪ್ರೇಮ ಮೂಡಿಸಬಹುದು. ನಾಡಗೀತೆ ಎಲ್ಲರೂ ಒಟ್ಟಿಗೆ ಹಾಡಿದಾಗ ದೇಶದ ಬಗೆ ಎಲ್ಲರಿಗೂ ಗೌರವ ಹೆಚ್ಚಾಗುತ್ತದೆ. ಈ ಹಾಡಿಗೆ ಗೌರವ ನೀಡದೆ ಹೋದರೆ ಶಿಕ್ಷೆ ಖಚಿತ.ರಾಷ್ಟ್ರಗೀತೆಗೆ ಸಮಾನವಾದ 'ವಂದೇ ಮಾತರಂ'ಗೆ ನೀಡಿರುವ ಗೌರವ ಹೆಮ್ಮೆ ತಂದಿದೆ. ಎಲ್ಲರೂ ಈ ಹಾಡನ್ನು ಒಟ್ಟಾಗಿ ಹಾಡಿದರೆ ದೇಶದ ಬಗ್ಗೆ ಹೆಮ್ಮೆ ಮೂಡುತ್ತದೆ.

–ಎಂ. ಎಸ್. ಉಷಾ ಪ್ರಕಾಶ್, ಲೇಖಕಿ ಹಾಗೂ ಕವಯಿತ್ರಿ, ಮೈಸೂರು.

ನಾದಲಹರಿ



ಡಾ.ರಮಾ ವಿ. ಬೆಣ್ಣೂರ್
ಸಂಗೀತ ವಿಮರ್ಶಕರು
ಮೊ: 99452 82346

ಸಾರ್ಥಕ ಬದುಕಿನ ಒಳನೋಟ

ನುಡಿದರೆ ಮುತ್ತಿನಹಾರದಂತಿರಬೇಕು ಎಂದರು ಶಿವಶರಣರು. ಅದನ್ನು ಬದುಕಿಗೂ ಅನ್ವಯಿಸಬಹುದಲ್ಲವೇ? ಆ ಭಗವಂತ ನೀಡಿದ ವರವಾದ ಈ ಬದುಕನ್ನು ಅವನು ಮೆಚ್ಚುವಂತೆ ನಡೆಸುವುದಕ್ಕಿಂತ ಉತ್ತಮವಾದುದು ಏನಿದ್ದೀತು ಒಂದರ್ಥದಲ್ಲಿ ಪ್ರೀತಿ ತುಂಬಿದ, ದ್ವೇಷವಿಲ್ಲದ, ಚಟುವಟಿಕೆಯಿಂದ ತುಂಬಿದ ಬದುಕಿಗಿಂತ ಸಾರ್ಥಕವಾದುದು ಏನಿದ್ದೀತು ಎಂದು ಅನಿಸಿದಲ್ಲಿ ಅಚ್ಚರಿ ಇಲ್ಲ ಎಂದು ಅಂದುಕೊಳ್ಳುತ್ತೇನೆ.

ಹಿರಿಯ ಜೀವಿಗಳು ತಮ್ಮ ಬದುಕಿನಲ್ಲಿ ಕಲಿತ ಅನುಭವದ ರಸಪಾಕವನ್ನು ತಮ್ಮ ಮಾತಿನಲ್ಲಿ ಭಟ್ಟಿ ಇಳಿಸುವುದರಿಂದಲೇ ಇರಬಹುದು ಹಿಂದಿನವರ ಒಂದು ಗಾದೆ–ಒಲೆಗೊಂದು ಕೊರಡು, ಮನೆಗೊಂದು ಮುದಿಗೊರಡುಎಂಬುದು ಹುಟ್ಟಿದುದು. ದಪ್ಪನೆಯ ಕೊರಡೊಂದನ್ನು ಹಂಡೆ ಒಲೆಗೆ ಹಾಕಿ ಬಿಟ್ಟರೆ, ದಿನವೆಲ್ಲಾ ಬಿಸಿನೀರು ಲಭಿಸುವಂತೆ ಮುದುಕರೊಬ್ಬರು ಮನೆಯಲ್ಲಿದ್ದರೆ, ಬೇಕಾದಾಗಲೆಲ್ಲಾ ಅವರ ಅನುಭವದ ಮಾತುಗಳ ಮಾರ್ಗದರ್ಶನ ಸಿಗುತ್ತಿರುತ್ತದೆ ಎಂಬರ್ಥದಲ್ಲಿ. ಆದರೆ ವೃದ್ಧಾಶ್ರಮಗಳ ಸಂಖ್ಯೆ ಹೆಚ್ಚುತ್ತಿರುವ ಇಂದಿನ ಈ ನವಯುಗದಲ್ಲಿ ಮಕ್ಕಳಿಗೆ ವೃದ್ಧರ ಮಾತೂ ಬೇಡ, ಅವರ ಸಾಹಚರ್ಯವೂ ಬೇಡವೇನೋ ಎಂಬ ಅನುಮಾನ ಕಾಡುವುದು ಸಹಜ. ಅಜ್ಜ ಅಜ್ಜಿಯರ ಪ್ರೀತಿಯನ್ನು ಪಡೆವ ಮಕ್ಕಳು ನಿಜಕ್ಕೂ ಪುಣ್ಯವಂತರು. ಅವರೀರ್ವರ ನಡುವಿನ ಸಂಬಂಧವನ್ನು, ಅನಿರ್ವಚನೀಯ ಅನುಬಂಧವನ್ನು, ಯಾವ ಶಬ್ದಗಳೂ ವರ್ಣಿಸಲಾರವು.

ಅಜ್ಜಿ–ತಾತ ಮತ್ತು ಮೊಮ್ಮಕ್ಕಳ ನಡುವೆ ಇಂತಹ ಅಂತಃಕರಣ ತುಂಬಿದ ಬಾಂಧವ್ಯ ಏರ್ಪಡಲು ಆ ಹಿರಿಯರಲ್ಲೂ ಕೆಲವು ಗುಣಗಳು ಇರಬೇಕಾಗುತ್ತದೆ, ಕೆಲವನ್ನು ಅಳವಡಿಸಿಕೊಳ್ಳಬೇಕಾಗುತ್ತದೆ. ವಯಸ್ಸಾಗುತ್ತಾ ಹೋದಂತೆ ಮಕ್ಕಳ ಸಂಸಾರದಲ್ಲಿ ಮೂಗು ತೂರಿಸುವುದನ್ನು ಕಡಿಮೆ ಮಾಡಿಕೊಳ್ಳುವುದು, ಸೊಸೆಯ ಅಥವಾ ಅಳಿಯನೊಡನೆ ಸೌಹಾರ್ದತೆಯ ಸಂಬಂಧ ಇರಿಸಿಕೊಳ್ಳುವುದು, ಎಲ್ಲರನ್ನೂ ನಿಸ್ವಾರ್ಥ ಪ್ರೀತಿ–ವಿಶ್ವಾಸದಿಂದ ಮಾತನಾಡಿಸುವುದು, ಮಕ್ಕಳ ವಿದ್ಯಾಭ್ಯಾಸದ ಸಮಯದಲ್ಲಿ ದೂರದರ್ಶನ ವೀಕ್ಷಣೆ ಮಾಡದಿರುವುದು, ಮನೆಗೆಲಸದಲ್ಲಿ ತಮ್ಮ ಕೈಲಾದ ಸಹಾಯವನ್ನು ಮಾಡುವುದು ಇತ್ಯಾದಿ.

ಅಂತಹ ವ್ಯಕ್ತಿ ಒಬ್ಬರ ಪರಿಚಯ ಮಾಡಿಸಲಿದ್ದೇನೆ ಈಗ. ಅವರನ್ನು ನೋಡಿದರೇ ಮನಸ್ಸಿಗೆ ಅದೆಂತಹ ಆಹ್ಲಾದದ ಅನುಭವ ಆಗುತ್ತದೆ ಎಂದರೆ, ಆಹಾ, ಬದುಕಿದರೆ ಹೀಗೆ ಬದುಕಬೇಕು ಎಂದು ಅನಿಸಿದರೆ ಅಚ್ಚರಿ ಇಲ್ಲ. ಅವರೇ ಮೈಸೂರು ಮತ್ತು ಬೆಂಗಳೂರಿಗರಿಗೆ ಚಿರಪರಿಚಿತರಾಗಿರುವ ಪುಷ್ಪಾ ಮಾಮಿ–ವಿದುಷಿ ಪುಷ್ಪಾ ಶ್ರೀನಿವಾಸನ್.

ಬದುಕನ್ನು ಅತ್ಯಂತ ಆಪ್ತತೆಯಿಂದ ಪ್ರೀತಿಸುವ ಇವರ ಗುಣವು ಸಾಕಪ್ಪಾ ಈ ಲೈಫು, ಸಾಕಾಗಿಹೋಗಿದೆ ಎಂದು ಗೊಣಗುವವರಿಗೆ ಒಂದು ಸವಾಲಿನಂತಿದೆ. 93–94ರ ಈಕೆ ಈ ಇಳಿ ವಯಸ್ಸಿನಲ್ಲೂ ಸದಾ ಚಟುವಟಿಕೆಯಿಂದ ಇರುವುದರ ರಹಸ್ಯ ಏನೆಂದು ಗೊತ್ತೇ ಅದೇ ಸಂತೃಪ್ತಿ. ಆ ಗುಟ್ಟನ್ನು ಅವರ ಮಿಂಚುವ ಕಣ್ಣುಗಳು ಸದ್ದಿಲ್ಲದೆ ಅರುಹುತ್ತಿರುತ್ತವೆ. ಅದಿರುವಾಗ, ಯಾವುದಕ್ಕಾಗಿ ಕೊರಗಬೇಕು? ಪ್ರತಿಯೊಬ್ಬರನ್ನೂ ನಗುನಗುತ್ತಲೇ ಮಾತನಾಡಿಸುವುದು ಇವರಿಗೆ ಅತ್ಯಂತ ಸಹಜವಾಗಿ ಬಂದ ಗುಣ. ಮನಸ್ಸಿನ ತುಂಬಾ ಸ್ವರಗಳ, ನಾದದ ಮೋಡಿ, ಬೆರಳುಗಳೋ ಸ್ವೆಟರುಗಳನ್ನು ಹೆಣೆಯುತ್ತಲೋ, ಕಸೂತಿ ಹಾಕುತ್ತಲೋ, ಚಿತ್ರಗಳನ್ನು ಬಿಡಿಸುತ್ತಲೋ, ನಳಪಾಕವನ್ನು ಸಿದ್ಧಪಡಿಸುತ್ತಲೋ ಇರುವಾಗ, ತಲೆಯಲ್ಲಿ ಬೇಡದ ವಿಚಾರಗಳಿಗೆ ಸ್ಥಳವಾದರೂ ಎಲ್ಲಿ ಇವರಿಂದ ಸಂಗೀತದಲ್ಲಿ ಮಾರ್ಗದರ್ಶನ ಪಡೆಯದ ಯುವ ಕಲಾವಿದರು ಇಲ್ಲ ಎಂದರೆ ಬಹುಶಃ ಅದು ಅತಿಶಯೋಕ್ತಿ ಅಲ್ಲ. ಇಂದು ಶಾಸ್ತ್ರೀಯ ಸಂಗೀತ ಲೋಕದಲ್ಲಿ ಹೆಸರು ಪಡೆದಿರುವ ಉದಯ್ ಕಿರಣ್, ಮಾನಸನಯನ, ಚಂದನ್ ಕುಮಾರ್, ಸಿಂದು–ಸ್ಮಿತಾ, ಶ್ರೀನಾಥ್ ಎಲ್ಲರೂ ಒಂದಲ್ಲ ಒಂದು ಸಂದರ್ಭದಲ್ಲಿ ಅವರ ಮಾರ್ಗದರ್ಶನವನ್ನು ಪಡೆದ ಭಾಗ್ಯವಂತರೇ.



ವಿದುಷಿ ಪುಷ್ಪಾ ಶ್ರೀನಿವಾಸನ್.

> "ಭಗವಂತ ತಮಗೆ ಕೊಟ್ಟ ವಿದ್ಯೆಯನ್ನು ಎಂದೂ ಅವರು ಮಾರಾಟ ಮಾಡಲಿಲ್ಲ. ಅದು ಅವರ ಅವಶ್ಯಕತೆಯೂ ಆಗಿರಲಿಲ್ಲ. ಅವರ ಆತ್ಮದ ಪರಿಮಳವನ್ನು ಪಸರಿಸುವ ಸಾಧನ ಅಷ್ಟೇ ಆಗಿತ್ತು ಅದು. ಅವರು ವೇದಿಕೆಯ ಕಲಾವಿದರಾಗಿ ಮಿಂಚಲಿಲ್ಲ. ಆದರೆ, ಸಂಗೀತಪ್ರಿಯರ ಮನೋಲೋಕದಲ್ಲಿ ತಮ್ಮದೇ ಆದ ಶಾಶ್ವತ ಸ್ಥಾನವನ್ನು ಖಂಡಿತವಾಗಿಯೂ ಗಳಿಸಿಕೊಂಡಿದ್ದಾರೆ. ಆಕಾಶವಾಣಿ ಸೇರಿದಂತೆ ಹತ್ತು ಹಲವಾರು ಸಭೆಗಳ ಕಾರ್ಯಕ್ರಮಗಳಿಗೆ ನೂರಾರು ವಿಷಯಾಧಾರಿತ ಅಮೂಲ್ಯ ಕಾರ್ಯಕ್ರಮವನ್ನು ಸಿದ್ಧಪಡಿಸಿ, ಪ್ರಸ್ತುತಪಡಿಸಿದ ಖ್ಯಾತಿ ಪುಷ್ಪಾ ಶ್ರೀನಿವಾಸನ್ ಅವರದು.

ನಿಜ. ಸಂಗೀತವು ಅವರ ಬಾಳಿನ ಉಸಿರು ಎಂದರೆ ಅತಿಶಯೋಕ್ತಿ ಅಲ್ಲ. ಇಂದಿಗೂ ಯೂಟ್ಯೂಬ್‌ನಲ್ಲಿ ಹಿಂದಿನವರ, ಇಂದಿನವರ ಸಂಗೀತವನ್ನುಆಲಿಸುತ್ತಾ ಸಂತೋಷ ಪಡುವ ಆ ಧನ್ಯಜೀವಿ ಇಂದಿನವರು ಅದೆಷ್ಟು ಪುಣ್ಯವಂತರಪ್ಪಾ, ಕುಳಿತಲ್ಲೇ ಪ್ರಪಂಚದ ಯಾವ ಮೂಲೆಯ ಸಂಗೀತವನ್ನಾದರೂ ಕೇಳಬಹುದು. ನಮ್ಮ ಕಾಲದಲ್ಲಿ ಈ ಸೌಲಭ್ಯವೆಲ್ಲಾ ಇತ್ತೇ ಎಂದು ಮುಗ್ಧತೆಯಿಂದ ಹೇಳುವುದನ್ನು ಕೇಳುವುದೇ ಒಂದು ಸೊಗಸು.

ಅವರ ಬತ್ತಳಿಕೆಯಲ್ಲಿ ಅದೆಷ್ಟು ವಾಗ್ಗೇಯಕಾರರ ಅಮೂಲ್ಯ ಕೃತಿಗಳ ಭಂಡಾರ ಇದೆಯೋ, ಅದೆಲ್ಲವನ್ನೂ ಯುವ ಪೀಳಿಗೆಗೆ ರವಾನಿಸುವುದರಲ್ಲೂ ಆಕೆಗೆ ಅಷ್ಟೇ ಉತ್ಸುಕತೆ. ಹೀಗಾಗಿ ಯುವ ಸಂಗೀತಗಾರರು ತಮಗೆ ಯಾವುದಾದರೂ ರಚನಕಾರರ ರಚನೆ ಬೇಕಾದಾಗಲೆಲ್ಲಾ ಇವರ ಬಳಿಗೆ ಧಾವಿಸುತ್ತಿದ್ದುದು ಮಾಮೂಲು. ಅಷ್ಟೇ ಪ್ರೀತಿಯಿಂದ, ಉತ್ಸಾಹದಿಂದ ಅದನ್ನು ಅವರಿಗೆ ಧಾರೆ ಎರೆಯುತ್ತಿದ್ದ ಈ ಸುಸಂಸ್ಕೃತ ಮನಸ್ಸಿಗೆ ಮಾರುಹೋಗದಿರುವವರು, ಪೊರಮಡದ ಶಿರಗಳು ಇದ್ದೂ ಪ್ರಯೋಜನವಿಲ್ಲ.

ಭಗವಂತ ತಮಗೆ ಕೊಟ್ಟ ವಿದ್ಯೆಯನ್ನು ಎಂದೂ ಅವರು ಮಾರಾಟ ಮಾಡಲಿಲ್ಲ. ಅದು ಅವರ ಅವಶ್ಯಕತೆಯೂ ಆಗಿರಲಿಲ್ಲ. ಅವರ ಆತ್ಮದ ಪರಿಮಳವನ್ನು ಪಸರಿಸುವ ಸಾಧನ ಅಷ್ಟೇ ಆಗಿತ್ತು ಅದು. ಅವರು ವೇದಿಕೆಯ ಕಲಾವಿದರಾಗಿ ಮಿಂಚಲಿಲ್ಲ. ಆದರೆ, ಸಂಗೀತಪ್ರಿಯರ ಮನೋಲೋಕದಲ್ಲಿ ತಮ್ಮದೇ ಆದ ಶಾಶ್ವತ ಸ್ಥಾನವನ್ನು ಖಂಡಿತವಾಗಿಯೂ ಗಳಿಸಿಕೊಂಡಿದ್ದಾರೆ. ಆಕಾಶವಾಣಿ ಸೇರಿದಂತೆ ಹತ್ತು ಹಲವಾರು ಸಭೆಗಳ ಕಾರ್ಯಕ್ರಮಗಳಿಗೆ ನೂರಾರು ವಿಷಯಾಧಾರಿತ ಅಮೂಲ್ಯ ಕಾರ್ಯಕ್ರಮವನ್ನು ಸಿದ್ಧಪಡಿಸಿ, ಪ್ರಸ್ತುತಪಡಿಸಿದ ಖ್ಯಾತಿ ಪುಷ್ಪಾ ಅವರದು.

ಸಂಗೀತ, ಸಾಹಿತ್ಯಗಳ ಸಂಗಮದಂತಿದ್ದ ಆಳ್ವಾರ್ ತಿರುಮಲ ಅಯಂಗಾರ್ ಮತ್ತು ಶಿಂಗಮ್ಮ ದಂಪತಿಗಳ ಮೊದಲ ಮಗಳಾಗಿ ಜನಿಸಿದ ಪುಷ್ಪಾ ಅವರಿಗೆ ಬಾಲ್ಯದಿಂದಲೂ ಸಂಗೀತದ ಸೆಳೆತ. ಅದಕ್ಕಾಗಿ ಅವರು ಮೈಸೂರಿನಲ್ಲಿದ್ದ ಸೋದರತ್ತೆ ಎಗ್ಗಮ್ಮನವರ ಮನೆಗೆ ಹೋಗಿ ನೆಲೆಸಿದ್ದಾಗ, ಅಂದಿನ ದಸರಾ ವಸ್ತುಪ್ರದರ್ಶನದ ಕಟ್ಟಡದಲ್ಲೇ ಬಿತ್ತರಗೊಳ್ಳುತ್ತಿದ್ದ ಆಕಾಶವಾಣಿಯ ಕಚೇರಿಯ ಒಳಗೆ ಇಣುಕಿ ನೋಡಿದಾಗ ಅಲ್ಲೇ ಶ್ರೋತೃಗಳಿಗಾಗಿ ಸಂಗೀತ ಪಾಠ ಕಲಿಸುತ್ತಿದ್ದ ವಿದ್ವಾನ್ ಶೆಲ್ವಪಿಳ್ಳೆ ಅಯ್ಯಂಗಾರರು ಇವರನ್ನೂ ಹಾಡು ಅಂದರಂತೆ. ಹಾಡುಗಾರಿಕೆ ಸರಿ ಇದೆಯೆಂದು ಇವರನ್ನೂ ಕಾರ್ಯಕ್ರಮಕ್ಕೆ ಹಾಕಿಕೊಂಡುದ್ದಲ್ಲದೆ ಮುಂದೆ ತಮ್ಮಲ್ಲಿಯೇ ಸಂಗೀತಶಿಕ್ಷಣವನ್ನೂ ಆರಂಭಿಸುತ್ತಾರೆ.

ಹೀಗೆ ಅವರ ರೇಡಿಯೋದ ಗಾನವಿಹಾರದ ಶಿಷ್ಯೆಯಾಗಿ ಸೇರಿಕೊಂಡ ಪುಷ್ಪಾ ಅವರ ಬಾನುಲಿಯ ನಂಟು ಬೆಳೆಯುತ್ತಲೇ ಹೋಯಿತು. ಮದುವೆ ಆಗಿ ಸೇರಿದ ಪತಿಗೃಹವೂ ಕಲಾಭಿರುಚಿಯಿಂದ ತುಂಬಿತ್ತು. ಅವರ ನಾದಿನಿ ದ್ವಾರಕಿ ಕೃಷ್ಣಸ್ವಾಮಿಯವರು ಇವರಿಗೆ ಉತ್ತಮ ಸಂಗಾತಿಯಾದರು. ಅತ್ತಿಗೆ–ನಾದಿನಿಯರು ಅಡುಗೆ ಮಾಡುತ್ತಾ ಅಲ್ಲೇ ಸಂಗೀತಾಭ್ಯಾಸವನ್ನೂ ಮಾಡುತ್ತಿದ್ದ ಅನ್ಯೋನ್ಯ ಗೆಳತಿಯರು. ಒಟ್ಟಿಗೆ ಸಂಗೀತ ಪರೀಕ್ಷೆಗಳನ್ನೂ ದಾಟಿದವರು. ಹತ್ತಾರು ಕಾರ್ಯಕ್ರಮಗಳನ್ನು ರೂಪಿಸಿರುವ ಅಗ್ಗಳಿಕೆಯೂ ಇವರದ್ದಾಗಿದೆ.

ಇಂದು ಭರತನಾಟ್ಯ ಕ್ಷೇತ್ರಕ್ಕೆ ಹಲವು ಕನ್ನಡ ವರ್ಣಗಳು, ಇತರ ರಚನೆಗಳನ್ನು ನೀಡಿರುವ ಹೆಮ್ಮೆಯ ರಚನಕಾರ್ತಿ ದ್ವಾರಕಿಯವರು. ಪುಷ್ಪಾ ಅವರೂ ಸಹ ಕುಸುಮ ಎಂಬ ಅಂಕಿತದಲ್ಲಿ ಅನೇಕ ಸಂಗೀತ ರಚನೆಗಳನ್ನು ಸಂಗೀತ ಶಾರದೆಗೆ ಅರ್ಪಿಸಿದ್ದಾರೆ. ಒಂದರ್ಥದಲ್ಲಿ ಇವರು ಶುದ್ಧ ನಾದೋಪಾಸಕಿ. ಅವರ ಕಣಕಣದಲ್ಲೂ ನಾದಬಿಂದು ಝೇಂಕರಿಸುತ್ತಿದೆ. ನಾದಲೋಕದ ಮತ್ತೊಂದು ಧ್ರುವತಾರೆಯಾದ ದಿವಂಗತ ಎಂ.ಎಸ್.ಸುಬ್ಬಲಕ್ಷ್ಮಿಯವರು ಇವರ ಆರಾಧ್ಯ ದೈವ. ಅವರೇ ಪುಷ್ಪಾ ಅವರ ಮಾನಸ ಗುರು. ಅವರನ್ನು ಕುರಿತು ಗಾನಕಲಾ ಮೇರು ಸುಬ್ಬಲಕ್ಷ್ಮಿ ಎಂಬ ಪುಸ್ತಕವನ್ನೂ ಅವರು ರಚಿಸಿ ಧನ್ಯರಾಗಿದ್ದಾರೆ.


ಸಂಗೀತದ, ನಾದದ ಸಾನಿಧ್ಯವೇ ಬಹುಶಃ ಅವರ ಆರೋಗ್ಯದ ಗುಟ್ಟು. ಜೊತೆಗೆ ಸದಾ ಸಕಾರಾತ್ಮಕವಾದ ಆಲೋಚನೆಗಳಿಂದ ತುಂಬಿರುವ ಮನಸ್ಸು. ನಿತ್ಯ ಪೂಜೆ, ಪಾರಾಯಣ ಅವರ ದಿನ ನಿತ್ಯದ ಅವಿಭಾಜ್ಯ ಅಂಗಗಳು. ಮಗ–ಸೊಸೆ ಅವರನ್ನು ಅಕ್ಕರೆಯಿಂದ ನೋಡಿಕೊಳ್ಳುತ್ತಾರೆ. ಮಾಮಿ ಈಗಲೂ ಬಗೆಬಗೆಯ ಸಿಹಿ ಭಕ್ಷ್ಯಗಳನ್ನು ಮಾಡಬಲ್ಲ ಪಾಕಕಲಾ ಚತುರೆ. ಸದಾ ಉತ್ಸಾಹದಿಂದ, ಚೈತನ್ಯದಿಂದ ಪುಟಿಯುವ ಜೀವ. ಯಾವುದೇ ವಯಸ್ಸಿನವರೊಡನೆಯೂ ಕ್ಷಣಮಾತ್ರದಲ್ಲಿ ಬೆರೆಯುವ, ಮಾತನಾಡುವ ಸರಳತೆ ಅವರಿಂದ ಕಲಿಯಬೇಕು. ಅಲ್ಲಿ ಯಾವ ರೀತಿಯ ಹಮ್ಮುಬಿಮ್ಮಿಗೂ ಅವಕಾಶ ಇಲ್ಲ. ಅನೇಕ ಸಂಘಸಂಸ್ಥೆಗಳು ಅವರನ್ನು ಸನ್ಮಾನಿಸಿ ಧನ್ಯರಾಗಿವೆ. ಇಂತಹವರನ್ನು ಕಂಡ ಧನ್ಯರು ನಾವಲ್ಲವೇ ?

ಆದಿಯೋಗಿ–ಮಹಾಶಿವ

ಚಳಿಗಾಲ ಮುಗಿದು ಬೇಸಿಗೆ ಕಾಲ ಆರಂಭವಾಗುವ ಸಮಯದಲ್ಲಿ, ಕೃಷ್ಣ ಪಕ್ಷದ ಕೊನೆಯ ದಿನದಂದು, ಶಿವರಾತ್ರಿಯನ್ನು ಆಚರಣೆ ಮಾಡುತ್ತೇವೆ ಸೂರ್ಯ ಮತ್ತು ಚಂದ್ರರ ಚಲನೆಯಿಂದಾಗುವ ಕಾಲ ವ್ಯತ್ಯಾಸಕ್ಕೆ ಈ ಶರೀರವನ್ನು ಹೊಂದಿಸುವಲ್ಲಿ, ದೇಹದಲ್ಲಿ ಉಂಟಾಗುವ ವ್ಯತ್ಯಾಸ ಗಳಿಗೂ ಅನುಗುಣವಾಗಿ ಬಿಲ್ವ ಪತ್ರೆಯಿಂದ ಪೂಜಿಸುವ ಶಿವರಾತ್ರಿ ಹಬ್ಬ ವೈಜ್ಞಾನಿಕ ಆಚರಣೆ.

ಶಿವನೇ ಆದಿಯೋಗಿ, ಆದಿಗುರು, ಯೋಗಿಗಳಲ್ಲಿ ಅಗ್ರಗಣ್ಯ ಮತ್ತು ಯೋಗ ವಿಜ್ಞಾನಿ, ತ್ರಿಶೂಲಧಾರಿ ಶಿವನು ಪ್ರಕೃತಿಯ ಸಾತ್ವಿಕ, ರಾಜಸಿಕ, ತಾಮಸಿಕ ಗುಣಗಳ ಪ್ರತಿನಿಧಿಯಾಗಿದ್ದು, ತನ್ನೆಲ್ಲ, ಜ್ಞಾನವನ್ನು ಮೊದಲು ಪಾರ್ವತಿ ಶಕ್ತಿ ದೇವಿಗೆ ಧಾರೆ ಎರೆದನಂತೆ, ಮಾನವಕುಲದ ಒಳಿತಿಗಾಗಿ ಈ ಯೋಗಜ್ಞಾನವನ್ನು ಪ್ರಾಚೀನ ಋಷಿಗಳಿಗೆ ಹೇಳಿದನು. ಎಲ್ಲ ಯೋಗ ಮತ್ತು ಆಗಮ ಶಾಸ್ತ್ರಗಳೂ ಶಿವನನ್ನೇ ಮೊದಲ ಗುರು ಎಂದು ಪೂಜಿಸುತ್ತಾರೆ. ಉತ್ತರ ಭಾರತದಲ್ಲಿ ಗೋರಕ್‌ನಾಥ, ಮತ್ಸೇಂದ್ರನಾಥ ಮುಂತಾದ ಇನ್ನಿತರೆ 7 ಗುರುಗಳಿಂದ ಆಚರಿಸಲ್ಪಡುವ ನವನಾಥ ಸಂಪ್ರಾದಾಯವು, ಶಿವನ ಮೂಲವೇ ಆಗಿದೆ.

ಸತ್ವ ರಜ ಮತ್ತು ತಮಗಳಿಂದ ಉತ್ಪತ್ತಿ ಸ್ಥಿತಿ ಮತ್ತು ಲಯಗಳಾಗುತ್ತವೆ. ಕುಮಾರಾವಸ್ಥೆ, ಯೌವ್ವನಾವಸ್ಥೆ ಮತ್ತು ವೃದ್ಧಾಪ್ಯಾವಸ್ಥೆ ಇವುಗಳ ಪ್ರತೀಕವೆಂದು ಶಿವನಿಗೆ ಬಿಲ್ವ ಪತ್ರೆಯನ್ನು ಅರ್ಪಿಸಲಾಗುತ್ತದೆ. ಈ ಎಲ್ಲಾ ಅವಸ್ಥೆಗಳನ್ನೂ ಮೀರಿ ತ್ರಿಗುಣಾತೀತನಾದ ಈಶ್ವರನನ್ನು ಬಿಲ್ವ ಪತ್ರದ ಮೂಲಕ ಅರ್ಚಿಸಲಾಗುತ್ತದೆ. ಆಯು ರ್ವೇದದ ಪ್ರಕಾರ ಮತ್ತೆ ವೈಜ್ಞಾನಿಕವಾಗಿ ಸೂರ್ಯ ಮತ್ತು ಚಂದ್ರರ ಚಲನೆಯಿಂದಾಗುವ ಎಲ್ಲಾ ಕಾಲ, ಋತು ವ್ಯತ್ಯಾಸಕ್ಕೆ ನಮ್ಮ ದೇಹ ಹೊಂದಿ ಕೊಳ್ಳಲು, ಚಳಿಗಾಲ ಮುಗಿದು ಬೇಸಿಗೆ ಆರಂಭವಾಗುವ ಈ ಕೃಷ್ಣ ಪಕ್ಷದ ಕೊನೆಯ ದಿನವಾದ ಶಿವ ರಾತ್ರಿಯಂದು ಸೂರ್ಯನ ಶಾಖ ಕಡಿಮೆ ಇರುತ್ತದೆ.



ಈ ಪ್ರಕೃತಿ ಬದಲಾವಣೆ ಕಾಲದಲ್ಲಿ ನಮ್ಮ ಶರೀರದಲ್ಲಿಯೂ ಬದಲಾವಣೆ ಉಂಟಾಗುವ ಕಾಲದಲ್ಲಿ ಶಿವ ರಾತ್ರಿಯಂದು ಆಚರಿಸುವ ಉಪವಾಸ (ಶರೀರ ಶುದ್ದೀಕರಣ) ಮತ್ತು ಬಿಲ್ವಪತ್ರೆಯ ಅಭಿಷೇಕ ಮತ್ತು ಜಾಗರಣೆಗಳು ಶರೀರದ ಮತ್ತು ಮನಸ್ಸಿನ ಮೇಲೆ ಧನಾತ್ಮಕ ಪರಿಣಾಮಗಳನ್ನು ಬೀರುತ್ತದೆ.

ಬಿಲ್ವ ಪತ್ರೆಯು ಜೀರ್ಣಕಾರಿ, ಮಧುಮೇಹ ರೋಗ ನಿಯಂತ್ರಕ, ಹೃದಯ, ಚರ್ಮರೋಗ ನಿವಾರಕ ಮತ್ತು ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ ಎಂದು ಆಯು ರ್ವೇದ ವೈದ್ಯಕೀಯದಲ್ಲಿ ಉಪಯೋಗಿಸಲಾಗುತ್ತದೆ.

ಸಂಸಾರಿಯಾಗಿದ್ದೂ ವೈರಾಗ್ಯ ವನ್ನು ಸೂಚಿಸುವ ಶಿವ ಎರಡನ್ನೂ ಸರಿದೂಗಿಸಿಕೊಂಡು ಹೋಗುವ ಸರಳ ಸೂತ್ರದ ರೂವಾರಿ. ಕುಟುಂಬ, ಮನೆ, ಮಡದಿ, ಮಕ್ಕಳು ಎಲ್ಲವೂ ಇದ್ದು, ಏನೂ ಇಲ್ಲದಂತಿರುವ ನಮ್ಮ ಪರಮಶಿವನ ಬದುಕು ಸಮಚಿತ್ತದ, ಮನೋ ನಿಗ್ರಹದ ಸಾಕ್ಷಾತ್ಕಾರದಂತಿದೆ ಅಲ್ಲವೇ? ಪಾರ್ವತೀ ದೇವಿಯ ಮಾತೃತ್ವಕ್ಕೆ ಗೌರವ ಕೊಟ್ಟು ಗಜಮುಖನನ್ನು, ಅವಳನ್ನೂ ತನ್ನ ತೊಡೆಯ ಮೇಲೆ ಕೂರಿಸಿಕೊಂಡು ಪ್ರತಿಯೊಬ್ಬ ಮಹಿಳೆಯೂ ಬಯಸುವ ಸಮಾನತೆ, ಪ್ರೀತಿ, ಮುಕ್ತತೆ ಜಗತ್ತಿಗೇ ಪರಿಚಯಿಸಿದವನು ಶಿವ! ಹಾಗಾಗಿ ಶಕ್ತಿಯಾಗಿ ತನ್ನ ಅಪೂರ್ವ ಶಕ್ತಿಯಿಂದಲೇ ವ್ಯಕ್ತಿತ್ವದಿಂದಲೇ ಪಾರ್ವತಿಯೂ ಅವನ ಶರೀರದ ಒಂದು ಭಾಗವಾಗಿಯೇ ಅರ್ಧನಾರೀಶ್ವರ ರೂಪದಲ್ಲಿ ಮಹತ್ವದ ಸ್ಥಾನ ವನ್ನು ಹೊಂದಿದ್ದಾಳೆ !

> "ಪೌರಾಣಿಕ ವೈಜ್ಞಾನಿಕ ಹಿನ್ನಲೆಯಿರುವ ಶಿವರಾತ್ರಿಯನ್ನು ಮನಸ್ಸಿನ ಜಾಗೃತಸ್ಥಿತಿಯಲ್ಲಿ ನಮ್ಮೆಲ್ಲರಲ್ಲಿರುವ ನಕಾರಾತ್ಮಕ ಅರಿಷಡ್‌ವರ್ಗಗಳೆಂಬ ಭಾವನೆಗಳನ್ನು ಹೊಡೆದೋಡಿಸಿ ಸ್ಥಿರವಾದ ಮನ, ಆತ್ಮ, ಮತ್ತು ದೈಹಿಕ ಆರೋಗ್ಯ ಪಡೆಯಲು, 'ಗುರುವಿನ' ರೂಪದಲ್ಲಿ ಶಿವನನ್ನು ಆರಾಧಿಸೋಣ.

ದಕ್ಷಿಣದಲ್ಲಿ ಮಹಾಮುನಿ ಬ್ರಹ್ಮರ್ಷಿ ಅಗಸ್ತ್ಯರು ಈ ಜ್ಞಾನವನ್ನು ಯೋಗ, ತಂತ್ರ, ಔಷಧಿ, ಜ್ಯೋತಿಷ್ಯ ಮತ್ತು ಹಲವಾರು ಇತರೆ ಜ್ಞಾನಗಳ ಮೂಲಕ ಪ್ರಪಂಚಕ್ಕೆ ಧಾರೆ ಎರೆದಿದ್ದಾರೆ. 18 ಸಿದ್ಧರ ಸಂಪ್ರದಾಯದ ಬಗ್ಗೆ ಎಲ್ಲರಿಗೂ ತಿಳಿದಿರುವ ವಿಷಯವೇ! ಶಿವಸೂತ್ರ ವಿಜ್ಞಾನ ಭೈರವತಂತ್ರ, ರುದ್ರ ನಮಕ–ಚಮಕ, ರುದ್ರ ಪ್ರಶ್ನಾ, ಚಮಕ ಸ್ತುತಿ ಮುಂತಾದ ಪ್ರಾಚೀನ ಮಂತ್ರಗಳನ್ನು ಶಿವನು ಗುರುಶಿಷ್ಯ ಪರಂಪರೆಯ ಮೂಲಕ ಆತ್ಮ ಸಾಕ್ಷರಕ್ಕಾಗಿ ಯೋಗ ಜ್ಞಾನದ ಮೂಲಕ ಪ್ರಪಂಚಕ್ಕೆ ಸಾರಿದ್ದಾರೆ. ಶಿವನೇ ಶಕ್ತಿ, ಜಗತ್ತಿನ ಸೃಷ್ಠಿಕರ್ತ! ಸಪ್ತ ಋಷಿಗಳು ಶಿವನ ಆದೇಶದಂತೆ ವಿಶ್ವದ ಎಲ್ಲ ಭಾಗಗಳಿಗೂ ಈ ಆತ್ಮ ಸಾಕ್ಷಾತ್ಕಾರದ ಯೋಗ ಜೀವನ ಸಾರವನ್ನು, ಜ್ಞಾನವನ್ನೂ, ಗುರು ಅಗಸ್ತ್ಯರ ನೇತೃತ್ವದಲ್ಲಿ ಪಸರಿಸಿದರು!

ಹೀಗೆ ಬೇರೆಯೇ ಪೌರಾಣಿಕ ವೈಜ್ಞಾನಿಕ ಹಿನ್ನಲೆ ಇರುವ ಶಿವರಾತ್ರಿಯನ್ನು ಮನಸ್ಸಿನ ಜಾಗೃತಸ್ಥಿತಿಯಲ್ಲಿ ನಮ್ಮೆಲ್ಲರಲ್ಲಿರುವ ನಕಾರಾತ್ಮಕ ಅರಿಷಡ್‌ವರ್ಗಗಳೆಂಬ ಭಾವನೆಗಳನ್ನು ಹೊಡೆದೋಡಿಸಿ ಸ್ಥಿರವಾದ ಮನ, ಆತ್ಮ, ಮತ್ತು ದೈಹಿಕ ಆರೋಗ್ಯ ಪಡೆಯಲು, 'ಗುರುವಿನ' ರೂಪದಲ್ಲಿ ಶಿವನನ್ನು ಆರಾಧಿಸೋಣ.

ಆದಿಯೋಗಿ, ಶಿವನ ಆತ್ಮ ಸಾಕ್ಷಾತ್ಕಾರ ಸಂದೇಶವನ್ನು ಪ್ರಪಂಚದಾದ್ಯಂತ ಪಸರಿಸಿದ ಅಗಸ್ತ್ಯಮುನಿಯಾದಿ ಎಲ್ಲ ಸಪ್ತ ಋಷಿಗಳನ್ನೂ ಸ್ಮರಿಸುತ್ತ ಶಿವರಾತ್ರಿಯನ್ನು ಪ್ರಸನ್ನ ಆತ್ಮ ಮನಸ್ಸಿನ ಆರೋಗ್ಯಕ್ಕಾಗಿ ಆಚರಿಸೋಣ ಅಲ್ಲವೇ ?



ಡಾ॥ ಸುಧಾ .ಎಂ.ಎನ್
ಆಯುರ್ವೇದ ಮತ್ತು ಯೋಗ ತಜ್ಞರು
ಮೊ.: 9448071933.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ವರುಣಾ ನಾಲೆ ಕೆಳಗೆ ತ್ಯಾಜ್ಯ ವಸ್ತುಗಳಿಗೆ ಬೆಂಕಿ; ನಾಲೆ ಕಂಬದಲ್ಲಿ ಬಿರುಕು

ಸೂಕ್ತ ಕಾನೂನು ಕ್ರಮಕ್ಕೆ ಮಾಲಿನ್ಯ ನಿಯಂತ್ರಣ ಮಂಡಳಿಗೆ ಪತ್ರ




ಮೈಸೂರು ಹೊರ ವಲಯದ ಹಳೇ ಕೆಸರೆ ಬಳಿ ಹಾದುಹೋಗಿರುವ ವರುಣಾ ನಾಲೆಯ ಪಿಲ್ಲರ್‌ಗಳ ಅಡಿ ಭಾರೀ ಪ್ರಮಾಣದ ತ್ಯಾಜ್ಯವನ್ನು ಸುಡುತ್ತಿರುವುದರಿಂದ ನಾಲೆಯ ಪಿಲ್ಲರ್‌ಗಳು ಬಿರುಕು ಬಿಟ್ಟು ಅಪಾಯದ ಮುನ್ಸೂಚನೆ ನೀಡುತ್ತಿವೆ.

ಮೈಸೂರು, ಫೆ.14(ಎಂಕೆ)– ಮೈಸೂರಿನ ರಿಂಗ್ ರಸ್ತೆ ಸಮೀಪ ಹಳೇ ಕೆಸರೆ ಬಳಿ ಹಾದುಹೋಗಿರುವ ವರುಣಾ ನಾಲೆ ಕೆಳಗೆ ಕಿಡಿಗೇಡಿಗಳು ತಾಮ್ರಕ್ಕಾಗಿ ವೈಯರ್‌ಗಳನ್ನು ಸುಡುತ್ತಿರುವುದರಿಂದ ನಾಲೆ ಕಂಬದಲ್ಲಿ ಬಿರುಕು ಕಾಣಿಸಿಕೊಂಡಿದೆ ಎಂದು ನರಸಿಂಹರಾಜ ಠಾಣೆ ಪೊಲೀಸರು ತಿಳಿಸಿದ್ದಾರೆ.

ಅಪರಿಚಿತ ವ್ಯಕ್ತಿಗಳು ವರುಣಾ ನಾಲೆಯ ಕಂಬಕ್ಕೆ ಹೊಂದಿಕೊಂಡಂತೆ ತ್ಯಾಜ್ಯಾ ವಸ್ತುಗಳು ಮತ್ತು ತಾಮ್ರಕ್ಕಾಗಿ ವೈಯರ್‌ಗಳನ್ನು ಸುಡುತ್ತಿದ್ದು, ಇದರಿಂದ ವರುಣಾ ನಾಲೆಯ ಪಿಲ್ಲರ್ ಬಿರುಕು ಬಿಟ್ಟಿದೆ. ಅನಾಹುತ ಸಂಭವಿಸುವ ಮುನ್ನವೇ ಎಚ್ಚೆತ್ತು ಕೊಳ್ಳುವಂತೆ ಕಾವೇರಿ ನೀರಾವರಿ ನಿಗಮ ಮಂಡಳಿ ಹಾಗೂ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ಪತ್ರ ಬರೆದು ಮಾಹಿತಿ ನೀಡಲಾಗಿದೆ.

ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ, ಸಾರ್ವಜನಿಕರ ಆಸ್ತಿ–ಪಾಸ್ತಿ ಮತ್ತು ಪ್ರಾಣಹಾನಿ ಉಂಟಾಗದಂತೆ ಮುನ್ನೆಚ್ಚರಿಕಾ ಕ್ರಮ ಕೈಗೊಂಡು ಬಿರುಕು ಬಿಟ್ಟಿರುವ ಪಿಲ್ಲರ್ ಅನ್ನು ದುರಸ್ತಿ ಮಾಡಿಸಬೇಕು ಹಾಗೂ ಕಂಬಗಳ ಕೆಳಗೆ ತ್ಯಾಜ್ಯ ವಸ್ತುಗಳು, ವೈಯರ್‌ಗಳನ್ನು ಸುಡುತ್ತಿರುವವರ ಮೇಲೆ ಸೂಕ್ತ ಕ್ರಮ ವಹಿಸಿ, ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಬೇಕೆಂದು ಕೋರಲಾಗಿದೆ.

ಪರಿಸರಕ್ಕೆ ಹಾನಿ: ರಿಂಗ್ ರಸ್ತೆಯಿಂದ ಆಚೆ ಇರುವ ಹಳೇಕೆಸರೆ ಮತ್ತು ಇತರೆ ಹೊರವಲಯ ಪ್ರದೇಶಗಳಲ್ಲಿ ಕೆಲ ಗುಜರಿ ಮತ್ತು ಗ್ಯಾರೇಜ್‌ಗಳು ಹಾಗೂ ಇತರೆ ಅಂಗಡಿಗಳಲ್ಲಿ ತಾಮ್ರಕ್ಕಾಗಿ ವೈಯರ್‌ಗಳನ್ನು ಬೆಂಕಿ ಹಚ್ಚಿ ಸುಡುತ್ತಿರುವುದರಿಂದ ಪರಿಸರ ಮಾಲಿನ್ಯವಾಗುತ್ತಿದ್ದು, ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ. ಈ ನಿಟ್ಟಿನಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಪರಿಶೀಲನೆ ನಡೆಸಿ ಶೀಘ್ರವಾಗಿ ಸೂಕ್ತ ಕ್ರಮ ಕೈಗೊಳ್ಳುವಂತೆ ಪತ್ರದಲ್ಲಿ ತಿಳಿಸಲಾಗಿದೆ.

ಹತ್ತನೇ ತರಗತಿಯಲ್ಲಿ ಅಧಿಕ ಫಲಿತಾಂಶ ಬರುವ ಶಾಲೆಗೆ ವಿದ್ಯಾರ್ಥಿಗಳ ದಾಖಲು ಹೆಚ್ಚಳ

● ಶಾಸಕ ಜಿ.ಟಿ.ದೇವೇಗೌಡರ ಅಭಿಮತ ● ಶೇ.100ರಷ್ಟು ಫಲಿತಾಂಶ ಗಳಿಕೆಗೆ ಯತ್ನಿಸಲು ಕಿವಿಮಾತು

ಮೈಸೂರು, ಫೆ.14– ಹತ್ತನೇ ತರಗತಿಯಲ್ಲಿ ಉತ್ತಮ ಫಲಿತಾಂಶ ಪಡೆಯುವ ಶಾಲೆಗಳಿಗೆ ತನ್ನಂತಾನೆ ವಿದ್ಯಾರ್ಥಿಗಳ ದಾಖಲಾತಿಯೂ ಹೆಚ್ಚಾಗುತ್ತದೆ ಎಂದು ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ಅಭಿಪ್ರಾಯಿಸಿದರು.

ತಾಲೂಕಿನ ಇಲವಾಲ ಹೋಬಳಿ ಗುಂಗ್ರಾಲ್ ಛತ್ರ ಗ್ರಾಮದ ಸರ್ಕಾರಿ ಪ್ರೌಢ ಶಾಲೆಯಲ್ಲಿ ಕಲಿಸು ಫೌಂಡೇಶನ್ ಹಾಗೂ ಯುನಿಲಾಗ್ ಸಹಯೋಗದಲ್ಲಿ ನೂತನವಾಗಿ ತೆರೆದಿರುವ ಗ್ರಂಥಾಲಯ ಉದ್ಘಾಟಿಸಿ, ಅವರು ಮಾತನಾಡಿದರು.



ಇಲವಾಲ ಹೋಬಳಿ ಗುಂಗ್ರಾಲ್ ಛತ್ರ ಗ್ರಾಮದ ಸರ್ಕಾರಿ ಪ್ರೌಢಶಾಲೆಯಲ್ಲಿ ಗ್ರಂಥಾಲಯ ಉದ್ಘಾಟನೆ ಸಮಾರಂಭಕ್ಕೆ ಶಾಸಕ ಜಿ.ಟಿ.ದೇವೇಗೌಡ ದೀಪ ಬೆಳಗುವ ಮೂಲಕ ಚಾಲನೆ ನೀಡಿದರು.

ಸರ್ಕಾರಿ ಶಾಲೆಗಳಲ್ಲಿ ದಾಖಲಾತಿ ಕ್ಷೀಣಿಸದಂತೆ ಶಿಕ್ಷಕ ವರ್ಗ ನಿಗಾ ವಹಿಸಬೇಕು. ಶಿಕ್ಷಣದ ಪ್ರಮುಖ ಘಟ್ಟವಾದ ಹತ್ತನೇ ತರಗತಿ ಪರೀಕ್ಷೆಯಲ್ಲಿ ಶಾಲೆಗೆ ಉತ್ತಮ ಫಲಿತಾಂಶ ದೊರೆತರೆ, ಮುಂದಿನ ಶೈಕ್ಷಣಿಕ ವರ್ಷಕ್ಕೆ ಹೆಚ್ಚು ವಿದ್ಯಾರ್ಥಿಗಳು ದಾಖಲಾಗುತ್ತಾರೆ. ಆದ್ದರಿಂದ ಶಾಲೆಗೆ ಶೇ.100 ರಷ್ಟು ಫಲಿತಾಂಶ ತರುವ ನಿಟ್ಟಿನಲ್ಲಿ ಶಿಕ್ಷಕರು ಅವಿರತವಾಗಿ ಕೆಲಸ ಮಾಡಬೇಕು. ಬಿಆರ್‌ಪಿ ಹಾಗೂ ಸಿಆರ್‌ಪಿಗಳು ನಿಗಾವಹಿಸಬೇಕು ಎಂದು ಸಲಹೆ ನೀಡಿದರು.

ಸರ್ಕಾರಿ ಶಾಲೆಗಳಲ್ಲಿ ಕಲಿತವರೇ ಸಮಾಜದಲ್ಲಿ ಉನ್ನತ ಸ್ಥಾನಮಾನ ಪಡೆದಿದ್ದಾರೆ. ನಾನು, ಮುಖ್ಯಮಂತ್ರಿ ಸಿದ್ದರಾಮಯ್ಯ, ಪ್ರಧಾನಿ ನರೇಂದ್ರಮೋದಿ ಸೇರಿದಂತೆ ಅನೇಕರು ಸರ್ಕಾರಿ ಶಾಲೆಯಲ್ಲಿ ಓದಿದವರು. ನಿರಂತರವಾಗಿ ಓದಿದರೆ ಏನಾದರೂ ಸಾಧನೆ ಮಾಡಬಹುದು. ಸಾಹಿತಿಗಳಾದ ಡಾ.ಎಸ್.ಎಲ್.ಭೈರಪ್ಪ, ಪ್ರೊ.ದೇ.ಜವರೇಗೌಡರಂತಹ ಮಹನೀಯರು ಓದಿನಿಂದಲೇ ದೊಡ್ಡ ವಿದ್ವಾಂಸರಾಗಿದ್ದರು. ನೀವೂ ಕೂಡ ಚೆನ್ನಾಗಿ ಓದಿ ಐಎಎಸ್, ಐಪಿಎಸ್, ಕೆಎಎಸ್‌ನಂತಹ ಹುದ್ದೆಗಳನ್ನು ಪಡೆಯಬೇಕು ಎಂದು ಮಕ್ಕಳಿಗೆ ಸಲಹೆ ನೀಡಿದರು.

ಹೆಚ್.ಡಿ.ರೇವಣ್ಣ ಲೋಕೋಪಯೋಗಿ ಸಚಿವರಾಗಿದ್ದಾಗ ಹುಣಸೂರು ಹಾಗೂ ಚಾಮುಂಡೇಶ್ವರಿ ಕ್ಷೇತ್ರದ ವ್ಯಾಪ್ತಿಯಲ್ಲಿ ಪ್ರೌಢಶಾಲೆ, ಪದವಿಪೂರ್ವ, ಪ್ರಥಮ ದರ್ಜೆ ಕಾಲೇಜುಗಳನ್ನು ಆರಂಭಿಸುವುದರ ಜೊತೆಗೆ ಕಟ್ಟಡಗಳ ನಿರ್ಮಾಣಕ್ಕೆ ಅನುದಾನ ನೀಡಿದ್ದರಿಂದ ಬಹಳ ಅನುಕೂಲವಾಯಿತು. ನಮ್ಮೂರಿನ ಮಕ್ಕಳು ಚೆನ್ನಾಗಿ ಓದಿ, ವಿವಿಧ ಹುದ್ದೆಗಳನ್ನು ಪಡೆದಿದ್ದು, ಕಷ್ಟಪಟ್ಟು ಶಾಲೆ ಆರಂಭಿಸಿದ್ದು ಸಾರ್ಥಕವಾಯಿತು ಎನ್ನಿಸಿದೆ ಎಂದರು.

ಜಯಪುರ ಗ್ರಾಮದ ಪ್ರತಿ ದಲಿತರ ಮನೆಯಲ್ಲೂ ವಿದ್ಯಾವಂತರಿದ್ದಾರೆ. ಪಿಹೆಚ್.ಡಿ ಮಾಡಿದವರು ಇದ್ದಾರೆ. ನನ್ನ ಕ್ಷೇತ್ರದಲ್ಲಿ ಇದು ದಾಖಲೆ ಆಗಿದೆ. ಡಾ. ಬಿ.ಆರ್.ಅಂಬೇಡ್ಕರ್ ಅವರು ಸಂವಿಧಾನದಲ್ಲಿ ನೀಡಿರುವ ಅವಕಾಶವನ್ನು ಬಳಸಿಕೊಂಡು ವಿದ್ಯಾವಂತರಾಗಿ, ಉದ್ಯೋಗ ಪಡೆಯುತ್ತಿದ್ದಾರೆ. ಗುಂಗ್ರಾಲ್ ಛತ್ರ ಗ್ರಾಮದಲ್ಲಿ ಹುಟ್ಟಿದ ನನಗೆ, ಉನ್ನತ ಶಿಕ್ಷಣ ಸಚಿವನಾಗುವ ಅವಕಾಶ ಸಿಕ್ಕಿತು. ನೀವು ಇನ್ನೂ ಉನ್ನತ ಸ್ಥಾನ ಗಿಟ್ಟಿಸಿಕೊಳ್ಳಬಹುದು. ಮುಂದಿನ ದಿನಗಳಲ್ಲಿ ಶಾಲೆಯ ಅಭಿವೃದ್ಧಿಗೆ ಬೇಕಾದ ನೆರವನ್ನು ನೀಡಲಾಗುವುದು. ಮಕ್ಕಳು ಹೇಳಿರುವಂತೆ ನೆರಳು ಕಲ್ಪಿಸುವುದು ಹಾಗೂ ಸೈಕಲ್ ಸ್ಟ್ಯಾಂಡ್ ನಿರ್ಮಾಣಕ್ಕೆ ಅಗತ್ಯ ಅನುದಾನ ನೀಡಲಾಗುವುದು ಎಂದು ಭರವಸೆ ನೀಡಿದರು.

ಈ ವೇಳೆ ಯುನಿಲಾಗ್ ಸಂಸ್ಥಾಪಕ ಅಚ್ಯುತ ಬಚ್ಚಳ್ಳಿ, ನಿರ್ದೇಶಕಿ ಸೌಮ್ಯ ಪ್ರಕಾಶ್, ಪ್ರಿಯದರ್ಶಿನಿ, ಕಲಿಸು ಫೌಂಡೇಶನ್ ಸಿಇಓ ಎಂ.ಎಂ.ನಿಖಿಲೇಶ್, ಜಿಪಂ ಮಾಜಿ ಸದಸ್ಯ ಅರುಣ್ ಕುಮಾರ್, ಕ್ಷೇತ್ರ ಶಿಕ್ಷಣಾಧಿಕಾರಿ ಪ್ರಕಾಶ್, ಶಾಲೆಯ ಮುಖ್ಯೋಪಾಧ್ಯಾಯ ಎಂ.ಸಿ.ಉಮಾಶಂಕರ್, ಗ್ರಾಪಂ ಅಧ್ಯಕ್ಷರಾದ ಮಂಜುಳಾ, ಪಿಡಿಓ ಶಿವಣ್ಣ, ಗ್ರಾಪಂ ಸದಸ್ಯರಾದ ಯದುವರ, ಸುರೇಶ್, ಮುಖಂಡರಾದ ಯಜಮಾನ್ ಸೀತಾರಾಮು, ಜಯರಾಮೇಗೌಡ, ಮಂಜು, ಮಹೇಂದ್ರ, ಸಿದ್ದರಾಮು, ಕೆಂಪಯ್ಯ, ಸ್ವಾಮಿ ಮತ್ತಿತರರು ಉಪಸ್ಥಿತರಿದ್ದರು.

ವಿದ್ಯಾರ್ಥಿನಿಲಯಗಳು ಭವಿಷ್ಯದ ಪ್ರಜೆಗಳನ್ನು ರೂಪಿಸುವ ತಾಣವಾಗಬೇಕು



ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿ ರಾಘವೇಂದ್ರ ಮಾತನಾಡಿದರು.

ಮೈಸೂರು, ಫೆ14(ಎಂಟಿವೈ)– ವಿದ್ಯಾರ್ಥಿನಿಲಯಗಳು ಭವಿಷ್ಯದ ಪ್ರಜೆಗಳನ್ನು ರೂಪಿಸುವ ತಾಣಗಳಾಗಿಸಿ, ವಿದ್ಯಾರ್ಥಿಗಳನ್ನು ಸಾಧನೆ ಮಾಡುವತ್ತ ಪ್ರೇರೇಪಿಸಬೇಕು ಎಂದು ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ರಾಘವೇಂದ್ರ ಸಲಹೆ ನೀಡಿದ್ದಾರೆ.

ಜಿಲ್ಲಾಡಳಿತ, ಜಿ.ಪಂ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ರಾಮಕೃಷ್ಣ ಆಶ್ರಮದ ಸಭಾಂಗಣದಲ್ಲಿ ಆಯೋಜಿಸಿದ್ದ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ನಿಲಯ ಪಾಲಕರು, ಮೇಲ್ವಿಚಾರಕರಿಗೆ ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆಯಿಂದ ಆಯೋಜಿಸಿದ್ದ ತರಬೇತಿ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದ ಅವರು, ನಿಲಯ ಪಾಲಕರು ವಿದ್ಯಾರ್ಥಿಗಳಿಗೆ, ತಂದೆ–ತಾಯಿ, ಶಿಕ್ಷಕ, ಸ್ನೇಹಿತರಾಗಿ ಮಾರ್ಗದರ್ಶನ ನೀಡಿ ಭವ್ಯ ಭವಿಷ್ಯದ ಪ್ರಜೆಗಳಾಗಿ ರೂಪಿಸಬೇಕು. ಈ ಕಾರ್ಯಾಗಾರದಲ್ಲಿ ಜೀವನ ಕೌಶಲ್ಯಗಳು ಹಾಗೂ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಹಾಗೂ ಬೆಂಬಲ ಸೇವೆಗಳ ಅಗತ್ಯ ಕುರಿತು ವಿವರವಾಗಿ ತಿಳಿಸಿಕೊಡಬೇಕು ಎಂದರು.

ರಾಮಕೃಷ್ಣ ಆಶ್ರಮದ ಶ್ರೀಸ್ವಾಮಿ ಮಹಾಮೇದಾನಂದ ಸ್ವಾಮಿಜೀ ಮಾತನಾಡಿ, ನಿಲಯಪಾಲಕರು ಯಾವುದೇ ಒತ್ತಡಗಳಿದ್ದರೂ ಸಹ ಶಿಸ್ತಿನ ಸಿಪಾಯಿ ರೀತಿ ಇದ್ದು ವಿದ್ಯಾರ್ಥಿಗಳಿಗೆ ಪ್ರಭಾವ ಬೀರುವ ರೀತಿ ಇರಬೇಕು ಎಂದರು.

ಕಾರ್ಯಾಗಾರದಲ್ಲಿ ಡಾ. ಪ್ರದೀಪ್, ನೇಹವರೂರ್ ಹಾಗೂ ಎಲ್ಲಾ ತಾಲೂಕು ಕಲ್ಯಾಣಾಧಿಕಾರಿಗಳು ಉಪಸ್ಥಿತರಿದ್ದರು.

ಗೌರಿಸತ್ಯರ ಮೈಸೂರ ನೆನಪುಗಳು ಈಗ ಪತ್ರಾಗಾರ ಸಂಗ್ರಹಾಲಯಕ್ಕೆ

ಮೈಸೂರು, ಫೆ.14– ಮೈಸೂರಿನ ಹಿರಿಯ ಪತ್ರಕರ್ತರೂ, ಲೇಖಕರೂ ಆದ ಗೌರಿ ಸತ್ಯ ಅವರ ಮೈಸೂರಿನ ನೆನಪುಗಳನ್ನು ಮೌಖಿಕ ಇತಿಹಾಸವಾಗಿ ಕರ್ನಾಟಕ ರಾಜ್ಯ ಪತ್ರಾಗಾರ ಮತ್ತು ಗ್ಯಾಜೆಟಿಯರ್ ಇಲಾಖೆಗೆ ಇಲ್ಲಿನ ಆಕಾಶವಾಣಿ ನಿಲಯದಲ್ಲಿ ಶುಕ್ರವಾರ ಧ್ವನಿಮುದ್ರಿಸಿಕೊಳ್ಳಲಾಯಿತು.

ಪ್ರಾರಂಭದಲ್ಲಿ ಮಾತನಾಡಿದ ಇಲಾಖೆ ನಿರ್ದೇಶಕ ಡಾ.ಗವಿಸಿದ್ದಯ್ಯನವರು ಇಲಾಖೆಯು ಈಗಾಗಲೇ 40 ಹೆಚ್ಚು ಹಿರಿಯರ, ಅನುಭವಿಗಳ ನೆನಪುಗಳನ್ನು ಧ್ವನಿ ಮುದ್ರಿಸಿಕೊಂಡು ಇಟ್ಟಿದ್ದು ಈಗ ಮೈಸೂರಿನ ಇತಿಹಾಸದ ಬಗ್ಗೆ ಅಪಾರ ಅರಿವುಳ್ಳ ಗೌರಿ ಸತ್ಯ ಅವರ ನೆನಪುಗಳೂ ಅವುಗಳ ಆ ಭಂಡಾರಕ್ಕೆ ಹರ್ಷಪಟ್ಟರು. ಇಲಾಖೆಯ ಮೈಸೂರು ವಿಭಾಗೀಯ ಕಚೇರಿಯ ಉಪ ನಿರ್ದೇಶಕ ಹೆಚ್.ಎಲ್. ಮಂಜುನಾಥ್ ಮೌಖಿಕ ಇತಿಹಾಸದ ಮಹತ್ವವನ್ನು ವಿವರಿಸಿ, ಮೈಸೂರಿನ ಹಲವಾರು ಕ್ಷೇತ್ರಗಳಲ್ಲಿ ಅನುಭವಿಗಳ ನೆನಪುಗಳು ಇತಿಹಾಸಕ್ಕೆ ಪೂರಕವಾಗಿ, ಆಸಕ್ತರಿಗೆ ಹಾಗೂ ಸಂಶೋಧಕರಿಗೆ ನೆರವಾಗುವುದೆಂದು ತಿಳಿಸಿದರು. ಈ ಮೌಖಿಕ ಇತಿಹಾಸ ಆಸಕ್ತರಿಗೆ, ಸಾರ್ವಜನಿಕರಿಗೆ ಲಭಿಸಿ ಇತಿಹಾಸದಲ್ಲಿನ ಕೊರತೆಗಳನ್ನು ತುಂಬಲು, ಹೆಚ್ಚಿನ ಮಾಹಿತಿ ಪಡೆದುಕೊಳ್ಳಲು ಬಹಳ ಮಟ್ಟಿಗೆ ಅನುಕೂಲವಾಗುವುದೆಂದರು.



ಗೌರಿ ಸತ್ಯ ಅವರ ಮೈಸೂರಿನ ನೆನಪುಗಳು ಆಕಾಶವಾಣಿಯಲ್ಲಿ ಪ್ರಸಾರಗೊಂಡಿತು.

ಸುಮಾರು 70 ನಿಮಿಷಗಳ ಕಾಲ ತಮ್ಮ ನೆನಪುಗಳನ್ನು ತೆರೆದಿಟ್ಟ ಗೌರಿ ಸತ್ಯ ಅವರು ತಮ್ಮ ಕುಟುಂಬದ ಹಿನ್ನೆಲೆ, ವಿದ್ಯಾಭ್ಯಾಸ, ಕೈಪಿಡಿಗಳ ಕಂಪೈಲರ್ ಎಂದೇ ಪ್ರಸಿದ್ಧರಾಗಿದ್ದ ಅವರ ತಂದೆ ಜಿ.ಎಲ್. ಸ್ವಾಮಿ ಪ್ರವಾಸೋದ್ಯಮ ಮತ್ತು ಪತ್ರಿಕಾಕ್ಷೇತ್ರದಲ್ಲಿ ಅವರ ಸಾಧನೆ, ತಲೆ ತಲಾಂತರದಿಂದ ನಡೆದು ಬಂದಿದ್ದ ಗೌರಿ ಪೌರೋಹಿತ್ಯ, ಅರಮನೆಯಲ್ಲಿ ಗೌರಿ ಹಬ್ಬದ ಆಚರಣೆ, ಅಲ್ಲಿನ ಆಡಳಿತ ವ್ಯವಸ್ಥೆ ಹಾಗೂ ಪ್ರವಾಸೋದ್ಯಮ ಮತ್ತು ಪತ್ರಿಕಾ ಕ್ಷೇತ್ರದಲ್ಲಿನ ತಮ್ಮ ಅನುಭವ, ಪ್ರಮುಖರೊಂದಿಗೆ ಇದ್ದ ಒಡನಾಟ ಇತ್ಯಾದಿಗಳನ್ನು ವಿವರಿಸಿ ಅಂದಿನ ಮೈಸೂರಿನ ನೋಟ ನೀಡಿದರು.

ಅಲ್ಲದೆ, ಮೈಸೂರಿನ ಅಂದಿನ ವೈಭವ, ಮಹಾರಾಜ ಜಯಚಾಮರಾಜ ಒಡೆಯರ ದಸರಾ ಆಚರಣೆಯ ಸುಂದರ ನೋಟ, ಚಿತ್ರಕಲೆ, ಸಂಗೀತ, ನೃತ್ಯ ಇತ್ಯಾದಿ ಕಲೆಗಳಿಗೆ ಆಗಿನ ಪ್ರೋತ್ಸಾಹ, ಪಾರಂಪರಿಕ ಕಟ್ಟಡಗಳ ರಕ್ಷಣೆ, ಮೈಸೂರಿನ ಇತಿಹಾಸ ಮತ್ತು ಸಾಂಸ್ಕೃತಿಕ ದೃಷ್ಟಿಯಿಂದ ಅವುಗಳನ್ನು ಉಳಿಸಿಕೊಳ್ಳಬೇಕಾದ ಅವಶ್ಯಕತೆ ಮುಂತಾದವುಗಳ ಬಗ್ಗೆ ವಿವರಿಸಿ ಹಿಂದಿನ ಮಹತ್ವದ ದಾಖಲೆಗಳನ್ನು ಸಂಗ್ರಹಿಸುತ್ತಿರುವ ಇಲಾಖೆಯ ಕಾರ್ಯವನ್ನು ಪ್ರಶಂಸಿಸಿದರು.

ಇಲಾಖೆಯ ನಿವೃತ್ತ ಜಂಟಿ ನಿರ್ದೇಶಕಿ ಡಾ. ಜೆ.ವಿ.ಗಾಯತ್ರಿ ಅವರು ಗೌರಿ ಸತ್ಯ ಅವರ ಪರಿಚಯ ಮಾಡಿಕೊಟ್ಟು, ಸಂದರ್ಶಕರಾಗಿ ಕಾರ್ಯನಿರ್ವಹಿಸಿದರು. ಈ ಸಂದರ್ಭದಲ್ಲಿ ಗೌರಿ ಸತ್ಯ ಅವರನ್ನು ಸನ್ಮಾನಿಸಲಾಯಿತು.

ಚಾಮುಂಡಿಬೆಟ್ಟದ 'ಪ್ರಸಾದ್' ಗುತ್ತಿಗೆದಾರನ ಮನೆ ಮೇಲೆ ಲೋಕಾಯುಕ್ತ ದಾಳಿ : 1.70 ಕೋಟಿ ರೂ. ವಶ

ಮೈಸೂರು, ಫೆ.14(ಬಿಎಲ್‌ಯು)– ಚಾಮುಂಡಿಬೆಟ್ಟದ ಪ್ರಸಾದ್ ಯೋಜನೆಯ ಕಾಮಗಾರಿ ಕೈಗೊಂಡಿರುವ ಗುತ್ತಿಗೆದಾರ ಎಸ್ ಕೆಎಸ್ ಕಾರ್ಕಳ ಇನ್ಫ್ರಾ ಪ್ರಾಜೆಕ್ಟ್ ಮಾಲೀಕ ಸುಜಯ್‌ಕುಮಾರ್ ಶೆಟ್ಟಿ ಅವರ ಫ್ಲಾಟ್ ಮೇಲೆ ಲೋಕಾಯುಕ್ತರು ದಾಳಿ ನಡೆಸಿದ್ದಾರೆ.

ದಾಳಿ ವೇಳೆ ಸುಜಯ್ ಶೆಟ್ಟಿ ಅವರ ಮನೆಯಲ್ಲಿದ್ದ 1.70 ಕೋಟಿ ಹಣವನ್ನು ಲೋಕಾಯುಕ್ತರು ವಶಪಡಿಸಿಕೊಂಡಿದ್ದಾರೆ.

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸೊಸೈಟಿಯ ಅಧೀಕ್ಷಕ ಅಭಿಯಂತರರಾದ ಹೆಚ್.ಎಂ.ಜನಾರ್ಧನ್ ಅವರು ಅಕ್ರಮ ಆಸ್ತಿ ಸಂಪಾದನೆ ಮಾಡಿದ್ದಾರೆಂಬ ಆರೋಪವಿತ್ತು ಈ ಹಿನ್ನೆಲೆ ಲೋಕಾಯುಕ್ತರು ಜನಾರ್ಧನ್ ಅವರ ಮನೆ ಹಾಗೂ ಕಚೇರಿ ಮೇಲೆ ದಾಳಿ ಮಾಡಿದ್ದರು.

ಈ ಹಿನ್ನೆಲೆಯಲ್ಲಿ ಜನಾರ್ಧನ್ ಅವರ ಸ್ನೇಹಿತ ಸುಜಯ್ ಕುಮಾರ್ ಶೆಟ್ಟಿ ಅವರ ಫ್ಲಾಟ್ ಮೇಲೆ ದಾಳಿ ನಡೆಸಲಾಯಿತು. ದಾಳಿ ವೇಳೆ 1.70 ಕೋಟಿ ರೂ. ಪತ್ತೆಯಾಗಿದ್ದು, ಅದನ್ನು ಲೋಕಾಯುಕ್ತರು ವಶಪಡಿಸಿಕೊಂಡಿದ್ದಾರೆ.

ದಾಖಲಾತಿ ನೀಡಿದ್ದೇನೆ

ನಮ್ಮ ಫ್ಲಾಟ್‌ನಲ್ಲಿ ದೊರೆತ ಹಣದ ಮೂಲದ ಬಗ್ಗೆ ದಾಖಲಾತಿ ಸಮೇತ ಲೋಕಾಯುಕ್ತರಿಗೆ ಮಾಹಿತಿ ನೀಡಿದ್ದೇನೆ. ಹಣದ ಮೂಲದ ಬಗ್ಗೆ ವಿವರ ನೀಡಿರುವ ಕಾರಣ ನಮಗೆ ಯಾವುದೇ ತೊಂದರೆ ಆಗುವುದಿಲ್ಲ ಎಂಬ ವಿಶ್ವಾಸವಿದೆ.

ನಾನೊಬ್ಬ ಗುತ್ತಿಗೆದಾರನಾಗಿ ಹಲವು ಅಧಿಕಾರಿಗಳ ಜೊತೆ ಸಂಪರ್ಕ ಇದ್ದೆ ಇರುತ್ತದೆ. ಹೀಗಿರುವಾಗ ನನಗೆ ಪರಿಚಯ ವಿರುವ ಅಧಿಕಾರಿ ಮನೆ ಮೇಲೆ ದಾಳಿ ಮಾಡಿದಾಗ ನನ್ನನ್ನು ಸಂದೇಹದಿಂದ ನೋಡಿದ್ದಾರೆ. ಆದರೆ ಅಲ್ಲಿ ದೊರೆತಿರುವ 1.70 ಕೋಟಿ ಹಣಕ್ಕೆ ಸೂಕ್ತ ದಾಖಲಾತಿ ನೀಡಿದ್ದೇನೆ.

– ಸುಜಯ್ ಶೆಟ್ಟಿ, ಚಾಮುಂಡಿಬೆಟ್ಟದ ಪ್ರಸಾದ್ ಯೋಜನೆ ಗುತ್ತಿಗೆದಾರ

ಪುಸ್ತಕೋದ್ಯಮ ಉಳಿವಿಗೆ ಬಜೆಟ್‌ನಲ್ಲಿ 28 ಕೋಟಿ ರೂ.ಮೀಸಲಿಗೆ ಆಗ್ರಹ

ಏಕಗವಾಕ್ಷಿ ಪುಸ್ತಕ ಖರೀದಿ ಯೋಜನೆ ಮುಂದುವರೆಸಲು ಲೇಖಕರ, ಪ್ರಕಾಶಕರ ಒಕ್ಕೂಟ ಒತ್ತಾಯ

ಮೈಸೂರು, ಫೆ.14– ಪುಸ್ತಕೋದ್ಯಮ ಉಳಿವಿಗಾಗಿ ಈ ಬಾರಿಯ ಬಜೆಟ್‌ನಲ್ಲಿ 28 ಕೋಟಿ ರೂ. ಮೀಸಲಿಟ್ಟು, ಏಕಗವಾಕ್ಷಿ ಪುಸ್ತಕ ಖರೀದಿ ಯೋಜನೆಯನ್ನು ಮುಂದುವರೆಸಬೇಕು ಎಂದು ಕರ್ನಾಟಕ ಲೇಖಕರ ಮತ್ತು ಪ್ರಕಾಶಕರ ಒಕ್ಕೂಟವು ಸರ್ಕಾರವನ್ನು ಒತ್ತಾಯಿಸಿದೆ.

ಸಾರ್ವಜನಿಕ ಗ್ರಂಥಾಲಯ ಇಲಾಖೆಯು ಪ್ರತಿ ವರ್ಷ ಸಾರ್ವಜನಿಕರಿಗೆ ಉಪಯುಕ್ತವಾದ ಪುಸ್ತಕಗಳನ್ನು, ಲೇಖಕರು ಮತ್ತು ಪ್ರಕಾಶಕರುಗಳಿಂದ ಏಕಗವಾಕ್ಷಿ ಯೋಜನೆಯಡಿ ಪ್ರತಿ ಶಿರೋನಾಮೆ ಪುಸ್ತಕದ 300 ಪ್ರತಿಗಳನ್ನು ಖರೀದಿಸಿ, ಗ್ರಂಥಾಲಯಗಳಿಗೆ ಒದಗಿಸಲಾಗುತ್ತಿತ್ತು. ಇದರಿಂದ ಪ್ರಕಟಗೊಂಡ ವರ್ಷದಲ್ಲೇ ಪುಸ್ತಕಗಳು ಓದುಗರ ಕೈಸೇರುತ್ತಿದ್ದವು. ಆದರೆ 2021 ರಿಂದ ಈ ಏಕಗವಾಕ್ಷಿ ಸಗಟು ಖರೀದಿ ಯೋಜನೆಯನ್ನು ಸ್ಥಗಿತಗೊಳಿಸುವ ಮೂಲಕ ಪುಸ್ತಕೋದ್ಯಮಕ್ಕೆ ಮರಣ ಶಾಸನವನ್ನು ಬರೆದಿದೆ ಎಂದು ಒಕ್ಕೂಟದ ಅಧ್ಯಕ್ಷ ಡಾ. ಎಸ್.ಪಿ.ಯೋಗಣ್ಣ ಬೇಸರ ವ್ಯಕ್ತಪಡಿಸಿದ್ದಾರೆ.

ಪುಸ್ತಕೋದ್ಯಮ ಜ್ಞಾನ ಭಂಡಾರವನ್ನು ವರ್ಧಿಸುವ ಪವಿತ್ರ ಸೇವೆ. ಆದರೆ ಕಳೆದ 4 ವರ್ಷಗಳಿಂದ ಈ ಏಕಗವಾಕ್ಷಿ ಸಗಟು ಪುಸ್ತಕ ಖರೀದಿ ಯೋಜನೆ ಇಲ್ಲದೆ, ಲೇಖಕರು ಮತ್ತು ಪ್ರಕಾಶಕರುಗಳಿಗೆ ತೀವ್ರ ಹಿನ್ನಡೆಯಾಗಿದೆ. ಓದುಗರಿಗೆ ಸಾರ್ವಜನಿಕ ಗ್ರಂಥಾಲಯಗಳಲ್ಲಿ ಹೊಸ ಪುಸ್ತಕಗಳು ಲಭಿಸದಂತಾಗಿದೆ. ಪುಸ್ತಕಗಳ ಪ್ರಕಟಣೆ ಕ್ಷೀಣಿಸಿ, ಪುಸ್ತಕೋದ್ಯಮದ ಸಾವಿರಾರು ಉದ್ಯೋಗಿಗಳು ಅತಂತ್ರರಾಗಿದ್ದಾರೆ. ಯುವ ಲೇಖಕರು ಮತ್ತು ಪ್ರಕಾಶಕರು ಪುಸ್ತಕೋದ್ಯಮದ ಬಗ್ಗೆ ಆಸಕ್ತಿ ಕಳೆದುಕೊಳ್ಳುತ್ತಿದ್ದಾರೆ ಎಂದು ತಿಳಿಸಿದ್ದಾರೆ.

ಸರ್ಕಾರ ಈ ಬಗ್ಗೆ ದಿವ್ಯ ನಿರ್ಲಕ್ಷ್ಯ ತಾಳಿರುವುದು ಸಮಂಜಸವಲ್ಲ. ಲೇಖಕರು ಮತ್ತು ಪ್ರಕಾಶಕರು ಹಲವಾರು ಬಾರಿ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಪ್ರಸ್ತುತ 2026–27ನೇ ಸಾಲಿನಿಂದ ಏಕಗವಾಕ್ಷಿ ಪುಸ್ತಕ ಖರೀದಿ ಯೋಜನೆಯನ್ನು ಪುನಾರಂಭಿಸುವುದರ ಜೊತೆಗೆ ಈ ಬಾರಿಯಿಂದ ಬಜೆಟ್‌ನಲ್ಲಿ 28 ಕೋಟಿ ಕಾಯ್ದಿರಿಸಬೇಕು ಎಂದು ಡಾ.ಎಸ್.ಪಿ. ಯೋಗಣ್ಣ ಮನವಿ ಮಾಡಿದ್ದಾರೆ.



ಒಕ್ಕಲಿಗರ ಸಂಘದ ಕಟ್ಟಡಕ್ಕೆ ದೇಣಿಗೆ

ಮೈಸೂರು ಒಕ್ಕಲಿಗರ ಸಂಘ, ಮೈಸೂರು ಪೂರ್ವ ವಲಯದ ವತಿಯಿಂದ ನಿರ್ಮಾಣ ಮಾಡಲಾಗುತ್ತಿರುವ ನೂತನ ಕಟ್ಟಡಕ್ಕೆ ಮಾಜಿ ಕಾರ್ಪೊರೇಟರ್ ಸಿ. ಮಹದೇಶ್, ಅವರ ಪುತ್ರರಾದ ಮದನ್ ಮಹದೇಶ್, ನಂದನ್ ಮಹದೇಶ್ ಶನಿವಾರ 5 ಲಕ್ಷ ರೂ ದೇಣಿಗೆ ನೀಡಿದರು. ಈ ವೇಳೆ ಸಂಘದ ಸುರೇಶ್ ಗೌಡ, ಯರಗನಹಳ್ಳಿ ಕುಮಾರ್ ಎಂ.ಗಣೇಶ್, ಪ್ರತಾಪ್, ಚಿಕ್ಕೇಗೌಡ ಇನ್ನಿತರರು ಉಪಸ್ಥಿತರಿದ್ದರು.

ಬದನವಾಳು ಸತ್ಯಾಗ್ರಹ ಮುಂದುವರೆಸಲು ನಿರ್ಣಯ

● ಗ್ರಾಮ ಸತ್ಯಾಗ್ರಹವೆಂದು ಮರುನಾಮಕರಣ ಮುಖೇನ ಮುನ್ನಡೆಸಲು ತೀರ್ಮಾನ ● ಬದನವಾಳು ಸತ್ಯಾಗ್ರಹ ಸಮಿತಿ ಸಭೆಯಲ್ಲಿ ನಿರ್ಣಯ

ಮೈಸೂರು,ಫೆ.14(ಪಿಎಂ)– ಬದನವಾಳು (2015) ಸತ್ಯಾಗ್ರಹವನ್ನು ಗ್ರಾಮ ಸತ್ಯಾಗ್ರಹವೆಂದು ಮರುನಾಮಕರಣ ಮಾಡಿ ಮುಂದುವರೆಸಲು ಬದನವಾಳು ಸತ್ಯಾಗ್ರಹ ಸಮಿತಿ ನಿರ್ಣಯ ಕೈಗೊಂಡಿತು.

ಮೈಸೂರಿನ ಜೆಎಲ್‌ಬಿ ರಸ್ತೆಯ ಹಾರ್ಡ್ವಿಕ್ ಶಾಲೆ ಆವರಣದಲ್ಲಿರುವ ಭಾರತೀಯ ಶೈಕ್ಷಣಿಕ ರಂಗಭೂಮಿ ಸಂಸ್ಥೆ ಸಭಾಂಗಣದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಸತ್ಯಾಗ್ರಹಿಗಳ ಸಮಾಲೋಚನಾ ಸಭೆಯಲ್ಲಿ ಈ ನಿರ್ಣಯ ಕೈಗೊಳ್ಳಲಾಯಿತು.

2015ರ ಚಾರಿತ್ರಿಕ ಬದನವಾಳು ಸತ್ಯಾಗ್ರಹದ ನಿರ್ಣಯಗಳು ಜಾರಿಗೊಳ್ಳದೆ ಉಳಿದಿವೆ. ಸುಸ್ಥಿರ ಬದುಕು, ಸುಸ್ಥಿರ ಆರ್ಥಿಕತೆ ಮರೀಚಿಕೆಯಾಗಿದೆ ಯಂತ್ರ ನಾಗರಿಕತೆ ಬೆಳೆದು ಮನುಕುಲವನ್ನೇ ವಿನಾಶದ ಅಂಚಿಗೆ ತಳ್ಳಿದೆ. ಹಾಗಾಗಿ ಈ ಗ್ರಾಮ ಸತ್ಯಾಗ್ರಹದ ಮೂಲಕ ಗ್ರಾಮ ವ್ಯವಸ್ಥೆ, ಕೈ ಉತ್ಪನ್ನಗಳ ಆರ್ಥಿಕತೆ, ಸಹಜ ಕೃಷಿ, ಸ್ಥಳೀಯ ಸಂಸ್ಕೃತಿ, ಮಾತೃಭಾಷೆಗಳು, ದುರ್ಬಲ ವರ್ಗಗಳು ಮತ್ತು ದುರ್ಬಲಗೊಂಡಿರುವ ಪ್ರಾಕೃತಿಕ ಸಂಪನ್ಮೂಲಗಳನ್ನು ಮೇಲೆತ್ತುವ ಅಹಿಂಸಾತ್ಮಕ ಚಳುವಳಿಯಾಗಿ ಮುಂದುವರೆಯಲು ತೀರ್ಮಾನಿಸಲಾಯಿತು.

ಗಾಂಧಿ ಆಶ್ರಮ ಮಾದರಿ: ಅಲ್ಲದೆ, ಹಿರಿಯ ರಂಗಕರ್ಮಿ ಹೆಗ್ಗೋಡು ಪ್ರಸನ್ನ ಅವರು ಮಂಡಿಸಿದ 'ಬದನವಾಳು ಖಾದಿ ಕೇಂದ್ರವನ್ನು ಗಾಂಧಿ ಆಶ್ರಮ ಮಾದರಿ ನಾವೇ ನಮ್ಮ ಶ್ರಮದಿಂದ ಸ್ಥಳೀಯ ಜನತೆಯ ಸಹಯೋಗದಲ್ಲಿ ಅಭಿವೃದ್ಧಿಪಡಿಸಬೇಕು ಹಾಗೂ ಸತ್ಯಾಗ್ರಹಿಗಳು ತಮ್ಮ ಸ್ವಂತ ಊರುಗಳಲ್ಲಿ ಇದೇ ಮಾದರಿಯಲ್ಲಿ ತೊಡಗಿಸಿಕೊಳ್ಳಬೇಕು' ಎಂಬ 2ನೇ ನಿರ್ಣಯವನ್ನೂ ಸಭೆ ಅಂಗೀಕರಿಸಿತು. ಸಭೆಯಲ್ಲಿ ಚರ್ಚಿಸಿ ಅಂತಿಮವಾಗಿ ಈ ನಿರ್ಣಯಗಳನ್ನು ಕೈಗೊಳ್ಳಲಾಯಿತು.



ಮೈಸೂರಿನ ಭಾರತೀಯ ಶೈಕ್ಷಣಿಕ ರಂಗಭೂಮಿ ಸಂಸ್ಥೆ ಸಭಾಂಗಣದಲ್ಲಿ ಶನಿವಾರ ನಡೆದ ಸಮಾಲೋಚನಾ ಸಭೆಯಲ್ಲಿ ಹಿರಿಯ ರಂಗಕರ್ಮಿ ಹೆಗ್ಗೋಡು ಪ್ರಸನ್ನ ಮಾತನಾಡಿದರು.

ಇದಕ್ಕೂ ಮುನ್ನ ಮಾತನಾಡಿದ ಹೆಗ್ಗೋಡು ಪ್ರಸನ್ನ, ಬದನವಾಳು ಸಂಕೇತ ಮಾತ್ರ. ಇಲ್ಲಿ ಸೇರಿರುವ ಪ್ರತಿಯೊಬ್ಬರ ಊರಿನಲ್ಲಿ ಒಂದಲ್ಲ ಒಂದು ಸಂಸ್ಥೆ ಗುರುತಿಸಿ ಅದೇ ಮಾದರಿಯಲ್ಲಿ ಸುಸ್ಥಿರ ಅಭಿವೃದ್ಧಿಯಲ್ಲಿ ತೊಡಗಿಸಿಕೊಳ್ಳಬೇಕು. ಇದು 2ನೇ ನಿರ್ಣಯದ ಮುಂದುವರೆದ ರೂಪ. 2015ರಲ್ಲಿ ಬದನವಾಳು ಸತ್ಯಾಗ್ರಹ ಮಾಡಿದಾಗ ಪರಿಸ್ಥಿತಿ ಹೇಗಿತ್ತೋ ಅದಕ್ಕಿಂತ ತೀವ್ರತರವಾದ ಅಸ್ಥಿರತೆ ನಮ್ಮ ಸಮಾಜ ಮಾತ್ರವಲ್ಲದೆ, ಇಡೀ ವಿಶ್ವವನ್ನು ಆವರಿಸಿದೆ ಆದರೆ ಅದರ ನಡುವೆಯೂ ಸಹಜ ಹಾಗೂ ಕೈ ಉತ್ಪನ್ನಗಳ ಬೇಡಿಕೆಯೂ ಹೆಚ್ಚುತ್ತಿದೆ. ಶ್ರೀಮಂತ ವರ್ಗದವರು ಸಹಜ ಉತ್ಪನ್ನಗಳ ಕಡೆಗೆ ಆಕರ್ಷಿತರಾಗುತ್ತಿದ್ದು, ಸಹಜ ಹಾಗೂ ಶುದ್ಧ ಕಾಟನ್ ಬಟ್ಟೆ ಖರೀದಿಸಲು ಸಿದ್ಧರಿದ್ದಾರೆ. ಹಾಗಾಗಿ ಗೃಹ ಉತ್ಪಾದನಾ ಕೇಂದ್ರಗಳಿಗೆ ಉತ್ತೇಜನ ದೊರೆಯುವ ಸನ್ನಿವೇಶ ನಿರ್ಮಾಣವಾಗಿದೆ ಎಂದರು.

ಬದನವಾಳು ಸತ್ಯಾಗ್ರಹ ಸಮಿತಿ ಸಂಚಾಲಕರೂ ಆದ ದೀನಬಂಧು ಸಂಸ್ಥೆಯ ಪ್ರೊ.ಜಿ.ಎಸ್.ಜಯದೇವ ಮಾತನಾಡಿ, ಬದನವಾಳು ಕೇಂದ್ರವನ್ನು ಮತ್ತೆ ನಾವು ಹಿಂದಿನ ದಿನಗಳಂತೆ ಗ್ರಾಮೀಣ, ವಿಕೇಂದ್ರೀಕೃತ ಉತ್ಪಾದನೆಗೆ ಮರಳಿಸಬೇಕೆಂಬ ಉದ್ದೇಶದಿಂದ 15 ವರ್ಷಗಳ ಹಿಂದೆ ಸತ್ಯಾಗ್ರಹ ನಡೆಸಿದ್ದೆವು. ಸತ್ಯಶೋಧನಾ ಸಮಿತಿ ಎಂತಲೂ ಮಾಡಿದ್ದೆವು. ನಂತರದ ದಿನಗಳಲ್ಲಿ ಎಲ್ಲವೂ ಸಡಿಲವಾಯಿತು ಎಂದು ಹೇಳಿದರು.

ಬದನವಾಳು ಮಾದರಿ ಗ್ರಾಮ: ಹಿರಿಯ ಪತ್ರಕರ್ತ ಜಿ.ಪಿ.ಬಸವರಾಜು ಮಾತನಾಡಿ, ಸತ್ಯಾಗ್ರಹಕ್ಕೂ ಪೂರ್ಣ ಭಾವಿಯಾಗಿ ದೊಡ್ಡ ಸಮಾವೇಶ ಮುಖೇನ ಸರ್ಕಾರಕ್ಕೆ ಅದರ ತಪ್ಪು ನಿರ್ಧಾರಗಳ ಬಗ್ಗೆ ಮನವರಿಕೆ ಮಾಡಿಕೊಡಬೇಕು. ಒಂದೊಂದು ಜಿಲ್ಲೆಯಲ್ಲಿ ಸಹ ಬದನವಾಳು ಮಾದರಿ ಗ್ರಾಮ ಗುರುತಿಸಿ ಸುಸ್ಥಿರ ಅಭಿವೃದ್ಧಿಗೆ ಯೋಜನೆ ಹಾಕಿಕೊಳ್ಳುವಂತೆ ಸಲಹೆ ನೀಡಬೇಕು ಎಂದು ಅಭಿಪ್ರಾಯಪಟ್ಟರು.

ಪತ್ರಕರ್ತೆ ರಶ್ಮಿ ಕೋಟಿ ಮಾತನಾಡಿ, ಬದನವಾಳು ಖಾದಿ ಕೇಂದ್ರದ ಪರಿಸ್ಥಿತಿ ಹದಗೆಟ್ಟಿದೆ. 48 ಮಹಿಳೆಯರು ಕೈಮಗ್ಗದ ಕೆಲಸ ಮಾಡುತ್ತಿದ್ದು, ಅವರಿಗೆ ಸಕಾಲದಲ್ಲಿ ವೇತನ ಪಾವತಿಯಾಗುತ್ತಿಲ್ಲ. ಕಾರಣ ಉತ್ಪಾದನೆ ಮತ್ತು ಬೇಡಿಕೆ ನಡುವೆ ಅಂತರ ಸೃಷ್ಟಿಯಾಗಿದ್ದು, ಇದನ್ನು ಸರಿಪಡಿಸುವ ಅಗತ್ಯವಿದೆ ಎಂದರು.

ಸಾವಿರಕ್ಕೂ ಅಧಿಕ ಉದ್ಯೋಗ: ಬದನವಾಳು ಗ್ರಾಮದ ಮುಖಂಡ ಉಮಾಶಂಕರ್ ಮಾತನಾಡಿ, ಈ ಹಿಂದೆ 1 ಸಾವಿರಕ್ಕೂ ಹೆಚ್ಚು ಮಂದಿ ಈ ಖಾದಿ ಕೇಂದ್ರದಲ್ಲಿ ಕೆಲಸ ಮಾಡುತ್ತಿದ್ದರು. ಆದರೆ ಈಗ ಇಂತಹ ಪರಿಸ್ಥಿತಿ ನಿರ್ಮಾಣವಾಗಿದೆ ಎಂದರು. ಬಳಿಕ ಮಾತನಾಡಿದ ಮುಖಂಡ ವೆಂಕಟರಾಜು, ತಮ್ಮ ಊರುಗಳಲ್ಲಿ ನೂಲು ತೆಗೆದು ತಂದು ಕೊಡುತ್ತಿದ್ದವರೂ ಸೇರಿದರೆ ಸಾವಿರವಲ್ಲ, 3 ಸಾವಿರಕ್ಕೂ ಅಧಿಕ ಮಂದಿಗೆ ಅದರಿಂದ ಉದ್ಯೋಗ ದೊರೆಯುತ್ತಿತ್ತು. ಇಂತಹ ಖಾದಿ ಕೇಂದ್ರವನ್ನು ಸ್ಥಾಪನೆ ಮಾಡಿದವರು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಎಂದು ಸ್ಮರಿಸಿದರು. ಮುಖಂಡರಾದ ಪವಿತ್ರ ಮುದ್ದಯ್ಯ, ಗ್ರಾಮ ಸೇವಾ ಸಂಘದ ಲಾವಣ್ಯ, ತುಮಕೂರು ಮೂಲದ ಗಾಂಧಿವಾದಿ ಯತಿರಾಜ್, ಬದನವಾಳು ಗ್ರಾಮದ ಮುಖಂಡ ರಾಚಪ್ಪ ಮತ್ತಿತರರು ಸಭೆಯಲ್ಲಿ ಪಾಲ್ಗೊಂಡಿದ್ದರು.

ಇಂದು ಭೂಮಿಗೀತದಲ್ಲಿ ಬ್ರಿಕ್ಸ್ ನೃತ್ಯ

ಮೈಸೂರು, ಫೆ.14(ಎಂಟಿವೈ)– ಮೈಸೂರು ರಂಗಾಯಣದ ಭೂಮಿಗೀತದಲ್ಲಿ ಭಾನು ವಾರ(ಫೆ.15) ಸಂಜೆ 6ಕ್ಕೆ ಆಂಟಿಪೋಡ್ ಡಾನ್ಸ್ ಟಾಂಜ್ ತಂಡ ಬ್ರಿಕ್ಸ್ ನೃತ್ಯ ಪ್ರದರ್ಶನ ನೀಡಲಿದೆ ಎಂದು ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು ತಿಳಿಸಿದ್ದಾರೆ.

ರಂಗಾಯಣದ ಬಿ.ವಿ.ಕಾರಂತ ರಂಗ ಚಾವಡಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 12ನೇ ಅಟ್ಟಕಲರಿ ಇಂಡಿಯಾ ಬೈನಿಯಲ್ ಸ್ವಿಸ್ ಆರ್ಟ್ಸ್ ಕೌನ್ಸಿಲ್ ಪ್ರೊ ಹೆಲ್ವೆಟಿಯ ಸಹಯೋಗದೊಂದಿಗೆ ಸ್ವಿಡ್ಜರ್‌ಲ್ಯಾಂಡ್‌ನ ನಿಕೋಲ್ ಮೊರೆಲ್ ನೇತೃತ್ವದ ನೃತ್ಯ ಪ್ರದರ್ಶನ ನಡೆಯಲಿದೆ ಎಂದರು.

ಭಾರತ ಹಾಗೂ ಸ್ವಿಡ್ಜರ್‌ಲ್ಯಾಂಡ್‌ನ ಕಲೆ ಗಳ ಮಿಲಿತವೇ ಬ್ರಿಕ್ಸ್. ನೃತ್ಯ ಸಂಯೋಜಕಿ ನೊಕೋಲ್ ಮೊರೆಲ್ ಇದನ್ನು ರೂಪಿಸಿದ್ದು, 13 ಕಲಾವಿದರು ಪ್ರದರ್ಶನ ನೀಡಲಿದ್ದಾರೆ. ಭಾರತೀಯ ರಂಗ ಶಿಕ್ಷಣ ಸಂಸ್ಥೆ ವಿದ್ಯಾರ್ಥಿಗಳಿಗೆ ಸಮಕಾಲೀನ ನೃತ್ಯ ಕುರಿತು ಕಾರ್ಯಾಗಾರ ನಡೆಸಿಕೊಡಲಿದ್ದಾರೆ ಎಂದರು.

ಬಹುರೂಪಿಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿ ಒಂದು ಮುಕ್ಕಾಲು ಲಕ್ಷ ಜನ ಬಂದು ಹೋಗಿದ್ದಾರೆ ಎಂಬ ಮಾಹಿತಿ ಇದೆ. ಮೀಡಿಯಾ ಸ್ಟಡಿ ಸೆಂಟರ್ ಮೂಲಕ ಸಾಮಾಜಿಕ ಮಾಧ್ಯಮದಲ್ಲಿ 72 ಲಕ್ಷ ಜನರನ್ನು ತಲುಪಿದ್ದೇವೆ. ಬಹುರೂಪಿಯ ನಂತರ ಹೆಚ್ಚಿನ ಕೆಲಸಕ್ಕೆ ಪ್ರೇರಣೆ ನೀಡಿದೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಭಾರತೀಯ ರಂಗ ಶಿಕ್ಷಣ ಸಂಸ್ಥೆಯ ಸುರೇಶ್ ಬಾಬು, ಶೃತಿ ಇದ್ದರು.

ಮೂರೇ ದಿನಕ್ಕೆ 54 ಲಕ್ಷ ರೂ. ಅಕ್ರಮ ವರ್ಗಾವಣೆ : ತನಿಖೆಗೆ ಆದೇಶ

ಮಂಡ್ಯ,ಫೆ.14–ತಾಲೂಕಿನ ತಗ್ಗಹಳ್ಳಿ ಗ್ರಾಮ ಪಂಚಾಯ್ತಿಯಲ್ಲಿ ಮೂರೇ ದಿನಕ್ಕೆ 54 ಲಕ್ಷ ರೂ. ಹಣ ಅಕ್ರಮ ವರ್ಗಾವಣೆ ಮಾಡಿದ ಪ್ರಕರಣ ಬೆಳಕಿಗೆ ಬರುತ್ತಿದ್ದಂತೆ ಉಪ ಲೋಕಾಯುಕ್ತ ನ್ಯಾಯಮೂರ್ತಿ ಬಿ.ವೀರಪ್ಪ 11 ಮಂದಿ ಅಧಿಕಾರಿಗಳ ವಿರುದ್ಧ ಸುಮೊಟೋ ಪ್ರಕರಣ ದಾಖಲಿಸಿಕೊಂಡು ತನಿಖೆಗೆ ಆದೇಶ ನೀಡಿದ್ದಾರೆ.

ಹಣ ವರ್ಗಾವಣೆಯ ಪ್ರಮುಖ ಆರೋಪಿ ಪ್ರಭಾರ ಪಿಡಿಒ ಶ್ರೀನಿವಾಸಯ್ಯ, ಪಿಡಿಒ ಎಚ್.ಎಸ್.ಲಕ್ಷ್ಮಿ, ಕಾರ್ಯದರ್ಶಿ ಶಿವರುದ್ರ, ದ್ವಿತೀಯ ದರ್ಜೆ ಲೆಕ್ಕ ಸಹಾಯಕ ಚಂದ್ರಶೇಖರ, ಬಿಲ್ ಕಲೆಕ್ಟರ್, ತಾಂತ್ರಿಕ ಸಹಾಯಕ, ಸಹಾಯಕ ಕಾರ್ಯಪಾಲಕ ಅಭಿಯಂತರ, ಕಿರಿಯ ಅಭಿಯಂತರ, ತಾಪಂ ಇಒ ಲೋಕೇಶ್‌ಮೂರ್ತಿ, ಪ್ರಥಮ ದರ್ಜೆ ಸಹಾಯಕಿ ಶೋಭಾ, ಡಾಟಾ ಎಂಟ್ರಿ ಆಪರೇಟರ್ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ಆ ಬಗ್ಗೆ ಮಾ.30ರಂದು ಪೂರಕ ದಾಖಲೆಗಳೊಂದಿಗೆ ಪಾಲನಾ ವರದಿ ಸಲ್ಲಿಸುವಂತೆ ಜಿಪಂ ಸಿಇಒಗೆ ಸೂಚನೆ ನೀಡಿದ್ದಾರೆ.

ಜ.29ರಿಂದ 31ರವರೆಗೆ ತಗ್ಗಹಳ್ಳಿ ಗ್ರಾಪಂ ಪ್ರಭಾರ ಪಿಡಿಒ ಶ್ರೀನಿವಾಸಯ್ಯ ಯಾವುದೇ ಸಾಮಗ್ರಿ ಖರೀದಿ ಮಾಡದೆ 54 ಲಕ್ಷ ರೂ. ಹಣವನ್ನು ಏಜೆನ್ಸಿಗೆ ಅಕ್ರಮವಾಗಿ ಪಾವತಿಸಲು ಯತ್ನಿಸಿರುವ ಪ್ರಕರಣ ಬೆಳಕಿಗೆ ಬಂದಿತ್ತು. ಗ್ರಾಮಸ್ಥರ ದೂರಿನ ಮೇರೆಗೆ 45 ಲಕ್ಷ ರೂ. ವರ್ಗಾವಣೆಗೆ ಜಿಪಂ ಸಿಇಒ ಹಾಗೂ ತಾಪಂ ಇಒ ಭೇಟಿ ನೀಡಿ ಹಣ ವರ್ಗಾವಣೆಗೆ ಬ್ರೇಕ್ ಹಾಕಿದ್ದರು. ಇದೀಗ ಲೋಕಾಯುಕ್ತ ನ್ಯಾಯಮೂರ್ತಿ ಬಿ.ವೀರಪ್ಪ ಸುಮೋಟೋ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿ ವರದಿ ನೀಡುವಂತೆ ಆದೇಶಿಸಿದ್ದಾರೆ.

ಗೆಜ್ಜಲಗೆರೆ ಗ್ರಾಮಸ್ಥರ ಬೇಡಿಕೆ ಈಡೇರಿಕೆ ಭರವಸೆ

ಮದ್ದೂರು, ಫೆ.14– ತಾಲೂಕಿನ ನಾಲ್ಕು ಗ್ರಾಮ ಪಂಚಾಯಿತಿಗಳನ್ನು ಮದ್ದೂರು ನಗರಸಭೆಗೆ ಸೇರ್ಪಡೆಗೊಳಿಸುವ ವಿಚಾರವನ್ನು ಮುಖ್ಯಮಂತ್ರಿಗಳು ಸೇರಿದಂತೆ ಸಂಬಂಧಪಟ್ಟ ಸಚಿವರು ಹಾಗೂ ಅಧಿಕಾರಿಗಳೊಂದಿಗೆ ಚರ್ಚಿಸಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಆಶ್ವಾಸನೆ ನೀಡಿದ್ದಾರೆ.


ಗೆಜ್ಜಲಗೆರೆ ಗ್ರಾಮಸ್ಥರೊಂದಿಗೆ ಜಿಲ್ಲಾ ಉಸ್ತುವಾರಿ ಸಚಿವರು ಸಭೆ ನಡೆಸಿದರು.

ತಾಲೂಕಿನ ಗೆಜ್ಜಲಗೆರೆ ಗ್ರಾಪಂ ಹಾಗೂ ಗೊರವನಹಳ್ಳಿ ಗ್ರಾಪಂಗಳ ಮುಂದೆ ಅನಿರ್ದಿಷ್ಟಾವಧಿ ಪ್ರತಿಭಟನೆ ನಡೆಯುತ್ತಿರುವ ಹಿನ್ನೆಲೆಯಲ್ಲಿ ಗ್ರಾಮಸ್ಥರು ಹಾಗೂ ಮುಖಂಡರೊಂದಿಗೆ ಶನಿವಾರ ಪಟ್ಟಣದ ಪ್ರವಾಸಿ ಮಂದಿರದಲ್ಲಿ ನಡೆದ ಸಭೆಯ ನಂತರ ಸುದ್ದಿಗಾರರೊಂದಿಗೆ ಮಾತನಾಡಿ, ತಾಲೂಕಿನ ನಾಲ್ಕು ಗ್ರಾಪಂ.ಗಳಾದ ಗೆಜ್ಜಲಗೆರೆ, ಗೊರವನಹಳ್ಳಿ, ಚಾಮನಹಳ್ಳಿ ಹಾಗೂ ಸೋಮನಹಳ್ಳಿ ವ್ಯಾಪ್ತಿಯ ಗ್ರಾಮಗಳನ್ನು ನಗರಸಭೆಗೆ ಸೇರಿಸಿಕೊಂಡಿರುವ ಬಗ್ಗೆ ಪ್ರಮುಖವಾಗಿ ಗೆಜ್ಜಲಗೆರೆ ಹಾಗೂ ಗೊರವನಹಳ್ಳಿ ಗ್ರಾಪಂಗಳ ಗ್ರಾಮಸ್ಥರು ಹಾಗೂ ಮುಖಂಡರಿಗೆ ಪ್ರತಿಭಟನೆಯನ್ನು ನಿಲ್ಲಿಸುವಂತೆ ಮಾಡಿಕೊಂಡ ಮನವಿಗೆ ಅವರು ಒಪ್ಪುತ್ತಿಲ್ಲ ಎಂದರು.

ರೈತ ಪರ ಹೋರಾಟಗಾರ್ತಿ ಸುನಂದಾ ಜಯರಾಮ್ ಮಾತನಾಡಿ, ಸರ್ಕಾರದ ಗಮನಕ್ಕೆ ತಂದು ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಿ ನಗರ ಸಭೆಯಿಂದ 4 ಗ್ರಾಪಂಗಳನ್ನು ಕೈ ಬಿಡುವ ವಿಚಾರವನ್ನು ಕಾನೂನಿನ ವ್ಯಾಪ್ತಿಯಲ್ಲಿ ತೀರ್ಮಾನಿಸಲಾಗುವುದು ಎಂದು ಸಚಿವರು ತಿಳಿಸಿದ್ದಾರೆ. ಆದರೆ ಮದ್ದೂರು ನಗರಸಭೆಯಿಂದ 4 ಗ್ರಾಮ ಪಂಚಾಯಿಗಳನ್ನು ಸರ್ಕಾರ ಕೈ ಬಿಡುವ ತನಕ ಅನಿರ್ದಿಷ್ಟಾವಧಿ ಧರಣಿ ಮುಂದುವರೆಯುತ್ತದೆ ಎಂದು ತಿಳಿಸಿದರು.

ಸಭೆ ವಿಫಲ: ಮದ್ದೂರು ನಗರಸಭೆಗೆ 4 ಗ್ರಾಮ ಪಂಚಾಯತಿಗಳ ಸೇರ್ಪಡೆ ವಿರೋಧಿಸಿ ತಾಲೂಕಿನ ಗೆಜ್ಜಲಗೆರೆ ಗ್ರಾ.ಪಂ ಹಾಗೂ ಗೊರವನಹಳ್ಳಿ ಗ್ರಾ.ಪಂನ ಮುಂದೆ ಅನಿರ್ದಿಷ್ಟಾವಧಿ ಪ್ರತಿಭಟನೆ ನಡೆಯುತ್ತಿರುವ ಹಿನ್ನೆಲೆಯಲ್ಲಿ ಗ್ರಾಮಸ್ಥರು ಹಾಗೂ ಮುಖಂಡರೊಂದಿಗೆ ಶನಿವಾರ ನಗರದ ಪ್ರವಾಸಿ ಮಂದಿರದಲ್ಲಿ ಸಚಿವ ಎನ್.ಚಲುವರಾಯಸ್ವಾಮಿ ನೇತೃತ್ವದಲ್ಲಿ ಕರೆದಿದ್ದ ಸಭೆಯಲ್ಲಿ ಯಾವುದೇ ಒಮ್ಮತಕ್ಕೆ ಬಾರದ ಕಾರಣ ಸಭೆ ವಿಫಲವಾಯಿತು. ಸಭೆಯಲ್ಲಿ ಶಾಸಕ ಕೆ.ಎಂ.ಉದಯ್, ಜಿಲ್ಲಾಧಿಕಾರಿ ಕುಮಾರ, ಸಿಇಒ ಕೆ.ಆರ್.ನಂದಿನಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶೋಭಾರಾಣಿ, ತಹಸೀಲ್ದಾರ್ ಪರುಶರಾಮ್ ಸತ್ತಿಗೇರಿ, ಸೇರಿದಂತೆ ಗ್ರಾಮಸ್ಥರು ಇದ್ದರು.

ಶಾಲಾ ಮಕ್ಕಳ ಕೈಲಿ ಗಾರೆ ಕೆಲಸ ಮಾಡಿಸಿದ ಶಿಕ್ಷಕರು: ವೀಡಿಯೋ ವೈರಲ್

ನಾಗಮಂಗಲ: ಶಾಲೆಗೆ ಬರುವ ಮಕ್ಕಳಿಗೆ ಶಿಕ್ಷಣ ನೀಡುವುದು ಶಿಕ್ಷಕರ ಆದ್ಯ ಕರ್ತವ್ಯ. ಅವರನ್ನು ಭವ್ಯ ಸತ್ಪ್ರಜೆಯನ್ನಾಗಿ ರೂಪಿಸುವುದು ಶಿಕ್ಷಕ ವೃಂದದ ಹೊಣೆ. ಅದರೆ ಮಕ್ಕಳಿಂದಲೇ ಕೆಲಸ ಮಾಡಿಸುವುದೆಂದರೆ?

ಶಾಲೆಯ ಶೌಚಾಲಯ ಶುಚಿಗೊಳಿಸುವುದು, ಮಧ್ಯಾಹ್ನದ ಊಟ ತಯಾರಿ ಮಾಡಿಸುವುದು ಇವೇ ಮೊದಲಾದ ಕೆಲಸ ಮಾಡಿಸುತ್ತಾರೆ ಎಂದರೆ ಅಂಥ ಶಿಕ್ಷಕರನ್ನು ಏನೆನ್ನಬೇಕು? ಇಂಥ ನಿದರ್ಶನವೊಂದು ಪಟ್ಟಣದಲ್ಲಿ ನಡೆದಿದೆ.

ತಾಲೂಕಿನ ನಲಕುಂದಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸರ್ಕಾರದ ಅನುದಾನದಲ್ಲಿ ನಡೆಯುತ್ತಿದ್ದ ಶಾಲಾ ಅಭಿವೃದ್ಧಿ ಕೆಲಸಕ್ಕೆ ಹಲವಾರು ವಿದ್ಯಾರ್ಥಿಗಳ ಕೈಯಲ್ಲಿ ಬಾಂಡಲಿಗೆ ಮಣ್ಣು ಸಿಮೆಂಟ್ ತುಂಬಿಸುತ್ತಿರುವ ದೃಶ್ಯ ಇದೀಗ ವೈರಲ್ ಆಗಿದೆ.

ಶಿಕ್ಷಕರ ಮುಂದೆಯೇ ಮಕ್ಕಳು ಈ ಕೆಲಸ ಮಾಡುತ್ತಿದ್ದು, ಶಿಕ್ಷಕರ ಸೂಚನೆ ಮೇರೆಗೆ ಮಕ್ಕಳು ಗಾರೆ ಕೆಲಸ ಮಾಡುತ್ತಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ. ಇದನ್ನು ಗಮನಿಸಿ, ವೀಡಿಯೋ ಮಾಡುತ್ತಿರುವ ವ್ಯಕ್ತಿಯು ಶಿಕ್ಷಕ ಸಿಬ್ಬಂದಿಯನ್ನು ಪ್ರಶ್ನಿಸಿದ್ದು, ಮಕ್ಕಳ ಕೈಯಲ್ಲಿ ಹೇಗೆ ಕೆಲಸ ಮಾಡಿಸುತ್ತಿದ್ದೀರಿ ಎಂದು ಪ್ರಶ್ನಿಸಿದರೂ ಶಿಕ್ಷಕರು ಮಾತ್ರ ಅದಕ್ಕೆ ಸರಿಯಾಗಿ ಉತ್ತರ ನೀಡದೆ ಉದಾಸೀನತೆ ತೋರಿಸಿದರು.

ತಪ್ಪಿತಸ್ಥರ ವಿರುದ್ಧ ಕ್ರಮ: ನಾಗಮಂಗಲ ತಾಲೂಕಿನ ಶಾಲೆಯೊಂದರಲ್ಲಿ ವಿದ್ಯಾರ್ಥಿಗಳನ್ನು ಕೆಲಸಕ್ಕೆ ಬಳಸಿಕೊಳ್ಳುತ್ತಿರುವ ವಿಚಾರಕ್ಕೆ ಸಂಬಂಧಪಟ್ಟಂತೆ ಕೇಳಲಾದ ಪ್ರಶ್ನೆಗೆ ಉತ್ತರಿಸಿದ ಸಚಿವರು ಈ ಬಗ್ಗೆ ಮಾಹಿತಿಯನ್ನು ಪಡೆದು ಅಗತ್ಯ ಕ್ರಮ ವಹಿಸಲಾಗುವುದು ಎಂದರು.

ಬಂಡಿಸಿದ್ದೇಗೌಡರು ಸರಳ, ಸಜ್ಜನಿಕೆಯ ರಾಜಕಾರಣಿ


ಪುರಸಭಾ ಕಚೇರಿ ವೃತ್ತದಲ್ಲಿರುವ ಬಂಡಿಸಿದ್ದೇಗೌಡ ವೃತ್ತದಲ್ಲಿ 40ನೇ ಪುಣ್ಯ ಸ್ಮರಣೆಯ ಅಂಗವಾಗಿ ಶ್ರೀಯುತರಿಗೆ ನಮನ ಸಲ್ಲಿಸಲಾಯಿತು

ಶ್ರೀರಂಗಪಟ್ಟಣ, ಫೆ.14– ರೈತರು ಬಡವರೊಂದಿಗೆ ಬೆರೆತು ಸರಳ ಸಜ್ಜನಿಕೆಯ ರಾಜಕಾರಣಿಯಾಗಿದ್ದವರು ಮಾಜಿ ಸಚಿವ ಎ.ಎಸ್. ಬಂಡಿಸಿದ್ದೇಗೌಡರು ಎಂದು ಗ್ಯಾರಂಟಿ ಯೋಜನಾ ಅನುಷ್ಠಾನ ಸಮಿತಿ ಅಧ್ಯಕ್ಷ ಎಂ.ಎಲ್. ದಿನೇಶ್ ಹೇಳಿದರು.

ಪಟ್ಟಣದ ಪುರಸಭಾ ಕಚೇರಿ ವೃತ್ತದಲ್ಲಿರುವ ಬಂಡಿಸಿದ್ದೇಗೌಡ ವೃತ್ತದಲ್ಲಿ ಅವರ ನಾಮಫಲಕಕ್ಕೆ 40ನೇ ಪುಣ್ಯ ಸ್ಮರಣೆಯ ಅಂಗವಾಗಿ ಪೂಜೆ ಸಲ್ಲಿಸಿ ಎರಡು ಬಾರಿ ಶಾಸಕರಾಗಿ, ಒಂದು ಬಾರಿ ಸಚಿವರಾಗಿ ಕ್ಷೇತ್ರದಲ್ಲಿ ಜನಪರ ಕಾರ್ಯಗಳ ಜೊತೆಗೆ ಸಾಕಷ್ಟು ಅಭಿವೃದ್ಧಿ ಕೆಲಸಗಳನ್ನು ಮಾಡಿದ್ದಾರೆ.

ಅವರಿರುವ ತನಕ ಕ್ಷೇತ್ರದಲ್ಲಿರುವ ಜನರೊಂದಿಗೆ ಬೆರೆತು, ಜನರ ಕಷ್ಟಗಳಿಗೆ ಸ್ಪಂದಿಸುತ್ತಿದ್ದರು ಎಂದು ಸ್ಮರಿಸಿದರು. ಅವರ ಕುಟುಂಬದ ಮೇಲೆ ಕ್ಷೇತ್ರದಲ್ಲಿ ಜನರು ಇಟ್ಟಿರುವ ಅಭಿಮಾನ ಹೆಮ್ಮರವಾಗಿ ಬೆಳೆದಿದೆ. ಬಂಡಿಸಿದ್ದೇಗೌಡರ ಪತ್ನಿ ವಿಜಯಲಕ್ಷ್ಮಮ್ಮ ಹಾಗೂ ಅವರ ಪುತ್ರ ರಮೇಶ ಬಂಡಿ ಸಿದ್ದೇಗೌಡರನ್ನು ಶಾಸಕರನ್ನಾಗಿ ಮಾಡಿದ್ದು, ಕ್ಷೇತ್ರದ ಜನರ ಆಶೀರ್ವಾದ ಅವರ ಕುಟುಂಬದ ಮೇಲೆ ಇನ್ನೂ ಇದೇ ಎಂಬುದಕ್ಕೆ ಸಾಕ್ಷಿಯಾಗಿದೆ ಎಂದರು.

ನಿಮಿಷಾಂಬ ದೇವಾಲಯದ ಸಮಿತಿ ಅಧ್ಯಕ್ಷ ಎಸ್.ಎನ್.ದಯಾನಂದ್, ಪುರಸಭೆ ಮಾಜಿ ಅಧ್ಯಕ್ಷ ಎಲ್. ನಾಗರಾಜು, ಕಾಂಗ್ರೆಸ್ ಯುವ ಘಟಕದ ಅಧ್ಯಕ್ಷ ರಜಿನಿಕಾಂತ್, ಪುರಸಭಾ ಮಾಜಿ ಸದಸ್ಯ ಟಿ.ಕೃಷ್ಣ, ಬಾಲು, ವೆಂಕಟರಾಮು, ಪ್ರದೀಪ್, ನಾಗರಾಜು, ವ್ಯಾನ್ ಕುಮಾರ್, ಪರಮೇಶ್, ಕುಮಾರ್, ಪ್ರಸನ್ನ ಬಂಕ್, ನಾರಾಯಣ್ ಸೇರಿದಂತೆ ಇತರ ಅಭಿಮಾನಿಗಳು ಹಾಜರಿದ್ದು, ಬಂಡಿಸಿದ್ದೇಗೌಡರ ವೃತ್ತಕ್ಕೆ ಪೂಜೆ ಸಲ್ಲಿಸಿದರು.

ವೀರಯೋಧ ಗುರು ಸಮಾಧಿಗೆ ಮಾಜಿ ಸಚಿವ ತಮ್ಮಣ್ಣ ನಮನ

ಭಾರತೀನಗರ.ಫೆ.14–ಪುಲ್ವಾಮದಲ್ಲಿ ಉಗ್ರರ ದಾಳಿಯಲ್ಲಿ ಹುತಾತ್ಮರಾದ 40 ಯೋಧರ ಪೈಕಿ ಮದ್ದೂರು ತಾಲೂಕಿನ ಗುಡಿಗೆರೆ ವೀರಯೋಧ ಎಚ್.ಗುರುರವರ ಸ್ಮಾರಕಕ್ಕೆ ಮಾಜಿ ಸಚಿವ ಡಿ.ಸಿ.ತಮ್ಮಣ್ಣ, ಗುರು ಕುಟುಂಬದವರು, ಪೂಜೆಸಲ್ಲಿಸಿ ಗೌರವ ನಮನ ಸಲ್ಲಿಸಿದರು.


ವೀರ ಯೋಧ ಗುರು ಸ್ಮಾರಕಕ್ಕೆ ಮಾಜಿ ಸಚಿವ ಡಿ.ಸಿ.ತಮ್ಮಣ್ಣ, ಮುಖಂಡರು, ಗುರು ಕುಟುಂಬದವರು ಪುಷ್ಪ ನಮನ ಸಲ್ಲಿಸಿದರು.

ಮೆಳ್ಳಹಳ್ಳಿ ಸಮೀಪವಿರುವ ಸ್ಮಾರಕರದ ಬಳಿ ಮಾಜಿ ಸಚಿವ ಡಿ.ಸಿ.ತಮ್ಮಣ್ಣ, ವೀರಯೋಧನ 7ನೇ ವರ್ಷದ ಪುಣ್ಯಸ್ಮರಣೆ ಮಾಡಿ ಮಾತನಾಡಿದ ಅವರು, ದೇಶಕ್ಕಾಗಿ ಪ್ರಾಣಕೊಟ್ಟ ಹುತಾತ್ಮ ಗುರು ಸಮಾಧಿಯನ್ನು ಅಭಿವೃದ್ಧಿ ಪಡಿಸುವುದರ ಮೂಲಕ ಸ್ಮಾರಕ ನಿರ್ಮಾಣ ಮಾಡಲಾಗಿದೆ. ದೇಶಕ್ಕಾಗಿ ಪ್ರಾಣವನ್ನೇ ಪಣಕ್ಕಿಟ್ಟು ವೀರ ಮರಣವನ್ನಪ್ಪಿದ ಎಲ್ಲಾ ಯೋಧರ ಋಣ ಪ್ರತಿಯೊಬ್ಬ ಭಾರತೀಯರ ಮೇಲಿದೆ ಎಂದರು.

ಮದ್ದೂರು ತಾಲೂಕಿನಲ್ಲಿ 5 ಎಕರೆ ಜಾಗವನ್ನು ಸೂಕ್ತ ಸ್ಥಳದಲ್ಲಿ ಗುರುತಿಸಿ ಹುತಾತ್ಮರಾದ ಯೋಧರ ಸ್ಮಾರಕಗಳನ್ನು ನಿರ್ಮಾಣ ಮಾಡಬೇಕೆಂಬುದು ನನ್ನ ಗುರಿಯಾಗಿತ್ತು ಆದರೆ ಈಗ ನನಗೆ ಅಧಿಕಾರವಿಲ್ಲದ ಕಾರಣ ಸಾಧ್ಯವಾಗಿಲ್ಲ. ಮುಂದಿನ ದಿನಗಳಲ್ಲಿ ಅಭಿವೃದ್ಧಿ ಪಡಿಸಲು ಪ್ರಯತ್ನ ಮಾಡುತ್ತೇನೆಂದು ಭರವಸೆ ನೀಡಿದರು.

ಗುರುರವರ ತಾಯಿ ಚಿಕ್ಕೋಳಮ್ಮ ಮಾತನಾಡಿ, ನನ್ನ ಮಗ ದೇಶಕ್ಕಾಗಿ ಹೋರಾಟ ನಡೆಸಿ ಪ್ರಾಣತೆತ್ತಿದ್ದಾನೆ. ದೇಶದ ಇತಿಹಾಸ ಕರಾಳ ದಿನದ ನೆನಪು ಇನ್ನೂ ಮಾಸಿಲ್ಲ. ನನ್ನ ಪುತ್ರ ದೇಶಕ್ಕಾಗಿ ಪ್ರಾಣತ್ಯಾಗ ಮಾಡಿದ ತೃಪ್ತಿ ನನಗಿದೆ ಎಂದರು. ವೀರಯೋಧ ಗುರು ಪುಣ್ಯಸ್ಮರಣೆ ಅಂಗವಾಗಿ ಸಮಾಧಿ ಬಳಿ ಅನ್ನಸಂತರ್ಪಣಾ ಕಾರ್ಯಕ್ರಮ ಆಯೋಜಿಸಲಾಗಿತ್ತು. ಇದೇ ವೇಳೆ ತಂದೆ ಹೊನ್ನಯ್ಯ, ಸಹೋದರ ಮಧು, ಆನಂದ, ಪತ್ನಿ ಕಲಾವತಿ, ಜಾ.ದಳ ತಾಲೂಕು ಅಧ್ಯಕ್ಷ ಚಿಕ್ಕತಿಮ್ಮೇಗೌಡ, ಮುಖಂಡರಾದ ಕರಡಕೆರೆ ಹನುಮಂತೇಗೌಡ, ಗುರುದೇವರಹಳ್ಳಿ ಅರವಿಂದ್, ಕೆ.ಟಿ.ಸುರೇಶ್, ಸೇರಿದಂತೆ ಹಲವಾರು ಮುಖಂಡರು ಉಪಸ್ಥಿತರಿದ್ದರು.

ದೇಗುಲ ಪರಂಪರೆ ಉಳಿಸಲು ಮುಂದಾಗಬೇಕಿದೆ

ಕಿಕ್ಕೇರಿ: ನಮ್ಮ ನಾಡು ಪವಿತ್ರ ಸನಾತನ ಸಂಸ್ಕೃತಿಯ ಬೀಡಾಗಿದ್ದು ದೇಗುಲ ಪರಂಪರೆ ಉಳಿಸಲು ಎಲ್ಲರೂ ಮುಂದಾಗಬೇಕಿದೆ ಎಂದು ಸಮಾಜ ಸೇವಕ ಆರ್‌ಟಿಒ ಮಲ್ಲಿಕಾರ್ಜುನ ಹೇಳಿದ್ದಾರೆ.

ಹೋಬಳಿಯ ಮಾರ್ಗೋನಹಳ್ಳಿ ಗ್ರಾಮದಲ್ಲಿ ಲೋಕಾರ್ಪಣೆಗೊಂಡ ಹೊಂಗನೂರಮ್ಮ ದೇಗುಲ ಕಾರ್ಯಕ್ರಮದಲ್ಲಿ ಮಾತನಾಡುತ್ತ, ಧರ್ಮ, ಸಂಸ್ಕೃತಿ, ಆಧ್ಯಾತ್ಮ ನೆಲಗಟ್ಟಿನಲ್ಲಿ ನಮ್ಮ ನಾಡು ಬಿಂಬಿತವಾಗಿದೆ. ಗ್ರಾಮಗಳಲ್ಲಿ ಸುಖ, ಶಾಂತಿ, ನೆಮ್ಮದಿಗೆ ದೇಗುಲ, ಭಗವಂತನ ಆರಾಧನೆ ಪ್ರಮುಖವಾಗಿದೆ. ನಮ್ಮ ಪೂರ್ವಜರು ಹಾಕಿಕೊಟ್ಟಿರುವ ದೇಗುಲ ಸಂಸ್ಕೃತಿ ಉಳಿಸಿಕೊಂಡುಹೋಗಬೇಕಾಗಿದೆ ಎಂದರು.

ದೇಗುಲ ಉದ್ಘಾಟನೆಗೆ ಮುನ್ನ ಸಮೀಪದ ಹೇಮಾವತಿ ನದಿಯಿಂದ ಪೂರ್ಣಕುಂಭದೊಂದಿಗೆ ಗಂಗೆಯನ್ನು ತರಲಾಯಿತು. ಮಂಗಳವಾದ್ಯದೊಂದಿಗೆ ದೇವಿಗೆ ಗಂಗಾಜಲಾಭಿಷೇಕ ನೆರವೇರಿಸಲಾಯಿತು. ಪೂರ್ಣಕುಂಭ ಕಳಸ ಮೆರವಣಿಗೆಯೊಂದಿಗೆ ಮಹಿಳೆಯರು ಮಂಗಳವಾದ್ಯದೊಂದಿಗೆ ದೇಗುಲಕ್ಕೆ ಸಾಗಿದರು.

ಗ್ರಾಮದಲ್ಲಿ ತಳಿರು ತೋರಣ, ರಂಗೋಲಿ ಬಿಡಿಸಿ ದೊಡ್ಡಹಬ್ಬದಂತೆ ಸಂಭ್ರಮಿಸಿದರು. ದೇಗುಲದ ಸುತ್ತ ದಿಗ್ಬಂಧನ ಬಲಿ ಪೂಜೆ, ವಿವಿಧ ಹೋಮ ಹವನಾದಿ, ಅಭಿಷೇಕ, ಪೂರ್ಣಾಹುತಿ, ಮಹಾ ಮಂಗಳಾರತಿ, ತೀರ್ಥಪ್ರಸಾದ ನೆರವೇರಿತು. ಅನ್ನ ದಾಸೋಹ ಹಮ್ಮಿಕೊಳ್ಳಲಾಗಿತ್ತು. ಕೆಪಿಸಿಸಿ ಸದಸ್ಯ ಸುರೇಶ್, ಪಿ.ಎಲ್.ಡಿ. ಬ್ಯಾಂಕ್ ಉಪಾಧ್ಯಕ್ಷ ರಮೇಶ್, ನಿರ್ದೇಶಕ ಚಂದ್ರೇಗೌಡ, ಮುಖಂಡರಾದ ಎಂ.ಕೆ. ನಾಗರಾಜು, ಅಯ್ಯಪ್ಪಸ್ವಾಮಿ ಮಂಜುನಾಥ್, ಎಂ.ಕೆ.ಶ್ರೀನಿವಾಸ್, ಎಂ.ಬಿ ಶಿವಣ್ಣ, ಯೋಗೇಶ್ ಎಂ.ಕೆ, ಗಿರೀಶ್, ರಮೇಶ್, ಗ್ರಾಪಂ ಸದಸ್ಯ ಶಿವಣ್ಣ, ಅರ್ಚಕ ಜಗದೀಶ್ ಇದ್ದರು.

ಜಿಪಂ ಮಾಜಿ ಸದಸ್ಯ ಹಿರೀಕಳಲೆ ರಾಮದಾಸ್ ನಿಧನ



ಕೆ.ಆರ್.ಪೇಟೆ, ಫೆ.14– ಬರಿಗಾಲು ರಾಮದಾಸ್ ಎಂದೇ ಖ್ಯಾತಿ ಪಡೆದಿದ್ದ ಜಿಲ್ಲಾ ಪಂಚಾಯತಿ ಮಾಜಿ ಸದಸ್ಯ ಹಿರೀಕಳಲೆ ರಾಮದಾಸ್(70) ಅನಾರೋಗ್ಯದಿಂದ ನಿಧನ ಹೊಂದಿದ್ದಾರೆ.

ಮಾಜಿ ಸ್ಪೀಕರ್ ಕೃಷ್ಣರವರ ಅನುಯಾಯಿಯಾಗಿದ್ದ ರಾಮದಾಸ್ ಕೃಷ್ಣ ಅವರಂತೆಯೇ ಗಾಂಧೀವಾದಿಗಳಂತೆ ಸರಳ ಜೀವನ ನಡೆಸುತ್ತಿದ್ದರು. ಸದಾ ಚಪ್ಪಲಿ ಧರಿಸದೇ ಬರಿಗಾಲಿನಲ್ಲಿಯೇ ನಡೆಯುತ್ತಿದ್ದರು ಹಿರೀಕಳಲೆ ಜಿಪಂ ಕ್ಷೇತ್ರದಿಂದ ಜೆಡಿಎಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ ಗೆಲುವು ಸಾಧಿಸಿದ್ದ ರಾಮದಾಸ್ 2015ರಿಂದ 2020ರವರೆಗೆ ಉತ್ತಮ ಸೇವೆ ಸಲ್ಲಿಸಿದ್ದರು. ಮೃತರು ಪತ್ನಿ, ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ಫೆ.15ರಂದು ಹುಟ್ಟೂರು ಹಿರೀಕಳಲೆ ಗ್ರಾಮದ ಗಾಂಧೀನಗರ ಬಳಿ ಇರುವ ಮೃತರ ಜಮೀನಿನಲ್ಲಿ ನಡೆಯಲಿದೆ ಎಂದು ಕುಟುಂಬದ ಸದಸ್ಯರು ತಿಳಿಸಿದ್ದಾರೆ. ಮೃತರ ನಿಧನಕ್ಕೆ ತಾಲೂಕಿನ ವಿವಿಧ ಗಣ್ಯರು ಸಂತಾಪ ಸೂಚಿಸಿದ್ದಾರೆ.

ಒಂದನೇ ಪುಟದಿಂದ

ನನ್ನ ಅಜೆಂಡಾ

ಸಂಬಂಧಿಸಿದಂತೆ ಈವರೆಗೆ ಎರಡೂ ಪಕ್ಷಗಳ ನಡುವೆ ಮಾತುಕತೆ ನಡೆದಿಲ್ಲ. ಸಮಯ ಬಂದಾಗ ಖಂಡಿತಾ ಚರ್ಚೆ ಮಾಡುತ್ತೇವೆ ಎಂದರು.

ಮೈತ್ರಿ ವಿಚಾರದಲ್ಲಿ ನಾನು, ನಮ್ಮ ಪಕ್ಷ ಮುಕ್ತವಾಗಿದ್ದೇವೆ. ಸಂದರ್ಭ ಬಂದಾಗ ಪಕ್ಷದ ವೇದಿಕೆಯಲ್ಲಿ ಚರ್ಚೆ ಮಾಡಿ ತೀರ್ಮಾನ ಮಾಡುತ್ತೇವೆ. ಮೈತ್ರಿ ವಿಚಾರದಲ್ಲಿ ಯಾವುದೇ ಗೊಂದಲ ಇಲ್ಲ, ಮುಂದೆಯೂ ಗೊಂದಲ ಆಗುವುದಿಲ್ಲ. ಇದು ನನ್ನ ನಿಲುವು. ಚುನಾವಣೆಗೆ ಎಲ್ಲಾ ಪಕ್ಷಗಳು ಸಿದ್ಧತೆ ಮಾಡಿಕೊಳ್ಳುತ್ತಿರುವಂತೆ ನಾವು ತಯಾರಿ ನಡೆಸಿದ್ದೇವೆ. ನಿರಂತರವಾಗಿ ಸಭೆಗಳನ್ನು ಮಾಡುತ್ತಿದ್ದೇವೆ. ಇಂದಿನ ಸಭೆಯಲ್ಲೂ ನಾವು ಮೈತ್ರಿ ವಿಷಯದ ಬಗ್ಗೆ ಚರ್ಚೆ ನಡೆಸಿಲ್ಲ. ಆ ಸಂದರ್ಭ ಬಂದಾಗ ಸಮಾಲೋಚನೆ ನಡೆಸುತ್ತೇವೆ ಎಂದರು. ಕಾಂಗ್ರೆಸ್ ಶಾಸಕರ ವಿದೇಶ ಪ್ರವಾಸದ ಬಗ್ಗೆ ಪ್ರತಿಕ್ರಿಯಿಸಿ, ಅವರು ಎಲ್ಲಿಗಾದರೂ ಹೋಗಲಿ, ಅಧ್ಯಯನ ಮಾಡುವುದಕ್ಕಾದರೂ ಹೋಗಲಿ. ಆದರೆ ಜನರು ಎದುರಿಸುತ್ತಿರುವ ಸಮಸ್ಯೆಗಳಿಗೆ ಪರಿಹಾರ ನೀಡಲಿ ಎಂದು ಆಗ್ರಹಿಸಿದರು. ಇದೇ ವೇಳೆ ಸಚಿವ ಕುಮಾರಸ್ವಾಮಿ, ಗ್ರೇಟರ್ ಬೆಂಗಳೂರು ಚುನಾವಣೆ ಸಿದ್ಧತೆ ಸಂಬಂಧ ಮಹತ್ವದ ಸಭೆ ನಡೆಸಿದರು. ಶಾಸಕರಾದ ಎಂ.ಟಿ.ಕೃಷ್ಣಪ್ಪ, ವಿಧಾನ ಪರಿಷತ್ ಸದಸ್ಯರಾದ ಟಿ.ಎ.ಶರವಣ, ಜವರಾಯಿಗೌಡ, ನಗರ ಜೆಡಿಎಸ್ ಅಧ್ಯಕ್ಷ ಹೆಚ್.ಎಂ. ರಮೇಶ್‌ಗೌಡ, ವಿಧಾನ ಪರಿಷತ್ ಮಾಜಿ ಸದಸ್ಯರಾದ ಕೆ.ಎನ್.ತಿಪ್ಪೇಸ್ವಾಮಿ, ಇ.ಕೃಷ್ಣಪ್ಪ, ಮಾಜಿ ಶಾಸಕ ನಿಸರ್ಗ ನಾರಾಯಣಸ್ವಾಮಿ, ಹಿರಿಯ ಮುಖಂಡ ಗೊಟ್ಟಿಗೆರೆ ಮಂಜುನಾಥ ಸೇರಿದಂತೆ ಅನೇಕ ಪ್ರಮುಖರು ಪಾಲ್ಗೊಂಡಿದ್ದರು.

113 ಸ್ಥಾನ ಗೆದ್ರೆ ಕುಮಾರಸ್ವಾಮಿ ಸಿಎಂ; ಇಲ್ಲದಿದ್ದರೇ ನಮ್ಮವರಿಗೆ ಸಿಎಂ ಸ್ಥಾನ

ಹಾಸನ: 113 ಸ್ಥಾನ ಗೆದ್ದು ಎಚ್.ಡಿ.ಕುಮಾರಸ್ವಾಮಿ ಸಿಎಂ ಆಗಲು ಅಭ್ಯಂತರ ವಿಲ್ಲ. ಅದೇ ರೀತಿ ಬಿಜೆಪಿ 113 ಸ್ಥಾನ ಗೆದ್ದರೆ ನಮ್ಮವರು ಸಿಎಂ ಆಗುತ್ತಾರೆ ಎಂದು ವಿಧಾನಪರಿಷತ್ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಹೇಳಿದರು. ಹಾಸನದಲ್ಲಿ ಮಾತನಾಡಿದ ಅವರು, ಜೆಡಿಎಸ್ ನಮ್ಮ ಬಗ್ಗೆಯಾಗಲಿ, ನಾವು ಅವರ ಬಗ್ಗೆ ಮಾತನಾಡುವುದು ಸೂಕ್ತವಲ್ಲ. ನಾವು ಅವರನ್ನು ಎಷ್ಟು ಗೌರವಿಸುತ್ತೇವೋ ಅವರು ನಮ್ಮನ್ನು ಅಷ್ಟೇ ಗೌರವಿಸಬೇಕು ಎಂದು ಹೇಳಿದರು.

ಬಿಜೆಪಿಯ ಎಲ್ಲ ತೀರ್ಮಾನ ಹೈಕಮಾಂಡ್ ಮಟ್ಟದಲ್ಲಿ ನಡೆಯುತ್ತದೆ. ಜೆಡಿಎಸ್ ತೀರ್ಮಾನವನ್ನು ದೇವೇಗೌಡರು, ಕುಮಾರಸ್ವಾಮಿ ಮಾಡುತ್ತಾರೆ. ಸ್ಥಳೀಯ ಸಂಸ್ಥೆ ಮೈತ್ರಿ ವಿಚಾರ ಕೇಂದ್ರದ ಮಟ್ಟದಲ್ಲಿ ನಿರ್ಧಾರ ಆಗುತ್ತದೆ. ತಳಮಟ್ಟದಲ್ಲಿ ಯಾರು ಏನೇ ಮಾತನಾಡಿದರೂ ಪ್ರಯೋಜನವಿಲ್ಲ ಎಂದರು. ಶಾಸಕ ಎಚ್.ಡಿ.ರೇವಣ್ಣ ಸೇರಿದಂತೆ ಯಾರು ಏನೇ ಹೇಳಿಕೆ ನೀಡಿದರೂ ಅದಕ್ಕೆ ಪ್ರತಿಕ್ರಿಯಿಸುವುದಿಲ್ಲ. ನಮ್ಮ ವಿರೋಧವಿಲ್ಲ. ರಾಜ್ಯ ಬಿಜೆಪಿ ಪ್ರಧಾನ ಕಾರ್ಯದರ್ಶಿ ಪ್ರೀತಂ ಜೆ.ಗೌಡ ಅವರಿಗೆ ಟಿಕೆಟ್ ನೀಡುವುದು ವರಿಷ್ಠರು. ಈ ಹಿಂದೆ ಅವರು ಇಲ್ಲಿ ಶಾಸಕರಾಗಿದ್ದವರು, ಪಕ್ಷಕ್ಕೆ ಜಿಲ್ಲೆಯಲ್ಲಿ ಬಲವಿದೆ ಎಂದರು. ಬಿಜೆಪಿ–ಜೆಡಿಎಸ್ ನಡುವಿನ ಮೈತ್ರಿ, ಸೀಟು ಹಂಚಿಕೆ ಒಪ್ಪಂದ ಎಲ್ಲವೂ ಕೇಂದ್ರದ ನಾಯಕರು ನಿರ್ಧರಿಸಲಿದ್ದಾರೆ ಎಂದು ತಿಳಿಸಿದ್ದಾರೆ.

ಕೆ.ಸಿ.ನಗರ ಕೆರೆ ರಕ್ಷಣೆ

ಉರುಳಿಸುವ ಕಾರ್ಯ ಆರಂಭವಾಯಿತು. ಅಲ್ಲದೆ ಖಾಸಗಿ ಆಸ್ತಿ ಎಂದು ಕೆರೆ ಮಧ್ಯ ಅಳವಡಿಸಿದ್ದ ಎರಡು ಫಲಕಗಳನ್ನು ಕಿತ್ತೆಸೆಯಲಾಯಿತು.

ಮನವಿಗೆ ಮನ್ನಣೆ: ಕೆರೆ ಪಕ್ಕದ ಫಾರ್ಮ್ ಹೌಸ್ ಮಾಲೀಕ ಪೀಟರ್ ಎಂಬುವರು ಕೆರೆ ಜಾಗವನ್ನು ಒತ್ತುವರಿ ಮಾಡಿಕೊಂಡಿದ್ದರು. ಕಾಂಪೌಂಡ್ ನೆಲಸಮಗೊಳಿಸುವ ವೇಳೆ ಸ್ಥಳಕ್ಕೆ ಬಂದ ಪೀಟರ್ ಪ್ರತಿನಿಧಿ ಮನು, ಲಕ್ಷಾಂತರ ರೂಪಾಯಿ ವೆಚ್ಚ ಮಾಡಿ ಕಾಂಪೌಂಡ್ ನಿರ್ಮಿಸಿದ್ದೇವೆ. ಜೆಸಿಬಿ ಯಂತ್ರದಿಂದ ಇದನ್ನು ಉರುಳಿಸಿದರೆ ನಮಗೆ ನಷ್ಟವಾಗುತ್ತದೆ. ಹಾಗಾಗಿ, ನಾಳೆ ಸಂಜೆ ಒಳಗೆ ನಾವೇ ಕಾಂಪೌಂಡ್ ತೆರವುಗೊಳಿಸುತ್ತೇವೆ, ಸಮಯಾವಕಾಶ ಮಾಡಿಕೊಡಿ ಎಂದು ಕೋರಿದರು.

ಇದಕ್ಕೆ ಸಮ್ಮತಿಸಿದ ತಹಶೀಲ್ದಾರ್ ಮಹೇಶ್ ಅವರು, ಒಂದು ವೇಳೆ ನಾಳೆ ಸಂಜೆ ಒಳಗೆ ಕಾಂಪೌಂಡ್ ತೆರವು ಮಾಡದಿದ್ದರೆ ಸೋಮವಾರ ನಾವೇ ಜೆಸಿಬಿ ಯಂತ್ರದಿಂದ ತೆರವುಗೊಳಿಸುತ್ತೇವೆ ಎಂದು ಎಚ್ಚರಿಕೆ ನೀಡಿದರು.

ಈ ಮೂಲಕ ಕೆ.ಸಿ.ನಗರದ 6 ಎಕರೆ 10 ಗುಂಟೆ ಕೆರೆ ಜಾಗವನ್ನು ಸಂರಕ್ಷಿಸಲಾಗಿದೆ. 'ಮೈಸೂರು ಮಿತ್ರ'ನ ಸರಣಿ ವರದಿ ಫಲವಾಗಿ ಇಂದು ಕೆ.ಸಿ.ನಗರದ ಕೆರೆ ಉಳಿದಂತಾಗಿದೆ. ಕೆ.ಸಿ.ನಗರದ ಕೆರೆಯನ್ನು ಪಕ್ಕದ ಫಾರ್ಮ್‌ನ ಮಾಲೀಕ ಪೀಟರ್ ಎಂಬುವರು ಒತ್ತುವರಿ ಮಾಡಿಕೊಂಡು ಕಾಂಪೌಂಡ್ ನಿರ್ಮಿಸಿದ್ದರು. 'ಖಾಸಗಿ ಆಸ್ತಿ' ಎಂದು ಎರಡು ಫಲಕ ಕೂಡ ಅಳವಡಿಸಲಾಗಿತ್ತು. ಈ ಮೂಲಕ ಕೆರೆಯನ್ನು ಮುಚ್ಚಿ ಹಾಕುವ ವ್ಯವಸ್ಥಿತ ಷಡ್ಯಂತ್ರ ನಡೆದಿತ್ತು. ಕೆರೆ ಒತ್ತುವರಿ ಸಂಬಂಧ ಜನವರಿ 26ರ 'ಮೈಸೂರು ಮಿತ್ರ' ಸಂಚಿಕೆಯಲ್ಲಿ 'ಕೆ.ಸಿ.ನಗರದಲ್ಲಿ ಕೆರೆ ಸುತ್ತ ದಿಢೀರ್ ಕಾಂಪೌಂಡ್' ಶೀರ್ಷಿಕೆಯಡಿ ವರದಿ ಪ್ರಕಟಿಸಿತ್ತು. ಮೈಸೂರು ಅಭಿವೃದ್ಧಿ ಪ್ರಾಧಿಕಾರದ ನಕ್ಷೆ ಹಾಗೂ ದಾಖಲಾತಿಯಲ್ಲಿ ಕೆರೆ ಎಂಬುದಕ್ಕೆ ಇರುವ ಸಾಕ್ಷ್ಯವನ್ನು ಸಚಿತ್ರವಾಗಿ ವಿವರಿಸಿತ್ತು.

ವಿಧಾನಸಭೆಯಲ್ಲಿ ಪ್ರತಿಧ್ವನಿ: ತರುವಾಯ ಕೃಷ್ಣರಾಜ ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಅವರು 'ಮೈಸೂರು ಮಿತ್ರ' ವರದಿ ಉಲ್ಲೇಖಿಸಿ, ಈ ಬಗ್ಗೆ ವಿಧಾನಸಭಾ ಅಧಿವೇಶನದಲ್ಲಿ ಧ್ವನಿ ಎತ್ತಿದ್ದರು. ಕೆ.ಸಿ. ನಗರ ಕೆರೆ ಒತ್ತುವರಿ ಸಂಬಂಧ ಅಧಿಕಾರಿಗಳು ಏನೂ ಕ್ರಮ ಕೈಗೊಂಡಿಲ್ಲ, ಇದರ ಹಿಂದೆ ಪ್ರಭಾವಿಗಳ ಕೈವಾಡವಿದೆ ಎಂದು ಸರ್ಕಾರವನ್ನು ತೀವ್ರ ತರಾಟೆಗೆ ತೆಗೆದುಕೊಂಡಿದ್ದರು. ಈ ಮೂಲಕ ಕೆರೆ ಒತ್ತುವರಿ ತೆರವುಗೊಳಿಸುವ ಸಂಬಂಧ ಸರ್ಕಾರದ ಗಮನ ಸೆಳೆದಿದ್ದರು. ಇದಕ್ಕೆ ಸಂಬಂಧಿಸಿದಂತೆ ಕಂದಾಯ ಸಚಿವರ ಪ್ರತಿಕ್ರಿಯೆಯೂ ಗೊಂದಲಕಾರಿಯಾಗಿತ್ತು.

ತರುವಾಯ ಕೆರೆ ಒತ್ತುವರಿಯನ್ನು ತೆರವುಗೊಳಿಸುವ ಸಂಬಂಧ ಜಿಲ್ಲಾಡಳಿತ ಯಾವುದೇ ಪ್ರತಿಕ್ರಿಯೆ ನೀಡಲಿಲ್ಲ. ಈ ಹಿನ್ನೆಲೆ ಕೆ.ಆರ್. ಕ್ಷೇತ್ರದ ಶಾಸಕ ಟಿ.ಎಸ್. ಶ್ರೀವತ್ಸ ಅವರು ಕೆರೆ ಮುಂದೆಯೇ ಪತ್ರಿಕಾಗೋಷ್ಠಿ ನಡೆಸಿ, ಕೆರೆ ಒತ್ತುವರಿಯ ತೆರವಿಗೆ 48 ಗಂಟೆ ಗಡುವು ವಿಧಿಸಿದ್ದರು.

ಕೆರೆ ಸಂರಕ್ಷಣೆಗೆ ಜಿಲ್ಲಾಡಳಿತ ಕೊನೆಗೂ ಮನಸ್ಸು ಮಾಡಿದೆ. ಕೆರೆ ಒತ್ತುವರಿ ಮಾಡಿ ಕೊಂಡು ನಿರ್ಮಾಣ ಮಾಡಿದ್ದ ಕಾಂಪೌಂಡ್ ಅನ್ನು ಇಂದು ಭಾಗಶಃ ತೆರವುಗೊಳಿಸ ಲಾಗಿದೆ. ನಾಳೆ ಸಂಜೆ ವೇಳೆಗೆ ಪೂರ್ಣ ಪ್ರಮಾಣದಲ್ಲಿ ಕಾಂಪೌಂಡ್ ತೆರವು ಗೊಳಿಸಲಾಗುತ್ತದೆ. ಈ ಮೂಲಕ ಐತಿಹಾಸಿಕ ಕೆರೆ ಸಂರಕ್ಷಣೆಯಾಗಲಿದೆ.

ಮತ್ತೆ ಒತ್ತುವರಿ ಆಗದಂತೆ ಶಾಶ್ವತ ಕ್ರಮ ಅಗತ್ಯ

ಚಾಮುಂಡಿಬೆಟ್ಟದಿಂದ ಬರುವ ನೀರು ಅಂಜಲಿ ಆಶ್ರಮದ ರಾಜ ಕಾಲುವೆ ಮೂಲಕ ಈ ಕೆರೆಯನ್ನು ಸೇರುತ್ತಿತ್ತು. ಬಾಯಾರಿದ ಜಾನುವಾರು, ಪಕ್ಷಿ ಸಂಕುಲಕ್ಕೆ ಆಶ್ರಯವಾಗಿತ್ತು. ಸುತ್ತ ಮುತ್ತ ಬಡಾವಣೆ ನಿರ್ಮಾಣವಾದರೂ ಕೆರೆ ಮುಚ್ಚುವ ಸಾಹಸ ಯಾರೂ ಮಾಡಿರಲಿಲ್ಲ. ಆದರೆ ಇತ್ತೀಚಿಗೆ ಕೆರೆಯನ್ನು ಕಬ್ಜ ಮಾಡುವ ಪ್ರಯತ್ನಗಳು ನಡೆಯುತ್ತಲೆ ಇದೆ. ಮಾರ್ಚ್ 19, 2015 ರಲ್ಲಿ ಈ ಕೆರೆ ಅತಿಕ್ರಮಣ ಮಾಡಲಾಗಿತ್ತು. ಆಗ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಒತ್ತುವರಿ ತೆರವುಗೊಳಿಸಲಾಗಿತ್ತು. ಆಗ, ಕೆರೆ ಉಳುವಿಗೆ ಹೋರಾಟ ಮಾಡಿದ ಕುರುಬರಹಳ್ಳಿ ಗ್ರಾಮದ ಹಲವರ ವಿರುದ್ಧ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಇದರಿಂದ ಹೋರಾಟಗಾರರು ನ್ಯಾಯಾಲಯಕ್ಕೆ ಅಲೆಯುವ ಪರಿಸ್ಥಿತಿ ಬಂದಿತ್ತು. ಈ ಹಿನ್ನೆಲೆಯಲ್ಲಿ ಪದೇ ಪದೆ ಕೆರೆ ಒತ್ತುವರಿ ತಪ್ಪಿಸಲು ಸುಭದ್ರ ರೀತಿಯ ಕಾಂಪೌಂಡ್ ಇಲ್ಲವೇ ಬೇಲಿ ನಿರ್ಮಿಸಬೇಕು. ಅಲ್ಲದೆ ಕೆರೆಗೆ 'ಸರ್ಕಾರದ ಆಸ್ತಿ' ಫಲಕ ಕೂಡ ಅಳವಡಿಸಬೇಕು. ಭವಿಷ್ಯದಲ್ಲಿ ಕೆರೆ ಒತ್ತುವರಿ ಆಗದಂತೆ ಶಾಶ್ವತ ಕ್ರಮ ಕೈಗೊಳ್ಳುವ ಅವಶ್ಯಕತೆ ಇದೆ.


ಹನುಮಾನ್ ಚಾಲೀಸಾ ಪಾರಾಯಣ


ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ ನೇತೃತ್ವದಲ್ಲಿ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿಯವರ ದಿವ್ಯ ಉಪಸ್ಥಿತಿಯಲ್ಲಿ ಸಹಸ್ರಾರು ಸಂಖ್ಯೆಯ ಭಕ್ತರ ಸಮ್ಮುಖದಲ್ಲಿ ಲೋಕ ಕಲ್ಯಾಣಕ್ಕಾಗಿ ನೆರವೇರಿದ ಸಾಮೂಹಿಕ ಹನುಮಾನ್ ಚಾಲೀಸಾ ಪಾರಾಯಣ ಮಹಾಯಜ್ಞದಲ್ಲಿ ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಭಾಗವಹಿಸಿದ್ದರು.

ರೋಗವಿದ್ದರೂ ಗುಣಮುಖರಾಗುತ್ತೀರಾ ಎಂದು ಸಲಹೆ ನೀಡಿದರು. ದೇಶದಲ್ಲಿ ಶಾಂತಿ, ನೆಮ್ಮದಿ ವಾತಾವರಣವಿರಲಿ, ಉತ್ತಮ ಮಳೆ, ಬೆಳೆಯಾಗಿ ರೈತರು ಸಂತೃಪ್ತರಾಗಲಿ, ಜನರ ಬದುಕು ಸೌಖ್ಯದಿಂದ ಕೂಡಿರಲಿ ಎಂಬ ದೃಷ್ಟಿಯಿಂದ ಹನುಮಾನ್ ಚಾಲೀಸ ಪಾರಾಯಣ ಮಾಡಲಾಗುತ್ತಿದೆ ಎಂದು ಶ್ರೀಗಳು ವಿವರಿಸಿದರು. ಶಾಂತಿ, ನೆಮ್ಮದಿಗಾಗಿ ಸಂಕಲ್ಪ ಮಾಡೋಣ, ಎಲ್ಲರೂ ಏಕಾಗ್ರತೆ ಹಾಗೂ ಭಕ್ತಿಯಿಂದ ಪಾರಾಯಣ ಮಾಡೋಣ ಎಂದು ಶ್ರೀಗಳು ಹನುಮಾನ್ ಚಾಲೀಸ ಪಾರಾಯಣ ಆರಂಭಿಸಿದರು. ವೇದಿಕೆ ಕಾರ್ಯಕ್ರಮಕ್ಕೂ ಮುನ್ನ ಅವಧೂತ ದತ್ತ ಪೀಠದ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಹೋಮ ಹವನ ನಡೆಸಿದರು. ಅಂತಿಮವಾಗಿ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರೊಂದಿಗೆ ಪೂರ್ಣಾವತಿ ಅರ್ಪಿಸಿದರು. ಕಾರ್ಯಕ್ರಮದ ಅಂತ್ಯದಲ್ಲಿ ರಾಷ್ಟ್ರಗೀತೆ ಹಾಡುವುದರೊಂದಿಗೆ ಸಂಪನ್ನಗೊಂಡಿತು. ಸಾವಿರಾರು ಸಂಖ್ಯೆಯಲ್ಲಿ ಭಕ್ತರು ಸೇರಿದ್ದ ಕಾರಣ ಯಾವುದೇ ಅಹಿತಕರ ಘಟನೆಗೆ ಅವಕಾಶ ಆಗಬಾರದೆಂದು ಮೈದಾನದ ಪ್ರವೇಶ ದ್ವಾರದಲ್ಲಿ ಎಲ್ಲರನ್ನು ಮೆಟಲ್ ಡಿಟೆಕ್ಟರ್‌ನಿಂದ ಶೋಧಿಸಿ ಒಳಗೆ ಬಿಡಲಾಗಿತ್ತು. ಕಾರ್ಯಕ್ರಮದ ಸ್ಥಳದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು.

ಮೈದಾನದ ತುಂಬೆಲ್ಲಾ ಕೇಸರಿಮಯ

ಮಹಾರಾಜ ಕಾಲೇಜು ಮೈದಾನ ಇಂದು ಕೇಸರಿಮಯವಾಗಿತ್ತು. ಎಲ್ಲೆಲ್ಲೂ ಕೇಸರಿ ಬಾವುಟಗಳ ರಾರಾಜಿಸುತ್ತಿತ್ತು. ಹನುಮಾನ್ ಚಾಲೀಸ ಸಾಮೂಹಿಕ ಪಾರಾಯಣದಲ್ಲಿ ಭಾಗವಹಿಸಿದ್ದ ಸಾವಿರಾರು ಭಕ್ತರು ರಾಮನಾಮ ಜಪ ಹಾಗೂ ಹನುಮಾನ್ ಚಾಲೀಸ ಪಾರಾಯಣದ ವೇಳೆ ಕೇಸರಿ ಬಾವುಟ ಕೈಯ್ಯಲ್ಲಿಡಿದಿದ್ದರು. ಬೆಳಿಗ್ಗೆಯಿಂದ ಮಧ್ಯಾಹ್ನದ ವರೆಗೆ ನಡೆದ ಪಾರಾಯಣದ ವೇಳೆ ಪ್ರತಿಯೊಬ್ಬರಿಗೂ ಊಟದ ವ್ಯವಸ್ಥೆ ಮಾಡಲಾಗಿತ್ತು. ಪಲಾವ್, ಕೇಸರಿ ಬಾತ್ ಹಾಗೂ ವಡೆ ಇರುವ ಬಾಕ್ಸ್‌ಗಳನ್ನು ಭಕ್ತರು ಕೂತಿದ್ದ ಸ್ಥಳಕ್ಕೆ ಹೋಗಿ ವಿತರಿಸಲಾಯಿತು. ಮಹಾರಾಜ ಕಾಲೇಜು ಮೈದಾನದಲ್ಲಿ ನಡೆದಿರುವ ರಾಜಕೀಯ ಸಭೆ, ಸಮಾರಂಭಗಳಿಗೆ ಹಣ ಕೊಟ್ಟು ಬಸ್‌ಗಳಲ್ಲಿ ಕರೆ ತರಬೇಕಾಗಿತ್ತು. ಊಟದ ಪೊಟ್ಟಣಗಳನ್ನು ವಿತರಿಸುವಾಗ ನೂಕು ನುಗ್ಗಲು ಉಂಟಾಗಿತ್ತು. ಆದರೆ ಇಂದು ನಡೆದ ಹನುಮಾನ್ ಚಾಲೀಸ ಪಾರಾಯಣದ ವೇಳೆ ಭಕ್ತರು ಅತ್ಯಂತ ಶಿಸ್ತಿನಿಂದ ವರ್ತಿಸಿದರು. ಯಾವುದೇ ಹಣ, ಆಮಿಷಗಳಿಗೆ ಒಳಗಾಗದೆ ಸ್ವಯಂಪ್ರೇರಣೆ ಹಾಗೂ ಭಕ್ತಿಯಿಂದ ಪಾರಾಯಣದಲ್ಲಿ ಪಾಲ್ಗೊಂಡಿದ್ದರು. ಊಟದ ಬಾಕ್ಸ್‌ಗಳನ್ನು ವಿತರಣೆ ಮಾಡುವಾಗ ಕೂಡ ನೂಕು ನುಗ್ಗಲು ಉಂಟಾಗಲಿಲ್ಲ. ಈ ಮೂಲಕ ಇದೊಂದು ಮಾದರಿ ಧಾರ್ಮಿಕ ಸಮಾರಂಭವಾಗಿತ್ತು.



ಇಂದು ವಿಶೇಷ ಪೂಜೆ, ದೀಪಾಲಂಕಾರ, ಅನ್ನ ಸಂತರ್ಪಣೆ



ಮೈಸೂರು: ಶಿವರಾತ್ರಿ ಅಂಗವಾಗಿ ಮೈಸೂರಿನ ಮಾನಂದವಾಡಿ ರಸ್ತೆ, ನಾಚನಹಳ್ಳಿ ಪಾಳ್ಯದಲ್ಲಿರುವ ಶ್ರೀ ಮಲೆ ಮಹದೇಶ್ವರ ದೇವಸ್ಥಾನ'ದ'ಲ್ಲಿ ವಿಶೇಷ ಪೂಜೆ, ಅಭಿಷೇಕ, ಹೂವಿನ ಅಲಂಕಾರ, ದೀಪಾಲಂಕಾರ, ಮಹಾ ಮಂಗಳಾರತಿ ಏರ್ಪಡಿಸಲಾಗಿದೆ.

ಫೆ.16ರಂದು ಸೋಮವಾರ ಮಧ್ಯಾಹ್ನ 32ನೇ ವರ್ಷದ ಪೂಜಾ ವಿಶೇಷವಾಗಿ ಅನ್ನಸಂತರ್ಪಣೆ ಏರ್ಪಡಿಸಲಾಗಿದೆ.

ಭೂ ಉಪಯೋಗ ಬದಲಾವಣೆಗೆ ಸರ್ಕಾರಕ್ಕೆ ಇನ್ನು ಪ್ರಸ್ತಾವನೆ ಸಲ್ಲಿಸಿಲ್ಲ


ಶಾಸಕ ಟಿ.ಎಸ್.ಶ್ರೀವತ್ಸ ಆರೋಪಕ್ಕೆ ಎಂಡಿಎ ಆಯುಕ್ತ ಕೆ.ಆರ್.ರಕ್ಷಿತ್ ಪ್ರತಿಕ್ರಿಯೆ

ಮೈಸೂರು,ಫೆ14(ಆರ್‌ಕೆ)– ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿ ವಿಶೇಷ ಕೃಷಿ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆಗಾಗಿ ಸರ್ಕಾರಕ್ಕೆ ಪ್ರಸ್ತಾವನೆ ಇನ್ನು ಸಲ್ಲಿಸಿಲ್ಲ ಎಂದು ಮೈಸೂರು ಅಭಿವೃದ್ಧಿ ಪ್ರಾಧಿಕಾರ (ಎಂಡಿಎ)ದ ಆಯುಕ್ತ ಕೆ.ಆರ್.ರಕ್ಷಿತ್ ತಿಳಿಸಿದ್ದಾರೆ.


ಮೈಸೂರು ತಾಲೂಕು, ಕಸಬಾ ಹೋಬಳಿ, ಕುರುಬಾರಹಳ್ಳಿ ಸರ್ವೆ ನಂ.98ರಲ್ಲಿ 4.27 ಎಕರೆ ವಿಶೇಷ ಕೃಷಿ ವಲಯದ ಭೂಮಿಯನ್ನು ನಿಯಮ ಬಾಹಿರವಾಗಿ ವಸತಿ ಉದ್ದೇಶಕ್ಕೆ ಭೂ ಪರಿವರ್ತನೆಗಾಗಿ ಎಂಡಿಎ ಅನುಮತಿ ನೀಡಿ ಸರ್ಕಾರಕ್ಕೆ ಶಿಫಾರಸು ಮಾಡಿದೆ ಎಂಬ ಕೆಆರ್ ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಅವರ ಗಂಭೀರ ಆರೋಪದ ಹಿನ್ನೆಲೆಯಲ್ಲಿ ಇಂದು 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯೆ ನೀಡಿದ ರಕ್ಷಿತ್, ಪ್ರಸ್ತಾಪಿತ ಭೂಮಿಯು ಚಾಮುಂಡಿಬೆಟ್ಟದ ಬಫರ್ ವಲಯದಿಂದ 100 ಮೀಟರ್ ವ್ಯಾಪ್ತಿಯ ಹೊರಗಿರುವ ಖಾಸಗಿ ಆಸ್ತಿಯಾಗಿದೆ. ಅದನ್ನು ಖರೀದಿಸಿರುವವರು ಸದರಿ ಭೂಮಿಯನ್ನು ವಿಶೇಷ ಕೃಷಿ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಡಬೇಕೆಂದು ಎಂಡಿಎಗೆ ಅರ್ಜಿ ಸಲ್ಲಿಸಿದ್ದಾರೆ.

ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನಾ ಕಾಯಿದೆ 1961ರ ಸೆಕ್ಷನ್ 14 (ಎ) ರೀತ್ಯಾ ಭೂ ಉಪಯೋಗ ಬದಲಾವಣೆಗೆ ಅವಕಾಶವಿರುವ ಕಾರಣ ಈ ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಮಂಡಿಸಲಾಗಿತ್ತು. ಈ ಸಂಬಂಧ ಸುದೀರ್ಘ ಚರ್ಚೆ ನಡೆಸಿದ ಬಳಿಕ ಸಭೆಯೂ ಪ್ರಸ್ತಾವನೆಗೆ ಒಪ್ಪಿಗೆ ಸೂಚಿಸಿತು. ಆದರೆ ಈ ಕುರಿತು ಸರ್ಕಾರಕ್ಕೆ ಪ್ರಸ್ತಾ ವನೆಯನ್ನು ಎಂಡಿಎ ಕಳುಹಿಸಿಲ್ಲ ಎಂದು ಸ್ಪಷ್ಟಪಡಿಸಿದರು.

ಖಾಸಗಿ ವ್ಯಕ್ತಿ ತನ್ನ ಕೃಷಿ ಭೂಮಿಯಲ್ಲಿ ವಾಣಿಜ್ಯ ಅಥವಾ ವಸತಿ ಚಟುವಟಿಕೆ ಮಾಡುತ್ತೇನೆಂದು ಬಯಸಿದರೆ ಅದನ್ನು ತಡೆಯಲಾಗದು, ಕಾನೂನು ಅಡಿಯಲ್ಲಿ ಭೂ ಮಾಲೀಕರಿಗೆ ಭೂ ಉಪಯೋಗ ಬದಲಾವಣೆ ಮಾಡಿಕೊಳ್ಳಲು ಅವಕಾಶವಿರುವುದರಿಂದಲೇ ಅವರ ಅರ್ಜಿಯನ್ನು ಪರಿಶೀಲಿಸಿ, 2025 ರ ಆಗಸ್ಟ್ 8ರಂದು ಪ್ರಾಧಿಕಾರದ ಸಭೆಯಲ್ಲಿ ಪ್ರಸ್ತಾವನೆ ಮಂಡಿಸಲಾಗಿತ್ತು ಎಂದ ಅವರು, ಅಂತಹ ಸಾಕಷ್ಟು ಅರ್ಜಿಗಳು ಪ್ರತಿದಿನ ಪ್ರಾಧಿಕಾರದ ಕಚೇರಿಗೆ ಬರುತ್ತಿರುತ್ತವೆ. ಸಭೆಯಲ್ಲಿ ಅನುಮೋದನೆಯಾದ ಬಳಿಕ ನಗರ ಯೋಜನಾ ಶಾಖೆಯಿಂದ ಕಳುಹಿಸುವ ಪ್ರಸ್ತಾವನೆಗಳಿಗೆ ಸರ್ಕಾರದ ಹಂತದಲ್ಲಿ ಅನುಮತಿ ಪಡೆದು ಆದೇಶಗಳು ಹೊರ ಬರುವುದು ಸರ್ವೇಸಾಮಾನ್ಯ ಎಂದರು. ಕಾನೂನು ವ್ಯಾಪ್ತಿಯಲ್ಲಿ ಬಾರದ ಭೂಮಿಯನ್ನು ನಾವು ಭೂ ಉಪಯೋಗ ಬದಲಾವಣೆ ವಿಷಯವಾಗಿ ಸಭೆಗೆ ಮಂಡಿಸುವ ಪ್ರಶ್ನೆಯೇ ಉದ್ಭವಿಸಿಲ್ಲ ಎಂದು ರಕ್ಷಿತ್ ಸ್ಪಷ್ಟಪಡಿಸಿದ್ದಾರೆ.


ಕೆ.ಆರ್.ರಕ್ಷಿತ್

ಸುತ್ತೂರು ಶ್ರೀಕ್ಷೇತ್ರದಲ್ಲಿ ಮಹಾಶಿವರಾತ್ರಿ



ಸುತ್ತೂರು, ಫೆ.14–ಸುತ್ತೂರು ಶ್ರೀಕ್ಷೇತ್ರದಲ್ಲಿ ಫೆ.15ರಂದು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ಸಾನ್ನಿಧ್ಯದಲ್ಲಿ ಮಹಾಶಿವರಾತ್ರಿಯ ವಿಶೇಷ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ.

ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಕರ್ತೃಗದ್ದುಗೆಯಲ್ಲಿ ಭಾನುವಾರ ಬೆಳಿಗ್ಗೆ 6.00ರಿಂದ ಸೋಮವಾರ ಬೆಳಿಗ್ಗೆ 6.00ರವರೆಗೆ ನಾಲ್ಕು ಬೆಳಗಿನ ಜಾವಗಳಲ್ಲಿಯೂ ವಿಶೇಷ ಪೂಜೆಗಳು ನಡೆಯುತ್ತವೆ. 15ರ ಸಂಜೆ 7.00ಕ್ಕೆ ಶಿವದೀಕ್ಷೆ ಮತ್ತು ರಾತ್ರಿ 9.30ಕ್ಕೆ ಬೆಳ್ಳಿಯ ಪ್ರಾಕಾರೋತ್ಸವ ವಿರುತ್ತದೆ. ಶ್ರೀ ಮಹದೇಶ್ವರ ಸನ್ನಿಧಿ, ಶ್ರೀ ಸೋಮೇಶ್ವರ, ಶ್ರೀ ವೀರಭದ್ರೇಶ್ವರ, ಶ್ರೀ ನಂಜುಂಡೇಶ್ವರ ಮತ್ತು ಶ್ರೀ ನಾರಾಯಣಸ್ವಾಮಿ ದೇವ ಸ್ಥಾನ ಗಳಲ್ಲಿಯೂ ವಿಶೇಷ ಪೂಜೆ ಇರುತ್ತದೆ. ಗದ್ದುಗೆಯ ಆವರಣದಲ್ಲಿ 15ರ ಸಂಜೆ 5.30ಕ್ಕೆ ಜೆಎಸ್‌ಎಸ್ ವಸತಿ ಶಾಲೆಯ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು, ರಾತ್ರಿ 8.00ಕ್ಕೆ ಮೈಸೂರಿನ ವಿಜಯನಗರದ ಶ್ರೀಮತಿ ಜಿ.ಆರ್.ಅನುಷಾ ಮತ್ತು ತಂಡದವರಿಂದ ಭಕ್ತಿಗೀತೆಗಳು, ರಾತ್ರಿ 10.30ಕ್ಕೆ ಮೈಸೂರಿನ ಕೃಷ್ಣಮೂರ್ತಿಪುರಂನ ಶ್ರೀ ಲಲಿತಾ ಉಳಿಯಾರು ಅವರಿಂದ ಶಿವಕಥೆ, ರಾತ್ರಿ 1.00ಕ್ಕೆ ಚಾಮರಾಜನಗರ ಜಿಲ್ಲೆಯ ರಾಮಸಮುದ್ರ ಗ್ರಾಮದ ಶ್ರೀ ಕಾಳಪ್ಪ ಮತ್ತು ತಂಡದವರಿಂದ ನೀಲಗಾರರ ಮೇಳ, ಪ್ರಾತಃಕಾಲ 5.00ಕ್ಕೆ ಹೊರಳವಾಡಿಯ ಶ್ರೀ ಬಸವೇಶ್ವರ ಭಜನಾ ತಂಡದವರಿಂದ ಭಜನೆ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ. ಕರ್ತೃ ಗದ್ದುಗೆ, ಶ್ರೀಮಠ, ಶ್ರೀ ವೀರಭದ್ರೇಶ್ವರ ಮತ್ತು ಶ್ರೀ ನಾರಾಯಣಸ್ವಾಮಿ ದೇವಸ್ಥಾನಗಳಲ್ಲಿ ಭಾನುವಾರ ಬೆಳಿಗ್ಗೆ 6.00ರಿಂದ ಸೋಮವಾರ ಬೆಳಿಗ್ಗೆ 6.00ರವರೆಗೆ ವಿವಿಧ ಭಜನಾ ತಂಡಗಳಿಂದ ಅಖಂಡ ಭಜನೆ ಜರುಗುತ್ತದೆ.

17.2.2026ರಂದು ಅಮಾವಾಸ್ಯೆ ವಿಶೇಷ ಪೂಜೆ ನೆರವೇರುತ್ತದೆ. ವಿಶೇಷ ಪೂಜೆ ಹಾಗೂ ಇತರೆ ಸೇವಾರ್ಥ ನೆರವೇರಿಸುವವರು 8896964242 ಮೊಬೈಲ್‌ನಲ್ಲಿ ಸಂಪರ್ಕಿಸಬಹುದಾಗಿದೆ.

ಅಧಿಕಾರ ಉಳಿಸಿಕೊಳ್ಳಲು ಕೇಂದ್ರ ಸರ್ಕಾರದ ವಿಶೇಷ ಅನುದಾನ ದುರ್ಬಳಕೆ

ಸಿದ್ದರಾಮಯ್ಯ ವಿರುದ್ಧ ವಿಜಯೇಂದ್ರ ಗಂಭೀರ ಆರೋಪ

●ಮಹರ್ಷಿ ವಾಲ್ಮೀಕಿ ಪ್ರಾಧಿಕಾರದ ಹಣ ತೆಲಂಗಾಣಕ್ಕೆ ಕೊಟ್ಟರು; ಗೃಹಲಕ್ಷ್ಮಿ ಹಣ 5 ಸಾವಿರ ಕೋಟಿ ಲಪಟಾಯಿಸಿದ ಆರೋಪ ●ಕೇಂದ್ರದಿಂದ ಬಂದ 1323 ಕೋಟಿ ಹಣ ವಿವಿಧ ಇಲಾಖೆಗಳಿಗೆ ಹಂಚಿಕೆಯಾಗಿಲ್ಲ

ಬೆಂಗಳೂರು,ಫೆ.14(ಕೆಎಂಶಿ)–ಅಧಿಕಾರ ಉಳಿಸಿಕೊಳ್ಳಲು ಮುಖ್ಯಮಂತ್ರಿ ಸಿದ್ದರಾಮಯ್ಯ ಕೇಂದ್ರ ಸರ್ಕಾರದ ವಿಶೇಷ ಅನುದಾನ ದುರ್ಬಳಕೆ ಮಾಡಿಕೊಂಡು ಪಕ್ಷದ ಹೈಕಮಾಂಡ್‌ಗೆ ಕಳುಹಿಸುತ್ತಿದ್ದಾರೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಇಂದಿಲ್ಲಿ ಗುರುತರ ಆರೋಪ ಮಾಡಿದ್ದಾರೆ.

ಮಹರ್ಷಿ ವಾಲ್ಮೀಕಿ ನಿಗಮದ ಹಣವನ್ನು ತೆಲಂಗಾಣ ಚುನಾವಣೆಗೆ ಬಳಸಿಕೊಂಡ ಸಿದ್ದರಾಮಯ್ಯ ಸರ್ಕಾರ, ಈಗ ಗೃಹಲಕ್ಷ್ಮಿ ಯೋಜನೆಯ 5,000 ಕೋಟಿ ರೂ.ಗಳನ್ನು ಫಲಾನುಭವಿಗಳಿಗೆ ವಿತರಿಸದೆ ಲಪಟಾಯಿಸಿದೆ. ವಿವಿಧ ಇಲಾಖೆಗಳಿಗೆ ನೀಡಿದ ಅನುದಾನವನ್ನು ಉದ್ದೇಶಿತ ಕಾರ್ಯಗಳಿಗೆ ಬಳಕೆ ಮಾಡದೆ, ಕಾಂಗ್ರೆಸ್ ವರಿಷ್ಠರ ಓಲೈಕೆಗೆ ದುರುಪಯೋಗಪಡಿಸಿಕೊಂಡಿದೆ ಎಂದರು.

ತಮ್ಮ ಆರೋಪಗಳಿಗೆ ಸುದ್ದಿಗೋಷ್ಠಿಯಲ್ಲಿ ಕೆಲವು ದಾಖಲೆಗಳನ್ನು ಬಹಿರಂಗಪಡಿಸಿದ ವಿಜಯೇಂದ್ರ, ಕರ್ನಾಟಕ ಸರ್ಕಾರ ಇಡೀ ದೇಶದಲ್ಲಿ ಭ್ರಷ್ಟಾಚಾರಕ್ಕೆ ಮಾದರಿಯಾಗಿದೆ. ವಿಶೇಷ ಅನುದಾನವಾಗಿ ಕೇಂದ್ರ ಸರ್ಕಾರ ನೀಡಿದ 1,323 ಕೋಟಿ ರೂ.ಗಳನ್ನು ವಿವಿಧ ಇಲಾಖೆಗಳಿಗೆ ಹಂಚಿಕೆ ಮಾಡಿ, ಯಾವುದೇ ಅಭಿವೃದ್ಧಿ ಕಾರ್ಯ ಕೈಗೊಳ್ಳದೆ, ಸಂಬಂಧಪಟ್ಟ ಇಲಾಖೆಗಳಿಂದ ಹಣ ಬಳಸಿದ ದೃಢೀಕರಣ ಪಡೆದುಕೊಂಡಿದೆ.

ಒತ್ತಡಕ್ಕೆ ಮಣಿದ ನೀರಾವರಿ ಇಲಾಖೆ 132 ಕೋಟಿ ಬಳಕೆ ಮಾಡಲಾಗಿದೆ ಎಂಬ ದೃಢೀಕರಣ ನೀಡಿದೆ. ನಂತರವೂ ಹಣ ಬಿಡುಗಡೆ ಆಗಿಲ್ಲ. ತಕ್ಷಣ ನೀಡಿ ಎಂದು ಕೃಷ್ಣ ಭಾಗ್ಯ ಜಲ ನಿಗಮದ ಹಣಕಾಸು ಇಲಾಖೆಗೆ ಪತ್ರ ಬರೆದಿರುವುದನ್ನು ಗೋಷ್ಠಿಯಲ್ಲಿ ಪ್ರದರ್ಶಿಸಿದರು. ಇದೇ ರೀತಿ ಹಲವು ಇಲಾಖೆಗಳಲ್ಲಿ ಹಣ ದುರ್ಬಳಕೆ ಮಾಡಲಾಗಿದೆ. ಈ ಬಗ್ಗೆ ಮುಖ್ಯಮಂತ್ರಿ ಬಾಯಿ ಬಿಡುತ್ತಿಲ್ಲ. ಈ ದುರ್ಬಳಕೆ ಹಣವನ್ನು ಅಧಿಕಾರ ಉಳಿಸಿಕೊಳ್ಳಲು ಮುಖ್ಯಮಂತ್ರಿ ಬಳಸಿಕೊಳ್ಳುತ್ತಿದ್ದಾರೆ ಎಂದು ಆರೋಪಿಸಿದರು.

ದೇಶದ ಬಡವರು, ರೈತರು, ಮಹಿಳೆಯರು ಮತ್ತು ಯುವಜನರ ಬದುಕು ಕಟ್ಟಿಕೊಡುವ ಕೆಲಸವನ್ನು ಪ್ರಧಾನಮಂತ್ರಿ ನರೇಂದ್ರ ಮೋದಿ ಮಾಡುತ್ತಿದ್ದರೆ, ನಮ್ಮ ರಾಜ್ಯದ ಅನುಭವಿ ಮುಖ್ಯಮಂತ್ರಿ, ಜನರಿಗೆ ಕಾಯುವುದೇ ಕೈಲಾಸ ಎಂಬಂತೆ ಸತಾಯಿಸುತ್ತಿದ್ದಾರೆ. ಒಂದೆಡೆ ಸಿದ್ದರಾಮಯ್ಯ ನೇತೃತ್ವದ ಸರ್ಕಾರ 1000 ದಿನ ಪೂರೈಸಿ ಹಾವೇರಿಯಲ್ಲಿ ಬೃಹತ್



ಸಿದ್ದರಾಮಯ್ಯ



ವಿಜಯೇಂದ್ರ

ಸಂಭ್ರಮ ಆಚರಿಸುತ್ತಿದೆ. ಇನ್ನೊಂದೆಡೆ ರಾಜ್ಯದಲ್ಲಿ ಅರಾಜಕತೆ ಹಾಗೂ ಕುಡುಕರ ಸೃಷ್ಟಿಗೆ ಹೊರಟಿದ್ದಾರೆ. ಬೆಕ್ಕು ಕಣ್ಮುಚ್ಚಿ ಹಾಲು ಕುಡಿದರೆ ಯಾರಿಗೂ ಗೊತ್ತಾಗದು ಎಂಬ ಗಾದೆಯಂತೆ ಕಾಂಗ್ರೆಸ್ ಸರ್ಕಾರ ಜನರಿಗೆ ದ್ರೋಹ ಬಗೆಯುತ್ತಿದೆ. ನೂರು ಸುಳ್ಳು ಹೇಳಿ ಮದುವೆ ಮಾಡು ಎಂಬ ಗಾದೆಯಂತೆ ಮುಖ್ಯಮಂತ್ರಿ ಮತ್ತು ಸಂಪುಟ ಸಚಿವರು ಸಾವಿರ ಸುಳ್ಳು ಹೇಳಿ ರಾಜ್ಯದ ಜನರಿಗೆ, ಬಡವರು, ರೈತರು, ಮಹಿಳೆಯರು ಮತ್ತು ಯುವಜನತೆಗೆ ಅನ್ಯಾಯ ಎಸಗಿದ್ದಾರೆ.

ಅಹಿಂದ ಹೆಸರು ಹೇಳಿಕೊಂಡು ಅಧಿಕಾರ ನಡೆಸುವ ಸಿದ್ದರಾಮಯ್ಯ ಅಲ್ಪಸಂಖ್ಯಾತರಿಗಷ್ಟೇ ನ್ಯಾಯ ಕೊಟ್ಟು, ಪರಿಶಿಷ್ಟ ಜಾತಿ, ಪಂಗಡ, ಹಿಂದುಳಿದ ವರ್ಗಗಳಿಗೆ, ಒಕ್ಕಲಿಗರು, ವೀರಶೈವ–ಲಿಂಗಾಯತ ಸಮುದಾಯಕ್ಕೂ ಅನ್ಯಾಯ ಮಾಡಿದ್ದಾರೆ. ರಾಹುಲ್ ಗಾಂಧಿ ಆದೇಶ ಮಾಡಿದರೆಂಬ ಕಾರಣಕ್ಕೆ 170 ಕೋಟಿ ಖರ್ಚು ಮಾಡಿ ಜಾತಿಗಣತಿ ನಡೆಸಿ, ವರದಿಯನ್ನು ತಿಪ್ಪೆಗೆಸೆದರು. ಈಗ ಎರಡನೇ ಬಾರಿ 450 ಕೋಟಿ ವೆಚ್ಚ ಮಾಡಿ ವ್ಯರ್ಥ ಮಾಡಿದ್ದಾರೆ. ನೀರಾವರಿ ಯೋಜನೆಗಳಿಗೆ 5 ವರ್ಷಗಳಲ್ಲಿ 1.50 ಲಕ್ಷ ಕೋಟಿ ಕೊಡುವುದಾಗಿ ಭರವಸೆ ನೀಡಿದ್ದರು. ಮೈಸೂರು–ಮಂಗಳೂರು–ಹುಬ್ಬಳ್ಳಿಗಳಲ್ಲಿ ಟೆಕ್‌ಪಾರ್ಕ್ ನಿರ್ಮಾಣ ಆಗಿಲ್ಲ. ಉಚಿತವಾಗಿ 10 ಕೆ.ಜಿ. ಅಕ್ಕಿ ಕೊಡುವ ಘೋಷಣೆ ನೀಡಿ, ಕೇಂದ್ರ ಸರ್ಕಾರ ಕೊಡುತ್ತಿರುವ 5 ಕೆ.ಜಿ. ಯನ್ನೂ ಸಮರ್ಪಕ ವಿತರಣೆ ಮಾಡುತ್ತಿಲ್ಲ ಎಂದರು.

> "ಕಾಂಗ್ರೆಸ್ ಸರ್ಕಾರವು ಕಳೆದ ಎರಡೂವರೆ ವರ್ಷಗಳ ಆಡಳಿತದಲ್ಲಿ ಅಲ್ಪಸಂಖ್ಯಾತರ ಓಲೈಕೆ ಮಾಡಿಕೊಂಡು ಹಿಂದೂಗಳನ್ನು ಅವಮಾನ ಮಾಡುತ್ತಿದೆ. ಯುವ ಜನತೆಗೂ ಅನ್ಯಾಯ ಮಾಡುತ್ತಿದೆ. ಆರ್ಥಿಕ ಪರಿಸ್ಥಿತಿ ವಿಷಯದಲ್ಲಿ ರಾಜ್ಯವನ್ನು ದಿವಾಳಿ ಮಾಡುವ ಕೆಲಸವನ್ನು ಸಿದ್ದರಾಮಯ್ಯ ಮಾಡುತ್ತಿದ್ದಾರೆ. 2006ರಿಂದ ಸೇವೆಗೆ ಸೇರಿದ ಸರ್ಕಾರಿ ನೌಕರರಿಗೆ ಹಳೆಯ ಪಿಂಚಣಿ ಸ್ಕೀಂ (ಒಪಿಎಸ್) ವಿಸ್ತರಿಸುವುದಾಗಿ ಹೇಳಿದ್ದರು. ಅದನ್ನೂ ಈಡೇರಿಸಿಲ್ಲ. ಅಂಗನವಾಡಿ ಕಾರ್ಯಕರ್ತರ ಗೌರವಧನ 15,000 ರೂ.ಗೆ ಏರಿಸುವುದಾಗಿ ಹೇಳಿದ್ದರು. ಆಶಾ ಕಾರ್ಯಕರ್ತೆಯರ ಗೌರವಧನವನ್ನೂ ಹೆಚ್ಚಿಸಿಲ್ಲ. ಬಿಸಿಯೂಟ ತಯಾರಕರ ಗೌರವಧನದ ಕುರಿತು ಚಕಾರ ಎತ್ತುತ್ತಿಲ್ಲ.
> –ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

ಶಾಲಾ ವಾರ್ಷಿಕೋತ್ಸವ....



ಗುಂಡ್ಲುಪೇಟೆ ತಾಲೂಕಿನ ಬೇಗೂರು ನವೋದಯ ಚಾರಿಟಬಲ್ ಟ್ರಸ್ಟ್ ಆಕ್ಸ್‌ಫರ್ಡ್ ಪಬ್ಲಿಕ್ ಶಾಲೆಯ 7ನೇ ವಾರ್ಷಿಕೋತ್ಸವವನ್ನು ಮೈಸೂರು ತಾಲೂಕು ಹುಯಿಲಾಳು ಶ್ರೀ ಮನೆ ಮಂಚಮ್ಮ ದೇವಸ್ಥಾನ ಸೇವಾ ಟ್ರಸ್ಟ್ ಅಧ್ಯಕ್ಷ, ರಂಗಭೂಮಿ ಕಲಾವಿದರಾದ ಹುಯಿಲಾಳು ರಾಮಸ್ವಾಮಿ ಉದ್ಘಾಟಿಸಿದರು. ಈ ವೇಳೆ ಮೈಸೂರು ವಿವಿ ಸಹಾಯಕ ಪ್ರಾಧ್ಯಾಪಕ ಡಿ.ಕುಮಾರ್, ಮೈಸೂರು ಬಿಜಿಎಸ್ ಪ್ರಥಮ ದರ್ಜೆ ಕಾಲೇಜು ಸಹಾಯಕ ಪ್ರಾಧ್ಯಾಪಕಿ ಸಹನ ಮುಕುಂದ, ಮೈಸೂರು ನಗರಪಾಲಿಕೆ ನಿವೃತ್ತ ಇಂಜಿನಿಯರ್ ರಾಜಶೇಖರ್, ಮುಖ್ಯ ಶಿಕ್ಷಕಿ ಜಯಲಕ್ಷ್ಮಿ, ಮಣಿಕಂಠ, ಪ್ರದೀಪ್‌ಕುಮಾರ್, ನಂಜುಂಡಸ್ವಾಮಿ, ಮಂಜುನಾಥ್, ಶಿವಕುಮಾರ್, ರಾಜು, ಸಾಹುಕಾರಹುಂಡಿ ಗೋಪಾಲ್, ಸಹ ಶಿಕ್ಷಕರು, ಬೋಧಕೇತರ ವರ್ಗ, ವಿದ್ಯಾರ್ಥಿಗಳು, ಪೋಷಕರು ಉಪಸ್ಥಿತರಿದ್ದರು.

ದೂರು ಸಲ್ಲಿಕೆ...



ಮೈಸೂರಿನ ಕೆಸರೆ ಕುರಿಮಂಡಿಯ ದಲಿತ ಕುಟುಂಬಕ್ಕೆ ಸೂಕ್ತ ರಕ್ಷಣೆ ಹಾಗೂ ನ್ಯಾಯ ದೊರಕಿಸಿಕೊಡಬೇಕೆಂದು ಕರ್ನಾಟಕ ದಲಿತ ಪ್ಯಾಂಥರ್ಸ್ ಪದಾಧಿಕಾರಿಗಳು ಎನ್.ಆರ್. ಪೊಲೀಸ್ ಠಾಣೆಗೆ ದೂರು ಸಲ್ಲಿಸಿದರು. ಅಧ್ಯಕ್ಷ ಯೋಗಾನರಸಿಂಹ, ಪ್ರಧಾನ ಕಾರ್ಯದರ್ಶಿ ಕಿರಣ್‌ಕುಮಾರ್, ಅರವಿಂದ, ದೇವೇಂದ್ರ, ನವೀನ್, ಅನುಪಮ್, ರಾಜೇಶ್, ರಮೇಶ್, ಧನಂಜಯ ಉಪಸ್ಥಿತರಿದ್ದರು.

ದೇಣಿಗೆ ವಿತರಣೆ...



ಮೈಸೂರು ತಾಲೂಕು ಜಯಪುರ ಹೋಬಳಿಯ ಬರಡನಪುರದಲ್ಲಿ ನಿರ್ಮಾಣ ಮಾಡುತ್ತಿರುವ ಮಹದೇಶ್ವರ ದೇವಸ್ಥಾನಕ್ಕೆ ಸಮಾಜ ಸೇವಕ ಎಸ್.ಶ್ರೀಕಾಂತ್ ವೈಯಕ್ತಿಕವಾಗಿ 1 ಲಕ್ಷ ರೂ. ದೇಣಿಗೆಯ ಚೆಕ್ ಅನ್ನು ಗ್ರಾಮಸ್ಥರಿಗೆ ನೀಡಿದರು. ಬರಡನಪುರ ಗುರುಮಹಂತೇಶ್ವರ ಮಠದ ಪೀಠಾಧ್ಯಕ್ಷರಾದ ಪರಶಿವಮೂರ್ತಿ ಸ್ವಾಮೀಜಿ, ಬಸವರಾಜಪ್ಪ, ಗ್ರಾಪಂ ಮಾಜಿ ಸದಸ್ಯ ಶಿವಣ್ಣ, ಗ್ರಾಮಸ್ಥರಾದ ಮಹೇಶ್, ಅಣ್ಣಯ್ಯ, ಮಾದಪ್ಪ, ಮಹದೇವಣ್ಣ ಹಾಜರಿದ್ದರು.

ಪ್ರಾದೇಶಿಕ ಅಸಮತೋಲನ ನಿವಾರಣೆಗೆ ಕನಿಷ್ಠ 15 ಸಾವಿರ ಕೋಟಿ ಪ್ರತ್ಯೇಕ ಅನುದಾನಕ್ಕೆ ವಿಪಕ್ಷ ನಾಯಕ ಅಶೋಕ್ ಆಗ್ರಹ

ಬೆಂಗಳೂರು,ಫೆ.14(ಕೆಎಂಶಿ)–ಪ್ರಾದೇಶಿಕ ಅಸಮತೋಲನ ನಿವಾರಿಸಲು ಹಾಗೂ ಪ್ರೊ.ಗೋವಿಂದರಾವ್ ಸಮಿತಿ ಶಿಫಾರಸ್ಸುಗಳ ಅನುಷ್ಠಾನಕ್ಕೆ ಬಜೆಟ್‌ನಲ್ಲಿ ಕನಿಷ್ಟ 15 ಸಾವಿರ ಕೋಟಿ ರೂ. ಪ್ರತ್ಯೇಕ ಅನುದಾನ ನೀಡಬೇಕು ಎಂದು ವಿಧಾನ ಸಭೆಯ ಪ್ರತಿಪಕ್ಷ ನಾಯಕ ಆರ್.ಅಶೋಕ್, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಒತ್ತಾಯಿಸಿದ್ದಾರೆ.

ರಾಜ್ಯದಲ್ಲಿ ಕಾಂಗ್ರೆಸ್ ಆಡಳಿತದ ಇತಿಹಾಸದಲ್ಲಿ ಅತೀ ಹೆಚ್ಚು ಬಾರಿ ಬಜೆಟ್ ಮಂಡಿಸಿರುವ ಸಿದ್ದರಾಮಯ್ಯ ಪ್ರಾದೇಶಿಕ ಅಸಮತೋಲನಕ್ಕೂ ಕಾರಣವಾಗಿದ್ದು ಈ ತಪ್ಪು ಸರಿಪಡಿಸಲು ಬಜೆಟ್‌ನಲ್ಲಿ ಸೂಕ್ತ ಅನುದಾನ ನಿಗದಿ ಮಾಡಬೇಕು ಎಂದಿದ್ದಾರೆ.

ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅಶೋಕ್, ಇತರೆ ಇಲಾಖೆ ಮತ್ತು ಸಂಸ್ಥೆಗಳಿಗೆ ನೀಡುವ ಅನುದಾನ ಉಲ್ಲೇಖಿಸಿ ಹಣ ನೀಡಿರುವುದಾಗಿ ಹಾರಿಕೆ ಭರವಸೆ ನೀಡಬಾರದು. ಕೆಕೆಆರ್‌ಡಿಬಿ ಸೇರಿದಂತೆ ಅಭಿವೃದ್ಧಿ ಮಂಡಳಿ ಹಾಗೂ ನಿಗಮಗಳಿಗೆ ನೀಡುವ ಅನುದಾನ ಸೇರಿಸಬಾರದು.

ಪ್ರಾದೇಶಿಕ ತಾರತಮ್ಯ ನಿವಾರಣೆಗೆಂದೇ ಪ್ರತ್ಯೇಕ ಅನುದಾನ ಒದಗಿಸಬೇಕು. ತಪ್ಪಿದರೆ ಮಾತಿಗೂ ಕೃತಿಗೂ ಸಂಬಂಧವಿಲ್ಲ ಎಂಬುದಾಗಿ ರಾಜ್ಯದ ಜನ ಭಾವಿಸಬೇಕಾಗುತ್ತದೆ.



ಆರ್.ಅಶೋಕ್

ಪ್ರೊ.ಡಿ.ಎಂ.ನಂಜುಂಡಪ್ಪ ಸಮಿತಿ ಗುರುತಿಸಿದ್ದ ರಾಜ್ಯದ ಹಿಂದುಳಿದ ತಾಲೂಕುಗಳ ಸುಧಾರಣೆ ಎರಡು ದಶಕಗಳ ಬಳಿಕವೂ ಆಗಿಲ್ಲ. ಶೇಕಡಾ 65 ರಿಂದ ಶೇ.72.8ಕ್ಕೆ ಹೆಚ್ಚಳ ಆಗಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ.

ಹಿಂದುಳಿದ ಪ್ರದೇಶಗಳ ಜನರ ಕಾಳಜಿ ಬಗ್ಗೆ ಮೊಸಳೆ ಕಣ್ಣೀರು ಸುರಿಸುವುದನ್ನು ಕಾಂಗ್ರೆಸ್ ಮುಖಂಡರು ನಿಲ್ಲಿಸಬೇಕು. ಅಧಿಕಾರದ ದಂಡ ಅವರ ಬಳಿಯೇ ಇದೆ. ದಾಖಲೆ ಮೇಲೆ ದಾಖಲೆ ಸೃಷ್ಟಿಸುತ್ತಿರುವ ಸಿದ್ದರಾಮಯ್ಯ, ಪ್ರಾದೇಶಿಕ ತಾರತಮ್ಯ ನಿವಾರಣೆಗೂ ಅತೀ ಹೆಚ್ಚು ಅನುದಾನ ಹಂಚಿಕೆ ಮಾಡುವ ಮೂಲಕ ಮತ್ತೊಂದು ದಾಖಲೆ ಬರೆಯಲಿ.


ಹಿಂದುಳಿದ ಪ್ರದೇಶಗಳ ಸಮಗ್ರ ಅಭಿವೃದ್ಧಿಗೆ ಪ್ರೊ.ಗೋವಿಂದರಾವ್ ಸಮಿತಿ ನೀಡಿರುವ 11 ಶಿಫಾರಸ್ಸುಗಳ ಪರಿಣಾಮಕಾರಿ ಅನುಷ್ಠಾನಕ್ಕೆ 'ಪ್ರಾದೇಶಿಕ ತಾರತಮ್ಯ ನಿವಾರಣೆ ನಿಗಾ ಘಟಕ' ಸ್ಥಾಪಿಸಿ 'ಅನುದಾನ ಹಂಚಿಕೆ, ಬಳಕೆ ಮತ್ತು ಪ್ರಗತಿ' ಮೇಲೆ ನಿಗಾ ಮತ್ತು ಮೌಲ್ಯ ಮಾಪನಕ್ಕೆ ಕ್ರಮ ಜರುಗಿಸಬೇಕು ಎಂದರು.

ಅಭಿನಂದನೆ...



ಮಂಗಳೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯ ಡಾ.ಕೆ.ಸಿ.ಮಹದೇಶ್ ಅವರನ್ನು ಅಭಿನಂದಿಸಲಾಯಿತು. ಚಿತ್ರದಲ್ಲಿ ನಟೇಶ್, ಜಿ.ಎಲ್.ತ್ರಿಪುರಾಂತಕ, ಎಂ.ಪ್ರಸಾದ್‌ಬಾಬು, ದುಗ್ಗಟ್ಟಿ ರಾಜೇಶ್, ಸುರೇಶ್, ವಿಜಯಕುಮಾರ್ ಇದ್ದಾರೆ.

ಪಾರಾಯಣ ತರಂಗಿಣಿ



ಮೈಸೂರಿನ ಕುವೆಂಪುನಗರದ ಶ್ರೀಕೃಷ್ಣಧಾಮದಲ್ಲಿ ನೆರವೇರಿದ 48ನೇ ಕೃಷ್ಣ ಏಕಾದಶಿ ಪಾರಾಯಣ ಕಾರ್ಯಕ್ರಮದ ವೇಳೆ ದಿ. ವಿದ್ವಾನ್ ವಿಠ್ಠಲೋಪಾಧ್ಯಾಯ ಶಿರೋಮಣಿ ಅವರ 'ಪಾರಾಯಣ ತರಂಗಿಣಿ' ಕೃತಿಯನ್ನು ಕೆ.ವಸಂತ ಕುಮಾರ್ ಲೋಕಾರ್ಪಣೆಗೊಳಿಸಿದರು. ಇದೇ ವೇಳೆ ಭೀಮಾ ಬ್ರದರ್ಸ್‌ನ ಗೋಪಾಲಕೃಷ್ಣ ಭಾರ್ಗವ ಜಯರಾಂ ಭಟ್, ಡಾ.ಶ್ರೀಶ ಭಟ್ ಅವರು ವಿದ್ವಾನ್ ಅನಂತ ಪದ್ಮನಾಭ ವೈಲಾಯರನ್ನು ಸನ್ಮಾನಿಸಿದರು.

ಗೆಳತಿಗೆ ಗುಂಡಿಕ್ಕಿ, ತಾನೂ ಶೂಟ್ ಮಾಡಿಕೊಂಡ ಪ್ರೇಮಿ!

ನೋಯ್ಡಾ: ಪ್ರೇಮಿಗಳ ದಿನದಂದೇ ಉತ್ತರ ಪ್ರದೇಶದ ನೋಯ್ಡಾದ ಸೆಕ್ಟರ್ 107ರಲ್ಲಿ ನಿಲ್ಲಿಸಿದ್ದ ಕಾರಿನೊಳಗೆ 32 ವರ್ಷದ ವ್ಯಕ್ತಿಯೊಬ್ಬ ತನ್ನ 26 ವರ್ಷದ ಗೆಳತಿಗೆ ಗುಂಡಿಕ್ಕಿ ಹತ್ಯೆ ಮಾಡಿದ್ದು, ಬಳಿಕ ತಾನೂ ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.



ಇಂದು ಬೆಳಗ್ಗೆ ಸೆಕ್ಟರ್ 39 ಪೊಲೀಸ್ ಠಾಣೆ ವ್ಯಾಪ್ತಿಯ ದಾದ್ರಿ ರಸ್ತೆಯ ಕಂಬ ಸಂಖ್ಯೆ 84ರ ಬಳಿ ನಿಲ್ಲಿಸಿದ್ದ ಕಾರಿನೊಳಗೆ ಪ್ರೇಮಿಗಳ ಶವಗಳು ಪತ್ತೆಯಾಗಿವೆ. DL14CL6473 ನೋಂದಣಿ ಸಂಖ್ಯೆಯ ಕಾರಿನ ಬಗ್ಗೆ ಮಾಹಿತಿ ನೀಡಲಾಗಿದ್ದು, ತಂಡ ಸ್ಥಳಕ್ಕೆ ಧಾವಿಸಿದೆ. ಕಾರಿನೊಳಗೆ ಒಬ್ಬ ಹುಡುಗ ಮತ್ತು ಹುಡುಗಿಯ ಶವ ಪತ್ತೆಯಾಗಿದ್ದು, ಅವರ ತಲೆಗೆ ಗುಂಡೇಟಿನ ಗಾಯಗಳಾಗಿವೆ. ಹುಡುಗನ ಕೈಯಲ್ಲಿ ಪಿಸ್ತೂಲ್ ಪತ್ತೆಯಾಗಿದ್ದು, ಕಾರನ್ನು ಒಳಗಿನಿಂದ ಲಾಕ್ ಮಾಡಲಾಗಿದೆ. ಪ್ರಾಥಮಿಕವಾಗಿ ಇದು ಆತ್ಮಹತ್ಯೆ ಪ್ರಕರಣವೆಂದು ತೋರುತ್ತದೆ ಎಂದು ಹೆಚ್ಚುವರಿ ಉಪ ಪೊಲೀಸ್ ಆಯುಕ್ತೆ ಮನೀಷಾ ಸಿಂಗ್ ಅವರು ಪಿಟಿಐಗೆ ತಿಳಿಸಿದ್ದಾರೆ. ಮೃತರನ್ನು ದೆಹಲಿಯ ತ್ರಿಲೋಕಪುರಿಯ ನಿವಾಸಿ ಸುಮಿತ್ ಮತ್ತು ನೋಯ್ಡಾದ ಸೆಕ್ಟರ್ 101ರ ನಿವಾಸಿ ರೇಖಾ ಎಂದು ಗುರುತಿಸಲಾಗಿದೆ. ಅವರ ಕುಟುಂಬಗಳಿಗೆ ಮಾಹಿತಿ ನೀಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ವಿವೇಕಾನಂದರು, ಸಾವಿತ್ರಿಬಾಯಿ ಫುಲೆ ಜಯಂತಿ ಆಚರಣೆ



ಮೈಸೂರು ಕನ್ನಡ ವೇದಿಕೆಯಿಂದ ಸ್ವಾಮಿ ವಿವೇಕಾನಂದ ಹಾಗೂ ಸಾವಿತ್ರಿಬಾಯಿಫುಲೆ ಜಯಂತಿ ಅಂಗವಾಗಿ ನಂದಕುಮಾರ್, ಎಂ. ಮಹೇಶ್ ಭಗೀರಥ, ಪಾರ್ವತಮ್ಮ, ಮಂಜುಳಾ, ಸಾಯಿ ಚಾಮರಾಜು, ಕೆ.ಎನ್. ಸುಬ್ರಹ್ಮಣ್ಯಶಾಸ್ತ್ರಿ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು. ಇದೇ ವೇಳೆ ಶಿಕ್ಷಕಿ ಎಲ್.ಕೆ. ರೂಪಾ ಪ್ರಮೋದ್ ಅವರಿಗೆ ಸಾವಿತ್ರಿಬಾಯಿ ಫುಲೆ ಪ್ರಶಸ್ತಿ ನೀಡಲಾಯಿತು.

ಮೈಸೂರು, ಫೆ. 14–ಸ್ವಾಮಿ ವಿವೇಕಾನಂದರ ಚಿಂತನೆಗಳು ಇಂದಿಗೂ ಶಿಕ್ಷಣ, ಸೇವೆ, ಸ್ವಾಭಿಮಾನದ ಮೂಲಕ ಸಮಾಜವನ್ನು ಮುನ್ನಡೆಸುವ ಶಕ್ತಿಯಾಗಿವೆ. ಸಾವಿತ್ರಿಬಾಯಿ ಫುಲೆ ಅವರ ಜೀವನವು ಶಿಕ್ಷಣವೇ ಸಾಮಾಜಿಕ ಕ್ರಾಂತಿಯ ಮೂಲ ಎಂಬ ಸಂದೇಶ ನೀಡುತ್ತದೆ ಎಂದು ಮೈಸೂರು ವಿವಿ ಸಿಂಡಿಕೇಟ್ ಮಾಜಿ ಸದಸ್ಯ ಡಾ.ಈ.ಸಿ.ನಿಂಗರಾಜ್‌ಗೌಡ ಸ್ಮರಿಸಿದರು.

ನಮನ ಕಲಾಮಂಟಪದಲ್ಲಿ ಮೈಸೂರು ಕನ್ನಡ ವೇದಿಕೆ ಆಯೋಜಿಸಿದ್ದ ಸ್ವಾಮಿ ವಿವೇಕಾನಂದ ಹಾಗೂ ಸಾವಿತ್ರಿಬಾಯಿ ಫುಲೆ ಜಯಂತ್ಯುತ್ಸವದಲ್ಲಿ ಅವರು ಮಾತನಾಡಿ, ವಿವೇಕಾನಂದ ಭಾರತೀಯ ಆತ್ಮ ಚಿಂತನೆಯ ಜಾಗತಿಕ ರಾಯಭಾರಿ, ಯುವ ಶಕ್ತಿಗೆ ದಾರಿ ತೋರಿದ ಗುರು ಹಾಗೂ ರಾಷ್ಟ್ರ ನಿರ್ಮಾಣಕ್ಕೆ ಆಧ್ಯಾತ್ಮಿಕ ನೆಲೆ ನೀಡಿದ ಚಿಂತಕ. ಯುವಕರಿಗೆ ಸ್ಫೂರ್ತಿದಾತರು ಎಂದರು.

ಸಾವಿತ್ರಿಬಾಯಿ ದೇಶದ ಮೊದಲ ಶಿಕ್ಷಕಿ. ಮಹಾನ್ ಸಮಾಜ ಸುಧಾರಕಿ. ಮಹಿಳಾ ಶಿಕ್ಷಣ, ದಲಿತರ ಹಕ್ಕುಗಳು ಮತ್ತು ಸಾಮಾಜಿಕ ಸಮಾನತೆಗಾಗಿ ಜೀವನವನ್ನೇ ಸಮರ್ಪಿಸಿದವರು. ಇಂತಹ ಮಹನೀಯರ ತತ್ವ ಆದರ್ಶಗಳನ್ನು ಎಲ್ಲರೂ ಮೈಗೂಡಿಸಿಕೊಳ್ಳಬೇಕು ಎಂದರು.

ಮುಖ್ಯ ಅತಿಥಿಯಾಗಿದ್ದ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ಜಿಲ್ಲಾ ಘಟಕದ ಉಪಾಧ್ಯಕ್ಷ ಸಾಲುಂಡಿ ದೊರೆಸ್ವಾಮಿ, ಅಧ್ಯಕ್ಷತೆ ವಹಿಸಿದ್ದ ಮೈಸೂರು ಕನ್ನಡ ವೇದಿಕೆ ಅಧ್ಯಕ್ಷ ಎಸ್.ಬಾಲಕೃಷ್ಣ ಮಾತನಾಡಿದರು. ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ರಾಜ್ಯ ವೈಚಾರಿಕ ಚಿಂತಕರ ವೇದಿಕೆ ಅಧ್ಯಕ್ಷ ಕ್ಯಾತನಹಳ್ಳಿ ಪ್ರಕಾಶ್, ರೈತ ಸಂಘದ ಅಧ್ಯಕ್ಷ ಅರುಣ್ ಕುಮಾರ್ ಉಪಸ್ಥಿತರಿದ್ದರು. ನಿವೃತ್ತ ಶಿಕ್ಷಕ ಮನೋಹರ್ ನಿರೂಪಿಸಿದರು. ಭವಾನಿ ಪ್ರಾರ್ಥಿಸಿದರು. ಇದೇ ವೇಳೆ ಮೈಸೂರು ಕನ್ನಡ ವೇದಿಕೆಯಿಂದ ಸಮಾಜಸೇವಕಿ ಪಾರ್ವತಮ್ಮ, ಸಹ ಶಿಕ್ಷಕಿ ಎಲ್.ಕೆ. ರೂಪಾ, ಪೌರಕಾರ್ಮಿಕ ಮಹಿಳೆ ಮಂಜುಳಾ ಅವರಿಗೆ ಸಾವಿತ್ರಿಬಾಯಿ ಫುಲೆ ಪ್ರಶಸ್ತಿ, ಪತ್ರಕರ್ತ ಎಂ.ಮಹೇಶ್ ಭಗೀರಥ, ಜ್ಯೋತಿಷಿ ಕೆ.ಎನ್.ಸುಬ್ರಹ್ಮಣ್ಯ ಶಾಸ್ತ್ರಿ, ಸಾಮಾಜಿಕ ಹೋರಾಟಗಾರ ಸಾಯಿ ಚಾಮರಾಜ ಹಾಗೂ ಉದ್ಯಮಿ ನಂದಕುಮಾರ್ ಅವರಿಗೆ ಸ್ವಾಮಿ ವಿವೇಕಾನಂದ ಪ್ರಶಸ್ತಿ ಪ್ರದಾನ ಮಾಡಲಾಯಿತು.

ನಾಳೆ ಶಿಲ್ಪಕಲೆ, ಮುದ್ರಣ ಕಲೆಯ ಕಾರ್ಯಾಗಾರ

ಮೈಸೂರು,ಫೆ.14– ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು (ಕಾವಾ) ವತಿಯಿಂದ ಫೆ.16ರಂದು ಶಿಲ್ಪಕಲೆ ಮತ್ತು ಮುದ್ರಣ ಕಲೆ ಕಾರ್ಯಾಗಾರ ಉದ್ಘಾಟನೆ ಮತ್ತು ವಿದ್ಯಾರ್ಥಿಗಳಿಂದ ಶೈಕ್ಷಣಿಕ ಪ್ರವಾಸದಲ್ಲಿ ರಚಿಸಿದ ಕಲಾಕೃತಿಗಳ ಪ್ರದರ್ಶನವನ್ನು ಬೆಳಿಗ್ಗೆ 10.30 ಘಂಟೆಗೆ ಕಾವಾ ಸಭಾಂಗಣದಲ್ಲಿ ಆಯೋಜಿಸಲಾಗಿದೆ. ಬೆಂಗಳೂರಿನ ಖ್ಯಾತ ಅನಿಮೇಷನ್ ತಂತ್ರಜ್ಞ, ನಿರ್ದೇಶಕ ವಿಚಾರ್ ಕಾರ್ಯಕ್ರಮದ ಉದ್ಘಾಟನೆ ಮಾಡಲಿದ್ದಾರೆ. ಪ್ರಾಚ್ಯವಸ್ತು, ಸಂಗ್ರಹಾಲಯಗಳು, ಪುರಾತತ್ವ ಇಲಾಖೆ ಆಯುಕ್ತ, ಕಾವಾ ಕಾಲೇಜಿನ ಡೀನ್ ದೇವರಾಜು ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಖ್ಯಾತ ಕಲಾನಿರ್ದೇಶಕ, ಕಾವಾ ಕಾಲೇಜಿನ ಹಿರಿಯ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಮಂಜುಪ್ರಸಾದ್ ಪಾಲ್ಗೊಳ್ಳಲಿದ್ದಾರೆ. ಬೆಂಗಳೂರಿನ ಶಿಲ್ಪ ಕಲಾವಿದ ಉಲ್ಲಾಸ್ಟರ್ ಡೇ, ಮುದ್ರಣ ಕಲೆ ಪರಿಣಿತ, ಸಂಪನ್ಮೂಲ ವ್ಯಕ್ತಿ ಮುತ್ತುರಾಜ್ ಉಪಸ್ಥಿತರಿರುವರು.

ದೇಶ - ವಿದೇಶ

ಬಾಂಬ್ ಬೆದರಿಕೆ; ಕೊಲ್ಲಿಗೆ ವಿಮಾನ ಸ್ಥಳಾಂತರ

ಕೋಲ್ಕತ್ತಾ: ಪಶ್ಚಿಮ ಬಂಗಾಳದ ನೇತಾಜಿ ಸುಭಾಷ್ ಚಂದ್ರಬೋಸ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಇಂದು ಬಾಂಬ್ ಬೆದರಿಕೆ ಬಂದ ಹಿನ್ನೆಲೆ, ವಿಮಾನವನ್ನು ಸುರಕ್ಷಿತವಾಗಿ ಕೊಲ್ಲಿಗೆ ಸ್ಥಳಾಂತರಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.



ಇಂದು ಬೆಳಗ್ಗೆ ಕೋಲ್ಕತ್ತಾದಿಂದ ಮೇಘಾಲಯದ ಶಿಲ್ಲಾಂಗ್‌ಗೆ ಹಾರಾಟ ನಡೆಸಬೇಕಿದ್ದ ಇಂಡಿಗೋ ವಿಮಾನ (6ಇ–7304) ರನ್‌ವೇ ಏರಲು ಸಿದ್ಧವಾಗಿತ್ತು.

ಆದರೆ, ವಿಮಾನ ಹೊರಡಲು ಕೆಲವೇ ಕ್ಷಣಗಳಲ್ಲಿ ವಿಮಾನದಲ್ಲಿ ಬಾಂಬ್ ಇಡಲಾಗಿದೆ ಎಂಬ ಆತಂಕಕಾರಿ ವಿಚಾರವು ಭದ್ರತಾ ಸಿಬ್ಬಂದಿಗೆ ತಲುಪಿತು. ಇದರಿಂದಾಗಿ ವಿಮಾನ ನಿಲ್ದಾಣದಲ್ಲಿ ತುರ್ತು ಪರಿಸ್ಥಿತಿ ಘೋಷಿಸಿ ಪ್ರಯಾಣಿಕರನ್ನು ಬೇರೆಡೆಗೆ ಸ್ಥಳಾಂತರಿಸಲಾಯಿತು. ವಿಮಾನದ ಶೌಚಾಲಯದೊಳಗೆ ಬಾಂಬ್ ಇದೆ ಎಂದು ಸೂಚಿಸುವ ಕೈಬರಹದ ಟಿಪ್ಪಣಿಯನ್ನು ಸಿಬ್ಬಂದಿಯೊಬ್ಬರ ಕೈ ಸೇರಿತು. ಈ ವಿಚಾರವನ್ನು ಗಮನದಲ್ಲಿಟ್ಟುಕೊಂಡು, ಪ್ರಯಾಣಿಕರು ಮತ್ತು ವಿಮಾನ ಕಾರ್ಯಾಚರಣೆಯ ಸುರಕ್ಷತೆಯನ್ನು ಬಲಪಡಿಸಲು ಎಲ್ಲಾ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ಎಂದು ಅಧಿಕಾರಿಗಳು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕ್ಯಾಲಿಫೋರ್ನಿಯಾದಲ್ಲಿ ಕರ್ನಾಟಕದ ವಿದ್ಯಾರ್ಥಿ ನಾಪತ್ತೆ

ನ್ಯೂಯಾರ್ಕ್: ಕರ್ನಾಟಕ ಮೂಲದ 24 ವರ್ಷದ ವಿದ್ಯಾರ್ಥಿ ಕ್ಯಾಲಿಫೋರ್ನಿಯಾದಲ್ಲಿ ನಾಪತ್ತೆಯಾಗಿದ್ದಾರೆ. ಬರ್ಕ್ಲಿ ವಿಶ್ವ ವಿದ್ಯಾಲಯದಲ್ಲಿ ಎಂಎಸ್ ವ್ಯಾಸಂಗ ಮಾಡುತ್ತಿರುವ ಸಾಕೇತ್ ಶ್ರೀನಿವಾಸಯ್ಯ, ಕಳೆದ ಎರಡು ದಿನಗಳಿಂದ ಯಾರ ಸಂಪರ್ಕಕ್ಕೂ ಸಿಗುತ್ತಿಲ್ಲ ಎಂದು ಅವರ ಕುಟುಂಬಸ್ಥರು ಮತ್ತು ಸ್ನೇಹಿತರು ತಿಳಿಸಿದ್ದಾರೆ.



ಸಾಕೇತ್ ಕೊನೆಯ ಬಾರಿಗೆ ಫೆ.12ರಂದು ಕಾಣಿಸಿಕೊಂಡಿದ್ದರು ಎನ್ನಲಾಗಿದ್ದು, ಆ ದಿನ ಅವರು ಕ್ಯಾಲಿಫೋರ್ನಿಯಾದ ಟಿಲ್ಡೆನ್ ರೀಜನಲ್ ಪಾರ್ಕ್‌ನಲ್ಲಿರುವ ಕೆರೆಯ ಬಳಿ ಕಂಡುಬಂದಿದ್ದರು ಎಂದು ಮಾಹಿತಿ ಇದೆ. ಆ ನಂತರ ಸಂಪರ್ಕಕ್ಕೆ ಸಿಕ್ಕಿಲ್ಲ ಎಂದು ತಿಳಿದುಬಂದಿದೆ. ತಾಯಿಗೆ ಸಾಕೇತ್ ಕಾಲ್ ಮಾಡಿದ್ದರು. ಆದರೆ ವಾಪಸ್ ಕರೆ ಮಾಡಿದಾಗ ಅವರು ರಿಸೀವ್ ಮಾಡಿಲ್ಲ.

ನಂತರ ಎಷ್ಟೇ ಬಾರಿ ಪ್ರಯತ್ನಿಸಿದರೂ ಸಂಪರ್ಕ ಸಾಧ್ಯವಾಗದ ಕಾರಣ ಪೋಷಕರು ಆತಂಕಕ್ಕೆ ಒಳಗಾಗಿದ್ದಾರೆ. ಪಾರ್ಕ್ ಹಿಲ್ಸ್ ನೆರೆ ಮನೆ ಬಾಗಿಲಿನಲ್ಲಿ ಪಾಸ್‌ಪೋರ್ಟ್ ಮತ್ತು ಲ್ಯಾಪ್‌ಟಾಪ್‌ನೊಂದಿಗೆ ಅವರ ಬ್ಯಾಗ್ ಪತ್ತೆಯಾಗಿದೆ ಎಂದು ದಿ ಬರ್ಕ್ಲಿ ಸ್ಕ್ಯಾನರ್ ಸುದ್ದಿ ಪೋರ್ಟಲ್‌ನಲ್ಲಿ ವರದಿಯಾಗಿದೆ. ಸ್ಯಾನ್ ಫ್ರಾನ್ಸಿಸ್ಕೋದಲ್ಲಿರುವ ಭಾರತೀಯ ಕಾನ್ಸುಲೇಟ್ ಅವರ ಕಣ್ಮರೆಯ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿದೆ.

ನ್ಯಾಯಾಲಯದಲ್ಲಿ ಸ್ವತಃ ವಾದ ಮಂಡಿಸಿ ಎಂಬಿಬಿಎಸ್ ಸೀಟ್ ಗಿಟ್ಟಿಸಿದ ಯುವಕ

ಜಬಲ್ಪುರ: ಯುವಕನೊಬ್ಬ ವ್ಯವಸ್ಥೆಯ ವೈಫಲ್ಯದ ವಿರುದ್ಧ ಸುಪ್ರೀಂಕೋರ್ಟ್‌ನಲ್ಲಿ ಸ್ವತಃ ವಾದ ಮಾಡಿ, ಎಂಬಿಬಿಎಸ್ ಸೀಟ್ ಗಿಟ್ಟಿಸಿಕೊಂಡಿದ್ದಾನೆ. ಮಧ್ಯಪ್ರದೇಶದ ಜಬಲ್ಪುರದಲ್ಲಿ 12ನೇ ತರಗತಿ ಪೂರ್ಣಗೊಳಿಸಿರುವ ಅಥರ್ವ, ನ್ಯಾಯಸ್ಥಾನದಲ್ಲಿ ನಿಂತು ತನ್ನ ಕನಸನ್ನು ಸಾಕಾರಗೊಳಿಸಿಕೊಂಡಿರುವ ಯುವಕ.



ವೈದ್ಯನಾಗಬೇಕೆಂಬ ಕನಸು ಹೊತ್ತಿದ್ದ ಈತ, ವೈದ್ಯಕೀಯ ಹಾಗೂ ಎಂಜಿನಿಯರಿಂಗ್ ಕೋರ್ಸ್‌ಗಳಿಗೆ 2 ಬಾರಿ ಪ್ರವೇಶ ಪರೀಕ್ಷೆ ಬರೆದು 530 ಅಂಕ ಗಳಿಸಿದ್ದ. ಆದರೆ ಖಾಸಗಿ ವೈದ್ಯಕೀಯ ಕಾಲೇಜುಗಳಲ್ಲಿ ಆರ್ಥಿಕವಾಗಿ ಹಿಂದುಳಿದವರಿಗೆ ಮೀಸಲಾತಿ ನಿಗದಿಪಡಿಸದ ಕಾರಣ ಎಂಬಿಬಿಎಸ್ ಸೀಟು ಸಿಕ್ಕಿರಲಿಲ್ಲ. ಆದರೆ, ವೈದ್ಯನಾಗಲೇಬೇಕೆಂಬ ಹಠ ಬಿಡದೆ ನ್ಯಾಯಾಲಯದ ಮೆಟ್ಟಿಲೇರಿದ್ದ ಈತ, ಜಬಲ್ಪುರ ಹೈಕೋರ್ಟ್ ನಲ್ಲಿ ತನ್ನ ಪ್ರಕರಣವನ್ನು ತಾನೇ ವಾದ ಮಾಡುತ್ತಿದ್ದ. ಆ ವೇಳೆ ನ್ಯಾಯಾಧೀಶರು ನೀನು ವೈದ್ಯನಾಗುವ ಬದಲು ವಕೀಲನಾಗು ಎಂದು ಸಲಹೆ ನೀಡಿದ್ದರು. ತನ್ನ ಗುರಿ ಬದಲಿಸದ ಅಥರ್ವ, ತನ್ನ ಕಾನೂನು ಸಂಘರ್ಷ ಮುಂದುವರಿಸಿದ್ದ. ಪ್ರಕರಣ ಸುಪ್ರೀಂಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಅವರಿದ್ದ ಪೀಠದಲ್ಲಿ ವಿಚಾರಣೆಗೆ ಬಂದಾಗ, ಗದ್ದಲದ ನಡುವೆ ನನಗೆ 10 ನಿಮಿಷ ಕೊಡಿ ಎಂದು ಅಥರ್ವ ವಾದ ಮಂಡಿಸಿದ. ಕಡೆಗೆ ಈ ವಿದ್ಯಾರ್ಥಿಗೆ ಎಂಬಿಬಿಎಸ್ ಕೋರ್ಸ್‌ಗೆ ಸೀಟು ನೀಡುವಂತೆ ಆದೇಶಿಸಿದೆ.

ಹೋಟೆಲ್‌ಗೆ ಹಣ ಪಾವತಿಸದ ಕಾರಣ ರಸ್ತೆಯಲ್ಲೇ ಕಾದ ಪಾಕ್ ಆಟಗಾರರು

ಕರಾಚಿ: ಆಸ್ಟ್ರೇಲಿಯಾದ ಕೆನ್‌ಬೆರಾದಲ್ಲಿ ಪಾಕಿಸ್ತಾನದ ಹಾಕಿ ತಂಡ ವಾಸ್ತವ್ಯ ಹೂಡಬೇಕಿದ್ದ ಹೋಟೆಲ್‌ಗೆ ಪಾಕಿಸ್ತಾನ ಹಾಕಿ ಫೆಡರೇಷನ್ ಹಣ ಪಾವತಿಸದ ಕಾರಣ ಬುಕ್ಕಿಂಗ್ ರದ್ದು ಮಾಡಿದ ಪರಿಣಾಮ, ಆಟಗಾರರು ಗಂಟೆಗಟ್ಟಲೆ ರಸ್ತೆ ಬದಿ ಕಳೆಯಬೇಕಾಯಿತು. ತಂಡ ಮತ್ತು ಸಿಬ್ಬಂದಿ ಕಳೆದ ವಾರ ಆಸ್ಟ್ರೇಲಿಯಾಕ್ಕೆ ಹೊರಟಾಗ ಕೆನ್‌ಬೆರಾದಲ್ಲಿ ಬುಕ್ ಮಾಡಲಾಗಿದ್ದ ಫೋರ್‌ಸ್ಟಾರ್ ಹೋಟೆಲ್‌ಗೆ ಪಾಕಿಸ್ತಾನದ ಕ್ರೀಡಾ ಮಂಡಳಿ ಮತ್ತು ಪಾಕಿಸ್ತಾನ ಹಾಕಿ ಫೆಡರೇಷನ್ ಹಣ ಪಾವತಿಸಲಿದೆ ಎಂದು ಹೇಳಲಾಗಿತ್ತು. ಆದರೆ ಹಣ ಪಾವತಿಸದ ಕಾರಣ ಬೀದಿಬದಿ ಓಡಾಡಿ ಸಮಯ ಕಳೆದರು ಎಂದು ತಂಡದ ಆಪ್ತ ಮೂಲಗಳು ತಿಳಿಸಿವೆ.



ಮುಖ್ಯ ತರಬೇತುದಾರ ಪಾಕಿಸ್ತಾನದ ಅಧಿಕಾರಿಗಳನ್ನು ಸಂಪರ್ಕಿಸಲು ಪ್ರಯತ್ನಿಸಿದರೂ ಸಮಯದ ವ್ಯತ್ಯಾಸ ಮತ್ತು ಹಣದ ಕೊರತೆಯಿಂದಾಗಿ ತಕ್ಷಣಕ್ಕೆ ಪರಿಹಾರ ಸಿಗಲಿಲ್ಲ. ದೀರ್ಘ ಪ್ರಯಾಣದ ನಂತರ, ಆಟಗಾರರಿಗೆ ವಿಶ್ರಾಂತಿ ಸ್ಥಳ ಹಾಗೂ ಆಹಾರ ಇರಲಿಲ್ಲ. ಸಾಕಷ್ಟು ಪ್ರಯತ್ನದ ನಂತರ, ಹೋಟೆಲ್ ಸೀಮಿತ ಸಂಖ್ಯೆಯ ಕೊಠಡಿಗಳನ್ನು ಒದಗಿಸಿದೆ. ಇದರಿಂದ ಇಬ್ಬರು ಅಥವಾ ಮೂವರು ಆಟಗಾರರು ಒಂದೇ ಕೊಠಡಿಯನ್ನು ಹಂಚಿಕೊಂಡಿದ್ದಾರೆ. ಈ ಪ್ರಕರಣದಿಂದ ಕ್ರೀಡಾಪಟುಗಳಿಗೆ ಇರಿಸುಮುರಿಸು ಉಂಟುಮಾಡಿದೆ.

ಮರಣದ ನಂತರ ಐದು ಮಕ್ಕಳ ಜೀವ ಉಳಿಸಿದ 10 ತಿಂಗಳ ಕಂದಮ್ಮ

ಕೊಚ್ಚಿ: ಕೇರಳದ ಪತ್ತನಂತಿಟ್ಟ ಜಿಲ್ಲೆ, ಮಲ್ಲಪ್ಪಳ್ಳಿಯ ಅರುಣ್ ಅಬ್ರಹಾಂ ಮತ್ತು ಶೆರಿನ್ ಆನ್‌ಜಾನ್ ದಂಪತಿಯ 10 ತಿಂಗಳ ಪುತ್ರಿ ಅಲಿನ್ ಶೆರಿನ್ ಅಬ್ರಹಾಂ, ಅಪಘಾತದಲ್ಲಿ ಮೃತಪಟ್ಟರೂ 5 ಮಕ್ಕಳ ಜೀವ ಉಳಿಸುವ ಮೂಲಕ ರಾಜ್ಯದ ಅತ್ಯಂತ ಕಿರಿಯ ಅಂಗಾಂಗ ದಾನಿ ಎನಿಸಿಕೊಂಡಿದ್ದಾರೆ. ಅಲಿನ್ ಶೆರಿನ್‌ನ ಯಕೃತ್ತು, ಎರಡು ಮೂತ್ರಪಿಂಡಗಳು, ಹೃದಯ ಕವಾಟ ಮತ್ತು ಎರಡು ಕಣ್ಣುಗುಡ್ಡೆಗಳನ್ನು ದಾನ ಮಾಡಲಾಗಿದೆ. ಅತ್ಯಂತ ಕಿರಿಯ ಮಗು ಅಂಗಾಂಗ ದಾನದ ಮೂಲಕ ಯಕೃತ್ತು ಪಡೆಯುತ್ತಿದೆ. ಇಬ್ಬರು ಮಕ್ಕಳು ಇತಿಹಾಸದ ಭಾಗವಾಗಲಿದ್ದಾರೆ ಎಂದು ಆರೋಗ್ಯ ಸಚಿವೆ ವೀಣಾ ಜಾರ್ಜ್ ತಿಳಿಸಿದ್ದಾರೆ.

ಕೊಟ್ಟಾಯಂನಿಂದ ತಿರುವಲ್ಲಕ್ಕೆ ಫೆ.5 ರಂದು ಮಧ್ಯಾಹ್ನ ಕಾರಿನಲ್ಲಿ ಪ್ರಯಾಣಿಸುತ್ತಿದ್ದಾಗ ಪಳ್ಳಂ ಬೋರ್ಮಾ ಜಂಕ್ಷನ್ ಬಳಿ ಎದುರಿನಿಂದ ಬಂದ ಕಾರು ಡಿಕ್ಕಿ ಹೊಡೆದು ಅಪಘಾತ ಸಂಭವಿಸಿತ್ತು. ಘಟನೆಯಲ್ಲಿ ಮಗು ಅಲಿನ್ ಶೆರಿನ್, ತಾಯಿ ಶೆರಿನ್ ಆನ್‌ಜಾನ್ ಮತ್ತು ಅಜ್ಜ–ಅಜ್ಜಿ ಗಂಭೀರವಾಗಿ ಗಾಯಗೊಂಡಿದ್ದರು. ಮಗುವಿಗೆ ಚಂಗನಾಶ್ಶೇರಿ ಮತ್ತು ತಿರುವಲ್ಲದ ಆಸ್ಪತ್ರೆ ಬಳಿಕ ಹೆಚ್ಚಿನ ಚಿಕಿತ್ಸೆಗೆ ಫೆ.7ರಂದು ಎರ್ನಾಕುಲಂ ಅಮೃತ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ನಿನ್ನೆ(ಫೆ.13) ಮಗುವಿನ ಮೆದುಳು ನಿಷ್ಕ್ರಿಯಗೊಂಡಿದ್ದರಿಂದ ಅಂಗಾಂಗ ದಾನಕ್ಕೆ ಕುಟುಂಬದವರ ಒಪ್ಪಿಗೆ ನೀಡಿದ್ದರು. ನಂತರ ವಿವಿಧ ಆಸ್ಪತ್ರೆಗಳಿಗೆ ಮಗುವಿನ ಅಂಗಾಂಗಗಳನ್ನು ದಾನ ಮಾಡಲಾಯಿತು.

ಮೈಸೂರು ಮಿತ್ರ ಭಾನುವಾರ 15 ಫೆಬ್ರವರಿ 2026

ಬಾಳಲೆ ಮಂಡಲದಲ್ಲಿ ಹಿಂದೂ ಸಂಗಮ ಶೋಭಾ ಯಾತ್ರೆ

ಮಡಿಕೇರಿ, ಫೆ.14–ರಾಷ್ಟ್ರೀಯ ಸ್ವಯಂ ಸೇವಕ ಸಂಘ 100 ವಸಂತಗಳನ್ನು ಪೂರೈಸಿರುವ ಹಿನ್ನೆಲೆಯಲ್ಲಿ, ಹಿಂದೂ ಸಮಾಜದಲ್ಲಿ ಧರ್ಮ ಮತ್ತು ಸಂಸ್ಕೃತಿಯ ಬಗ್ಗೆ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಪೊನ್ನಂಪೇಟೆ ತಾಲೂಕಿನ ಬಾಳಲೆ ಮಂಡಲದಲ್ಲಿ ಆಯೋಜಿಸಲಾಗಿದ್ದ ಹಿಂದೂ ಸಂಗಮ ಕಾರ್ಯಕ್ರಮದಲ್ಲಿ ಸಹಸ್ರಾರು ಸಂಖ್ಯೆಯ ಹಿಂದೂಗಳು ಪಾಲ್ಗೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.



ಬಾಳಲೆ ಮಂಡಲದಲ್ಲಿ ಶನಿವಾರ ಹಿಂದೂ ಸಂಗಮ ಶೋಭಾಯಾತ್ರೆ ನಡೆಯಿತು.

ಬಾಳಲೆಯ ಗಣೇಶ ದೇವಸ್ಥಾನದಲ್ಲಿ ಅರ್ಚಕರಾದ ವಿಷ್ಣುಮೂರ್ತಿ ಭಟ್ ಅವರು ಗಣಪತಿಗೆ ಪೂಜೆ ಸಲ್ಲಿಸಿ ಬಾಳಲೆಯ ಮುಖ್ಯ ರಸ್ತೆಯ ಮೂಲಕ ಭಾರತಾಂಬೆಯ ಶೋಭಾ ಯಾತ್ರೆ ಸ್ಥಳೀಯ ಕೊಡವ ಸಮಾಜದ ವರೆಗೆ ಮೆರವಣಿಗೆಯಲ್ಲಿ ಸಾಗಿತು. ಕೇಸರಿ ಶಾಲು ಧರಿಸಿ ಮಹಿಳೆಯರು, ಮಕ್ಕಳು ಭಾರತ್ ಮಾತಾ ಕಿ ಜೈ ಎಂಬ ಘೋಷಣೆಯೊಂದಿಗೆ ಮೆರವಣಿಗೆಯಲ್ಲಿ ಹೆಜ್ಜೆ ಹಾಕಿದರು. ಬಾಳಲೆ ಕೊಪ್ಪಲು ಭಾಗದ ಕಳಸ ಹೊತ್ತ ಮಹಿಳೆಯರು, ಶ್ರೀ ರಾಮ, ಲಕ್ಷ್ಮಣ, ಸೀತೆ, ಮುಂತಾದ ಮಹನೀಯರ ಛದ್ಮ ವೇಷ ಧರಿಸಿದ ಪ್ರತಿಭಾ ವಿದ್ಯಾಸಂಸ್ಥೆಯ ವಿದ್ಯಾರ್ಥಿಗಳು ನೃತ್ಯ ಮಾಡುತ್ತಾ, ಚೆಂಡೆ ವಾದ್ಯದೊಂದಿಗೆ, ಪಟಾಕಿ ಸಿಡಿಸಿ ಮೆರವಣಿಗೆಯಲ್ಲಿ ಸಾಗಿ ಬಂದರು.

ಮುಖ್ಯ ಭಾಷಣಕಾರರಾಗಿ ಆಗಮಿಸಿದ್ದ ಹಿಂದೂ ಜಾಗರಣ ವೇದಿಕೆಯ ಸಹ ಸಂಚಾಲಕ ಮಹೇಶ್ ಕಡಗದಾಳು ಮಾತನಾಡಿ, ಹಿಂದೂ ಸಂಸ್ಕೃತಿ, ಆಚಾರ, ವಿಚಾರಗಳು ವಿಭಿನ್ನವಾಗಿದ್ದು, ವಿವಿಧತೆಯಲ್ಲಿ ಏಕತೆಯನ್ನು ಸಾರುವ ಧರ್ಮವಾಗಿದೆ. ಹಿರಿಯರಿಗೆ ಗೌರವ ನೀಡುವುದು, ತಲೆಬಾಗಿ ನಮಸ್ಕರಿಸುವುದು ಹೀಗೆ ಹತ್ತು ಹಲವು ಆಚಾರಗಳನ್ನು ಒಳಗೊಂಡ ಧರ್ಮ ಹಿಂದೂ ಧರ್ಮವಾಗಿದೆ. ಬೇರೆ ಬೇರೆ ಧರ್ಮದ ಜನಾಂಗ ಬಾಂಧವರು ಹಿಂದೂ ಧರ್ಮದೊಂದಿಗೆ ಹೋಲಿಕೆಯನ್ನು ಮಾಡಿಕೊಂಡು ತಮ್ಮದೇ ಧರ್ಮ ಮೇಲೂ ಎಂಬಂತೆ ಸನಾತನ ಹಿಂದೂ ಧರ್ಮವನ್ನು ಟೀಕಿಸುತ್ತಿದ್ದಾರೆ. ಈ ಕಾರಣದಿಂದ ಮತಾಂತರ ಹೆಚ್ಚಾಗುತ್ತಿದೆ ಎಂದು ಟೀಕಿಸಿದರು. ನಮ್ಮ ಧರ್ಮ, ತ್ಯಾಗ, ಬಲಿದಾನ, ಹೋರಾಟ ಹಾಗೂ ಭಾರತೀಯ ಇತಿಹಾಸವನ್ನು ಮುಂದಿನ ಪೀಳಿಗೆಯ ಮಕ್ಕಳಿಗೆ ನೆನಪಿಸದಿದ್ದರೆ ಹಿಂದೂ ಸಮಾಜಕ್ಕೆ ಉಳಿಗಾಲ ಇಲ್ಲದಂತಾಗುತದೆ ಎಂದು ಆತಂಕ ವ್ಯಕ್ತಪಡಿಸಿದರು.

ಪ್ರತಿಭಾ ಆಂಗ್ಲ ಮಾಧ್ಯಮ ಶಾಲೆಯ ನಿವೃತ್ತ ಶಿಕ್ಷಕಿ ಅಡ್ಡೇಂಗಡ ಪೊನ್ನಮ್ಮ ಮಾತನಾಡಿದರು. ವಿಜಯ ಬ್ಯಾಂಕ್ ಮಾಜಿ ಅಧ್ಯಕ್ಷ ಶಂಕರಿ ಸೋಮಯ್ಯ ಅಧ್ಯಕ್ಷತೆ ವಹಿಸಿದ್ದರು. ಬಾಳಲೆ ಕೃಷಿ ಉತ್ಪನ್ನ ಹಾಗೂ ವ್ಯವಸಾಯೋತ್ಪನ್ನ ಸಹಕಾರ ಸಂಘದ ಅಧ್ಯಕ್ಷ ಅರಮಣಮಾಡ ಸುಗುಣ ಗಣಪತಿ, ನಿರ್ದೇಶಕಿ ಮುಕ್ಕಾಟೀರ ಜಾನಕಿ, ಸದಸ್ಯರಾದ ಮಾಪಂಗಡ ಯಮುನಾ ಚಂಗಪ್ಪ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಕೃಷ್ಣ ಗಣಪತಿ, ಬಾಳಲೆ ವಿಜಯಲಕ್ಷ್ಮಿ ಕಾಲೇಜಿನ ಅಧ್ಯಕ್ಷ ಅಳಮೇಂಗಡ ಬೋಸ್ ಮಂದಣ್ಣ, ಗ್ರಾಮ ಪಂಚಾಯತಿ ಮಾಜಿ ಅಧ್ಯಕ್ಷೆ ಕೊಕ್ಕೆಂಗಡ ಸ್ಮಿತಾ ಪೊನಪ್ಪ, ಹಿಂದೂ ಸಂಗಮ ಅಧ್ಯಕ್ಷ ಪೊಡಮಾಡ ಸುಕೇಶ್, ಕಾರ್ಯದರ್ಶಿ ಅಡ್ಡೇಂಗಡ ಅಜಯ್, ಸಂಚಾಲಕ ಅಡ್ಡೇಂಗಡ ರಾಕಿ ನಾಣಯ್ಯ, ಪೊಡಮಾಡ ಜ್ಯೋತಿ ನಾಚಪ್ಪ, ಅಡ್ಡೇಂಗಡ ಅರುಣ, ನವೀನ್, ಕೊಕ್ಕಲೆಮಾಡ ನಾಣಯ್ಯ, ಆಟೋ ಅನಿಲ್, ಅವಿನಾಶ್, ಶಬರಿ, ಪ್ರಕಾಶ್ ಮತ್ತಿತರರು ಉಪಸ್ಥಿತರಿದ್ದರು.

ಪುರಸಭೆಯಲ್ಲಿ ಅನುದಾನ ಮೀಸಲಿಡಲು ಎಸಿ ಆದೇಶ

ವಿರಾಜಪೇಟೆ, ಫೆ.14–ನೀರಿನ ಸಮಸ್ಯೆ, ಪರಿಹಾರಕ್ಕೆ, ಬೀದಿದೀಪ ಅಳವಡಿಕೆಗೆ, ಬೀದಿ ನಾಯಿಗಳ ಹಾವಳಿಯನ್ನು ಹತ್ತಿಕ್ಕಲು ಅನುದಾನ ಮೀಸಲಿಡುವಂತೆ ಉಪವಿಭಾಗಾಧಿಕಾರಿ ನಿತಿನ್ ಚಕ್ಕಿ ಸೂಚಿಸಿದ್ದಾರೆ.


ಪುರಸಭೆ ಆಯ-ವ್ಯಯದ ಬಗ್ಗೆ ಕರೆದಿದ್ದ ಪೂರ್ವಭಾವಿ ಸಭೆ ಶನಿವಾರ ನಡೆಯಿತು.

ಪುರಸಭೆಯ ಆಯ-ವ್ಯಯದ ಬಗ್ಗೆ ಕರೆದಿದ್ದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿದ್ದ ಅವರು, ಈಗಾಗಲೇ ಪುರಸಭೆ ವ್ಯಾಪ್ತಿಯನ್ನು ವಿಸ್ತರಿಸಿ ವಾರ್ಡ್ ಸಂಖ್ಯೆ ಹೆಚ್ಚಾಗಿರುವುದರಿಂದ ಎಲ್ಲಾ ವಾರ್ಡ್‌ಗಳಿಗೂ ಮೂಲ ಸೌಲಭ್ಯಗಳನ್ನು ಒದಗಿಸುವ ನಿಟ್ಟಿನಲ್ಲಿ ಜನರ ಕುಂದು ಕೊರತೆಗಳನ್ನು ನೀಗಿಸುವ ಕೆಲಸ ಆಗಬೇಕು ಹಾಗೂ ವಾಹನ ದಟ್ಟಣೆ ಇರುವುದರಿಂದ ರಸ್ತೆ ಅಭಿವೃದ್ಧಿ, ಚರಂಡಿ ಹಾಗೂ ಸ್ವಚ್ಛತೆ ಬಗ್ಗೆ ಕ್ರಮ ಕೈಗೊಳ್ಳಬೇಕೆಂದು ಅಧಿಕಾರಿಗಳಿಗೆ ಆದೇಶಿಸಿದರು. ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಸಭೆಯಲ್ಲಿ ಪ್ರಸ್ತಾಪವಾದಾಗ ಇದುವರೆಗೂ ನೀರಿನ ಸಮಸ್ಯೆಯಾಗಿಲ್ಲ ನಗರ ನೀರು ಸರಬರಾಜು ಯೋಜನೆಯಿಂದ ಪೈಪ್ ಅಳವಡಿಕೆ ಕಾಮಗಾರಿ ನಡೆಸುತ್ತಿರುವುದರಿಂದ ನೀರು ಸರಬರಾಜು ವ್ಯತ್ಯಾಸವಾಗಿದ್ದು ಸಮಸ್ಯೆ ಬಗೆಹರಿಸಲಾಗಿದೆ ಎಂದು ಪುರಸಭೆ ಮುಖ್ಯಾಧಿಕಾರಿ ಪಿ.ಕೆ.ನಾಚಪ್ಪ ಉತ್ತರಿಸಿದರು.

ಖಾಸಗಿ ಬಸ್ಸು ಕಾರ್ಮಿಕ ಸಂಘದ ಜೂಡಿವಾಜ್ ಮಾತನಾಡಿ ಬಸ್ ನಿಲ್ದಾಣದ ಒಳಗೆ ಅಂದಾಜು ನೂರು ಕಾರು, ಬೈಕ್ ಇತರೆ ವಾಹನಗಳನ್ನು ನಿಲ್ಲಿಸಿ ಹೋಗುತ್ತಾರೆ. ಇದರಿಂದ ಖಾಸಗಿ ಬಸ್‌ಗಳನ್ನು ತಿರುಗಿಸಲು ನಿಲ್ಲಿಸಲು ಸಮಸ್ಯೆ ಉಂಟಾಗಿದ್ದು ಕೂಡಲೇ ಇತರೆ ವಾಹನಗಳನ್ನು ಬಸ್ ನಿಲ್ದಾಣದ ಒಳಗ್ಗೆ ನಿಲ್ಲಿಸದಂತೆ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದಾಗ ಸಂಘದ ಕೆ.ಯು. ಗಣೇಶ್ ತಮ್ಮಯ್ಯ ದನಿಗೂಡಿಸಿದರು.

ಎ.ಕೆ.ರವಿಕುಮಾರ್ ಮಾತನಾಡಿ ಪಟ್ಟಣದ ಮುಖ್ಯ ರಸ್ತೆಗಳಲ್ಲಿ ಪೊಲೀಸ್ ಇಲಾಖೆ ಸಿ.ಸಿ.ಕ್ಯಾಮರ ಅಳವಡಿಸಲಾಗಿದ್ದರು ಕ್ಯಾಮರಗಳು ಕೆಲಸಮಾಡುತ್ತಿಲ್ಲ ಎಲ್ಲ ಕ್ಯಾಮರಗಳು ದುಸ್ಥಿತಿಯಲ್ಲಿವೆ ಪಟ್ಟಣದಲ್ಲಿ ಏನಾದರೂ ಅಪರಾಧ, ಅಹಿತಕರ ಘಟನೆಗಳು ನಡೆದರೆ ತಿಳಿದುಕೊಳ್ಳುವುದು ಹೇಗೆ ಎಂದು ಪ್ರಶ್ನಿಸಿ, ಕೂಡಲೆ ದುಃಸ್ಥಿತಿಯಲ್ಲಿರುವ ಸಿ.ಸಿ. ಕ್ಯಾಮರವನ್ನು ರಿಪೇರಿ ಮಾಡಿ ಇಲ್ಲಾ ಹೊಸ ಸಿ.ಸಿ ಕ್ಯಾಮರವನ್ನು ಅಳವಡಿಸಿ ಎಂದು ಒತ್ತಾಯಿಸಿದರು.

ಹಿರಿಯ ನಾಗರಿಕ ಶಂಕರಿ ಪೊನ್ನಪ್ಪ, ಪ.ಪಂ. ಮಾಜಿ ಅಧ್ಯಕ್ಷ ವಿ.ಕೆಸತೀಶ್ ಕುಮಾರ್, ಎ.ಆರ್.ರವಿ ಕುಮಾರ್, ನಿವೃತ್ತ ಶಿಕ್ಷಕ ಎ.ವಿ.ಮಂಜುನಾಥ್ ಮಾತನಾಡಿದರು

ವಿದ್ಯುತ್ ಕಂಬಕ್ಕೆ ಬೈಕ್ ಡಿಕ್ಕಿ: ಸವಾರ ಸಾವು

ಮಡಿಕೇರಿ, ಫೆ.14–ಸವಾರನ ನಿಯಂತ್ರಣ ಕಳೆದುಕೊಂಡ ಬೈಕ್ ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದ ಪರಿಣಾಮ ಬೈಕ್ ಸವಾರ ಸ್ಥಳದಲ್ಲೇ ಮೃತಪಟ್ಟ ಘಟನೆ ಸೋಮವಾರ ಪೇಟೆ ತಾಲೂಕಿನಲ್ಲಿ ನಡೆದಿದೆ.



ಶುಕ್ರವಾರ ರಾತ್ರಿ ಸೋಮವಾರಪೇಟೆ ಕೂತಿ ಗ್ರಾಮ ನಿವಾಸಿ ಸಿ.ಜೆ.ಸಂದೀಪ್(41) ತಮ್ಮ ಬೈಕ್‌ನಲ್ಲಿ ತೋಟದ ಕೆಲಸ ಮುಗಿಸಿಕೊಂಡು ಸಹ ಕಾರ್ಮಿಕ ದೊಡ್ಡ ತೋಳೂರು ಗ್ರಾಮದ ಪ್ರಸನ್ನ ಎಂಬವರನ್ನು ಮನೆಗೆ ಬಿಡಲು ತೆರಳುವಾಗ ತೋಳೂರು ಶೆಟ್ಟಳ್ಳಿ ಸಮೀಪದ ಇನಕನಹಳ್ಳಿ ಎಂಬಲ್ಲಿ ನಿಯಂತ್ರಣ ಕಳೆದುಕೊಂಡು ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದಿದೆ. ಪರಿಣಾಮ ಬೈಕ್ ಸವಾರ ಸಂದೀಪ್ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಹಿಂಬದಿ ಸವಾರ ಪ್ರಸನ್ನ ಅವರಿಗೆ ಸಣ್ಣಪುಟ್ಟ ಗಾಯಗಳೊಂದಿಗೆ ಸಮೀಪದ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಸೋಮವಾರಪೇಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲು ಮಾಡಿಕೊಂಡು ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ.

ಪೆರಾಜೆಯಲ್ಲಿ ಕಾಫಿ ಬೆಳೆ ಬಗ್ಗೆ ಕಾರ್ಯಾಗಾರ

ನಾಪೋಕ್ಲು, ಫೆ.14–ಪೆರಾಜೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಿಂದ ಕಾಫಿ ಬೆಳೆ ಬಗ್ಗೆ ಬೆಳೆಗಾರರಿಗೆ ಮಾಹಿತಿ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಯಿತು.

ಕೃಷಿ ಪತ್ತಿನ ಸಹಕಾರ ಸಂಘದ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಸ್ಥೆಯ ಅಧ್ಯಕ್ಷ ನಾಗೇಶ್ ಕುಂದಲ್ಪಾಡಿ ಕಾರ್ಯಾಗಾರದ ಧ್ಯೇಯೋದ್ದೇಶದ ಬಗ್ಗೆ ಮಾತನಾಡಿದರು. ಸಂಪನ್ಮೂಲ ವ್ಯಕ್ತಿಗಳಾಗಿ ಕಾಫಿ ಸಂಶೋಧನಾ ಸಂಸ್ಥೆ ಚಟ್ಟಳ್ಳಿಯ ವಿಜ್ಞಾನಿಗಳಾದ ಡಾ। ಎಸ್ ಎ ನಾಡಫ್, ಡಾ। ಶಿವಲಿಂಗು ಬಿ ಆರ್. ಪವನ್ ರೈತ ಸದಸ್ಯರಿಗೆ ಕಾಫಿ ಬೆಳೆಯ ಬಗ್ಗೆ ಸ್ಲೈಡ್ಸ್ ಮೂಲಕ ವಿಸ್ತೃತವಾದ ಮಾಹಿತಿಯನ್ನು ನೀಡಿದರು.

ವೇದಿಕೆಯಲ್ಲಿ ಸಂಸ್ಥೆಯ ಉಪಾಧ್ಯಕ್ಷ ಅಶೋಕ ಪಿ.ಎಂ., ಸಕ್ಡೆನ್ ಕಾಫಿ ಇಂಡಿಯಾ ಲಿಮಿಟೆಡ್ ಕುಶಾಲನಗರದ ಸಂಯೋಜಕ ಪ್ರಕೃತಿ ಪೊನ್ನಮ್ಮ ಹಾಗೂ ಉದಯ್ ಕುಮಾರ್ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಕಾರ್ಯಾಗಾರದಲ್ಲಿ ಸಂಘದ ನಿರ್ದೇಶಕರು ಹಾಗೂ ರೈತರು ಭಾಗವಹಿಸಿದ್ದರು. ಗ್ರಾ.ಪಂ ಉಪಾಧ್ಯಕ್ಷ ನಂಜಪ್ಪ ನಿಡ್ಯಮಲೆ ಸಂಪನ್ಮೂಲ ವ್ಯಕ್ತಿಗಳನ್ನು ಗೌರವಿಸಿದರು.

ಮಾಜಿ ಉಪ ರಾಷ್ಟ್ರಪತಿ ವೆಂಕಯ್ಯ ನಾಯ್ಡುಗೆ ಆತ್ಮೀಯ ಸ್ವಾಗತ

ಮಡಿಕೇರಿ, ಫೆ.14–ತಮ್ಮ ಐದು ದಿನಗಳ ಖಾಸಗಿ ಭೇಟಿಗಾಗಿ ಮಾಜಿ ಉಪ ರಾಷ್ಟ್ರಪತಿ ವೆಂಕಯ್ಯ ನಾಯ್ಡು ಶನಿವಾರ ಜಿಲ್ಲೆಗೆ ಆಗಮಿಸಿದರು.



ಮೈಸೂರಿನಿಂದ ಪತ್ನಿ ಉಷಾರೊಂದಿಗೆ ಹೆಲಿಕಾಪ್ಟರ್‌ನಲ್ಲಿ ಕೆದಕಲ್ ಟಿಂಬರ್ ಟೇಲ್ಸ್ ಹೆಲಿಪ್ಯಾಡಿನಲ್ಲಿ ಬಂದಿಳಿದರು ನಂತರ ಕಾರಿನಲ್ಲಿ ಮಡಿಕೇರಿಗೆ ತೆರಳಿ ಗ್ರೀನ್ ಪಾರ್ಕ್ ರೆಸಾರ್ಟ್‌ನಲ್ಲಿ ತಂಗಿದ್ದಾರೆ.

ನಾಳೆ (ಭಾನುವಾರ) ರೆಸಾರ್ಟ್‌ನಲ್ಲಿ ಬೆಳಗ್ಗೆ 9.30 ಗಂಟೆಗೆ ರೆಸಾರ್ಟ್‌ನ ಮಾಲೀಕ ಅಟ್ಲೂರಿ ಪೂರ್ಣಚಂದ್ರ ಅವರ 90ನೇ ಜನ್ಮ ದಿನದ ಕಾರ್ಯಕ್ರಮದಲ್ಲಿ ಭಾಗಿಯಾಗಿ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅಲ್ಲೇ ಮೊಕ್ಕಾಂ ಹೂಡುವರು. ತಾಲೂಕಿನ ಮಕ್ಕಂದೂರು ಗ್ರಾಪಂ ವ್ಯಾಪ್ತಿಯಲ್ಲಿ ನಿರ್ಮಾಣವಾಗಿರುವ ಖಾಸಗಿ ರೆಸಾರ್ಟ್ ಉದ್ಘಾಟನೆ ಕಾರ್ಯಕ್ರಮದಲ್ಲಿ ಭಾಗವಹಿಸಿ, ಫೆ.17ರವರೆಗೂ ಅದೇ ರೆಸಾರ್ಟ್‌ನಲ್ಲೇ ವಿಶ್ರಾಂತಿ ಪಡೆಯಲಿದ್ದಾರೆ ಎನ್ನಲಾಗಿದೆ. ಮಾಜಿ ಉಪರಾಷ್ಟ್ರಪತಿ ರೆಸಾರ್ಟ್‌ಗೆ ಆಗಮಿಸಿದ ಸಂದರ್ಭ ಕರ್ಣಂಗೇರಿ ಗ್ರಾಮಸ್ಥರ ಪರವಾಗಿ ಪಂಚಾಯಿತಿ ಸದಸ್ಯ ಜಾನ್ಸನ್ ಪಿಂಟೋ ಆತ್ಮೀಯವಾಗಿ ಸ್ವಾಗತಿಸಿದರು.

ವೆಂಕಯ್ಯ ನಾಯ್ಡುರವರ ಜೊತೆಯಲ್ಲೇ ಸೂಪರ್ ಸ್ಟಾರ್ ರಜನಿಕಾಂತ್ ಕೂಡ ರೆಸಾರ್ಟ್‌ಗೆ ಆಗಮಿಸಿದ್ದು, ಕಾರ್ಯಕ್ರಮಗಳಲ್ಲಿ ಭಾಗವಹಿಸುವರು.

ಕೊಡವ ಪುಸ್ತಕ ಪತ್ತಾಯ ಉದ್ಘಾಟನೆ

ಮಡಿಕೇರಿ, ಫೆ.14–ಕೊಡವ ವೆಲ್‌ಫೇರ್ ಆಂಡ್ ರಿಕ್ರಿಯೇಷನ್ ಅಸೋಷಿಯೇಶನ್‌ನ ನೂತನ ಕಟ್ಟಡ ಕೊಡವ ಭವನವನ್ನು ಶಾಸಕ ಅಜ್ಜಿಕುಟ್ಟಿರ ಎಸ್ ಪೊನ್ನಣ್ಣ ಉದ್ಘಾಟಿಸಿದರು. ಇದೇ ಸಂದರ್ಭದಲ್ಲಿ ಕೊಡವ ಪುಸ್ತಕ ಪತ್ತಾಯ ಸ್ಥಾಪನೆ ಕಾರ್ಯಕ್ರಮ ನೆರವೇರಿಸಲಾಯಿತು.

ತಾಲೂಕು ಅರೆಕಾಡು ಗ್ರಾಮದಲ್ಲಿ ನಡೆದ ಸಮಾರಂಭದಲ್ಲಿ ಮಾತನಾಡಿದ ಶಾಸಕರು, ಸ್ಥಳೀಯ ಕೊಡವ ಜನಾಂಗದವರ ಸಮ್ಮಿಲನಕ್ಕೆ ಹಾಗೂ ಪರಸ್ಪರ ಬೆರೆತು ಪರಿಚಯಿಸಿಕೊಳ್ಳಲು ಈ ಭವನ ಸಹಕಾರಿಯಾಗಲಿದೆ ಎಂದು ಬಣ್ಣಿಸಿದರು. ಕೊಡವ ಸಾಹಿತ್ಯ ಸಂಸ್ಕೃತಿ ಮತ್ತು ಆಚಾರ ವಿಚಾರಗಳು ಮುಂದಿನ ಪೀಳಿಗೆಗೆ ತಿಳಿಯಪಡಿಸಲು ಇಂತಹ ಯೋಜನೆಗಳು ಸಹಕಾರಿಯಾಗಲಿದೆ ಎಂದು ಹೇಳಿದರು.

ವಿಧಾನಪರಿಷತ್ ಸದಸ್ಯ ಮಂಡೇಪಂಡ ಸುಜಾ ಕುಶಾಲಪ್ಪ, ರಾಜ್ಯ ಕ್ರೀಡಾ ಪ್ರಾಧಿಕಾರದ ಉಪಾಧ್ಯಕ್ಷ ಚೆಪ್ಪುಡೀರ ಅರುಣ್ ಮಾಚಯ್ಯ, ಜಿಲ್ಲಾ ಗ್ಯಾರಂಟಿ ಯೋಜನಾ ಸಮಿತಿಯ ಅಧ್ಯಕ್ಷ ತೀತಿರ ಧರ್ಮಜ ಉತ್ತಪ್ಪ, ಕೊಡವ ಭವನದ ಅಧ್ಯಕ್ಷ ಕುಕ್ಕೆರ ಜಯಾ ಚಿಣ್ಣಪ್ಪ, ಕೊಡವ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಅಜ್ಜಿನಿಕಂಡ ಸಿ. ಮಹೇಶ್ ನಾಚಯ್ಯ, ಬೆಳೆಗಾರರಾದ ನಡಿಕೇರಿಯಂಡ ಪಿ. ಮೋಹನ್ ಮಾಚಯ್ಯ ಹಾಗೂ ಪ್ರಮುಖರು ಉಪಸ್ಥಿತರಿದ್ದರು.

ಕೊಡಗಿಗೆ ಇಂದು ಗೃಹ ಸಚಿವ



ಮಡಿಕೇರಿ: ರಾಜ್ಯದ ಗೃಹಮಂತ್ರಿ ಡಾ. ಜಿ.ಪರಮೇಶ್ವರ್ ಅವರು ಭಾನುವಾರ ಕೊಡಗು ಪ್ರವಾಸ ಹಮ್ಮಿಕೊಂಡಿದ್ದಾರೆ. ಬೆಂಗಳೂರಿನಿಂದ ರಸ್ತೆ ಮಾರ್ಗವಾಗಿ 11 ಗಂಟೆಗೆ ಸುಂಟಿಕೊಪ್ಪಕ್ಕೆ ಆಗಮಿಸುವ ಸಚಿವರು ನೂತನವಾಗಿ ನಿರ್ಮಿಸಿರುವ ಪೊಲೀಸ್ ವಸತಿ ಗೃಹ ಗಳ ಲೋಕಾರ್ಪಣೆ ಮಾಡಲಿದ್ದಾರೆ. ಬಳಿಕ 12 ಗಂಟೆಗೆ ಹೊರವಲಯದ ಕರ್ಣಂಗೇರಿ ಗ್ರಾಮದ ಶ್ರೀ ರಾಜರಾಜೇಶ್ವರಿ ದೇವಾಲಯದಲ್ಲಿ ಶಿವರಾತ್ರಿ ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ.

ಪುಲ್ವಾಮಾ ಹುತಾತ್ಮರಿಗೆ ಶ್ರದ್ಧಾಂಜಲಿ


ಹುತಾತ್ಮರಾದ ಸೈನಿಕರಿಗೆ ಮಾಜಿ ಯೋಧರ ಒಕ್ಕೂಟ ಶ್ರದ್ಧಾಂಜಲಿ ಸಲ್ಲಿಸಿತು.

ಕುಶಾಲನಗರ, ಫೆ14– ಜಿಲ್ಲಾ ಅರೆಸೇನಾ ಪಡೆಯ ಮಾಜಿ ಯೋಧರ ಒಕ್ಕೂಟದ ವತಿಯಿಂದ ಪುಲ್ವಾಮದಲ್ಲಿ ಹುತಾತ್ಮರಾದ ಸೈನಿಕರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಇಲ್ಲಿನ ಎಪಿಸಿಎಂಎಸ್ ಸುವರ್ಣ ಸಭಾಂಗಣದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಉಗ್ರನ ಸಂಚಿಗೆ ಬಲಿಯಾದ 44 ಮಂದಿ ಯೋಧರ ಭಾವಚಿತ್ರಗಳಿಗೆ ಪುಷ್ಪ ನಮನ ಸಲ್ಲಿಸಲಾಯಿತು.

ಮಾಜಿ ಸಚಿವ ಅಪ್ಪಚ್ಚು ರಂಜನ್ ಮಾತನಾಡಿ, ಪುಲ್ವಾಮದ ಘಟನೆಯಲ್ಲಿ ಅಸುನೀಗಿದ ವೀರ ಸೇನಾನಿಗಳ ಕುಟುಂಬದೊಂದಿಗೆ ಅಖಂಡ ದೇಶವಾಸಿಗಳು ಇದ್ದಾರೆ.

ಆದರೆ ಘಟನೆಯ ಬಳಿಕ ದೇಶದ ಸೈನಿಕರು ತಕ್ಕಪಾಠ ಕಲಿಸುವ ಮೂಲಕ 250 ಮಂದಿ ಉಗ್ರರನ್ನು ಸದೆಬಡಿಯುವ ಮೂಲಕ ಭಾರತೀಯ ಸೈನಿಕರ ಪರಾಕ್ರಮ ತೋರಿಸಿರುವುದು ಶತ್ರು ರಾಷ್ಟ್ರಗಳಿಗೆ ನೀಡಿರುವ ಎಚ್ಚರಿಕೆಯ ಘಂಟೆ ಎಂದರು.

ತಾಲೂಕಿನ ಗ್ಯಾರಂಟಿ ಯೋಜನೆಗಳ ಸಮಿತಿ ಅಧ್ಯಕ್ಷ ವಿ.ಪಿ.ಶಶಿಧರ್ ಮಾತನಾಡಿ, ದೇಶದ ಭದ್ರತೆ ಹಾಗೂ ಸುರಕ್ಷತೆಯ ವಿಚಾರದಲ್ಲಿ ದೇಶದ ಗಡಿಗಳನ್ನು ಕಾಯುವ ಸೈನಿಕರ ಸೇವೆ ಹಾಗೂ ತ್ಯಾಗ ಅನನ್ಯವಾದುದು. ಹುತಾತ್ಮ ಯೋಧರ ಶ್ರದ್ಧಾಂಜಲಿ ಕಾರ್ಯಕ್ರಮ ಸಾರ್ವಜನಿಕರಿಂದ ನಡೆಯುವಂತಾಗಬೇಕು ಎಂದು ಆಶಿಸಿದರು.

ಉದ್ಯಮಿ ಹರಪಳ್ಳಿ ರವೀಂದ್ರ, ದಿಕ್ಸೂಚಿ ಭಾಷಣಕಾರ ಕೂಡಿಗೆ ಸರ್ಕಾರಿ ಪಿಯು ಕಾಲೇಜಿನ ಪ್ರಾಂಶುಪಾಲ ಹಂಡ್ರಂಗಿ ನಾಗರಾಜು, ಹಿರಿಯ ನಾಗರಿಕ ಎಂ.ಹೆಚ್. ನಜೀರ್ ಅಹಮದ್, ವೃತ್ತ ನಿರೀಕ್ಷಕ ಪ್ರದೀಪ್ ಕುಮಾರ್ ಮಾತನಾಡಿದರು. ಎಂ.ಜಿ.ಯತೀಶ್, ಪುಲಿಯಂಡ ಚೆಂಗಪ್ಪ ಎಂ.ಎನ್.ರವೀಂದ್ರ, ರಾಜಶೇಖರ, ನೂರೇರಾ ಭೀಮಯ್ಯ, ಜಿ.ಕೆ.ದಿನೇಶಕುಮಾರ್ ಇದ್ದರು.

ಕೆಎಸ್‌ಆರ್‌ಟಿಸಿ ಬಸ್ ಡಿಕ್ಕಿ; ಬೈಕ್ ಸವಾರ ಸಾವು

ಮತ್ತೊಂದು ಪ್ರಕರಣದಲ್ಲಿ ಬಸ್ಸುಗಳ ಮುಖಾಮುಖಿ ಡಿಕ್ಕಿ: ಟ್ರಾಫಿಕ್ ಜಾಮ್


ಬೈಕ್ ಸವಾರನನ್ನು ಬಲಿ ಪಡೆದುಕೊಂಡ ಬಸ್ಸು.


ಟ್ರಾಫಿಕ್ ಜಾಮ್‌ಗೆ ಕಾರಣವಾದ ಬಸ್ಸುಗಳ ಡಿಕ್ಕಿ

ಹನೂರು: ಬೈಕ್‌ಗೆ ಕೆಎಸ್‌ಆರ್‌ಟಿಸಿ ಬಸ್ಸು ಡಿಕ್ಕಿ ಹೊಡೆದ ಪರಿಣಾಮ ಬೈಕ್ ಸವಾರ ಸ್ಥಳದಲ್ಲಿಯೇ ಸಾವನ್ನಪ್ಪಿರುವ ಘಟನೆ ತಾಲೂಕಿನ ಎಲ್ಲೇಮಾಳ ಮುಖ್ಯ ರಸ್ತೆಯಲ್ಲಿ ಸಂಭವಿಸಿದೆ. ರಾಮನಗರ ಜಿಲ್ಲೆಯ ಕನಕಪುರ ತಾಲೂಕಿನ ಬಿಜ್ಜಳ್ಳಿ ಗ್ರಾಮದ ನಿವಾಸಿ ಪರಮೇಶ್ ಮೃತ ಸವಾರ.

ಘಟನೆಯ ವಿವರ: ಪರಮೇಶ್ ಬೈಕಿನಲ್ಲಿ ಕೌದಳ್ಳಿ ಗ್ರಾಮದ ಕಡೆಯಿಂದ ಹನೂರು ಪಟ್ಟಣದ ಕಡೆ ಬರುತ್ತಿದ್ದ ವೇಳೆ ಹನೂರು ಪಟ್ಟಣದಿಂದ ಮಹದೇಶ್ವರ ಬೆಟ್ಟಕ್ಕೆ ತೆರಳುತ್ತಿದ್ದ ಕೆಎಸ್‌ಆರ್‌ಟಿಸಿ ಬಸ್ ಡಿಕ್ಕಿ ಹೊಡೆದಿದೆ. ಪರಿಣಾಮ ಬೈಕ್‌ನಿಂದ ಕೆಳಗೆ ಬಿದ್ದ ಪರಮೇಶ್ ಬಸ್‌ನ ಹಿಂಬದಿಯ ಚಕ್ರಕ್ಕೆ ಸಿಲುಕಿ ಸ್ಥಳದಲ್ಲಿಯೇ ಮೃತಪಟ್ಟಿದ್ದಾನೆ.

ವಿಷಯ ತಿಳಿದು ಸ್ಥಳಕ್ಕೆ ಹನೂರು ಠಾಣೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಮೃತದೇಹವನ್ನು ಆಸ್ಪತ್ರೆಯ ಶವಾಗಾರಕ್ಕೆ ರವಾನಿಸಿ ಬಸ್ ಹಾಗೂ ಬೈಕ್ ಅನ್ನು ವಶಪಡಿಸಿಕೊಳ್ಳಲಾಗಿದೆ. ಈ ಸಂಬಂಧ ಹನೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಸ್‌ಗಳ ನಡುವೆ ಮುಖಾಮುಖಿ ಡಿಕ್ಕಿ: ಬಸ್-ಬೈಕ್ ಅಪಘಾತ ನಡೆದ ಕೆಲವೇ ನಿಮಿಷಗಳಲ್ಲಿ ಎರಡು ಕೆಎಸ್‌ಆರ್‌ಟಿಸಿ ಬಸ್‌ಗಳ ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿ, ಎರಡು ಬಸ್‌ಗಳ ಕೆಲವು ಪ್ರಯಾಣಿಕರಿಗೆ ಸಣ್ಣ-ಪುಟ್ಟ ಗಾಯಗಳಾದ ಘಟನೆ ಹನೂರು ತಾಲೂಕಿನ ಎಲ್ಲೇಮಾಳದ ಬಳಿಯೇ ಸಂಭವಿಸಿದೆ.

ಬೆಟ್ಟಕ್ಕೆ ತೆರಳುತ್ತಿದ್ದ ಅಶ್ವಮೇದ ಬಸ್ ಹಾಗೂ ಬೆಟ್ಟದಿಂದ ಬರುತ್ತಿದ್ದ ಕೆಎಸ್‌ಆರ್‌ಟಿಸಿ ಬಸ್ ಮುಖಾಮುಖಿ ಡಿಕ್ಕಿಯಾಗಿದೆ.

ಅಪಘಾತ ಸಂಭವಿಸಿದ್ದರಿಂದ ಪಟ್ಟಣದಲ್ಲಿ ಗಂಟೆಗೂ ಹೆಚ್ಚು ಕಾಲ ಟ್ರಾಫಿಕ್ ಜಾಮ್ ಉಂಟಾಯಿತು.

ಆಮ್ ಆದ್ಮಿ ಪಾರ್ಟಿ ಅಧ್ಯಕ್ಷರಾಗಿ ಸ್ವಾಮಿ



ಗುಂಡ್ಲುಪೇಟೆ, ಫೆ.14– ತಾಲೂಕಿನ ಬೇಗೂರು ಸಮೀಪದ ಹೊರೆಯಾಲ ಗ್ರಾಮದ ಶ್ರೀ ತೋಂಟದಾರ್ಯ ಸ್ವಾಮಿ ಅಮ್ ಆದ್ಮಿ ಪಕ್ಷದ ತಾಲೂಕು ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ ಎಂದು ಚಾಮರಾಜನಗರ ಜಿಲ್ಲಾಧ್ಯಕ್ಷ ಹರೀಶ್ ಕೆ. ತಿಳಿಸಿದ್ದಾರೆ.

ರಾಜ್ಯ ಸರ್ಕಾರದ ಸಾವಿರ ದಿನದ ಸಾಧನೆ ಶೂನ್ಯ

● ರಾಜ್ಯ ಸರ್ಕಾರ ಕಾನೂನು ಸುವ್ಯವಸ್ಥೆ ಕಾಪಾಡುವಲ್ಲಿ ಸಂಪೂರ್ಣ ವಿಫಲ ● ಗೃಹ ಇಲಾಖೆ ಹಳ್ಳ ಹಿಡಿದಿದೆ
● ಪತ್ನಿಗೆ 2 ಸಾವಿರ ಕೊಟ್ಟು ಪತಿಯ ಜೇಬಿನಿಂದ 10 ಸಾವಿರ ಕಿತ್ತುಕೊಳ್ಳುತ್ತಿರುವ ರಾಜ್ಯ ಸರ್ಕಾರ

ಚಾಮರಾಜನಗರ: ರಾಜ್ಯ ಕಾಂಗ್ರೆಸ್ ಸರ್ಕಾರದ ಸಾವಿರ ದಿನದ ಸಾಧನೆ ಶೂನ್ಯವಾಗಿದ್ದು, ಹುಚ್ಚು ಮದುವೆಯಲ್ಲಿ ಉಂಡವನೇ ಜಾಣ ಎಂಬಂತಾಗಿದೆ ಎಂದು ಮಾಜಿ ಸಚಿವ, ಬಿಜೆಪಿ ರಾಜ್ಯ ಉಪಾಧ್ಯಕ್ಷ ಎನ್.ಮಹೇಶ್ ಆರೋಪಿಸಿದರು.


ಪತ್ರಿಕಾಗೋಷ್ಠಿಯಲ್ಲಿ ಮಾಜಿ ಸಚಿವ ಎನ್.ಮಹೇಶ್ 'ಸರ್ಕಾರಕ್ಕೆ ಸಾವಿರ ದಿನ, ಸಾವಿರಾರು ಹಗರಣ' ಎಂಬ ಕಿರು ಹೊತ್ತಿಗೆಯನ್ನು ಬಿಡುಗಡೆ ಮಾಡಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ 'ಸರ್ಕಾರಕ್ಕೆ ಸಾವಿರ ದಿನ, ಸಾವಿರಾರು ಹಗರಣ' ಕಿರುಹೊತ್ತಿಗೆಯನ್ನು ಬಿಡುಗಡೆ ಮಾಡಿ ಮಾತನಾಡಿದ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು ಸಾವಿರ ದಿನಗಳನ್ನು ಪೂರೈಸಿದ್ದು, ಸಾವಿರಾರು ದಿನಗಳ ಆಡಳಿತದಲ್ಲಿ ಸಾವಿರಾರು ಸಮಸ್ಯೆಗಳನ್ನು ಸರ್ಕಾರ ಮಹಾಜನತೆಯ ತಲೆಯ ಮೇಲೆ ಹಾಕಿದೆ. ಅದರೆ ಮುಖ್ಯಮಂತ್ರಿಗಳು ತಮ್ಮ ಫೇಸ್‌ಬುಕ್ ಪೇಜ್‌ನಲ್ಲಿ ಸಾವಿರ ದಿನಗಳಲ್ಲಿ 1.37 ಲಕ್ಷ ಕುಟುಂಬಗಳಿಗೆ ಪಂಚ ಗ್ಯಾರಂಟಿ ಯೋಜನೆಗಳ ಮೂಲಕ 1 ಲಕ್ಷದ 13 ಸಾವಿರ ಕೋಟಿ ಹಣವನ್ನು ಜನರಿಗೆ ತಲುಪಿದ್ದೇವೆ. ಅದರ ಪರಿಣಾಮದಿಂದ ತಲಾದಾಯ ಜಾಸ್ತಿಯಾಗಿದ್ದು, ನಮ್ಮ ರಾಜ್ಯ ನಂಬರ್ ಒನ್ ಸ್ಥಾನದಲ್ಲಿದೆ. ಅಲ್ಲದೆ ಒಂದು ಲಕ್ಷ ಕೋಟಿ ಅಭಿವೃದ್ಧಿ ಯೋಜನೆಗಳಿಗೆ ಬಳಸಲಾಗಿದೆ ಎಂದು ಹೇಳಿದ್ದಾರೆ. ಆದರೆ ಸರ್ಕಾರ ಪತ್ನಿಗೆ 2 ಸಾವಿರ ಕೊಟ್ಟು ಪತಿ ಜೇಬಿನಿಂದ, ಕುಟುಂಬದ ಕಡೆಯಿಂದ 10 ಸಾವಿರ ರೂ. ಸಂಗ್ರಹಿಸುವ ಮೂಲಕ ಕೆಟ್ಟ ಆರ್ಥಿಕ ವ್ಯವಸ್ಥೆಯನ್ನು ರಾಜ್ಯದ ಜನರ ಮೇಲೆ ಹೇರಿದ್ದಾರೆ ಎಂದು ಕಿಡಿಕಾರಿದರು.

ಆಸ್ಪತ್ರೆಯಲ್ಲಿ ಚೀಟಿ ಪಡೆಯುವ ಶುಲ್ಕದಿಂದ ಹಿಡಿದು ಆರ್‌ಟಿಸಿವರೆಗೆ ದರ ದುಪ್ಪಟ್ಟು ಮಾಡಿದ್ದಾರೆ. ಬಡವರು ಕುಡಿಯುವ ಮದ್ಯದ ದರವನ್ನು ಶೇ.20 ರಷ್ಟು ಹೆಚ್ಚು ಮಾಡಿ ಹಣ ವಸೂಲಿ ಮಾಡುವ ಮೂಲಕ ಗ್ಯಾರಂಟಿ ಯೋಜನೆಗಳ ವೆಚ್ಚವನ್ನು ಸರಿದೂಗಿಸುವ ಕೆಲಸವನ್ನು ಮಾಡಿದ್ದಾರೆ. ಇದು ರಾಜ್ಯಸರ್ಕಾರದ ಸಾವಿರ ದಿನಗಳ ಆಡಳಿತದ ಅಭಿವೃದ್ಧಿನಾ ಎಂದು ಮಹೇಶ್ ಖಾರವಾಗಿ ಪ್ರಶ್ನಿಸಿದರು.

ಕಾನೂನು ಸುವ್ಯವಸ್ಥೆ ಹಳ್ಳಹಿಡಿದಿದೆ: ನಾಗರಿಕ ಸರ್ಕಾರ ಆಡಳಿತಕ್ಕೆ ಬಂದ ತಕ್ಷಣವೇ ಕಾನೂನು ಸುವ್ಯವಸ್ಥೆ ಕಾಪಾಡಬೇಕು. ಆದರೆ ರಾಜ್ಯ ಸರ್ಕಾರ ಹಗರಣ ಸರಮಾಲೆ ಇದ್ದು, ಮೈಸೂರು, ಬೆಂಗಳೂರಿನಲ್ಲಿ ಡ್ರಗ್ಸ್ ಮಾಫೀಯಾವನ್ನು ಮಹಾರಾಷ್ಟ್ರ ಪೊಲೀಸರು ಪತ್ತೆಹಚ್ಚಿದ್ದಾರೆ. ಕರ್ನಾಟಕ ಗೃಹ ಇಲಾಖೆ ವೀಕ್ ಆಗಿದ್ದು ಹಳ್ಳಹಿಡಿದಿದೆ. ಆಗಾಗಿ ಕೇಂದ್ರ ತನಿಖಾ ದಳ, ಪಕ್ಕದ ರಾಜ್ಯದ ಪೊಲೀಸರು ಕರ್ನಾಟಕದ ಅವ್ಯವಹಾರಗಳನ್ನು ಪತ್ತೆಹಚ್ಚಿದ್ದಾರೆ ಎಂದರು.

ಮೂಡಾ ಹಗರಣದಲ್ಲಿ ಮುಖ್ಯಮಂತ್ರಿ ಅವರೇ ಸಿಕ್ಕಿಕೊಂಡಿದ್ದರು. ವಿರೋಧ ಪಕ್ಷದವರು ಪ್ರತಿಭಟನೆ ಮಾಡಿದ ಮೇಲೆ 14 ನಿವೇಶನಗಳನ್ನು ವಾಪಸ್ ನೀಡಿದ್ದಾರೆ. ಮೂಡ ಹಗರಣ ಪ್ರಕರಣ 30.500 ಕೋಟಿ ಹಗರಣ ನಡೆದಿದೆ. ಅದು ಮುಖ್ಯಮಂತ್ರಿ ಸಿಕ್ಕಿಕೊಳ್ಳುತ್ತಾರೆ. ಎಸ್‌ಸಿಎಸ್‌ಟಿಯ 40 ಸಾವಿರ ಕೋಟಿ ರೂ ಗ್ಯಾರಂಟಿ ಯೋಜನೆಗಳಿಗೆ ಬಳಸಿ, ದಲಿತರಿಗೆ ಅನ್ಯಾಯ ಮಾಡಿದ್ದಾರೆ. ವಾಲ್ಮೀಕಿ ನಿಗಮದಲ್ಲಿ 178 ಕೋಟಿಯನ್ನು ಆಂಧ್ರಪ್ರದೇಶ, ತೆಲಂಗಾಣ ಚುನಾವಣೆಗೆ ವೆಚ್ಚ ಮಾಡಿದ್ದಾರೆ. ಭೋವಿ ಅಭಿವೃದ್ಧಿ ನಿಗಮದಲ್ಲಿ 11 ಕೋಟಿ ರೂ ಅವ್ಯವಹಾರ ಮಾಡಿದ್ದಾರೆ ದಲಿತರ ಮೇಲಿನ ದೌರ್ಜನ್ಯ ಜಾಸ್ತಿಯಾಗಿದ್ದು 2422 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಯುವನಿಧಿ ಕೊಟ್ಟಿಲ್ಲ, ನಿರುದ್ಯೋಗ ಸಮಸ್ಯೆ ನಿವಾರಿಸಿಲ್ಲ ಇದು ಸಾವಿರ ದಿನದ ಆಡಳಿತ ಅಭಿವೃದ್ಧಿನಾ ಎಂದು ಸಿಎಂ ವಿರುದ್ಧ ಹರಿಹಾಯ್ದರು.

ಮಾಜಿ ಶಾಸಕ ಎಸ್.ಬಾಲರಾಜು ಮಾತನಾಡಿ, ರಾಜ್ಯ ಕಾಂಗ್ರೆಸ್ ಸರ್ಕಾರ ಹೆಸರಿಗಷ್ಟೆ ಇದ್ದು ಸತ್ತಂತೆ ಇದೆ ಎಂದು ಟೀಕಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ, ಓಬಿಸಿ ಮೋರ್ಚಾದ ರಾಷ್ಟ್ರೀಯ ಕಾರ್ಯಕಾರಿಣಿ ಸದಸ್ಯ ನೂರೊಂದುಶೆಟ್ಟಿ, ಜಿ.ಪಂ.ಮಾಜಿ ಸದಸ್ಯ ಸಿ.ಎನ್. ಬಾಲರಾಜು, ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಪಿ.ವೃಷಬೇಂದ್ರಪ್ಪ, ಮೂಡ್ನಾಕೂಡು ಪ್ರಕಾಶ್, ಹೊನ್ನೂರು ಮಹಾದೇವಸ್ವಾಮಿ ಹಾಜರಿದ್ದರು.

ಫಲಾನುಭವಿಗಳಿಗೆ ಹೊಲಿಗೆ ಯಂತ್ರ ವಿತರಣೆ


ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ವತಿಯಿಂದ ಚಾಮರಾಜನಗರ ವಿಧಾನಸಭಾ ಕ್ಷೇತ್ರದ 18 ಮಂದಿ ಮಹಿಳಾ ಫಲಾನುಭವಿಗಳಿಗೆ ಹೊಲಿಗೆ ಯಂತ್ರ, ಪರಿಕರಗಳನ್ನು ಶಾಸಕ ಸಿ.ಪುಟ್ಟರಂಗಶೆಟ್ಟಿ ವಿತರಿಸಿದರು.

ಚಾಮರಾಜನಗರ: ಪ್ರವಾಸಿ ಮಂದಿರದ ಆವರಣದಲ್ಲಿ ಡಿ.ದೇವರಾಜ್ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ವತಿಯಿಂದ, ಚಾಮರಾಜನಗರ ವಿಧಾನಸಭಾ ಕ್ಷೇತ್ರದ 18 ಮಂದಿ ಮಹಿಳೆ ಫಲಾನುಭವಿಗಳಿಗೆ, ಹೊಲಿಗೆ ಯಂತ್ರ, ಪರಿಕರಗಳನ್ನು ಶಾಸಕ, ಸಿ.ಪುಟ್ಟರಂಗಶೆಟ್ಟಿ ವಿತರಿಸಿದರು.

ನಂತರ ಮಾತನಾಡಿದ ಅವರು ಸರ್ಕಾರದಿಂದ ಬರುವಂತಹ ಸೌಲಭ್ಯಗಳನ್ನ, ಸದ್ಬಳಕೆ ಮಾಡಿಕೊಳ್ಳಬೇಕು. ಸರ್ಕಾರ ಮಹಿಳೆಯರ ಸಬಲೀಕರಣಕ್ಕಾಗಿ ಸಾಕಷ್ಟು ಅನುಕೂಲಗಳನ್ನು ಮಾಡಿದೆ. ಸಣ್ಣ ಕೈಗಾರಿಕೆ, ಗುಡಿಕೈಗಾರಿಕೆ, ಪಶುಸಂಗೋಪನೆ, ಸೇರಿದಂತೆ ಹಲವಾರು ಯೋಜನೆಯನ್ನ ರೂಪಿಸಿದೆ. ಆರ್ಥಿಕವಾಗಿ, ಸಾಮಾಜಿಕವಾಗಿ ಮುಂದುವರೆಯಲು ಅನೇಕ ಸವಲತ್ತುಗಳನ್ನ ಕೊಡುತ್ತಿದೆ, ಇದನ್ನು ಸರಿಯಾದ ರೀತಿಯಲ್ಲಿ ಉಪಯೋಗ ಮಾಡಿಕೊಂಡು ಅಭಿವೃದ್ಧಿ ಹೊಂದಬೇಕು ಎಂದರು.

ಇದೇ ಸಂದರ್ಭದಲ್ಲಿ ಚಾಡಾ ಅಧ್ಯಕ್ಷ ಮಹ ಮದ್‌ಅಸ್ಗರ್‌ಮುನ್ನಾ, ಎಸ್.ಪಿ.ಕೆ. ಉಮೇಶ್, ನಗರಸಭಾ ನಾಮ ನಿರ್ದೇಕ ಸ್ವಾಮಿ, ಎಪಿಎಂಸಿ ಸದಸ್ಯ ಪ್ರದೀಪ್, ಚೂಡಾ ಸದಸ್ಯ ರಾಜೇಂದ್ರ, ನಗರಸಭಾ ಮಾಜಿ ಸದಸ್ಯ ರಾಜಪ್ಪ. ಗ್ರಾ.ಪಂ, ಮಾಜಿ ಅಧ್ಯಕ್ಷ ರೋಪೇಶ್, ಪುರುಸೋತ್ತಮ್, ಇಲಾಖೆ ಜಿಲ್ಲಾ ವ್ಯವಸ್ಥಾಪಕರಾದ ಚೈತ್ರ ರಾಜೇಂದ್ರ, ಸಿಬ್ಬಂದಿ ವರ್ಗ ಮತ್ತಿತರರು ಇದ್ದಾರೆ.

ಆಲೂರು ಹೊಮ್ಮದಿಂದ ಕಂದಹಳ್ಳಿ ಮಾರ್ಗದ ರಸ್ತೆ ಅಭಿವೃದ್ಧಿ



ಚಾಮರಾಜನಗರ: ಬಹಳ ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ಆಲೂರು ಹೊಮ್ಮದಿಂದ ಕಂದಹಳ್ಳಿ ಮಹದೇಶ್ವರ ದೇವಸ್ಥಾನದವರಗಿನ ಸಂಪರ್ಕ ಕಲ್ಪಿಸುವ ರಸ್ತೆ ಅಭಿವೃದ್ಧಿಗೆ ಮುಖ್ಯಮಂತ್ರಿಗಳ ಅನುದಾನದಡಿಯಲ್ಲಿ 5 ಕೋಟಿ ರೂ. ಮಂಜೂರಾಗಿದ್ದು, ಟೆಂಡರ್ ಪ್ರಕ್ರಿಯೆಯಲ್ಲಿದ್ದು, ಸದ್ಯದಲ್ಲಿಯೇ ರಸ್ತೆ ಅಭಿವೃದ್ಧಿ ಕಾಮಗಾರಿ ಪ್ರಾರಂಭವಾಗಲಿದೆ ಎಂದು ಕೊಳ್ಳೇಗಾಲ ಕ್ಷೇತ್ರದ ಶಾಸಕ ಎ.ಆರ್. ಕೃಷ್ಣಮೂರ್ತಿ ತಿಳಿಸಿದರು.

ತಾಲೂಕಿನ ಹೊಮ್ಮ ಗ್ರಾಮದಲ್ಲಿ ಪರಿಶಿಷ್ಟ ಜಾತಿಯ ಬೀದಿಯಲ್ಲಿ ಸಿಮೆಂಟ್ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದ ಅವರು ನಾನು ಕ್ಷೇತ್ರದ ಶಾಸಕನಾದ ಬಳಿಕ ಕ್ಷೇತ್ರದಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯಕ್ರಮಗಳು ನಡೆಯುತ್ತಿದೆ. ಕ್ಷೇತ್ರದ 7 ಗ್ರಾಮಗಳಲ್ಲಿ ಸಿಮೆಂಟ್ ರಸ್ತೆ ನಿರ್ಮಾಣ ಮಾಡಲು ಮಲೆನಾಡು ಅಭಿವೃದ್ಧಿ ಯೋಜನೆಯಡಿ ತಲಾ 5 ಲಕ್ಷ ರೂ. ಬಿಡುಗಡೆಯಾಗಿದೆ. ಆದರಂತೆ ಗ್ರಾಮದಲ್ಲಿ ರಸ್ತೆ ಅಭಿವೃದ್ಧಿಗೆ ಚಾಲನೆ ನೀಡಿದ್ದೇನೆ ಎಂದರು.

ಹೊಮ್ಮ ಗ್ರಾಮದ ಪರಿಮಿತಿಯಲ್ಲಿ 20 ಲಕ್ಷ ರೂ. ಅನುದಾನ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕ್ಷೇತ್ರದ ಅಭಿವೃದ್ಧಿಗೆ ವಿಶೇಷ ಅಸಕ್ತಿ ವಹಿಸಿ 25 ಕೋಟಿಗೂ ಹೆಚ್ಚು ಅನುದಾನವನ್ನು ನೀಡಿದ್ದಾರೆ. ಈ ಅನುದಾನದಲ್ಲಿ ಸಮುದಾಯಭವನ ಅಭಿವೃದ್ಧಿಗೆ ನೀಡಲಾಗಿತ್ತು. ಈ ಬಾರಿ ರಸ್ತೆಗಳ ಅಭಿವೃದ್ಧಿಗೆ ಬಳಕೆ ಮಾಡಿಕೊಳ್ಳಲಾಗಿದೆ. ಅವರಿಗೆ ಕ್ಷೇತ್ರದ ಜನತೆಯ ಪರವಾಗಿ ಹೃದಯ ಪೂರ್ವಕ ಕೃತಜ್ಞತೆಯನ್ನು ಸಲ್ಲಿಸುವುದಾಗಿ ಶಾಸಕ ಎ.ಆರ್.ಕೃಷ್ಣಮೂರ್ತಿ ತಿಳಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಗ್ಯಾರಂಟಿ ಯೋಜನೆಯ ಸಮಿತಿಯ ಅಧ್ಯಕ್ಷ ಎಚ್.ವಿ.ಚಂದ್ರು, ಮುಖಂಡರಾದ ಕಂದಹಳ್ಳ ನಂಜುಂಡಸ್ವಾಮಿ, ಎಪಿಎಂಸಿ ನಿರ್ದೇಶಕ ಹೊಮ್ಮ ರವಿಶಂಕರಮೂರ್ತಿ, ಗ್ರಾ.ಪಂ. ಮಾಜಿ ಅಧ್ಯಕ್ಷ ರಾಮು, ಜಿಲ್ಲಾ ಪ್ರಗತಿ ಪರಿಶೀಲನಾ ಸಮಿತಿಯ ಸದಸ್ಯ ಬೂದಂಬಳ್ಳಿ ಶಂಕರ್, ಗೌಡಿಕೆ ಮಹದೇವಸ್ವಾಮಿ, ಅಶ್ವಥ್, ರಾಜೇಶ್, ವೆಂಕಟೇಶ್, ಮಯೂರ, ಕುಮಾರ್ ಇತರರು ಹಾಜರಿದ್ದರು.

ಕೊಳ್ಳೇಗಾಲ ಕ್ಷೇತ್ರದಲ್ಲಿ ಟೆಕ್ಸ್‌ಟೈಲ್ಸ್ ಪಾರ್ಕ್ ನಿರ್ಮಾಣ ನನ್ನ ಗುರಿ




ಕೊಳ್ಳೇಗಾಲ, ಫೆ.14– ತಾಲೂಕಿನ ಕೆಸ್ತೂರು, ಕಟ್ನವಾಡಿ, ಕುಣಗಳ್ಳಿ, ಮೋಳೆ, ಚಾಟೀಪುರ, ಮಸಣಾಪುರ, ಗಂಗವಾಡಿ ಸೇರಿದಂತೆ ಹಲವೆಡೆ ಜರುಗಿದ ವಿವಿಧ ಅಭಿವೃದ್ಧಿ ಕಾಮಗಾರಿಗೆ ಶಾಸಕ ಎ.ಆರ್. ಕೃಷ್ಣಮೂರ್ತಿ ಅವರು ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಕೊಳ್ಳೇಗಾಲ ತಾಲೂಕಿನ ಟಗರಪುರ ಪಂಚಾಯಿತಿಯ ಸಿಲ್ಕಲ್‌ಪುರ ಗ್ರಾಮದಲ್ಲಿ ಈಗಾಗಲೇ 15 ಎಕರೆ ಸರ್ಕಾರಿ ಜಾಗ ಗುರುತು ಮಾಡಲಾಗಿದ್ದು, ಅಲ್ಲೊಂದು ಟೆಕ್ಸ್‌ಟೈಲ್ ಪಾರ್ಕ್ ನಿರ್ಮಾಣ ಮಾಡಬೇಕು ಎಂಬ ಕನಸ್ಸು ನನಗಿದೆ. ಅಲ್ಲಿ ಪಾರ್ಕ್ ನಿರ್ಮಾಣವಾದರೆ ನಿರುದ್ಯೋಗಿಗಳಿಗೆ ಅನುಕೂಲವಾಗಲಿದೆ. ಅದೇ ರೀತಿ ಸಂತೇಮರಳ್ಳಿ ಭಾಗದಲ್ಲೂ ಸಹಾ ಟೆಕ್ಸ್‌ಟೈಲ್ಸ್ ಪಾರ್ಕ್ ನಿರ್ಮಾಣ ಚಿಂತನೆ ನನಗಿದೆ. ಇದರ ಸಾಕಾರಗೊಳಿಸುವಲ್ಲಿ ನನ್ನ ನಡೆ ಸಾಗಲಿದೆ, ಇದಕ್ಕೆ ಎಲ್ಲರ ಸಹಕಾರ ಅಗತ್ಯ ಎಂದರು.

ಮುಖ್ಯಮಂತ್ರಿಗಳು ಸಮುದಾಯ ಭವನಗಳ ಅಭಿವೃದ್ಧಿಗೆ 25ಕೋಟಿ, ರಸ್ತೆಗಳ ಅಭಿವೃದ್ಧಿಗೆ 50ಕೋಟಿ ನೀಡಿದ್ದು ಅದನ್ನ ಸಮರ್ಪಕ ರೀತಿ ಬಳಸಿಕೊಳ್ಳಲಾಗಿದೆ. ಇಂದು ಕಾಡಾ ನಿಗಮದಿಂದಲೂ ಸಹಾ ಚಾಟೀಪುರ, ಗಂಗವಾಡಿ, ಹೊಂಗನೂರು, ರಸ್ತೆ ಕಬಿನಿ ಬಲದಂಡೆ ನಾಲೆ, ಕಜ್ಜಿಹುಡಂಡಿ ನಾಲೆ ಪಕ್ಕ, ಕೆಸ್ತೂರು ಗ್ರಾಮದ ಕಟ್ನವಾಡಿ ಕೆರೆಯ ದಂಡಿನ ದೇವಸ್ಥಾನ ಪಕ್ಕದಲ್ಲಿ ರಸ್ತೆ ಸೇರಿದತೆ ಹಲವು ಅಭಿವೃದ್ಧಿಗೆ ಇಂದು ಚಾಲನೆ ನೀಡಲಾಗಿದೆ ಎಂದರು.

ಡಾ॥ ಮಜ್ಜಿಗೆಪುರ ಕೆ.ಶಿವರಾಮು
ಮೊ. 9342125060

ಶ್ರೀಕ್ಷೇತ್ರ ಬೇಬಿಬೆಟ್ಟ





ಶ್ರೀ ಸಿದ್ದಲಿಂಗೇಶ್ವರ ಮಹಾದ್ವಾರ

ಮಂಡ್ಯ ಜಿಲ್ಲೆ ಶಾಸನ, ದೇವಾಲಯ, ಐತಿಹಾಸಿಕ, ಕೋಟೆಕೊತ್ತಲು, ಜಾನಪದಕಲೆ, ಸಾಹಿತ್ಯ, ಧರ್ಮಗಳ ಬೀಡು. ಈ ಜಿಲ್ಲೆಯ ವ್ಯಾಪ್ತಿಗೆ ಬರುವ ಮಹಾಭಾರತದ ಕಥೆಯಲ್ಲಿ ಪಾಂಡವರು ಸ್ವಲ್ಪ ದಿನಗಳವರೆಗೆ ಈ ಭಾಗದಲ್ಲಿ ಇದ್ದರೆಂಬ ಐತಿಹ್ಯದಿಂದ ಕೂಡಿರುವ ಪಾಂಡವಪುರ ತಾಲ್ಲೂಕಿಗೆ ಸೇರಿದ ಆಧ್ಯಾತ್ಮಿಕ, ಐತಿಹಾಸಿಕ, ಧಾರ್ಮಿಕವಾದ ಶ್ರೀ ಕ್ಷೇತ್ರ ಬೇಬಿಬೆಟ್ಟವು ತನ್ನದೇ ಆದ ಇತಿಹಾಸ, ಭವ್ಯವಾದ ಕತೆ, ಶಿವಾಲಯ, ದೇವಾಲಯ, ಗವಿಗಳೂ, ಗುಹೆಗಳನ್ನು ಒಳಗೊಂಡಿದ್ದು ಸುಂದರ ಪ್ರಕೃತಿ, ಬಂಡೆಗಲ್ಲುಗಳು, ಕಲ್ಲಿನ ಮಂಟಪಗಳು, ಪಕ್ಷಿ ಸಂಕುಲ, ಎತ್ತರವಾದ ಬೆಟ್ಟ ಗುಡ್ಡಗಳ ಜೊತೆಗೆ ಶ್ರೀ ರಾಮಯೋಗೀಶ್ವರ ಮಠದಿಂದ ಕೂಡಿದೆ.

ಶಿವರಾತ್ರಿಯ ಪ್ರಯುಕ್ತ 2026ನೇ ಇಸವಿಯ ಫೆಬ್ರವರಿ 15 ರಿಂದ 23 ರವರೆಗೆ ಒಂದು ವಾರಗಳತನಕ ನಡೆಯುವ ಪಾಂಡವಪುರ ತಾಲ್ಲೂಕಿನ ಬೇಬಿ ಬೆಟ್ಟದ ದನಗಳ ಜಾತ್ರೆಗೆ ಶ್ರೀ ರಾಮ ಯೋಗೇಶ್ವರ ಮಠದ ಆವರಣದಲ್ಲಿ ಸಕಲ ಸಿದ್ಧತೆಗಳು ಭರದಿಂದ ಸಾಗುತ್ತಿವೆ. ಈ ಸುಸಂದರ್ಭದಲ್ಲಿ ಬೇಬಿ ಬೆಟ್ಟದ ಮಹತ್ವ ಕುರಿತಾದ ಲೇಖನ ಇದಾಗಿದೆ.

ಶ್ರೀ ಕ್ಷೇತ್ರ ಬೇಬಿ ಬೆಟ್ಟವ ನೆನೆದೊಡೆ ಮೈ ಮನವ ರೋಮಾಂಚನಗೊಳಿಸುವ ಅದೆಷ್ಟೋ ಅಗೋಚರವಾದ ವಿಸ್ಮಯಗಳು, ಪವಾಡಗಳು ಸದ್ದಿಲ್ಲದೆ ಸುದ್ದಿ ಮಾಡುತ್ತವೆ. ಇನ್ನೊಂದೆಡೆ ಆಧ್ಯಾತ್ಮಿಕ, ಐತಿಹಾಸಿಕ, ಧಾರ್ಮಿಕ ಮೈನವಿರೇಳಿಸುವಂತಹ ವಿಚಾರ ಧಾರೆಗಳ ಸಂಕಲನವೇ ಈ ತಪೋಭೂಮಿ, ಪುಣ್ಯಭೂಮಿ, ಕರ್ಮಭೂಮಿಯಲ್ಲಿ ಅಡಗಿದೆ.

ಸಾವಿರ ಮೈಲಿ ದೂರ ಸಾಗಿಯು ದೋಣಿ ತಿಳಿಯುವುದೇ ನೀರಿನಾಳವ..ಕೊಡವೊಂದರಲ್ಲಿ ಕಡಲ ನೀರು ತುಂಬಲು ಸಾಧ್ಯವೇ! ಹಾಗೆಯೇ ಶ್ರೀ ಕ್ಷೇತ್ರ ಬೇಬಿಬೆಟ್ಟ ಮತ್ತು ಶ್ರೀರಾಮಯೋಗೇಶ್ವರ ಮಠದ ವೈಶಿಷ್ಟ್ಯತೆಗಳ ಆಚಾರ– ವಿಚಾರ ಸಾಗರದಂತೆ ಬಹಳ ವಿಸ್ತಾರವಾಗಿವೆ. ಮೊಗೆದಷ್ಟು ಬೊಗಸೆ ತುಂಬುತ್ತಾ ಹೋಗುತ್ತದೆ.

ಮಂಡ್ಯ ಜಿಲ್ಲೆ ಶಾಸನ, ದೇವಾಲಯ, ಐತಿಹಾಸಿಕ, ಕೋಟೆಕೊತ್ತಲು, ಜಾನಪದಕಲೆ, ಸಾಹಿತ್ಯ, ಧರ್ಮಗಳ ಬೀಡು. ಈ ಜಿಲ್ಲೆಯ ವ್ಯಾಪ್ತಿಗೆ ಬರುವ ಮಹಾಭಾರತದ ಕಥೆಯಲ್ಲಿ ಪಾಂಡವರು ಸ್ವಲ್ಪ ದಿನಗಳವರೆಗೆ ಈ ಭಾಗದಲ್ಲಿ ಇದ್ದರೆಂಬ ಐತಿಹ್ಯದಿಂದ ಕೂಡಿರುವ ಪಾಂಡವಪುರ ತಾಲ್ಲೂಕಿಗೆ ಸೇರಿದ ಆಧ್ಯಾತ್ಮಿಕ, ಐತಿಹಾಸಿಕ, ಧಾರ್ಮಿಕವಾದ ಶ್ರೀ ಕ್ಷೇತ್ರ ಬೇಬಿಬೆಟ್ಟವು ತನ್ನದೇ ಆದ ಇತಿಹಾಸ, ಭವ್ಯವಾದ ಕತೆ, ಶಿವಾಲಯ, ದೇವಾಲಯ, ಗವಿಗಳು, ಗುಹೆಗಳನ್ನು ಒಳಗೊಂಡಿದ್ದು ಸುಂದರ ಪ್ರಕೃತಿ, ಬಂಡೆಗಲ್ಲುಗಳು, ಕಲ್ಲಿನ ಮಂಟಪಗಳು, ಪಕ್ಷಿ ಸಂಕುಲ, ಎತ್ತರವಾದ ಬೆಟ್ಟ ಗುಡ್ಡಗಳ ಜೊತೆಗೆ ಶ್ರೀ ರಾಮಯೋಗೀಶ್ವರ ಮಠದಿಂದ ಕೂಡಿದೆ.

ಒಂದಾನೊಂದು ಕಾಲದಲ್ಲಿ ಇದು ದಟ್ಟಡವಿಯಿಂದ ಕೂಡಿದ್ದ ನಿರ್ಜನ ಪ್ರದೇಶವಾಗಿತ್ತು ಆದಿಶಕ್ತಿ ಚಾಮುಂಡಿಯ ಆಗಮನ. ಆ ಬಳಿಕ ಸಾಧು–ಸಂತರು–ಸಿದ್ಧರು– ಶಿವಶರಣರು ಇಲ್ಲಿ ಬಂದು ನೆಲೆಸಿದ್ದರಿಂದ ಶ್ರೀಕ್ಷೇತ್ರವಾಯಿತು. ಶ್ರೀ ಕ್ಷೇತ್ರ ಬೇಬಿಬೆಟ್ಟ ಪುರಾತನವಾದುದು. ಅದಕ್ಕೆ ತನ್ನದೇ ಆದ ಇತಿಹಾಸವಿದ್ದು, ಈ ಬೆಟ್ಟಕ್ಕೆ ಮೂರು ಹೆಸರುಗಳಿ ರುವುದು ಐತಿಹ್ಯಗಳಿಂದ ತಿಳಿದು ಬರುತ್ತದೆ.

ಡಿಂಬಕಾಸುರ ಬೆಟ್ಟ

ದಟ್ಟಡವಿಯಿಂದ ಕೂಡಿದ ಕಾಲದಲ್ಲಿ ಈ ಬೆಟ್ಟದಲ್ಲಿ ಅನೇಕ ಬಗೆ ಬಗೆಯ ಕ್ರೂರ ಪ್ರಾಣಿಗಳಿದ್ದವು. ಜೊತೆಗೆ ದಿಂಬಕಾಸುರನೆಂಬ ರಾಕ್ಷಸ ವಾಸವಾಗಿದ್ದ ನರಭಕ್ಷಕನಾಗಿದ್ದನು. ಯಾರಾದರು ಮನುಷ್ಯರು ಕಾಡಿಗೆ ಕಟ್ಟಿಗೆ ತೆಗೆದುಕೊಂಡು ಹೋಗಲು ಬರುತ್ತಿದ್ದವರನ್ನು ಹೊಂಚುಹಾಕಿ ಕಾಯುತ್ತಿದ್ದ. ಕಣ್ಣಿಗೆ ಕಂಡೊಡನೆ ಮಗುವಿನ ರೂಪ ತಾಳಿ ಅಳುತ್ತ ನಿಲ್ಲುತ್ತಿದ್ದ, ಮಗು ಅಳುತ್ತಿದೆಯೆಂದು ಎತ್ತಿಕೊಳ್ಳಲು ಬಂದಾಗ ತನ್ನ ನಿಜರೂಪ ತಾಳಿ ಅವರನ್ನು ಮೋಸದಿಂದ ತಿಂದುಹಾಕುತ್ತಿದ್ದ. ಹೀಗೆ ಕಾಡಿಗೆ ಹೋದವರು ಊರಿಗೆ ಬರುತ್ತಿರಲಿಲ್ಲ. ತದನಂತರದಲ್ಲಿ ಅಕ್ಕಪಕ್ಕದ ಊರುಗಳಿಗೆ ಇಲ್ಲೊಬ್ಬ ರಾಕ್ಷಸನಿದ್ದಾನೆಂಬುದು ಗೊತ್ತಾಯಿತು. ಆತನ ಸಂಹಾರಕ್ಕಾಗಿ ಮೈಸೂರಿನ ಚಾಮುಂಡಿ ದೇವತೆಯ ಹತ್ತಿರ ಬಂದು ಬೇಡಿಕೊಳ್ಳುತ್ತಾರೆ. ಭಕ್ತರ ಕರೆಯ ಮೇರೆಗೆ ಚಾಮುಂಡಿ ಬಂದು ಈ ರಾಕ್ಷಸನನ್ನು ಸಂಹರಿಸಿ ಭಕ್ತರ ಇಚ್ಛೆಯಂತೆ ಬೆಟ್ಟದ ಸಮೀಪ ಡಿಂಕಾದಲ್ಲಿ ಡಿಂಕದಮ್ಮಳಾಗಿ, ಆದಿಶಕ್ತಿಯಾಗಿ ನೆಲಸಿದ್ದಾಳೆ (ಇಂದಿಗೂ ಡಿಂಕದ ಈ ಆದಿಶಕ್ತಿ ದೇವತೆಯ ದರ್ಶನಕ್ಕಾಗಿ ವಾರದ ಮಂಗಳವಾರ, ಶುಕ್ರವಾರ, ಭಾನುವಾರ ನಾಡಿನ ಎಲ್ಲೆಡೆಯಿಂದ ಸಾವಿರಾರು ಭಕ್ತಾದಿಗಳು ಬಂದು ಪೂಜೆ ಸಲ್ಲಿಸುತ್ತಿದ್ದಾರೆ). ಆದ್ದರಿಂದ ಈ ಬೆಟ್ಟಕ್ಕೆ ಡಿಂಬಕಾಸುರ ಬೆಟ್ಟವೆಂತಲೂ, ಆದಿಶಕ್ತಿ ನೆಲೆಸಿದ ಸ್ಥಳ ಡಿಂಕಾಯಿತು.

ಸಿದ್ಧರ(ಸಿದ್ದಗಿರಿ) ಬೆಟ್ಟ

ಯಾವಾಗ! ಈ ಬೆಟ್ಟಕ್ಕೆ ಚಾಮುಂಡಿಯ ಪಾದಸ್ಪರ್ಶವಾಗಿ, ಶ್ರೀ ಕ್ಷೇತ್ರ ಪಾವನವಾಯಿತೋ ಆಮೇಲೆ ಅನೇಕಾನೇಕ ಸಾಧುಸಂತರು, ದೈವಭಕ್ತರು, ತಪಸ್ವಿಗಳು, ಶಿವಶರಣರು ಈ ಸ್ಥಳಕ್ಕೆ ಬಂದು ಬೆಟ್ಟದ ಮೇಲಿದ್ದ ಗವಿಗಳೊಳಗೆ ತಪಸ್ಸಿಗೆ ಕುಳಿತು ಶಿವಲಿಂಗಗಳನ್ನು ಪೂಜಿಸುತ್ತಾರೆ ಮತ್ತು ಅಲ್ಲೆ ಅನೇಕ ಮಂದಿ ಐಕ್ಯರಾಗುತ್ತಾರೆ. ಅವರು ಪೂಜಿಸುತ್ತಿದ್ದ ಶಿವಲಿಂಗಗಳೂ, ಗವಿಗಳೂ, ಐಕ್ಯರಾದ ಸಿದ್ಧರ ಸಮಾಧಿಗಳನ್ನು ನಾವು ಇಂದಿಗೂ ಕಾಣಬಹುದಾಗಿದೆ. ಆದ್ದರಿಂದ ಅನೇಕ ತಪಸ್ವಿಗಳು ಈ ಬೆಟ್ಟದಲ್ಲಿ ತಂಗಿದ್ದರಿಂದ ಇದು ಸಿದ್ಧರ ಅಥವಾ ಸಿದ್ದಗಿರಿ ಬೆಟ್ಟವಾಯಿತು.

ಬೇಬಿಬೆಟ್ಟ

ಬೆಟ್ಟದ ಆಸುಪಾಸಿನಲ್ಲಿ ಹಿಂದೆ ಅನೇಕ ಪಾಳೇಗಾರರಿದ್ದರು. ಅವರು ಮುಸ್ಲಿಂರನ್ನು ಹೆದರಿಸುವುದು ತೊಂದರೆ ಕೊಡುವುದು ಮಾಡುತ್ತಿದ್ದರು. ಮುಸ್ಲಿಂ ಮಹಿಳೆಯರ ಗಂಡದಿರು ಪ್ರತಿದಿನ ತಮ್ಮ ದೈನಂದಿನ ಕೆಲಸ ಕಾರ್ಯಗಳ ನಿಮಿತ್ತ ಹೊರಗಡೆ ಹೋಗುತ್ತಿದ್ದರು. ಅವರ ಪತ್ನಿಯರು ಮನೆಯಲ್ಲೇ ಇರುತ್ತಿದ್ದರು. ಇದನ್ನು ಗಮನಿಸಿದ ಪಾಳೇಗಾರರು ಬಂದು ಅವರಿಗೆ ಕಿರುಕುಳ ಕೊಡುತ್ತಿದ್ದರು. ಈ ಕಾಟವನ್ನು ತಪ್ಪಿಸಿಕೊಳ್ಳಲು ಪಕ್ಕದ ಈ ಬೆಟ್ಟದ ದೊಡ್ಡ ದೊಡ್ಡ ಬಂಡೆಗಲ್ಲುಗಳಲ್ಲಿ ಸಂಜೆ ತನಕ ಅವಿತು ಕೊಂಡು ಆಶ್ರಯ ಪಡೆದುಕೊಳ್ಳುತ್ತಿದ್ದರು. ಈ ವಿಷಯ ತಿಳಿದ ಪಾಳೇಗಾರರು ಇಲ್ಲೂ ಬಂದು ಬೂಬಿಂಯರು (ಮುಸ್ಲಿಂ ಮಹಿಳೆಯರನ್ನೂ ಈ ರೀತಿ ಕರೆಯುತ್ತಿದ್ದರು) ಅಲ್ಲೆ ಅವಿತು ಕೊಂಡಿದ್ದಾರೆಂದು ಬೆಟ್ಟವನ್ನೆಲ್ಲ ಹುಡುಕಾಡುತ್ತಿದ್ದರು. ಬೂಬಿಯರಿಗೆ ಆಶ್ರಯವಾಗಿದ್ದ ಈ ಬೆಟ್ಟವನ್ನು ಬೇಬಿಂಯರು ಇದ್ದ ಬೆಟ್ಟವೆಂತಲೂ ಬಾಯಿಂದ ಬಾಯಿಗೆ ಹಾಯ್ದು ಕೊನೆಗೆ ಬೇಬಿಯಿಂದ ಬೇಬಿಬೆಟ್ಟ ವಾಯಿತು. ಈ ಹೆಸರೇ ಇಂದಿಗೂ ಗಟ್ಟಿಯಾಗಿ ಉಳಿದುಕೊಂಡಿದೆ.

ಈ ಬೆಟ್ಟಕ್ಕೆ ದೂರದಿಂದ ಅನೇಕ ಶಿವಶರಣರು ಆಗಮಿಸುತ್ತಾರೆ. ಅವರಲ್ಲಿ ಶ್ರೀ ರಾಮಯೋಗಿಶ್ವರರು ಪ್ರಮುಖರು. ಇವರು ಮೈಸೂರು ತಾಲ್ಲೂಕಿನ, ಜಯಪುರ ಹೋಬಳಿಯ ಗುರೂರು ಗ್ರಾಮದವರು. ರಾಮಪ್ಪ ಇವರ ಮೂಲ ಹೆಸರು. ಇವರು ಅಪ್ಪಟ ದೈವಭಕ್ತರು, ಪವಾಡ ಪುರುಷರಾಗಿದ್ದವರು. ರಾಮಪ್ಪ ಮೈಸೂರಿನ ಅರಮನೆಯಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ ಬಳಿ ಅವರ ಪೂಜಾ ಮಂದಿರದಲ್ಲಿ ಪೂಜೆಗೆ ಅಣಿಮಾಡುವ ಕೆಲಸಕ್ಕಿದ್ದವರು. ಸ್ವಲ್ಪ ದಿನಗಳ ಬಳಿಕ ಒಡೆಯರಿಗೆ ಈತನೊಬ್ಬ ಅಪ್ಪಟ ಶಿವಭಕ್ತ, ಪವಾಡ ಪುರುಷನೆಂದು ತಿಳಿಯುತ್ತದೆ. ಒಂದು ದಿನ ರಾಮಪ್ಪನನ್ನು ಕುರಿತು, ರಾಮಪ್ಪ, ತಾವು ಅಸಾಮಾನ್ಯರು, ದೈವಸ್ವರೂಪಿಗಳು, ತಾವು ಲೋಕ ಸಂಚಾರ ಕೈಗೊಳ್ಳಿ, ತಮಗಿಷ್ಟವಾದ ಸ್ಥಳವನ್ನು ಆರಿಸಿಕೊಳ್ಳಿ, ಅಲ್ಲಿ ಒಂದು ಗುಡಿಯನ್ನು ಕಟ್ಟಿಸಿ ಕೊಡುತ್ತೇನೆ ಎಂದು ಹೇಳಿದರು.

ಒಡೆಯರ ನಿರ್ದೇಶನದಂತೆ ತನ್ನ ತಂಗಿ ಕಲ್ಯಾಣಿಯನ್ನು ಕರೆದುಕೊಂಡು ಅನೇಕ ಊರುಗಳ ಮಾರ್ಗವಾಗಿ ಹೇಮಾವತಿ ನದಿ ದಾಟಿ ಈ ಶ್ರೀ ಕ್ಷೇತ್ರಕ್ಕೆ ಬರುತ್ತಾರೆ. ಅನೇಕ ಪವಾಡಗಳ ಮೂಲಕ ಅಪಾರ ಭಕ್ತಸಮೂಹವನ್ನು ಆಕರ್ಷಿಸುತ್ತಾರೆ. ತಮ್ಮ ಬಳಿ ಕುಡಿಯಲು ಬಳಸುತ್ತಿದ್ದ ಒಣಗಿದ ಸೋರೆಕಾಯಿ ಬುರುಡೆಯಿಂದ ಅನೇಕ ಭಕ್ತಾದಿಗಳನ್ನು ಪುನೀತರನ್ನಾಗಿಸುತ್ತಾರೆ. ಶ್ರೀ ಕ್ಷೇತ್ರದ ಹುಲಿಕಲ್ಲಿನ (ದೊಡ್ಡದಾದ ಬಂಡೆಗಲ್ಲು ಹುಲಿಮುಖ ಹೋಲುವಂತಹದು ಇಂದಿಗೂ ಇದೆ) ಮೇಲೆ ಕುಳಿತು ತಪಸ್ಸು ಮಾಡಿ ಭಕ್ತರ ಆಸೆಯಂತೆ ಶ್ರೀ ಮಹದೇಶ್ವರ ಕಲ್ಲಿನಿಂದ ಮೂಡುವಂತೆ ಮಾಡುತ್ತಾರೆ. ನಂತರ ನಾಲ್ವಡಿ ಕೃಷ್ಣರಾಜ ಒಡೆಯರು ಬಂದು ರಾಮಪ್ಪನ ಆಸೆಯಂತೆ ಮೂಡಿದ ಮಲ್ಲೈ ಮಹದೇಶ್ವರನಿಗೆ ಗುಡಿಯೊಂದನ್ನು ಕಟ್ಟಿಸುತ್ತಾರೆ. ಅದೇ ಗುಡಿಯ ಬಳಿ ಇಂದಿಗೂ ಪ್ರತಿ ಶಿವರಾತ್ರಿಯ ಸಂದರ್ಭದಲ್ಲಿ ಜಾನುವಾರಗಳ ಜಾತ್ರೆ ನಡೆಯುವುದಕ್ಕೆ ಅನುವುಮಾಡಿಕೊಡುತ್ತಾರೆ. ಶ್ರೀ ಕ್ಷೇತ್ರಕ್ಕೆ ಆಗಾಗ ಕುದುರೆಯನ್ನೇರಿ ಬರುತ್ತಿರುತ್ತಾರೆ. ಸುಮಾರು 840 ಎಕರೆಯಷ್ಟು ಪ್ರದೇಶವನ್ನು ಶ್ರೀ ಕ್ಷೇತ್ರದ ಅಭಿವೃದ್ಧಿಗೆ ಬಿಡುತ್ತಾರೆ. ಅದೆಲ್ಲ ಇಂದಿಗೂ ಅಮೃತ್ ಮಹಲ್ ಕಾವಲ್ ಎಂಬ ಹೆಸರಿನಲ್ಲಿದೆ.

ಅಣ್ಣ ರಾಮಪ್ಪನ ಜೊತೆಯಲ್ಲಿ ಬಂದಿದ್ದ ಶಿವಶರಣೆ ಕಲ್ಯಾಣಿ ತಾನು ಇರುವಷ್ಟು ದಿನ ಅಣ್ಣನ ಭಕ್ತಿಮಾರ್ಗದಲ್ಲಿ ನಡೆಯುತ್ತಾಳೆ. ಇದ್ದಕ್ಕಿದ್ದಂತೆ ಆರೋಗ್ಯ ಕ್ಷೀಣಿಸಿ ಮರಣವನ್ನಪ್ಪುತ್ತಾಳೆ. ತನ್ನ ತಂಗಿಯ ನೆನಪಿಗಾಗಿ ರಾಮಪ್ಪ ಸಮಾಧಿಯಾದ ಸ್ಥಳದಲ್ಲಿ ಕಲ್ಲಿನ ಮಂಟಪವನ್ನು ಕಟ್ಟಿಸುತ್ತಾನೆ. (ಅದನ್ನು ಇಂದಿಗೂ ನೋಡಬಹುದು)

ಶಿವಶರಣರಾದ ಶ್ರೀ ರಾಮಪ್ಪನವರು ಮುಂದೆ ಬೇಬಿ ಬೆಟ್ಟದಿಂದ ಕೊಳ್ಳೆಗಾಲ ತಾಲ್ಲೂಕಿನ ಬೆಳಕವಾಡಿಯ ಶಂಭುಲಿಂಗಬೆಟ್ಟಕ್ಕೆ ಹೋಗಿ ನಲವತ್ತೊಂದು ದಿನಗಳ ದೀರ್ಘ ಕಾಲ ತಪಸ್ಸಿಗೆ ಕುಳಿತು ಅಲ್ಲೇ ಐಕ್ಯರಾಗುತ್ತಾರೆ. ಬೇಬಿ ಬೆಟ್ಟದ ಶ್ರೀ ಕ್ಷೇತ್ರದಲ್ಲಿ ನಂತರ ಬಂದ ಸಿದ್ಧಲಿಂಗ ಸ್ವಾಮಿಗಳೂ ರಾಮಪ್ಪನ ಹೆಸರಿನಲ್ಲಿ ಶ್ರೀ ರಾಮ ಯೋಗಿಶ್ವರ ಮಠವನ್ನು ಸ್ಥಾಪಿಸುತ್ತಾರೆ.

ಮೂಲತಃ ಮಹಾರಾಷ್ಟ್ರದ ಸಾಂಗ್ಲಿ ಗ್ರಾಮದವರಾದ ಮರಿದೇವರು ಈ ಮಠಕ್ಕೆ ಬರುತ್ತಾರೆ. ಅಮವಾಸ್ಯೆ, ಹುಣ್ಣಿಮೆಗಳಲ್ಲಿ ವಿಶೇಷ ಪೂಜೆ ಮಾಡಿ ಬರುವ ಭಕ್ತಾದಿಗಳಿಗೆ ಸಂಸಾರವೆಂಬುದೊಂದು ಗಾಳಿಯಲ್ಲಿರಿಸಿದ ದೀಪದಂತೆ, ಸಿರಿಯು ಸಂತೆಯಲ್ಲಿ ಸೇರಿದ ಜನಸಂದಣಿಯಂತೆ ಇವೆರಡು ಯಾವಾಗ ಇಲ್ಲವಾಗುತ್ತವೆಂಬುದನ್ನು ಹೇಳಲು ಬರುವುದಿಲ್ಲ. ಆದ್ದುದರಿಂದ ಅಲ್ಪಸ್ವಲ್ಪ ಸುಖ ಕೊಡುವ ಇಂಥವುಗಳನ್ನು ನಂಬುವ ಹವ್ಯಾಸಕ್ಕೆ ಹೋಗದೇ ಕೂಡಲ ಸಂಗಮದೇವನನ್ನು ಪೂಜಿಸಿ ಕೃತಾರ್ಥನಾಗಬೇಕು. ಆಗ ನಮಗೆ ನಿತ್ಯ ತೃಪ್ತಿ ದೊರೆಯುತ್ತದೆ ಎಂದು ಹೇಳಿ ಭಕ್ತಜನರನ್ನು ಎಚ್ಚರಿಸುತ್ತಾರೆ. ಆ ಹೊತ್ತಿಗೆ ಮರಿದೇವರಿಗೆ ತೊಂಭತ್ತೈದು ವರ್ಷಗಳು ತುಂಬುತ್ತದೆ. ಮಠದ ಏಳಿಗೆಗಾಗಿ ಶ್ರಮಿಸುವುದಕ್ಕಾಗಿ ತಮಗೊಬ್ಬ ಉತ್ತರಾಧಿಕಾರಿಯ ಅವಶ್ಯಕತೆಯಿರುವುದನ್ನು ಅರಿತು. ಕೆಲವು ಮಠಾಧೀಶ್ವರರ ಸಮ್ಮುಖದಲ್ಲಿ ತುಮಕೂರಿನ ಶ್ರೀ ಸಿದ್ಧಗಂಗಾ ಮಹಾ ಸಂಸ್ಥಾನ ಮಠದ ಶ್ರೀಶ್ರೀಶ್ರೀ ಡಾ. ಶಿವಕುಮಾರ ಸ್ವಾಮಿಗಳ ಬಳಿಯಿದ್ದ ಶ್ರೀ ಸದಾಶಿವಸ್ವಾಮಿ ಅವರನ್ನು ಮಠಕ್ಕೆ ಕರೆತರುತ್ತಾರೆ. ನಂತರದಲ್ಲಿ ಶತಾಯುಷಿಯಾದ ಮರಿದೇವರ ಬೆಟ್ಟಕ್ಕೆ ಸಮೀಪದ ಬೇಬಿ ಗ್ರಾಮಕ್ಕೆ ಬಂದು ದುರ್ದಂಡೇಶ್ವರ ಶಿವಾನುಭವ ಮಂಟಪವನ್ನು ನಿರ್ಮಿಸಿಕೊಂಡು ಅಲ್ಲೇ ವಾಸ್ತವ್ಯ ಹೂಡುತ್ತಾರೆ. 115 ವಸಂತಗಳ ಕಂಡ ಮರಿದೇವರು 13.08.2008 ರಂದು ಲಿಂಗೈಕ್ಯರಾದರು.

ಮಠದ ಆಶ್ರಯಲ್ಲಿ ಪ್ರತಿವರ್ಷ ಶಿವರಾತ್ರಿಯ ಸಂದರ್ಭದಲ್ಲಿ ಭಾರಿ ದನಗಳ ಜಾತ್ರೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ಮತ್ತು ಸಾಮೂಹಿಕ ಸರಳ ವಿವಾಹ ಜರುಗುತಿವೆ.

ಶ್ರೀಕ್ಷೇತ್ರ ಬೇಬಿಬೆಟ್ಟದಲ್ಲಿ ಶ್ರೀ ಸದಾಶಿವ ಸ್ವಾಮೀಜಿಯವರು ಅಪಾರ ಭಕ್ತ ಸಮೂಹವನ್ನು ಸಂಪಾದಿಸಿ ಶ್ರೀ ಮಠದ ಕೈಂಕರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದರು. ಅವರು ದಿನಾಂಕ 04.07.2018 ರಂದು ಲಿಂಗೈಕ್ಯರಾದರು. ಅವರ ನೆನಪಿಗಾಗಿ ಭವ್ಯವಾದ ಗದ್ದುಗೆಯನ್ನು ಆಗಸ್ಟ್ 10, 2023 ರಂದು ಸಿದ್ದಗಂಗಾ, ಸುತ್ತೂರು ಮಠಾಧೀಶರು ಮತ್ತು ಬೇಬಿ ಬೆಟ್ಟದೊಂದಿಗೆ ಅವಿನಾಭಾವ ಸಂಬಂಧ ಹೊಂದಿರುವ ಮೈಸೂರಿನ ರಾಜ ವಂಶಸ್ಥರಾದ ಶ್ರೀ ಯದುವೀರ್ ಒಡೆಯರ್ ಬೇಬಿ ಬೆಟ್ಟದಲ್ಲಿ ಲೋಕಾರ್ಪಣೆ ಮಾಡಿರುತ್ತಾರೆ.

ಶ್ರೀ ಸದಾಶಿವ ಸ್ವಾಮೀಜಿಯವರು ಲಿಂಗೈಕ್ಯರಾದ ನಂತರ ತುಮಕೂರಿನ ಸಿದ್ದಗಂಗಾ ಮಠದಿಂದ ಶ್ರೀ ಗುರುಸಿದ್ದೇಶ್ವರ ಕಿರಿಯ ಸ್ವಾಮೀಜಿಯವರನ್ನು ಮಠಕ್ಕೆ ನೇಮಿಸಲಾಯಿತು. ಕಾರಣಾಂತರಗಳಿಂದ ಶ್ರೀಗಳು ಬೇರೆಡೆಗೆ ನಿರ್ಗಮಿಸಿದರು. ತದನಂತರ ಸಿದ್ದಗಂಗೆಯಿಂದ ಶ್ರೀ ಶಿವಬಸವ ಸ್ವಾಮೀಜಿಯವರನ್ನು ನೇಮಿಸಲಾಗಿದ್ದು ಪ್ರಸ್ತುತ ಶ್ರೀ ಮಠದ ಕೈಂಕರ್ಯಗಳನ್ನು ಶ್ರದ್ಧಾಭಕ್ತಿಪೂರ್ವಕವಾಗಿ ನಡೆಸಿಕೊಂಡು ಬರುತ್ತಿದ್ದು ಭಕ್ತರಿಂದ–ಭಕ್ತರಿಗಾಗಿ–ಭಕ್ತರಿಗೋಸ್ಕರ ಶ್ರೀಮಠವಿದ್ದು ಅವರ ಸಹಾಯ–ಸಹಕಾರದ ನೆರವಿನಿಂದ ಮಠದ ಕೆಲಸ ಕಾರ್ಯಗಳು ಜರುಗುತ್ತಿದ್ದು ಮುಂದೆ ಇದೊಂದು ಭವ್ಯವಾದ ಶ್ರೀ ಕ್ಷೇತ್ರವನ್ನಾಗಿಸುವುದರ ಜೊತೆಗೆ ಪ್ರವಾಸೋದ್ಯಮ ಕ್ಷೇತ್ರವನ್ನಾಗಿ ಪರಿವರ್ತಿಸಬೇಕೆಂಬ ಮಹದಾಸೆಯಿದೆ ಎನ್ನುತ್ತಾರೆ. ಶ್ರೀಗಳ ಕನಸು ನನಸಾಗಲೆಂದು ಆಶಿಸೋಣ.


ಮಕ್ಕಳ ಚಿತ್ರಕಥೆ

12 ವರ್ಷಗಳ ನಂತರವೇ ಡಮರುಗ ಬಾರಿಸುತ್ತೇನೆ...!


■ ಹೆಚ್.ಜಿ.ಎನ್.ಪ್ರಸಾದ್
ಮೊ. 98453 76199



ಒಮ್ಮೆ ದೇವತೆಗಳ ರಾಜನಾದ ಇಂದ್ರನು ಯಾಕೋ ರೈತರ ಮೇಲೆ ಸಿಟ್ಟು ಮಾಡಿಕೊಂಡು, ಇನ್ನು 12 ವರ್ಷಗಳ ಕಾಲ ಮಳೆ ಸುರಿಸುವುದಿಲ್ಲ...... ಇಲ್ಲಿ ಬೆಳೆ ಬಿತ್ತನೆ ಮಾಡಿದರೂ ಬೆಳೆಯುವುದಿಲ್ಲ...! ಎಂದು ಶಪಿಸಿಬಿಟ್ಟನು. ರೈತರು ಇಂದ್ರನನ್ನು ಪರಿಪರಿಯಾಗಿ ಬೇಡಿಕೊಂಡರು. ಕೊನೆಗೆ ಕನಿಕರದಿಂದ ಇಂದ್ರದೇವ ಶಿವನು ತನ್ನ ಡಮರುಗವನ್ನು ಬಾರಿಸಿದರೆ ಮಾತ್ರ ಶಾಪ ವಿಮೋಚನೆಯಾಗುವುದು....! ಎಂದ.



ತಕ್ಷಣ ಶಿವನ ಬಳಿ ಇಂದ್ರ ತಾನೇ ಹೋಗಿ, ರೈತರ ಬೇಡಿಕೆಗೆ ಮಣಿದು ಡಮರುಗವನ್ನು ಬಾರಿಸಬಾರದೆಂದು ವಿನಂತಿಸಿ, ಒಪ್ಪಿಸಿಯೂಬಿಟ್ಟ. ಹಾಗಾಗಿ ರೈತರು ಶಿವನ ಬಳಿ ಹೋಗಿ, ಬೇಡಿಕೊಂಡಾಗ ಶಿವನೂ ತನ್ನ ಅಸಹಾಯಕತೆ ವ್ಯಕ್ತಪಡಿಸಿ, ಇನ್ನು 12 ವರ್ಷಗಳ ನಂತರವೇ ಡಮರುಗ ಬಾರಿಸುವುದಾಗಿ ಹೇಳಿಬಿಟ್ಟ.




ದಿಕ್ಕು ತೋಚದ ರೈತರು 12 ವರ್ಷಗಳು ಕಾಯುವುದೆಂದು ನಿರ್ಧರಿಸಿಕೊಂಡು ಸುಮ್ಮನಿದ್ದುಬಿಟ್ಟರು. ಆದರೆ ಒಬ್ಬ ರೈತ ಮಾತ್ರ ಪ್ರತಿ ವರ್ಷ ತಪ್ಪದೇ ಭೂಮಿ ಉಳುತ್ತಿದ್ದ. ಬಿತ್ತನೆ ಮಾಡುತ್ತಿದ್ದ, ಗೊಬ್ಬರ ಹಾಕುತ್ತಿದ್ದ. ಆದರೆ ಬೆಳೆ ಬರುತ್ತಿರಲಿಲ್ಲ. ಮೂರು ವರ್ಷಗಳು ಸತತ ಹೀಗೆ ಮಾಡಿದಾಗ ಉಳಿದ ರೈತರು ಇವನನ್ನು ತಮಾಷೆ ಮಾಡತೊಡಗಿದರು. ಹಾಗೆ ಅವನನ್ನು ಕೇಳಿಯೇಬಿಟ್ಟರು 12 ವರ್ಷಗಳು ಮಳೆಯು ಬರುವುದಿಲ್ಲ... ಬೆಳೆಯೂ ಬೆಳೆಯುವುದಿಲ್ಲ... ಎಂದು ಗೊತ್ತಿದ್ದರೂ ನೀನು ವ್ಯರ್ಥವಾಗಿ ಶ್ರಮವನ್ನೇಕೆ ಹಾಕುತ್ತಿದ್ದೀಯಾ...?



ಅದಕ್ಕೆ ರೈತ, ಮಳೆ–ಬೆಳೆ ಬರುವುದಿಲ್ಲ ಎಂದು ನನಗೂ ಗೊತ್ತಿದೆ.... ಆದರೂ ಇದನ್ನೆಲ್ಲಾ ಮಾಡುತ್ತಿರುವುದು, ಉತ್ತನೆ, ಬಿತ್ತನೆಯ ಅಭ್ಯಾಸ ಇರಲಿ ಎಂಬ ಕಾರಣಕ್ಕಾಗಿ... 12 ವರ್ಷಗಳ ನಂತರ ಮಳೆ ಬಂದು, ಎಲ್ಲಾ ಸರಿಯಾದಾಗ, ನಾನು ಕೆಲಸವನ್ನೇ ಮರೆತು, ಅಭ್ಯಾಸವಿಲ್ಲದೆ ಸೋಮಾರಿಯಾಗಿರಬಾರದೆಂದು.... ಹೀಗೆ ಮಾಡುತ್ತಿದ್ದೇನೆ..! ಎಂದು ಮಾರ್ಮಿಕವಾಗಿ ಉತ್ತರಿಸಿದ.



ಈ ಮಾತನ್ನು ಕೇಳಿದ ಪಾರ್ವತಿ ದೇವಿಗೆ ತೀವ್ರ ಸಂತೋಷವಾಗಿ ಶಿವನ ಬಳಿ ತೆರಳಿ, 12 ವರ್ಷಗಳ ಕಾಲ ನೀನು ಡಮರುಗ ಬಾರಿಸದಿದ್ದರೆ.... ನೀನೂ ಅದನ್ನು ಮರೆತುಬಿಟ್ಟರೆ ಗತಿಯೇನು.... ಎಂದು ಕೇಳಿದಳು. ಈ ಮಾತಿಗೆ ಶಿವನು ಯೋಚಿಸಿ ನೋಡಿ ಕುತೂಹಲದಿಂದ ಕೂಡಲೇ ಡಮರುಗವನ್ನು ಬಾರಿಸಲು ಆರಂಭಿಸಿಬಿಟ್ಟ.



ತಕ್ಷಣ ದೇವೇಂದ್ರನ ಮಾತಿನಂತೆ ಮಳೆಯೂ ಆಯಿತು. ಈ ರೈತನೊಬ್ಬ ಮಾತ್ರ ಬಿತ್ತಿದ್ದರಿಂದ. ಅವನೊಬ್ಬನಿಗೆ ಮಾತ್ರ ಬೆಳೆ ಬಂತು. ಇವನನ್ನು ನೋಡಿ ಉಳಿದ ರೈತರೆಲ್ಲರೂ ನಿರಾಶರಾಗಿ ತಾವೂ ಉತ್ತು,ಬಿತ್ತನೆ ಮಾಡಬೇಕಿತ್ತೆಂದು ಪರಿತಪಿಸಿದರು.

ನೀತಿ: ಮನಸ್ಸಿದ್ದರೆ ಮಾರ್ಗ. ನಾವು ಮಾಡುವುದನ್ನು ಚಾಚೂತಪ್ಪದೆ ಮಾಡುತ್ತಾ ಹೋದರೆ ಒಂದಲ್ಲ ಒಂದು ರೀತಿ ಫಲ ಲಭಿಸುತ್ತದೆ.

ವಾರಭವಿಷ್ಯ

15.2.2026 ರಿಂದ 21.2.2026

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ : ರವಿ–ಕುಂಭ, ಚಂದ್ರ–ಮಕರ, ಕುಂಭ, ಮೀನ, ಕುಜ– ಮಕರ, ಬುಧ–ಕುಂಭ, ಗುರು–ಮಿಥುನ, ಶುಕ್ರ–ಕುಂಭ, ಶನಿ–ಮೀನ, ರಾಹು–ಕುಂಭ ಮತ್ತು ಕೇತು– ಸಿಂಹ

ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ್ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
'ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ'
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ,
ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ: 9740973224, 9739548720



ಮೇಷ (ಚು,ಚೆ,ಲ,ಲಿ,ಲು,ಲೆ,ಲೂ,ಅ)

ವಾರದಾರಂಭಕ್ಕೆ ದೇಹಾರೋಗ್ಯವನ್ನು ಮರಳಿ ಪಡೆಯುವಿರಿ. ಕೈಗೊಂಡ ಕಾರ್ಯಗಳಲ್ಲಿ ಯಶಸ್ಸು ಲಭಿಸುತ್ತದೆ. ಧನಪ್ರಾಪ್ತಿಯ ಜೊತೆಗೆ ಆಜ್ಞಾಸಿದ್ಧಿ. ಮಿತ್ರ ಜನರ ಸಂಪರ್ಕ, ಮೃಷ್ಟಾನ್ನ ಭೋಜನ. ವಾರದ ಉತ್ತರಾರ್ಧಕ್ಕೆ ಮನಸ್ಸಿಗೆ ಸ್ಥಿರತೆ ಇಲ್ಲದೆ ನಾನಾ ವಿಧವಾದ ಯೋಚನೆಗಳು. ಅನಿರೀಕ್ಷಿತ ಖರ್ಚುಗಳಿಂದ ಪರ್ಸ್ ಖಾಲಿ. ಬಾಕಿ ಹಣ ವಸೂಲಾಗುತ್ತದೆ.

ಶ್ರೀ ಕಾರ್ತಿಕೇಯ ಸ್ತೋತ್ರ ಪಠಿಸಿ. ಶುಭ ಸಂಖ್ಯೆ–5

ವೃಷಭ (ಇ,ಉ,ಎ,ಒ,ವ,ವಿ,ವು,ವೆ,ವೊ)

ಪಿತ್ರಾರ್ಜಿತ ಸಿರಿ ಸಂಪದಗಳು ನಿಮ್ಮದಾಗುವುದು. ಹಲವರಿಗೆ ಪುತ್ರ ಲಾಭ. ಗೃಹದಲ್ಲಿ ವಿವಾಹಾದಿ ಶುಭ ಕಾರ್ಯಗಳ ಜರುಗುವಿಕೆ. ಮಾತುಕತೆಯಿಂದ ಕಾರ್ಯಸಾಧನೆ. ಶತ್ರುಗಳು ಹಿಂದೆ ಸರಿಯುವರು. ಅಕಾಲ ಭೋಜನ ಹಾಗೂ ಮಾನಸಿಕ, ಜಡತ್ವ ನಿಂದನೆಗೆ ಗುರಿಯಾಗುವಿರಿ. ವಾರಾಂತ್ಯಕ್ಕೆ ಪತ್ನಿಯ ಸಹವಾಸ, ಸೌಖ್ಯ ಹಾಗೂ ವಸ್ತ್ರಾಲಂಕಾರಗಳಿಗೆ ಧಾರಾಳ ಹಣ ಖರ್ಚಾಗುವುದು.

ಶ್ರೀ ಚಾಮುಂಡೇಶ್ವರಿ ದರ್ಶನ. ಶುಭ ಸಂಖ್ಯೆ –4

ಮಿಥುನ (ಕ,ಕಿ,ಕು,ಘ,ಙ,ಛ,ಕೆ,ಕೊ,ಹ)

ಬಯಸಿದ್ದೆಲ್ಲಾ ಸಿಗುವುದಿಲ್ಲ. ಸಿಕ್ಕಿದ್ದನ್ನೇ ಬಯಸಿಕೊಂಡರೆ ಮನಸ್ಸಿಗೆ ನೆಮ್ಮದಿ ಎನಿಸುವುದು. ನಿಮ್ಮ ರಾಶಿಯಲ್ಲೇ ಇರುವ ಗುರುಗ್ರಹ ನಿಮ್ಮ ಆಶಯಗಳಿಗೆ ಪೂರಕ ಫಲವನ್ನು ನೀಡುತ್ತಿಲ್ಲ. ಹಲವರಿಗೆ ಸ್ಥಾನ ಚ್ಯುತಿ ಅಥವಾ ಸ್ಥಾನ ನಾಶದ ಸಂಭವವಿದೆ. ನೆರೆಹೊರೆಯಲ್ಲಿ ಸೌಹಾರ್ದದಿಂದಿರಲು ಪ್ರಯತ್ನಿಸಿ. ವಿಷಯ ವಿಕೋಪಕ್ಕೆ ಹೋದೀತು. ವಾರಾಂತ್ಯಕ್ಕೆ ನೂತನ ವಾಹನ ಪ್ರಾಪ್ತಿ.

ಶ್ರೀ ವಿಷ್ಣು ಪೂಜೆ. ಶುಭ ಸಂಖ್ಯೆ –1

ಕಟಕ (ಹೊ,ಹು,ಹೆ,ಡ,ಡಿ,ಡು)

ವಾರದಾರಂಭಕ್ಕೆ ಆಭರಣ ಪ್ರಾಪ್ತಿ. ಸುಖ, ಸಾಧನಗಳ ಖರೀದಿ, ಚೆಲುವೆಯರಾದ ಹೆಂಗಳೆಯರ ಒಡನಾಟ. ಸೇವಕರ ಸಹಕಾರದಿಂದ ಎದುರಾದ ಸಮಸ್ಯೆ ನಿವಾರಣೆ, ಇದಕ್ಕೆ ನಿಮ್ಮ ನಿಪುಣತೆಯೂ ಕಾರಣೀಭೂತವಾಗುತ್ತದೆ. ವಾರ ಮಧ್ಯೆ ತುಸು ಅನಾರೋಗ್ಯ, ಯಂತ್ರ ಆಯುಧಗಳಿಂದ ಅಪಘಾತ ಸಂಭವಿಸಬಹುದು. ಎಚ್ಚರ ತಪ್ಪದಿರಿ. ಪರಸ್ಥಳದಲ್ಲಿ ಜೂಜಿನಿಂದ ಧನ ನಷ್ಟ.

ಶ್ರೀ ಅಪರಾಜಿತಾ ಸ್ತೋತ್ರ ಪಠಿಸಿ. ಶುಭ ಸಂಖ್ಯೆ –9

ಸಿಂಹ (ಮ,ಮಿ,ಮು,ಮೊ,ಮೆ,ಟ,ಟಿ,ಟು,ಟೆ)

ಈ ವಾರ ರೋಗಿ ಬಯಸಿದ್ದು ಹಾಲು ಅನ್ನ, ವೈದ್ಯರು ಹೇಳಿದ್ದು ಹಾಲು ಅನ್ನ ಎಂಬಂತೆ ಸಮಯ ಸಾಗುವುದು. ವಿವಿಧ ಮೂಲಗಳಿಂದ ವಿತ್ತಲಾಭ. ಶರೀರ ಸೌಖ್ಯ, ಪುಣ್ಯ ಕೆಲಸಗಳಲ್ಲಿ ಆಸಕ್ತಿಗಳು ಮೂಡುವುದು. ಮನೆಯಲ್ಲಿ ಕಷ್ಟ ಪರಿಹಾರ, ಅನಾರೋಗ್ಯದ ಆತಂಕ ನಿವಾರಣೆ. ಶತ್ರುಗಳು ಶಸ್ತ್ರ ತ್ಯಾಗ ಮಾಡುವರು. ಶ್ರೀಮತಿಯ ಇಚ್ಛೆಯಂತೆ ನಡೆದು ಗೃಹದಲ್ಲಿ ಶಾಂತಿ ನೆಲೆಯಾಗುವುದು.

ಶ್ರೀ ಸೂರ್ಯಾಷ್ಟಕ ಪಠಿಸಿ. ಶುಭ ಸಂಖ್ಯೆ–7

ಕನ್ಯಾ (ಟೊ,ಪ,ಪಿ,ಪು,ಷ,ಣ,ಠ,ಪೆ,ಪೊ)

ಅಧಿಕಾರಿ ವರ್ಗದವರ ಅನುಗ್ರಹದಿಂದ ನೆನೆಗುದಿಗೆ ಬಿದ್ದಿದ್ದ ಕೆಲಸ ಕಾರ್ಯಗಳು ಸಂಪನ್ನಗೊಳ್ಳುವುದು. ನಿಮ್ಮ ಮಾನ, ಗೌರವಗಳು ವೃದ್ಧಿಸುವುದು. ಸುಭೋಜನ, ಶಯನ ಸುಖಗಳನ್ನು ಅನುಭವಿಸುವಿರಿ. ಸಂದರ್ಶನ, ಪರೀಕ್ಷೆಗಳಲ್ಲಿ ವಿಜಯವನ್ನು ಹೊಂದುವಿರಿ. ಸ್ತ್ರೀಯೊಬ್ಬರಿಂದ ನಿಮ್ಮ ಭಾಗ್ಯೋದಯವಾಗುವ ಸಂಭವವಿದೆ. ಪರಸ್ಥಳ ವಾಸದಿಂದ ಆರೋಗ್ಯ ಕೆಡುವುದು.

ಶ್ರೀ ಅಷ್ಟಾಕ್ಷರಿ ಮಂತ್ರ ಜಪಿಸಿ. ಶುಭ ಸಂಖ್ಯೆ–2

ತುಲಾ (ರ,ರಿ,ರು,ರೆ,ರೊ,ತ,ತಿ,ತು,ತೆ)

ನಿಮ್ಮ ಜೀವನದ ಮಹದಾಸೆಗಳು ಕೈಗೂಡಲು ಗ್ರಹಗಳ ಅನುಗ್ರಹವಿದೆ. ಪರಿಚಾರಕ ವರ್ಗದವರಿಂದ ಸುಖ, ಸಂತೋಷ ಪ್ರಾಪ್ತಿ. ಹಿತಜನರೊಂದಿಗೆ ಸಮಾಗಮ. ಹೊಸ ಆಸ್ತಿ ಹೊಂದುವ ನಿಮ್ಮ ಪ್ರಯತ್ನ ಫಲಿಸಲಿದೆ. ಆಪ್ತ ಬಂಧು ವರ್ಗದವರ ಆದರ ದೊರೆಯುವುದು. ಹಲವರಿಗೆ ಆಸ್ಪತ್ರೆಯಿಂದ ಬಿಡುಗಡೆಯಾಗುವುದು. ವಾಹನ ವ್ಯಾಪಾರದಲ್ಲಿ ಮೋಸ ಹೋಗುವ ಸಾಧ್ಯತೆ ಇರುತ್ತದೆ.

ಶ್ರೀ ದೇವೀ ಅಷ್ಟೋತ್ತರ ಪಠಿಸಿ. ಶುಭ ಸಂಖ್ಯೆ–3

ವೃಶ್ಚಿಕ (ತೊ,ನ,ನಿ,ನು,ನೆ,ನೊ,ಯ,ಯಿ,ಯು)

ವಾರದಾರಂಭಕ್ಕೆ ಧನ, ಧಾನ್ಯ, ವಸ್ತ್ರ ಲಾಭ. ರೆಡಿಮೇಡ್ ವಸ್ತ್ರ ವ್ಯಾಪಾರಿಗಳಿಗೆ ಹೇರಳ ಧನಲಾಭ. ಪ್ರಿಯ ಕಾಮಿನಿಯ ಸಾಂಗತ್ಯ ಹಾಗೂ ಅವರ ವಿಶ್ವಾಸವನ್ನು ಗಳಿಸುವಿರಿ. ದುರ್ಜನರ, ಸಮಾಜಘಾತುಕರ ಸಹವಾಸಗಳಿಂದ ದೂರವಿರಿ. ಅನ್ಯಥಾ ತೊಂದರೆಗೆ ಸಿಲುಕುವಿರಿ. ಜ್ವರ, ಜೀರ್ಣ ವ್ಯಾಧಿಗಳು ಕಾಡುತ್ತವೆ. ದೂರ ಪ್ರಯಾಣಗಳನ್ನು ಅವಾಯ್ಡ್ ಮಾಡಿ. ಮಹಿಳಾ ಮಣಿಯರು ಮಾಂಗಲ್ಯ ಸರ ಮುಚ್ಚಿಕೊಂಡು ಓಡಾಡಲಿ.

ಶ್ರೀ ಗಣಪತಿ ಆರಾಧನೆ, ಶುಭ ಸಂಖ್ಯೆ –8

ಧನುಸ್ಸು (ಯೆ,ಯೊ,ಬ,ಬಿ,ಬು,ಧ,ಭ,ಢ,ಬೆ)

ನಿಮ್ಮ ರಾಶ್ಯಾಧಿಪತಿ ಗುರು ಹಾಗೂ ಚಂದ್ರ ಗ್ರಹಗಳ ಸಂಯೋಗ ನಿಮಗೆ ಮನೋಧೈರ್ಯವನ್ನೂ, ಧನ–ಧಾನ್ಯ ಲಾಭವನ್ನೂ ನೀಡುತ್ತಲಿದ್ದಾರೆ. ನೆರೆಹೊರೆಯವರ ವಿಶ್ವಾಸವನ್ನು ಗಳಿಸುವಿರಿ. ನಿಮ್ಮ ವಿರೋಧಿಗಳು ಸ್ನೇಹ ಬಯಸಿ ಬರಬಹುದು. ತಿರಸ್ಕರಿಸಬೇಡಿ. ಕಾರಣಾಂತರಗಳಿಂದ ಪತ್ನಿಯಿಂದ ದೂರವಿರಬೇಕಾದ ಸನ್ನಿವೇಶ ಉಂಟಾದೀತು, ಹಾಗೂ ಧೈನ್ಯತೆಯ ಪರಿಸ್ಥಿತಿ ಬರುವುದು.

ಶ್ರೀ ಶಿರಡಿ ಸಾಯಿಬಾಬಾ ಉಪಾಸನೆ. ಶುಭ ಸಂಖ್ಯೆ –3

ಮಕರ (ಬೊ,ಜ,ಜೆ,ಶಿ,ಶು,ಶೆ,ಶೊ,ಗ,ಗಿ)

ವಾರದಾರಂಭಕ್ಕೆ ನಿಮ್ಮ ರಾಶಿಗೆ ಬರುವ ಚಂದ್ರ, ಮನದಲ್ಲೂ, ಮನೆಯಲ್ಲೂ ನವೋಲ್ಲಾಸವನ್ನೂ, ಉತ್ತಮ ಭೋಜನ, ಶಯನಾದಿ ಸುಖಗಳನ್ನೂ ನೀಡುವನು. ಕೈಗೊಂಡ ಕೆಲಸಗಳಲ್ಲಿ ವಿಜಯವನ್ನು ಹೊಂದುವಿರಿ. ಮಾತೃಶ್ರೀಯವರ ಸೇವೆಯಿಂದ ಕೀರ್ತಿ, ಸನ್ಮಾನಗಳನ್ನು ಅನುಭವಿಸುವಿರಿ. ಇದಕ್ಕೆ ಪೂರಕವಾಗಿ ನಿಮ್ಮ ರಾಶಿಸ್ವಾಮಿ ಶನಿದೇವನ ಕೃಪೆಯೂ ಇರುವುದರಿಂದ ಶತ್ರುದಮನ ಮತ್ತು ಪಶು ಸಂಪತ್ತು ಲಭಿಸುತ್ತದೆ.

ಶ್ರೀ ಶನಿ ಚಾಲೀಸ ಪಠಿಸಿ. ಶುಭ ಸಂಖ್ಯೆ–6

ಕುಂಭ (ಗು,ಗೆ,ಗೊ,ಸ,ಸಿ,ಸು,ಸೆ,ಸೊ,ದ)

ಪಂಚಮ ಗುರುದೇವ ಸಾಡೇಸಾತಿ ಶನಿದೇವನ ಅವಕೃಪೆಗಳನ್ನು ತಗ್ಗಿಸಲಿದ್ದಾನೆ. ಇದರ ಪರಿಣಾಮ ಮನೆಯಲ್ಲಿ ನೆಮ್ಮದಿಯ ವಾತಾವರಣ, ಧನ–ಕನಕ ಪ್ರಾಪ್ತಿ, ದುಬಾರಿ ಗೃಹ ವಸ್ತುಗಳ ಖರೀದಿಗಳು ಉಂಟಾಗಲಿದೆ. ಪುತ್ರ–ಪುತ್ರಿಯರ ಸಹಾಯ–ಸಹಕಾರಗಳೂ ದೊರಕಲಿದೆ. ರಾಹು–ಕೇತುಗಳು ಅಶುಭರಿರುವ ಕಾರಣ ಗೃಹದಲ್ಲಿ ಕಷ್ಟ ಕೋಟಲೆಗಳು ಉಂಟಾಗುವುದು.

ಶ್ರೀ ಶಿವಪಂಚಾಕ್ಷರಿ ಮಂತ್ರ ಜಪಿಸಿ. ಶುಭ ಸಂಖ್ಯೆ –2

ಮೀನ (ದಿ,ದು,ಖ,ಝ,ಥ,ತೆ,ದೊ,ಚ,ಚಿ)

ಯಾವುದೂ ನೀವಂದುಕೊಂಡಂತೆ ಸಾಗುತ್ತಿಲ್ಲ. ಇದರಿಂದ ಮನಸ್ಸು ಜಿಗುಪ್ಸೆಗೊಂಡಿದೆ. ಎಲ್ಲರಲ್ಲಿಯೂ ವಿರೋಧವನ್ನು ಎದುರಿಸಬೇಕಾಗುತ್ತದೆ. ಸ್ವಜನರ ವಿರಹ, ವಿದೇಶ ಸಂಚಾರಗಳು ಉಂಟಾಗಲಿವೆ. ವಾರದ ಕಡೆಗೆ ಚಂದ್ರಗ್ರಹ ನಿಮ್ಮ ರಾಶಿಗೆ ಬರುವ ಪರಿಣಾಮ 'ಗಜಕೇಸರಿ' ಯೋಗ ಪ್ರಾಪ್ತವಾಗಿ ಜೀವನದಲ್ಲಿ ಹೊಸ ಬೆಳ್ಳಿಯ ರೇಖೆ ಮಿಂಚಲಿದೆ. ಸಕಲ ಸುಖ ಪ್ರಾಪ್ತಿ, ಶ್ರೇಷ್ಠ ಕೀರ್ತಿ ಲಭಿಸುತ್ತದೆ.

ಶ್ರೀ ಹನುಮಾನ್ ಚಾಲೀಸ ಪಠಿಸಿ. ಶುಭ ಸಂಖ್ಯೆ –4

2028ಕ್ಕೆ ಕುಮಾರಸ್ವಾಮಿ ಸಿಎಂ ಮಾಡುವುದೇ ಜೆಡಿಎಸ್ ಗುರಿ

ಸನ್ಮಾನ ಸ್ವೀಕರಿಸಿದ ಮೈಸೂರು ಜಿಲ್ಲಾ ಜೆಡಿಎಸ್ ಅಧ್ಯಕ್ಷ ಅಶ್ವಿನ್ ಕುಮಾರ್

ತಿ.ನರಸೀಪುರ, ಫೆ.14– ರಾಜ್ಯದಲ್ಲಿ 2028ಕ್ಕೆ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರನ್ನು ಮುಖ್ಯಮಂತ್ರಿ ಮಾಡುವುದು ಜೆಡಿಎಸ್ ಪಕ್ಷದ ಪ್ರಮುಖ ಗುರಿಯಾಗಿದೆ ಎಂದು ಮಾಜಿ ಶಾಸಕರು ಹಾಗೂ ಮೈಸೂರು ಜಿಲ್ಲಾ ಗ್ರಾಮಾಂತರ ಜೆಡಿಎಸ್ ಅಧ್ಯಕ್ಷರೂ ಆದ ಎಂ.ಅಶ್ವಿನ್ ಕುಮಾರ್ ಇಂದಿಲ್ಲಿ ತಿಳಿಸಿದ್ದಾರೆ.

ಜೆಡಿಎಸ್ ಪಕ್ಷದ ಮೈಸೂರು ಜಿಲ್ಲಾಧ್ಯಕ್ಷರಾಗಿ ನೇಮಕಗೊಂಡ ಎಂ.ಅಶ್ವಿನ್ ಕುಮಾರ್ ಅವರನ್ನು ಸನ್ಮಾನಿಸಲು ಪಟ್ಟಣದ ಜೆಎಸ್‌ಎಸ್ ಸಭಾಭವನದಲ್ಲಿ ಕ್ಷೇತ್ರ ಜಾತ್ಯಾತೀತ ದಳ ಪಕ್ಷದ ವತಿಯಿಂದ ಶನಿವಾರ ಹಮ್ಮಿಕೊಳ್ಳಲಾಗಿದ್ದ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು.

ರಾಜಕಾರಣಕ್ಕೆ ಆಕಸ್ಮಿಕವಾಗಿ ಬಂದ ನನ್ನನ್ನು ಕ್ಷೇತ್ರದ ಜನತೆ ಸ್ವೀಕಾರ ಮಾಡಿದ ರೀತಿಯನ್ನು ಎಂದಿಗೂ ಮರೆಯಲು ಸಾಧ್ಯವಿಲ್ಲ. ಸಾಮಾನ್ಯ ಜಿ.ಪಂ. ಸದಸ್ಯನಾಗಿದ್ದ ನನ್ನನ್ನು ಪ್ರಭಾವಿ ಶಾಸಕರ ಎದುರಲ್ಲಿ ಚುನಾವಣೆಗೆ ನಿಲ್ಲಿಸಿ 28 ಸಾವಿರಕ್ಕೂ ಅಧಿಕ ಮತಗಳ ಅಂತರದಿಂದ ಗೆಲ್ಲಿಸಿದ ಕ್ಷೇತ್ರದ ಜನತೆಯ ಪ್ರೀತಿ ವಿಶ್ವಾಸಕ್ಕೆ ನಾನು ಆಭಾರಿಯಾಗಿದ್ದೇನೆ ಎಂದು ತಮ್ಮ ಗೆಲುವನ್ನು ಸ್ಮರಿಸಿಕೊಂಡರು.

ಮುಂದೆ ನಮ್ಮ ಗುರಿ 2028ರ ವಿಧಾನ ಸಭಾ ಚುನಾವಣೆಯಲ್ಲಿ ನಮ್ಮ ಹಿಡಿತದಿಂದ ಬಿಟ್ಟು ಹೋಗಿರುವ ಈ ಕ್ಷೇತ್ರವನ್ನು ಮತ್ತೆ ನಮ್ಮ ತೆಕ್ಕೆಗೆ ತೆಗೆದುಕೊಳ್ಳುವುದರ ಜೊತೆಗೆ ಹೆಚ್.ಡಿ.ಕುಮಾರಸ್ವಾಮಿ ಅವರನ್ನು ಮತ್ತೊಮ್ಮೆ ಮುಖ್ಯಮಂತ್ರಿ ಮಾಡುವುದಾಗಿದೆ, ಈ ನಿಟ್ಟಿನಲ್ಲಿ ಕಾರ್ಯಕರ್ತರು ಒಗ್ಗಟ್ಟು ಪ್ರದರ್ಶಿಸಿ ರಾಜ್ಯದಲ್ಲಿ ಮತ್ತೆ ಜೆಡಿಎಸ್ ಪಕ್ಷ ಅಧಿಕಾರಕ್ಕೆ ತರಲು ಕಟ್ಟಿಬದ್ಧರಾಗಿ ಪ್ರಯತ್ನ ಮಾಡಬೇಕು ಎಂದು ಕಾರ್ಯಕರ್ತರಿಗೆ ಕರೆ ನೀಡಿದರು.

ಹೆಚ್.ಡಿ.ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಹಾಗೂ ದೇವೇಗೌಡರು ಮುಖ್ಯಮಂತ್ರಿ ಮತ್ತು ಪ್ರಧಾನ ಮಂತ್ರಿಯಾಗಿದ್ದ ಕಾಲದಲ್ಲಿ ಮಾಡಿದ್ದ ಜನಪರ ಕಾರ್ಯಕ್ರಮಗಳನ್ನು ಜನರಿಗೆ ತಲುಪಿಸಲು ಸಾಮಾಜಿಕ ಜಾಲತಾಣಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಹೆಚ್.ಡಿ.ಕುಮಾರಸ್ವಾಮಿ 2006 ಮತ್ತು 2018ರಲ್ಲಿ ಮುಖ್ಯಮಂತ್ರಿಯಾದರು. ರಾಜ್ಯದ ಇತಿಹಾಸದಲ್ಲಿ ಅತಿ ಕಡಿಮೆ ಸಾಲ ಮಾಡಿರುವ ಮುಖ್ಯಮಂತ್ರಿ ಕುಮಾರಸ್ವಾಮಿ, ಸಾಲ ಮನ್ನಾ ಸೇರಿದಂತೆ ಹಲವಾರು ಜನಪರ ಕಾರ್ಯಕ್ರಮಗಳನ್ನು ಜಾರಿಗೊಳಿಸಿದರು. ಈ ಎಲ್ಲ ಕಾರ್ಯಕ್ರಮಗಳನ್ನು ಮತದಾರರಿಗೆ ತಿಳಿಸಿಕೊಡುವ ಕೆಲಸವನ್ನು ಕಾರ್ಯಕರ್ತರು ಮಾಡಬೇಕು ಎಂದು ಸಲಹೆ ನೀಡಿದರು.

ಸೋಲು ಗೆಲುವಿಗೆ ಮುನ್ನುಡಿ: ಕಳೆದ ಬಾರಿ ನಡೆದ ಚುನಾವಣೆಯಲ್ಲಿ ಅನಿವಾರ್ಯ ಕಾರಣಗಳಿಂದ ನನಗೆ ಸೋಲುಂಟಾಯಿತು. ಆದರೆ ಅದನ್ನು ನಾನು ಸೋಲು ಎಂದು ಭಾವಿಸುವುದಿಲ್ಲ, ಬದಲಿಗೆ ಗೆಲುವಿಗೆ ಮುನ್ನುಡಿ ಎಂದು ತಿಳಿಯಬಯಸುತ್ತೇನೆ ಎಂದ ಅಶ್ವಿನ್ ಕುಮಾರ್ 2028ರ ಚುನಾವಣೆಯಲ್ಲಿ ಕ್ಷೇತ್ರದಲ್ಲಿ ಜೆಡಿಎಸ್ ಪಕ್ಷದ ಬಾವುಟ ಮತ್ತೆ ಹಾರಿಸಲು ಕಾರ್ಯಕರ್ತರು ತುದಿಗಾಲಲ್ಲಿ ನಿಂತಿದ್ದಾರೆ ಎಂಬುದನ್ನು ನಾನು ಗಮನಿಸಿದ್ದೇನೆ ಎಂದರು. ಕಳೆದ ಲೋಕಸಭಾ ಚುನಾವಣೆಯಲ್ಲಿಯೇ ವಿಧಾನಸಭಾ ಕ್ಷೇತ್ರದ ಚುನಾವಣೆಗೆ ಗೆಲುವಿನ ಮುನ್ನುಡಿಯನ್ನು ಕಾರ್ಯಕರ್ತರು ಈಗಾಗಲೇ ಬರೆದಿದ್ದಾರೆ. ಕಳೆದ ಚುನಾವಣೆಯಲ್ಲಿ ಕೆಲವೊಂದು ವ್ಯತ್ಯಾಸಗಳಿಂದ ಸೋಲಾಗಿರಬಹುದು. ಆದರೆ ಲೋಕಸಭಾ ಕ್ಷೇತ್ರದಲ್ಲಿ ಜೆಡಿಎಸ್ ಹಾಗೂ ಬಿಜೆಪಿ ಮೈತ್ರಿ ಪಕ್ಷದ ಅಭ್ಯರ್ಥಿಗೆ ಮತದಾರರು ನೀಡಿದ ಲೀಡ್‌ನಿಂದ ಕಾರ್ಯಕರ್ತರು ಎಷ್ಟು ಶ್ರಮಪಟ್ಟಿದ್ದಾರೆ ಎಂಬುದನ್ನು ಊಹಿಸಬಲ್ಲೆ. ಬೇರೆ ಎಲ್ಲ ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷಕ್ಕೆ 20 ರಿಂದ 30 ಸಾವಿರ ಲೀಡ್ ಬಂದರೆ ನಮ್ಮ ಕ್ಷೇತ್ರದಲ್ಲಿ ಕೇವಲ 500 ಮತಗಳ ಲೀಡ್ ಮಾತ್ರವೇ ಬಂದಿದೆ. ಹಾಗಾಗಿ ಕಾರ್ಯಕರ್ತರ ಶ್ರಮ ತುಂಬಾ ಇದೆ ಎಂದು ಮಾಜಿ ಶಾಸಕರು ತಿಳಿಸಿದರು.

ಇದೇ ರೀತಿಯ ಬೆಂಬಲ ಆಶೀರ್ವಾದ ನಮ್ಮ ಮೇಲಿದ್ದರೆ, ನಿಮ್ಮೊಂದಿಗೆ ನಾನಿದ್ದು ನಿಮ್ಮ ಆಗು ಹೋಗುಗಳಿಗೆ ಸ್ಪಂದಿಸುವ ಕೆಲಸಗಳನ್ನು ಮಾಡುತ್ತೇನೆ. ಯಾವಾಗ ಬೇಕಾದರು ನನಗೆ ದೂರವಾಣಿ ಕರೆ ಮಾಡಿ ಸಮಸ್ಯೆಗಳನ್ನು ತಿಳಿಸಬಹುದಾಗಿದ್ದು, ಶಾಸಕನಾಗಿದ್ದಾಗಿನಿಂದಲೂ ಪಾಲಿಸಿಕೊಂಡು ಬಂದಿರುವ ಸಂಪ್ರದಾಯವನ್ನು ಈಗಲೂ ಸಹ ಮುಂದುವರೆಸಿಕೊಂಡು ಹೋಗುತ್ತಿದ್ದೇನೆ ಎಂದರು.

ನಿರೀಕ್ಷೆಗೂ ಮೀರಿದ ಕಾರ್ಯಕರ್ತರು: ಜೆಎಸ್‌ಎಸ್ ಸಭಾ ಭವನದಲ್ಲಿ ಕ್ಷೇತ್ರ ಜೆಡಿಎಸ್‌ನಿಂದ ಹಮ್ಮಿಕೊಳ್ಳಲಾಗಿದ್ದ ಸನ್ಮಾನ ಕಾರ್ಯಕ್ರಮಕ್ಕೆ ನಿರೀಕ್ಷೆಗೂ ಮೀರಿದ ಕಾರ್ಯಕರ್ತರು ಆಗಮಿಸಿ ನೆಚ್ಚಿನ ಮಾಜಿ ಶಾಸಕರಿಗೆ ಭಾರಿ ಗಾತ್ರದ ಹೂವಿನ ಹಾರ ಹಾಕಿ ಅಭಿನಂದಿಸಿದರು. ಕಾರ್ಯಕರ್ತರು ತೋರಿದ ಪ್ರೀತಿ ವಿಶ್ವಾಸಕ್ಕೆ ಅಶ್ವಿನ್ ಕೆಲ ಕಾಲ ಭಾವುಕರಾದರು.

ಕ್ಷೇತ್ರ ಜೆಡಿಎಸ್ ಅಧ್ಯಕ್ಷ ಸಿ.ಬಿ.ಹುಂಡಿ ಚಿನ್ನಸ್ವಾಮಿ, ಹಿರಿಯ ಮುಖಂಡ ಚಿಕ್ಕಜವರಪ್ಪ, ಜಿ.ಪಂ. ಮಾಜಿ ಸದಸ್ಯ ಜೈಪಾಲ್ ಭರಣಿ, ಪುರಸಭೆ ಮಾಜಿ ಅಧ್ಯಕ್ಷ ವೀರೇಶ್, ಗ್ರಾ.ಪಂ.ಮಾಜಿ ಅಧ್ಯಕ್ಷ ಶಂಭುದೇವಪುರ ರಮೇಶ್, ಮೂಗೂರು ಎಂ.ಆರ್. ಶಿವಮೂರ್ತಿ, ವಕೀಲರ ಸಂಘದ ಅಧ್ಯಕ್ಷ ತೊಟ್ಟವಾಡಿ ಮಹದೇವಸ್ವಾಮಿ, ವಕೀಲ ಪರಮೇಶ್, ಎನ್.ಲೋಕೇಶ್, ಪಿಎಲ್‌ಡಿ ಬ್ಯಾಂಕ್ ನಿರ್ದೇಶಕರಾದ ಲಿಂಗಪ್ಪಾಜಿ, ಮಧು, ಹೆಮ್ಮಿಗೆ ಹೊನ್ನಯ್ಯ, ಅಡುಗೆ ಸುರೇಶ್, ಕೀರ್ತಿ ಸೌಂಡ್ಸ್ ಸಂಪತ್, ಮಾವಿನಹಳ್ಳಿ ರಾಜೇಶ್, ಸೋಸಲೆ ರಾಜಣ್ಣ, ರಾಜೇಶ್, ಅತ್ತಹಳ್ಳಿ ರವಿ, ನಾಗೇಂದ್ರ, ಧರ್ಮಾ ರತ್ನಕರ, ಬಿ.ಎಂ. ಶಿವಕುಮಾರ್, ಮಾದಾಪುರ ಮಹದೇವಸ್ವಾಮಿ, ಕಟ್ಟೆಪುರ ಸಿದ್ದಪ್ಪ, ರೇವಣ್ಣ ಇದ್ದರು.

ಡಿಜಿಟಲ್ ನೋಂದಣಿ ಮಾಡಿಸಿ

ಈಗಾಗಲೇ ಪಕ್ಷದ ವತಿಯಿಂದ ಡಿಜಿಟಲ್ ಸದಸ್ಯತ್ವ ಆರಂಭಗೊಂಡಿದೆ. ವ್ಯಾಟ್ಸಪ್ ಮೂಲಕ ನೋಂದಣಿ ಮಾಡಿಸುವ ಪ್ರಕ್ರಿಯೆ ಇದಾಗಿದ್ದು, ಕ್ಷೇತ್ರದಲ್ಲಿ ಹೋಬಳಿ ಮಟ್ಟದಿಂದಲೂ ಹೆಚ್ಚಿನ ಸಂಖ್ಯೆಯಲ್ಲಿ ಪಕ್ಷದ ಸದಸ್ಯತ್ವ ಮಾಡಿಸಲು ಕಾರ್ಯಕರ್ತರು ಈಗಿನಿಂದಲೇ ಕಾರ್ಯ ಪ್ರವೃತ್ತರಾಗಬೇಕು. ಮುಂದಿನ ದಿನಗಳಲ್ಲಿ ಕ್ಷೇತ್ರ ಪ್ರವಾಸ ಆರಂಭಿಸಲಿದ್ದೇನೆ. ತಾಪಂ, ಜಿಪಂ ಹಾಗೂ ಗ್ರಾಪಂ ಚುನಾವಣೆಗಳು ಹತ್ತಿರ ಬರುತ್ತಿದ್ದು, ಕಾರ್ಯಕರ್ತರು ಬೂತ್ ಮಟ್ಟದಲ್ಲಿ ಸಕ್ರಿಯವಾಗಿ ಕೆಲಸ ಮಾಡಬೇಕು. – ಅಶ್ವಿನ್ ಕುಮಾರ್.



ಮೈಸೂರು ಜಿಲ್ಲಾ ಗ್ರಾಮಾಂತರ ಜೆಡಿಎಸ್ ಅಧ್ಯಕ್ಷರಾಗಿ ನೇಮಕಗೊಂಡ ಮಾಜಿ ಶಾಸಕ ಎಂ.ಅಶ್ವಿನ್ ಕುಮಾರ್ ಅವರನ್ನು ತಿ.ನರಸೀಪುರ ಕ್ಷೇತ್ರ ಜೆಡಿಎಸ್ ವತಿಯಿಂದ ಸನ್ಮಾನಿಸಲಾಯಿತು.

ಜನರೊಂದಿಗೆ ಜೆಡಿಎಸ್ ಕಾರ್ಯಕ್ರಮ

ಇದೇ 24 ರಂದು ಬನ್ನೂರಿನ ಡೈರಿ ಮುಂಭಾಗದ ಆವರಣದಲ್ಲಿ 'ಜನರೊಂದಿಗೆ ಜಾತ್ಯಾತೀತ ಜನತಾದಳ' ಎಂಬ ಕಾರ್ಯಕ್ರಮ ಆಯೋಜಿಸಲಾಗಿದೆ. ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿದ್ದು, ಕ್ಷೇತ್ರದ ಎಲ್ಲಾ ಭಾಗಗಳಿಂದ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು.

ಪ್ರಾಮಾಣಿಕತೆಗೆ ಮತ್ತೊಂದು ಹೆಸರೇ ಅಶ್ವಿನ್ ಕುಮಾರ್

ಕೇಂದ್ರ ಸಚಿವರಾದ ಹೆಚ್.ಡಿ.ಕುಮಾರಸ್ವಾಮಿಯವರು ಅಶ್ವಿನ್ ಕುಮಾರ್ ರವರಲ್ಲಿರುವ ಪ್ರಾಮಾಣಿಕತೆ ಹಾಗೂ ಅವರ ನಿಯತ್ತನ್ನು ನಂಬಿ ಅವರಿಗೆ ಜೆಡಿಎಸ್ ಅಧ್ಯಕ್ಷ ಸ್ಥಾನದ ಜವಾಬ್ದಾರಿ ವಹಿಸಿದ್ದಾರೆ. ಅಶ್ವಿನ್ ಅವರಲ್ಲೂ ಆ ಹುದ್ದೆ ನಿಭಾಯಿಸುವ ಶಕ್ತಿ ತಂತ್ರಗಾರಿಕೆ ಸಹ ಇದೆ. ಈ ಹಿಂದೆ ಕಾಂಗ್ರೆಸ್ ಪಕ್ಷ ಅಧಿಕಾರದ ಚುಕ್ಕಾಣಿ ಹಿಡಿಯುವ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷವು ಅಶ್ವಿನ್‌ರಿಗೆ ಭಾರಿ ಆಮಿಷ ಒಡ್ಡಿತ್ತು.ಜೊತೆಗೆ ಮಂತ್ರಿ ಸ್ಥಾನ ನೀಡುವುದಾಗಿ ಭರವಸೆ ನೀಡಿತ್ತು ಅಂದು ಮನಸ್ಸು ಮಾಡಿದ್ದರೆ ಅಶ್ವಿನ್ ನೂರು ಕೋಟಿ ರೂ.ಗಳನ್ನು ಪಡೆಯಬಹುದಾಗಿತ್ತು. ಆದರೆ ಅವರು ಪಕ್ಷದ ಮೇಲಿಟ್ಟಿದ್ದ ವಿಶ್ವಾಸ ಹಾಗೂ ಕುಮಾರಸ್ವಾಮಿ, ದೇವೇಗೌಡರ ಮೇಲಿದ್ದ ಗೌರವದಿಂದ ನಂಬಿಕೆ ದ್ರೋಹ ಮಾಡದೇ ಪಕ್ಷದ ಶಿಸ್ತಿನ ಸಿಪಾಯಿಯಂತೆ ಅಧಿಕಾರ ಇರಲಿ, ಇಲ್ಲದಿರಲಿ ಪಕ್ಷಕ್ಕೆ ಹೆಗಲು ಕೊಡುವ ಕೆಲಸ ಮಾಡಿಕೊಂಡು ಬಂದಿದ್ದಾರೆ. ಇಂದು ಅವರ ಪ್ರಾಮಾಣಿಕತೆಗೆ ಜಯ ಸಿಕ್ಕಿದ್ದು, ಕುಮಾರಣ್ಣರವರು ಅಶ್ವಿನ್ ಅವರಿಗೆ ಜಿಲ್ಲಾಧ್ಯಕ್ಷ ಸ್ಥಾನದ ಜವಾಬ್ದಾರಿ ನೀಡಿದ್ದಾರೆ. – ವೈ.ಎಸ್.ರಾಮಸ್ವಾಮಿ, ಜೆಡಿಎಸ್ ರಾಜ್ಯ ಕಾರ್ಯದರ್ಶಿ

ಸರಗೂರು ಬಳಿ ಮತ್ತೆ ಹುಲಿ ಪ್ರತ್ಯಕ್ಷ: ಎರಡು ಹಸು ಬಲಿ

ಸರಗೂರು: ಹುಲಿ ಮತ್ತೆ ಪ್ರತ್ಯಕ್ಷವಾಗಿದ್ದು, ಹುಲಿ ದಾಳಿಗೆ ಎರಡು ಹಸುಗಳು ಬಲಿಯಾಗಿವೆ. ಜಮೀನಲ್ಲಿ ಹಸುಗಳನ್ನು ಮೇಯಿಸುತ್ತಿದ್ದಾಗ ಏಕಾಏಕಿ ಹುಲಿ ದಾಳಿ ಮಾಡಿದ್ದು, ಎರಡು ಹಸುಗಳ ಕುತ್ತಿಗೆಗೂ ಬಾಯಿ ಹಾಕಿ ರಕ್ತ ಹೀರಿ ಕೊಂದಿದೆ. ಹುಲಿ ದಾಳಿ ಮಾಡುತ್ತಿದ್ದಂತೆ ಸುತ್ತ ಮುತ್ತಲ ರೈತರು ಕೂಗಾಡಿದ್ದರಿಂದ ಹಸುಗಳನ್ನು ಬಿಟ್ಟು ಹುಲಿ ಓಡಿ ಹೋಗಿದೆ. ಹಗಲಿನ ವೇಳೆಯೇ ಹುಲಿ ದಾಳಿ ನಡೆಸಿದ ಪರಿಣಾಮ ರೈತರು ಆತಂಕಗೊಂಡಿದ್ದು, ಅರಣ್ಯ ಇಲಾಖೆ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಕಳೆದ ತಿಂಗಳ ಹಿಂದೆ ಒಂದು ಹುಲಿಯನ್ನು ಸೆರೆ ಹಿಡಿಯಲಾಗಿತ್ತು. ಆದರೆ ಮತ್ತೆ ಹುಲಿ ಕಾಣಿಸಿಕೊಂಡು ರೈತರು ಜಮೀನುಗಳಿಗೆ ಹೋಗಲು ಭಯ ಪಡುವ ಪರಿಸ್ಥಿತಿ ನಿರ್ಮಾಣವಾಗಿದೆ.

ಇದೇ ಸಂದರ್ಭದಲ್ಲಿ ಮಾತನಾಡಿದ ಮಾಜಿ ತಾ.ಪಂ ಅಧ್ಯಕ್ಷ ಎಚ್.ಹನು ಅವರು ಹಸು ಕಳೆದುಕೊಂಡ ರೈತರಿಗೆ ಸೂಕ್ತ ಪರಿಹಾರ ನೀಡಬೇಕು ಎಂದು ಆಗ್ರಹಿಸಿದರು.



ಸರಗೂರು ವಲಯ ಅರಣ್ಯಾಧಿಕಾರಿ ಡಾ. ಲೋಕೇಶ್ ಎಸ್.ಎಲ್. ಮಾತನಾಡಿ ಹುಲಿ ಸೆರೆ ಹಿಡಿಯಲು ಕ್ರಮ ಕೈಗೊಳ್ಳಲಾಗುವುದು, ಹಾಗೆ ಹಸು ಕಳೆದುಕೊಂಡ ರೈತರಿಗೆ ಸೂಕ್ತ ಪರಿಹಾರ ನೀಡಲಾಗುವುದು ಎಂದು ತಿಳಿಸಿದರು. ರಾಜ್ಯ ಒಳ ಮೀಸಲಾತಿ ಹೋರಾಟಗಾರ ಪುಟ್ಟಣ್ಣ, ಮುಖಂಡರಾದ ದಾಸಯ್ಯ, ಮಂಜು ಅರಣ್ಯ ಇಲಾಖೆ ಭೈರಪ್ಪ, ಸಿಬ್ಬಂದಿಗಳು ಹಾಜರಿದ್ದರು

ಮಹಾಶಿವರಾತ್ರಿ ಅಂಗವಾಗಿ ಶ್ರೀಕಂಠೇಶ್ವರ ಸ್ವಾಮಿಯ ನಿರಂತರ ದರ್ಶನಕ್ಕೆ ವ್ಯವಸ್ಥೆ

ನಂಜನಗೂಡು: ದಕ್ಷಿಣ ಕಾಶಿ ಪ್ರಸಿದ್ಧಿಯ ನಂಜನಗೂಡಿನ ಶ್ರೀಕಂಠೇಶ್ವರಸ್ವಾಮಿ ದೇವಾಲಯದಲ್ಲಿ ಮಹಾಶಿವರಾತ್ರಿ ಆಚರಣೆಗೆ ಅಗತ್ಯ ಸಿದ್ಧತೆ ಕೈಗೊಳ್ಳಲಾಗಿದ್ದು ಫೆ.15ರ ಬೆಳಗಿನ ಜಾವ 4ರಿಂದ ಮಾರನೇ ದಿನ ಸೋಮವಾರ ರಾತ್ರಿವರೆಗೂ ಭಕ್ತಾಧಿಗಳಿಗೆ ದೇಗುಲ ಪ್ರವೇಶಕ್ಕೆ ಅನುವು ಮಾಡಿಕೊಡಲಾಗಿದೆ.



ಮಹಾಶಿವರಾತ್ರಿ ಪ್ರಯುಕ್ತ ಭಾನುವಾರ ಮುಂಜಾನೆಯಿಂದಲೇ ದೇವಾಲಯದ ಆಗಮಿಕ ನಾಗಚಂದ್ರ ದೀಕ್ಷಿತ್ ನೇತೃತ್ವದಲ್ಲಿ ಶ್ರೀಕಂಠೇಶ್ವರಸ್ವಾಮಿಗೆ ಧಾರ್ಮಿಕ ಪೂಜಾ ಕಾರ್ಯಕ್ರಮಗಳು ಆರಂಭವಾಗಲಿದ್ದು, ಬೆಳಗ್ಗೆ 4 ಗಂಟೆಗೆ ಶ್ರೀಕಂಠೇಶ್ವರಸ್ವಾಮಿಗೆ ಗಂಗಾ ಜಲ ಅಭಿಷೇಕ, ಫಲಪಂಚಾಮೃತಾಭಿಷೇಕ ಹಾಗೂ ಮಹಾನ್ಯಾಸಪೂರ್ವಕ ಏಕದಶಾವಾರ, ರುದ್ರಾಭಿಷೇಕ ನೆರವೇರಿಸಿ ಬಳಿಕ ಭಕ್ತಾಧಿಗಳಿಗೆ ದೇವರ ದರ್ಶನಕ್ಕೆ ಅನುವು ಮಾಡಿಕೊಡಲಾಗುತ್ತದೆ.

ನಂತರ ಮಹಾಶಿವರಾತ್ರಿ ಅಂಗವಾಗಿ ಸಂಜೆ 6 ಘಂಟೆಗೆ ಮೊದಲ ಜಾವದ ಪೂಜೆ, ರಾತ್ರಿ 9 ಘಂಟೆಗೆ ಎರಡನೇ ಜಾವದ ಪೂಜೆ, ಮಧ್ಯರಾತ್ರಿ 12ಘಂಟೆಗೆ ಮೂರನೇ ಜಾವ ಹಾಗೂ ಬೆಳಗ್ಗೆ 3ಗಂಟೆಗೆ ನಾಲ್ಕನೇ ಜಾವದ ಅಭಿಷೇಕ ಮತ್ತು ಪೂಜಾ ಕಾರ್ಯಕ್ರಮಗಳು ಶ್ರೀಕಂಠೇಶ್ವರಸ್ವಾಮಿಗೆ ವಿದ್ಯುಕ್ತವಾಗಿ ನೆರವೇರಲಿದೆ. ಜೊತೆಗೆ ರುದ್ರಪಾರಾಯಣ ಸಹಾ ದೇವಾಲಯದಲ್ಲಿ ನಿಯಮಿತವಾಗಿ ನಡೆಯಲಿದೆ.

ಇನ್ನು ದೇವಾಲಯದ ಮುಂಭಾಗದಲ್ಲಿ ಜಾಗರಣೆಯಲ್ಲಿ ನಿರತರಾಗುವ ಭಕ್ತಾಧಿಗಳಿಗೆ ನೆರವಾಗುವ ಸಲುವಾಗಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಸೋಮವಾರ ಬೆಳಗ್ಗೆ 6.30ರ ಸಮಯದಲ್ಲಿ ಜರುಗುವ ಕೈಲಾಸ ವಾಹನೋತ್ಸವದೊಂದಿಗೆ ಮಹಾ ಶಿವರಾತ್ರಿ ಪೂಜಾ ಕಾರ್ಯಕ್ರಮಗಳು ಸಂಪನ್ನಗೊಳ್ಳುತ್ತವೆ.

ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿ ಕೃಷ್ಣ, ಶಿವರಾತ್ರಿ ಸಿದ್ಧತೆಗಳ ಬಗ್ಗೆ ಮಾಹಿತಿ ನೀಡಿ, ಕಳೆದ ವರ್ಷದಂತೆ ಈ ವರ್ಷ ಸಹ ಪಾಸ್ ನೀಡಿಕೆಯನ್ನು ರದ್ದುಪಡಿಸಲಾಗಿದ್ದು, ಸರತಿ ಸಾಲಿನಲ್ಲಿ ದೇವಾಲಯಕ್ಕೆ ತೆರಳುವ ಭಕ್ತರಿಗೆ ಯಾವುದೇ ತೊಂದರೆಯಾಗದಂತೆ ಎಚ್ಚರಿಕೆ ವಹಿಸಲಾಗಿದೆ ಎಂದು ತಿಳಿಸಿದರು.

ಶ್ರೀ ಶಂಭುಲಿಂಗೇಶ್ವರಸ್ವಾಮಿಯ ವಾರ್ಷಿಕೋತ್ಸವ

ಸುತ್ತೂರು: ನಂಜನಗೂಡು ತಾಲ್ಲೂಕು ಮುಳ್ಳೂರು ಗ್ರಾಮದ ಕಪಿಲಾ ನದಿ ತೀರದಲ್ಲಿ ಒಡೆದು ಮೂಡಿರುವ ಶ್ರೀ ಶಂಭುಲಿಂಗೇಶ್ವರ ಸ್ವಾಮಿಯವರ 15ನೇ ವರ್ಷದ ವಾರ್ಷಿಕೋತ್ಸವ ಸಮಾರಂಭ ವಿಜೃಂಭಣೆಯಿಂದ ನಡೆಯಿತು.



ಕಾರ್ಯಕ್ರಮವನ್ನು ಮಲ್ಲನಮೂಲೆ ಶ್ರೀ ಚೆನ್ನಬಸವಸ್ವಾಮಿಗಳು ಉದ್ಘಾಟಿಸಿದರು. ಇಂದು ಬೆಳಿಗ್ಗೆಯಿಂದಲೆ ಬ್ರಾಹ್ಮಿ ಮಹೂರ್ತದಲ್ಲಿ ಗಂಗಾ ಪೂಜೆ, ಮಹಾಗಣಪತಿ, ಉಮಾಮಹೇಶ್ವರ, ನವಗ್ರಹ ಪೂಜೆ ನೆರವೇರಿತು. ಶ್ರೀ ಶಂಭುಲಿಂಗೇಶ್ವರ ಸ್ವಾಮಿ ಹಾಗೂ ಆಲದಮ್ಮ ದೇವಿಗೆ, ಮಹಾಗಣಪತಿ, ವೀರಭದ್ರೇಶ್ವರ, ನಂಜುಂಡೇಶ್ವರ ಹಾಗೂ ನಂದೀಶ್ವರ ಸ್ವಾಮಿಯವರುಗಳಿಗೆ ಪಂಚಾಮೃತ ಅಭಿಷೇಕ, ಏಕವಾರ ರುದ್ರಾಭಿಷೇಕ, ವಿಶೇಷ ಪುಷ್ಪಾಲಂಕಾರ ಮಹಾಮಂಗಳಾರತಿ ನೆರವೇರಿಸಲಾಯಿತು.

ಸುತ್ತ ಮುತ್ತಲ ಗ್ರಾಮಸ್ಥರು, ಸೇರಿದಂತೆ ಜಿಲ್ಲೆಯ ಹಲವಾರು ಭಾಗಗಳಿಂದ ಭಕ್ತಾದಿಗಳು ತಂಡೋಪತಂಡವಾಗಿ ಆಗಮಿಸಿದ್ದರು. ಇದೇ ವೇಳೆ ದೇವಾಲಯ ಸಮಿತಿಯ ಅಧ್ಯಕ್ಷರಾದ ದೇವಲಾಪುರ ಶಿವಸ್ವಾಮಿರವರು ಮಾತನಾಡಿದರು.

ಶ್ರೀ ಗುರುಶಾಂತಸ್ವಾಮಿಗಳು, ಶ್ರೀ ಪರಶಿವಸ್ವಾಮಿಗಳು, ಶ್ರೀ ಬಸವಲಿಂಗಸ್ವಾಮಿಗಳು, ಶ್ರೀ ಜಡೆಸ್ವಾಮಿಗಳು, ಆಲತ್ತೂರು ಗೌ॥ ಮಹೇಶ್, ಪಾ॥ಶಿವಣ್ಣ, ಕಡಕೊಳ ಜವರನಾಯಕ, ಮರಿನಾಯಕ, ರಾಜಶೇಖರ, ಚಾಮುಂಡಿಬೆಟ್ಟ ಶಂಭುಲಿಂಗನಾಯಕ, ನಾಗರಾಜು, ರಾಮಪುರ ಚಿನ್ನಸ್ವಾಮಿ, ಗುರುಮಲ್ಲಪ್ಪ, ದಾಸನೂರು ಗ್ರಾಮದ ಅರ್ಚಕರು, ಮುಳ್ಳೂರು ಗ್ರಾಮದ ಗ್ರಾಮಸ್ಥರು ಸೇರಿದಂತೆ ಸುತ್ತ ಮುತ್ತಲ ಎಲ್ಲಾ ಗ್ರಾಮಗಳ ಮುಖಂಡರುಗಳು, ಭಕ್ತಾದಿಗಳು ಪಾಲ್ಗೊಂಡಿದ್ದರು. ಇದೇ ವೇಳೆ ದೇವಾಲಯಕ್ಕೆ ಆಗಮಿಸಿದ ಎಲ್ಲಾ ಭಕ್ತಾದಿಗಳಿಗೂ ಅನ್ನ ಸಂತರ್ಪಣೆ ಏರ್ಪಡಿಸಲಾಗಿತ್ತು.

ಕುಡಿಯುವವರಿಗೆ ಸಮಾಜದಲ್ಲಿ ಗೌರವ, ಮಾನ್ಯತೆ ಇರದು

10 ದಿನಗಳ ಮದ್ಯ ವರ್ಜನ ಶಿಬಿರ ಸಮಾರೋಪದಲ್ಲಿ ತಿಳುವಳಿಕೆ

ಹೆಚ್.ಡಿ.ಕೋಟೆ: ಕುಡಿತದಿಂದ ಸಮಾಜದಲ್ಲಿ ಗೌರವ, ಮಾನ್ಯತೆ ಇರುವುದಿಲ್ಲ, ಕುಡಿಯುವುದರಿಂದ ಕುಟುಂಬ ಮತ್ತು ಸಮುದಾಯದ ಮೇಲೆ ಪರಿಣಾಮ ಬೀರುತ್ತದೆ ಎಂದು ತಾಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣ ಅಧಿಕಾರಿ ಮಹೇಶ್ ತಿಳಿಸಿದರು.

ಪಟ್ಟಣದಲ್ಲಿರುವ ಬಿರ್ಸಾ ಮುಂಡ ವನವಾಸಿ ಕಲ್ಯಾಣ್ ಪರಿಷದ್ ಕೇಂದ್ರದಲ್ಲಿ ಸ್ವಾಮಿ ವಿವೇಕಾನಂದ ಯೂಥ್ ಮೂವ್‌ಮೆಂಟ್, ಸಾಮಾಜಿಕ ಮತ್ತು ಆರ್ಥಿಕ ಸಬಲೀಕರಣ ವತಿಯಿಂದ ಹತ್ತು ದಿನಗಳ ಮದ್ಯವರ್ಜನ ಶಿಬಿರವನ್ನು ಆಯೋಜಿಸಿದ್ದು, ಶಿಬಿರದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು ಕುಡಿತದಿಂದ ಸಾಕಷ್ಟು ಕುಟುಂಬಗಳು, ಸಮುದಾಯದ ಮೇಲೆ ಕೆಟ್ಟ ಪರಿಣಾಮ ಬೀಳುತ್ತಿವೆ. ಸಂಸಾರಗಳು ಬೀದಿಗೆ ಬಂದಿವೆ, ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ಸಂಸ್ಥೆ ಶಿಬಿರ ಮಾಡುವ ಮೂಲಕ ಒಳ್ಳೆಯ ಅವಕಾಶ ಕಲ್ಪಿಸಿ ಕೊಟ್ಟಿದೆ ಇನ್ನು ಮುಂದೆ ಒಳ್ಳೆಯ ಜೀವನವನ್ನು ರೂಪಿಸಿಕೊಳ್ಳಿ ಎಂದರು.

ಹೆಚ್.ಡಿ.ಕೋಟೆ ವಕೀಲರ ಸಂಘದ ಅಧ್ಯಕ್ಷರಾದ ಗಂಗರಾಜು ಮಾತನಾಡಿ, ವಿವೇಕಾನಂದರ ನುಡಿಯಂತೆ ಏಳಿ ಎದ್ದೇಳಿ ಜಾಗೃತರಾಗಿ ಗುರಿಮುಟ್ಟುವ ತನಕ ನಿಲ್ಲದಿರಿ ಅದರಂತೆ ಈಗಲೂ ಸಹ ನೀವು ಮನಸ್ಸು ಮಾಡಿದರೆ ಕುಡಿತದಿಂದ ಹೊರಬರಬಹುದು. ನಿಮ್ಮ ಕುಟುಂಬದ ಜೊತೆಯಲ್ಲಿ ಉತ್ತಮ ಜೀವನ ನಡೆಸಬೇಕು ಇಂಥ ಒಂದು ಶಿಬಿರವನ್ನು ನಡೆಸಿದ್ದಾರೆ. ಈ ಶಿಬಿರದಲ್ಲಿ ಪಾಲ್ಗೊಂಡು ನೀವು ಮುಂದಿನ ದಿನಗಳಲ್ಲಿ ಹೊಸ ಜೀವನ ನಡೆಸಿ ಎಂದು ಹಾರೈಸಿದರು.

ಶಿಬಿರದಲ್ಲಿ 30 ಶಿಬಿರಾರ್ಥಿಗಳು ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ವನವಾಸಿ ಕಲ್ಯಾಣ ಪರಿಷತ್ ಸಂಚಾಲಕ ಮಣಿಕಂಠ, ಸಾಮಾಜಿಕ ಮತ್ತು ಆರ್ಥಿಕ, ಸಬಲೀಕರಣ ವ್ಯವಸ್ಥಾಪಕ ಶಂಕರ್, ಸಂಯೋಜಕ ನಾಗೇಶ, ಸಿಬ್ಬಂದಿಗಳಾದ ರವಿ ಕುಮಾರ್, ಶಿವಕುಮಾರ, ಸತೀಶ್, ಸಣ್ಣಸ್ವಾಮಿ, ಭರತ್, ಮನೋಹರ್, ರಘು ಭಾಗವಹಿಸಿದ್ದರು.



ಮದ್ಯವರ್ಜನ ಶಿಬಿರ ಸಮಾರೋಪ ಸಮಾರಂಭ ಕಾರ್ಯಕ್ರಮ ನಡೆಯಿತು.

ಸಾಲಿಗ್ರಾಮ ಪಟ್ಟಣ ಪಂಚಾಯಿತಿಯಾಗಿ ಅಭಿವೃದ್ಧಿ

ಸಾಲಿಗ್ರಾಮ: ಸಾಲಿಗ್ರಾಮ ಗ್ರಾಮ ಪಂಚಾಯಿತಿಯನ್ನು ಪಟ್ಟಣ ಪಂಚಾಯಿತಿಯಾಗಿ ಮೇಲ್ದರ್ಜೆಗೆ ಏರಿಸುವ ಮೂಲಕ ತಾಲೂಕು ಕೇಂದ್ರಕ್ಕೆ ಅಭಿವೃದ್ಧಿಯ ಮುನ್ನುಡಿ ಬರೆಯಲಾಗಿದೆ ಎಂದು ಎಂಸಿಡಿಸಿಸಿ ಬ್ಯಾಂಕಿನ ಅಧ್ಯಕ್ಷ ದೊಡ್ಡಸ್ವಾಮೇಗೌಡ ತಿಳಿಸಿದರು.



ಸಾಲಿಗ್ರಾಮ ಪಟ್ಟಣದಲ್ಲಿ ತಾಲೂಕು ಕಾಂಗ್ರೆಸ್ ಘಟಕದ ವತಿಯಿಂದ ಹಮ್ಮಿಕೊಂಡಿದ್ದ ಅಭಿನಂದನಾ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದರು.

ಈ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಉದಯ್ ಶಂಕರ್, ಚಂದ್ರು, ಸಣ್ಣಪ್ಪ, ಅಸ್ಲಾಂ ಪಾಷಾ, ಸಂತೋಷ್, ಕಂಠಿ ಕುಮಾರ್, ಎಲ್‌ಐಸಿ ಮಹದೇವ, ಡೇರಿ ಮಾದು, ರಮೇಶ್, ಪಣಿತ್, ಹನಸೋಗೆ ನವೀನ್, ಪರಮೇಶ್, ಪಾಲಾಕ್ಷ, ಜಯರಾಮ ನಾಯಕ, ಪ್ರಭಾಕರ್, ಕೊತ್ವಾಲ್ ಮಂಜು,ಬಲರಾಮೇಗೌಡ, ಗುಣಪಾಲ್ ಜೈನ್ ಮತ್ತಿತರರು ಇದ್ದರು.

ಯತೀಂದ್ರ ಸಿದ್ದರಾಮಯ್ಯ ಮೇಲೆ ಸಲ್ಲದ ಆರೋಪ

ನಂಜನಗೂಡು: ಮಾಜಿ ಸಂಸದ ಪ್ರತಾಪ್ ಸಿಂಹ ತಮ್ಮ ಪ್ರಚಾರದ ತೆವಲಿಗಾಗಿ ಶಾಸಕ ಯತೀಂದ್ರ ಸಿದ್ದರಾಮಯ್ಯನವರ ಮೇಲೆ ಆಧಾರರಹಿತ ಆರೋಪ ಮಾಡಿ ತೋಜೋವಧೆ ಮಾಡುತ್ತಿದ್ದಾರೆ ಎಂದು ರಾಜ್ಯ ಕ್ರಿಶ್ಚಿಯನ್ ಅಭಿವೃದ್ಧಿ ನಿಗಮದ ನಿರ್ದೇಶಕ ಕೆ.ಸಿ. ಸಂದೀಪ್ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಸಿದ್ದರಾಮಯ್ಯನವರು ಮೊದಲ ಬಾರಿಗೆ ಮುಖ್ಯಮಂತ್ರಿಯಾಗಿದ್ದ 2013 ರಿಂದ 2018 ರವರೆಗೆ ಯತೀಂದ್ರ ಸಿದ್ದರಾಮಯ್ಯ ತಂದೆಯ ಹೆಸರು ಬಳಸಿ ಯಾವುದೇ ಸರ್ಕಾರಿ ಸೌಲಭ್ಯ ಪಡೆದುಕೊಂಡವರಲ್ಲ. ದೇವರ ದರ್ಶನಕ್ಕೆ ಚಾಮುಂಡಿ ಬೆಟ್ಟಕ್ಕೆ ಬಂದಾಗ ಸಾಮಾನ್ಯ ಜನರಂತೆ ಸರತಿ ಸಾಲಿನಲ್ಲಿ ನಿಂತು ದೇವರ ದರ್ಶನ ಪಡೆಯುತ್ತಿದ್ದರು. ರಾಕೇಶ್ ಸಿದ್ದರಾಮಯ್ಯನವರ ಹಠಾತ್ ನಿಧನದಿಂದ ಅನಿವಾರ್ಯವಾಗಿ ರಾಜಕೀಯ ಪ್ರವೇಶ ಮಾಡಿದರು. ಯತೀಂದ್ರ ಸಿದ್ದರಾಮಯ್ಯ ವರ್ಗಾವಣೆ ದಂದೆಯಲ್ಲಿ ತೊಡಗಿದ್ದಾರೆ ಎಂದು ಆರೋಪ ಮಾಡುತ್ತಾರೆ, ಆ ರೀತಿ ವರ್ಗಾವಣೆ ದಂಧೆ ಮಾಡಿರುವ ಬಗ್ಗೆ ದಾಖಲೆಗಳಿದ್ದರೆ ಪ್ರದರ್ಶಿಸಲಿ. ಬಿಜೆಪಿ ರಾಜ್ಯ ಮುಖಂಡರನ್ನು ಓಲೈಸಲು ಮಾಜಿ ಸಂಸದ ಪ್ರತಾಪ್ ಸಿಂಹ ಆಧಾರ ರಹಿತ ಆರೋಪ ಮಾಡುವುದನ್ನು ಮುಂದುವರೆಸಿದರೆ ಪ್ರತಿಭಟನೆ ಮಾಡುತ್ತಾರೆ ಎಂದು ಎಚ್ಚರಿಕೆ ನೀಡಿದರು.

ಉಚಿತ ಕಣ್ಣಿನ ತಪಾಸಣಾ ಶಿಬಿರ



ಬನ್ನೂರಿನ ರೋಟರಿ ಸಂಸ್ಥೆ, ಕಾನ್ ಸಿಂಗ್ ಜೀ ರಾಜ್ ಪುರೋಹಿತ್, ಶ್ರೀ ಗೌರಿದೇವಿ, ಲಯನ್ಸ್ ಕ್ಲಬ್ ಆಫ್ ಈರೋಡ್ ಕಾವೇರಿ ಟ್ರಸ್ಟ್, ಕೊಯಮತ್ತೂರು ಕಣ್ಣಿನ ಆಸ್ಪತ್ರೆ ಸಂಯುಕ್ತಾಶ್ರಯದಲ್ಲಿ ಶನಿವಾರ ಉಚಿತ ಕಣ್ಣಿನ ತಪಾಸಣಾ ಶಿಬಿರ ನಡೆಯಿತು.

ಶ್ರೀ ಕಲ್ಲೂರೇಶ್ವರಸ್ವಾಮಿ ದೇವಸ್ಥಾನದಲ್ಲಿ ಹಾಸ್ಯ ಕಾರ್ಯಕ್ರಮ

ಹುಣಸೂರು, ಫೆ14– ತಾಲೂಕಿನ ಹನಗೂಡು ಹೋಬಳಿ ಕೊಲ್ಲೂರಪ್ಪನ ಬೆಟ್ಟದ ಶ್ರೀ ಕಲ್ಲೂರೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಭಾನುವಾರ (ಫೆ15) 37ನೇ ಶಿವರಾತ್ರಿ ಹಬ್ಬದ ಅಂಗವಾಗಿ ಹಾಸ್ಯ ಕಾರ್ಯಕ್ರಮ ನಡೆಯಲಿದೆ ಎಂದು ಕೈಲಾಸ ಬೆಟ್ಟದ ಅಧ್ಯಕ್ಷ ಚಂದ್ರಶೇಖರ್ ತಿಳಿಸಿದರು.



ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರತಿ ವರ್ಷದಂತೆ ಶಿವರಾತ್ರಿ ಅಂಗವಾಗಿ ಭಾನುವಾರ ಬೆಳಿಗ್ಗೆ ಹೋಮ, ಎಣ್ಣೆ ಮಜ್ಜನ ಮಹಾಮಂಗಳಾರತಿ ನಡೆಯಲಿದ್ದು, ದೇವಸ್ಥಾನದಲ್ಲಿ ದೀಪಾಲಂಕಾರ ಮಾಡಲಾಗುವುದು ಎಂದರು.

ಕಿರಂಗೂರು ಸ್ವಾಮಿ ಮಾತನಾಡಿ, ಮಾರನೆ ದಿನವಾದ ಸೋಮವಾರ ಬೆಳಿಗ್ಗೆ 6 ಗಂಟೆಗೆ ಹಾಲರವಿ ಸೇವೆ, 7ಗಂಟೆಗೆ ಕೊಂಡೋತ್ಸವದಲ್ಲಿ ಬರುವ ಭಕ್ತಾದಿಗಳು ಕೊಂಡ ಆಯಲಿದ್ದಾರೆ. ನಂತರ ಎಲ್ಲಾ ಭಕ್ತಾಧಿಗಳಿಗೆ ಅನ್ನಸಂತರ್ಪಣೆ ವಿನಿಯೋಗವಿರುತ್ತದೆ.

ಸಮಿತಿಯ ಕಾರ್ಯದರ್ಶಿ ಹೆಚ್.ಎಸ್. ಮಂಜು ಮಾತನಾಡಿ, ಶ್ರೀ ಕಲ್ಲೂರೇಶ್ವರ ಭಾಗದಲ್ಲಿ ಗಿರಿಜನರು ಜಾಸ್ತಿ ಇದ್ದು, ಮದುವೆ ಇನ್ನಿತರೆ ಶುಭ ಕಾರ್ಯಗಳಿಗೆ ಒಂದು ಸಮುದಾಯ ಭವನದ ಅಗತ್ಯವಿದ್ದು, ಈ ಭಾಗದ ಶಾಸಕರಾದ ಜಿ.ಡಿ.ಹರೀಶ್‌ಗೌಡರು ಹಾಗೂ ಸಂಸದ ಯದುವೀರ್ ಒಡೆಯರ್ ಅವರಿಗೆ ಮನವಿ ಮಾಡಿದರು.

ಸುದ್ದಿ ಗೋಷ್ಠಿಯಲ್ಲಿ ಗೌರವ ಅಧ್ಯಕ್ಷ ಕಿರಂಗೂರು ರಮೇಶ್, ಸಹಕಾರ್ಯದರ್ಶಿ ಭೈರೇಗೌಡ, ಖಜಾಂಚಿ ರೇವಣ್ಣ, ಹಿಂಡುಗುಡ್ಲು ಪಾಪಣ್ಣ, ಮಾದಹಳ್ಳಿ ರವಿ ಇದ್ದರು.

ಮಾದಿಗ ಸಮುದಾಯಕ್ಕೆ ಸರ್ಕಾರದ ಸೌಲಭ್ಯಗಳು ಸಿಗುತ್ತಿಲ್ಲ

ಪದಾಧಿಕಾರಿಗಳ ಸಭೆಯಲ್ಲಿ ಮಾಜಿ ಎಂಎಲ್ಸಿ ಸಿ.ರಮೇಶ್ ಬೇಸರ


ತಿ.ನರಸೀಪುರ, ಫೆ.14– ಶಾಸಕರು ಅಧ್ಯಕ್ಷರಾಗಿರುವ ಸಮಿತಿಯಲ್ಲಿ ಮಾದಿಗ ಸಮಾಜದ ಯಾವೊಬ್ಬನೇ ಫಲಾನುಭವಿಗಳಿಗೆ ಸರ್ಕಾರದ ಸವಲತ್ತುಗಳು ದೊರಕುತ್ತಿಲ್ಲ ಎಂದು ವಿಧಾನಪರಿಷತ್ ಮಾಜಿ ಸದಸ್ಯ ಸಿ.ರಮೇಶ್ ಬೇಸರ ವ್ಯಕ್ತಪಡಿಸಿದರು.

ಪಟ್ಟಣದ ಅರುಂಧತಿ ಸಹಕಾರ ಸಂಘದ ಕಚೇರಿಯಲ್ಲಿ ಶನಿವಾರ ನಡೆದ ಮಾದಾರ ಮಹಾಸಭಾದ ಪದಾಧಿಕಾರಿಗಳ ಸಭೆಯಲ್ಲಿ ತಾಲೂಕು ಮಾದಾರ ಮಹಾಸಭಾದ ಪದಾಧಿಕಾರಿಗಳ ಪಟ್ಟಿ ಬಿಡುಗಡೆ ಮಾಡಿ ಅವರು ಮಾತನಾಡಿದರು.

ಸರ್ಕಾರದಿಂದ ವಿವಿಧ ಸವಲತ್ತುಗಳನ್ನು ವಿತರಿಸುವ ಕಮಿಟಿಗೆ ಶಾಸಕರೇ ಅಧ್ಯಕ್ಷರಾಗಿರುತ್ತಾರೆ. ಸರ್ಕಾರದಲ್ಲಿ ಇಂತಹ ಅನೇಕ ಕಮಿಟಿಗಳಿವೆ. ಈವರೆಗೆ ಮಾದಿಗ ಸಮುದಾಯದ ಒಬ್ಬನೇ ಒಬ್ಬ ವ್ಯಕ್ತಿಗೆ ಸವಲತ್ತು ದೊರೆತ ಉದಾಹರಣೆ ಇಲ್ಲ, ಹಾಗಾಗಿ ಸಮಸ್ಯೆ ಗುರುತಿಸಿ ಸವಲತ್ತು ಪಡೆಯುವ ಕೆಲಸಕ್ಕೆ ಸಮಾಜ ಮುಂದಾಗಬೇಕಿದೆ ಎಂದರು.

ಎಲ್ಲ ಸಮುದಾಯದವರಿಗೂ ಅವರದ್ದೇ ಆದ ಮಹಾಸಭಾಗಳಿವೆ, ವೀರಶೈವ, ಒಕ್ಕಲಿಗ ಸೇರಿದಂತೆ ಎಲ್ಲ ಸಮಾಜಗಳಲ್ಲೂ ಇವೆ. ನಮ್ಮಲ್ಲಿ ಇಲ್ಲ ಎಂದರೆ ಹೇಗೆ, ನಮ್ಮಲ್ಲಿ ಜಾತಿ ಇಲ್ಲ ಎಂದರೆ ಸುಳ್ಳಾಗುತ್ತದೆ. ಹಾಗಾಗಿ ಎಲ್ಲ ರಾಜಕೀಯ ಪಕ್ಷಗಳು ಸೇರಿ ಮಾದಿಗ ಸಭಾ ರಚನೆಯಾಗಿದೆ. ಬಿಜೆಪಿಯಿಂದ ಗೋವಿಂದ ಕಾರಜೋಳ, ನಾರಾಯಣಸ್ವಾಮಿ ಮಹಾಸಭಾದ ಉಪಾಧ್ಯಕ್ಷರಾಗಿದ್ದರೆ, ತಿಮ್ಮಾಪುರ, ಆಂಜನೇಯ ಪ್ರಧಾನ ಕಾರ್ಯದರ್ಶಿಯಾಗಿದ್ದಾರೆ. ರಾಜ್ಯ ರಾಜಕಾರಣದಲ್ಲಿ ನಾನು ಸೇರಿದಂತೆ ಎಂ.ಶಿವಣ್ಣ, ಧರ್ಮಸೇನರನ್ನು ಆಯ್ಕೆ ಮಾಡಿಕೊಂಡಿದ್ದಾರೆ ಎಂದರು.

ಈಗ ಅಸ್ತಿತ್ವಕ್ಕೆ ತರಲಾಗಿರುವ ಸಂಘವು ಅಡಾಕ್ ಕಮಿಟಿಯಾಗಿದ್ದು, ಸಮಿತಿಯ ಪ್ರತಿಯೊಬ್ಬರು ಹೆಚ್ಚಿನ ಸದಸ್ಯತ್ವ ಮಾಡಿಸಬೇಕು. ಸದಸ್ಯತ್ವ ನೋಂದಣಿಗೆ ಕೊನೆಯ ದಿನ ಹತ್ತಿರ ಬರುತ್ತಿರುವ ಹಿನ್ನೆಲೆಯಲ್ಲಿ ಒಂದು ತಾಲೂಕಿಗೆ ಒಂದು ಸಾವಿರ ಜನರನ್ನು ಸದಸ್ಯತ್ವ ಮಾಡಿಸಬೇಕು. ಸದಸ್ಯತ್ವ ನೋಂದಣಿ ಪ್ರಕ್ರಿಯೆ ಮುಗಿದ ನಂತರ ನೋಂದಾಯಿತ ಸದಸ್ಯರು ಸೇರಿ ತಮಗೆ ಬೇಕಾದ ಹೊಸ ಸಮಿತಿಯನ್ನು ತಾಲೂಕು, ಜಿಲ್ಲಾ ಮಟ್ಟದಲ್ಲಿ ಆಯ್ಕೆ ಮಾಡಿಕೊಳ್ಳಲಿದ್ದಾರೆ ಎಂದು ತಿಳಿಸಿದರು. ಎಲ್ಲಾ ಜಿಲ್ಲೆಗಳಲ್ಲಿ ಸದಸ್ಯತ್ವ ನೋಂದಣಿ ಕಾರ್ಯ ಬೃಹತ್ ಮಟ್ಟದಲ್ಲಿ ನಡೆಯುತ್ತಿದೆ. 500 ರೂ.ನೊಂದಣಿ ಶುಲ್ಕ ನೀಡಬೇಕು. ನಂತರ ಸಹಕಾರ ಇಲಾಖೆಯ ಸಹಕಾರದೊಂದಿಗೆ ಚುನಾವಣೆ ನಡೆಸಬೇಕಾಗುತ್ತದೆ ಎಂದು ತಿಳಿಸಿದರು. ಈ ವೇಳೆ ಡಾ.ಪ್ರದೀಪ್, ಮಾದಪ್ಪ ಮಾದಿಗ್ ಇದ್ದರು.




ಶನಿವಾರ ನಡೆದ ಮಾದಾರ ಮಹಾಸಭಾದ ಪದಾಧಿಕಾರಿಗಳ ಸಭೆಯಲ್ಲಿ ಸಿ.ರಮೇಶ್ ಮಾತನಾಡಿದರು.

ಈಗಾಗಲೇ ಮಾದಾರ ಮಹಾಸಭಾಕ್ಕೆ 15 ರಿಂದ 20 ಎಕರೆ ಜಮೀನು ನೀಡಬೇಕೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆದೇಶ ನೀಡಿದ್ದಾರೆ, ಅಲ್ಲಿ ಕಾಲೇಜು, ಹೈಸ್ಕೂಲ್ ತೆರೆಯುವ ಉದ್ದೇಶ ಹೊಂದಲಾಗಿದೆ. ಮಾದಾರ ಮಹಾಸಭಾದ ಕಚೇರಿಗಾಗಿ ಜಯಮಹಲ್‌ನಲ್ಲಿ 2 ಎಕರೆ ಭೂಮಿ ಕೊಡಬೇಕೆಂದು ಚೀಫ್ ಸೆಕ್ರೆಟರಿ ಪತ್ರ ಬರೆದಿದ್ದಾರೆ. ವರ್ಗೀಕರಣ ವಿಷಯಕ್ಕೆ ಸಂಬಂಧಿಸಿದಂತೆ ಮಾದಾರ ಮಹಾಸಭೆ ಕೆ.ಎಚ್.ಮುನಿಯಪ್ಪನವರ ಅಧ್ಯಕ್ಷತೆಯಲ್ಲಿ ಬಹಳ ದೊಡ್ಡ ಕೆಲಸವನ್ನೇ ಮಾಡಿದೆ. ಹಾಗಾಗಿ ಮಹಾಸಭಾದ ಪರವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಗೋವಿಂದ ಕಾರಜೋಳ, ಕೆ.ಎಚ್.ಮುನಿಯಪ್ಪ ಹಾಗು ನಾರಾಯಣಸ್ವಾಮಿ ಯವರಿಗೆ ಅಭಿನಂದನೆ ಸಲ್ಲಿಸುತ್ತೇನೆ – ಸಿ.ರಮೇಶ್

ಬುಡಕಟ್ಟು ಹೋರಾಟಗಾರ್ತಿ ಸೋಮಮ್ಮ ನಿಧನ

ಹೆಚ್.ಡಿ.ಕೋಟೆ, ಫೆ.14– ಬುಡಕಟ್ಟು ಸಮುದಾಯದ ಹಕ್ಕುಗಳ ಹೋರಾಟಗಾರ್ತಿ, ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಸೋಮಮ್ಮ (93) ನಿಧನರಾಗಿದ್ದಾರೆ.



ತಾಲೂಕು ದೊಡ್ಡ ಭೈರನ ಕುಪ್ಪೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಆನೆಮಾಳಹಾಡಿ ನಿವಾಸಿ ಸೋಮಮ್ಮ, ಅವರ ಅಂತ್ಯಕ್ರಿಯೆಯನ್ನು ಭಾನುವಾರ (ಫೆ.15) ಮನಿ ಮೂಲೆ ಹಾಡಿ ಬೆಟ್ಟ ಕುರುಬ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು ಎಂದು ಬೆಟ್ಟ ಕುರುಬ ಸಮುದಾಯದ ಮುಖಂಡರು ತಿಳಿಸಿದ್ದಾರೆ.

ಇವರು ದಿ. ಚಾಂಡಯ್ಯನವರ ಪತ್ನಿಯಾಗಿದ್ದರು. ಬೆಟ್ಟಕುರುಬ ಹೋಸೇಲ್ ಮಗೆಗೆ ಸೇರಿದವರು. ಇಂದು ಮಧ್ಯಾಹ್ನ 12 ಗಂಟೆಗೆ ಇವರು ನಿಧನರಾದರು. ಇವರ ಇಬ್ಬರು ಮಕ್ಕಳು ಸಹ ನಿಧನರಾಗಿದ್ದು, ಮೊಮ್ಮಕ್ಕಳು ಮಾತ್ರ ಇದ್ದಾರೆ.

1984ರಿಂದಲೂ ಬುಡಕಟ್ಟು ಕೃಷಿಕರ ಸಂಘದ ಜೊತೆಗೂಡಿ ಸಲಹೆಗಾರರಾಗಿ ಹೋರಾಟದಲ್ಲಿ ನೇತೃತ್ವ ವಹಿಸಿದ್ದರು. ಸತತವಾಗಿ FESA ಕಾಯ್ದೆ, ಬುಡಕಟ್ಟು ಪಾರಂಪರಿಕ ಅರಣ್ಯ ಹಕ್ಕು ಕಾಯ್ದೆ 2006, ಇವುಗಳ ಅನುಷ್ಠಾನ, ಹೈಕೋರ್ಟ್ ತೀರ್ಪು, ಡಾ.ಮುಜಾಫರ್ ಅಸಾದಿ ವರದಿ, ಮೂಲ ಸೌಕರ್ಯಗಳಂತಹ ಹತ್ತು ಹಲವು ಹೋರಾಟಗಳಲ್ಲಿ ಭಾಗಿಯಾಗಿದ್ದವರು ಇವತ್ತು ಇನ್ನಿಲ್ಲ. ಹಾಗೆಯೇ ಇವರು ಕನ್ನಡ ರಾಜ್ಯೋತ್ಸವ ಪ್ರಶಸ್ತಿ ವಿಜೇತರಾಗಿದ್ದರೂ ಕೂಡ.

ಇಂದು ಮಹಾ ಶಿವರಾತ್ರಿ: ಮೈಸೂರಿನ ಶಿವನ ದೇವಾಲಯಗಳಲ್ಲಿ ದಿನವಿಡೀ ವಿಶೇಷ ಪೂಜೆ

● ಅರಮನೆಯ ತ್ರಿನೇಶ್ವರ ದೇವಾಲಯದಲ್ಲಿ ಶಿವಲಿಂಗಕ್ಕೆ 11 ಕೆಜಿ ತೂಕದ ಚಿನ್ನದ ಕೊಳಗ ಧಾರಣೆ
● ವಿವಿಧೆಡೆ ಇರುವ ಮಲೆ ಮಹದೇಶ್ವರ, ಚಂದ್ರಮೌಳೇಶ್ವರ ದೇವಾಲಯಗಳಲ್ಲೂ ಶಿವರಾತ್ರಿ ಸಂಭ್ರಮ




ಶಿವರಾತ್ರಿ ಹಬ್ಬದ ವಿಶೇಷ ಪೂಜಾ ಮಹೋತ್ಸವಕ್ಕಾಗಿ ಜಿಲ್ಲಾ ಖಜಾನೆಯಿಂದ 11 ಕೆಜಿ ತೂಕದ ಚಿನ್ನದ ಕೊಳಗವನ್ನು ಅರಮನೆಯ ತ್ರಿನೇಶ್ವರಸ್ವಾಮಿ ದೇವಾಲಯಕ್ಕೆ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಎಂ.ಜೆ.ರೂಪ ಸಮ್ಮುಖದಲ್ಲಿ ತರಲಾಯಿತು. ಮತ್ತೊಂದು ಚಿತ್ರದಲ್ಲಿ ಮೈಸೂರಿನ ರಾಮಾನುಜ ರಸ್ತೆಯಲ್ಲಿರುವ ಗುರುಕುಲದ ಆವರಣದಲ್ಲಿರುವ 101 ಶಿವಲಿಂಗದ ಸ್ವಚ್ಛತಾ ಕಾರ್ಯ ನೆರವೇರಿಸುತ್ತಿರುವುದು.

ಮೈಸೂರು,ಫೆ.14(ಎಂಟಿವೈ)– ಭಾನುವಾರ (ಫೆ.15) ಶಿವನ ಆರಾಧನೆಯ ಶಿವರಾತ್ರಿ ಹಬ್ಬ ಆಚರಣೆಗೆ ಮೈಸೂರಿನ ಶಿವನ ದೇವಾಲಯಗಳಲ್ಲಿ ಸಕಲ ಸಿದ್ಧತೆಗಳನ್ನು ಕೈಗೊಳ್ಳಲಾಗಿದೆ. ರಾತ್ರಿಯಿಡಿ ಭಜನೆ, ಪೂಜಾ ಕೈಂಕರ್ಯಗಳು ಸೇರಿದಂತೆ ಇನ್ನಿತರ ಕಾರ್ಯಕ್ರಮಗಳ ಮೂಲಕ ಜಾಗರಣೆ ಆಚರಿಸಲಾಗುವುದು.

ಹೊಸ ವರ್ಷದ ಆರಂಭದ ಎರಡನೇ ಹಬ್ಬ ಶಿವರಾತ್ರಿ. ಹಿಂದೂ ಸಂಪ್ರದಾಯದಲ್ಲಿ ಈ ಹಬ್ಬಕ್ಕೆ ಮಹತ್ವವಿದ್ದು, ಹಬ್ಬದ ದಿನ ಶಿವನ ದೇವಾಲಯಕ್ಕೆ ತೆರಳಿ ದರ್ಶನ ಮಾಡಿ ರಾತ್ರಿಯಿಡಿ ಜಾಗರಣೆ ಮಾಡಿದರೆ ಒಳಿತಾಗುತ್ತದೆ ಎಂಬ ನಂಬಿಕೆಯಿದೆ. ಈ ಹಿನ್ನೆಲೆಯಲ್ಲಿ ಮೈಸೂರಿನ ಬಹುತೇಕ ಶಿವ, ಮಹದೇಶ್ವರ, ಅಮೃತೇಶ್ವರ, ಮಹಾಲಿಂಗೇಶ್ವರ, ಚಂದ್ರಮೌಳೇಶ್ವರ ಸೇರಿದಂತೆ ವಿವಿಧ ದೇವಾಲಯಗಳಲ್ಲಿ ಶಿವರಾತ್ರಿ ಹಬ್ಬದ ವಿಶೇಷ ಪೂಜಾ ಮಹೋತ್ಸವ ವಿಜೃಂಭಣೆಯಿಂದ ಜರುಗಲಿದೆ.

ಚಿನ್ನದ ಕೊಳಗ ಧಾರಣೆ: ಮೈಸೂರು ಅರಮನೆ ಆವರಣದಲ್ಲಿರುವ ಶ್ರೀ ತ್ರಿನೇಶ್ವರ ಸ್ವಾಮಿ ದೇವಾಲಯದ ಶಿವನ ವಿಗ್ರಹಕ್ಕೆ ಶಿವರಾತ್ರಿ ಹಬ್ಬದ ದಿನ ಚಿನ್ನದ ಕೊಳಗ ಧಾರಣೆ ಮಾಡಿ ವಿಶೇಷ ಪೂಜೆ ಸಲ್ಲಿಸಲಾಗುವುದು. ಪುತ್ರ ಪ್ರಾಪ್ತಿಗಾಗಿ ಹರಕೆ ಹೊತ್ತಿದ್ದ ಮೈಸೂರು ರಾಜವಂಶಸ್ಥರಾದ ಜಯಚಾಮರಾಜ ಒಡೆಯರ್ ಅವರು ಶ್ರೀಕಂಠದತ್ತ ಚಾಮರಾಜ ಒಡೆಯರ್ ಅವರ ಜನನದ ಹಿನ್ನೆಲೆಯಲ್ಲಿ ಚಿನ್ನದ ಕೊಳಗವನ್ನು ದೇವಾಲಯಕ್ಕೆ ನೀಡಿದ್ದಾರೆ. ಜಯಚಾಮರಾಜ ಒಡೆಯರ್ ಅವರು ಅರಮನೆಯ ತ್ರಿನೇಶ್ವರ, ಮಹದೇಶ್ವರ ಬೆಟ್ಟದ ಶ್ರೀ ಮಲೆ ಮಹದೇಶ್ವರ ಹಾಗೂ ನಂಜನಗೂಡಿನ ಶ್ರೀ ನಂಜುಂಡೇಶ್ವರ ದೇವಾಲಯಕ್ಕೆ ಚಿನ್ನದ ಕೊಳಗ ನೀಡಿದ್ದಾರೆ.

ಅರಮನೆಯ ತ್ರಿನೇಶ್ವರಸ್ವಾಮಿ ದೇವಾಲಯದ ಶಿವಲಿಂಗಕ್ಕೆ 11 ಕೆಜಿ ತೂಕದ ಚಿನ್ನದ ಕೊಳಗವನ್ನು ಶಿವರಾತ್ರಿ ಹಬ್ಬದ ದಿನದಂದು ಮಾತ್ರ ಧರಿಸಿ ವಿಶೇಷ ಪೂಜೆ ಸಲ್ಲಿಸಲಾಗುತ್ತದೆ. ಉಳಿದ ದಿನ ಜಿಲ್ಲಾ ಖಜಾನೆಯಲ್ಲಿ ಸುರಕ್ಷಿತವಾಗಿಟ್ಟಿರಲಾಗುತ್ತದೆ. ಶಿವಲಿಂಗಕ್ಕೆ ಧಾರಣೆ ಮಾಡಿ ಪೂಜೆ ಸಲ್ಲಿಸುವ ನಿಟ್ಟಿನಲ್ಲಿ ಶುಕ್ರವಾರ(ಫೆ.13) ಸಂಜೆ ಜಿಲ್ಲಾ ಖಜಾನೆಯಿಂದ ಬಿಗಿ ಭದ್ರತೆಯಲ್ಲಿ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಡಾ.ಎಂ.ಜೆ.ರೂಪ ಅವರ ಸಮ್ಮುಖದಲ್ಲಿ ಅರಮನೆ ಆವರಣದಲ್ಲಿರುವ ತ್ರಿನೇಶ್ವರ ಸ್ವಾಮಿ ದೇವಾಲಯಕ್ಕೆ ತಂದು ದೇವಾಲಯದ ಸುಪರ್ದಿಗೆ ಒಪ್ಪಿಸಲಾಗಿದೆ.

ಫೆ.15ರಂದು ಮುಂಜಾನೆಯಿಂದಲೇ ತ್ರಿನೇಶ್ವರಸ್ವಾಮಿಗೆ ಮಹಾನ್ಯಾಸಪೂರ್ವಕ ರುದ್ರಾಭಿಷೇಕ ಸೇರಿದಂತೆ ವಿವಿಧ ಅಭಿಷೇಕ ನೆರವೇರಲಿದೆ. ನಂತರ ವಿಶೇಷ ಪೂಜೆ ನಡೆಸಿದ ಶಿವಲಿಂಗಕ್ಕೆ ಚಿನ್ನದ ಕೊಳಗ ಧಾರಣೆ ಮಾಡಿ ಹೂವಿನ ಅಲಂಕಾರ ಮಾಡಲಾಗುತ್ತದೆ. ಬೆಳಗ್ಗೆ 6.30 ರಿಂದ ರಾತ್ರಿ 11 ಗಂಟೆವರೆಗೆ ಭಕ್ತರಿಗೆ ದರ್ಶನಕ್ಕೆ ಅವಕಾಶ ನೀಡಲಾಗುತ್ತದೆ. ಸಂಜೆ 4.30ರಿಂದ ರಾತ್ರಿ 10 ಗಂಟೆವರೆಗೆ ಸರ್ಕಾರಿ ಸೇವೆಯ ಮೂಲಕ ಏಕಾದಶಿ ರುದ್ರಾಭಿಷೇಕ ನೆರವೇರಲಿದೆ. ದೇವಾಲಯದಲ್ಲಿ ನಾಲ್ಕು ಆಯಾಮ ಗಳಲ್ಲಿ ಪೂಜೆ ನೆರವೇರಲಿದ್ದು, ಈ ನಡುವೆಯೇ ಭಕ್ತರು ದರ್ಶನ ಪಡೆಯಬಹುದಾಗಿದೆ.

ಗುರುಕುಲದಲ್ಲಿ: ಮೈಸೂರಿನ ರಾಮಾನುಜ ರಸ್ತೆಯಲ್ಲಿರುವ ಗುರುಕುಲದಲ್ಲಿರುವ 101 ಶಿವಲಿಂಗಕ್ಕೂ ಭಕ್ತರು ಬಿಲ್ವ ಪತ್ರೆ ಸಮರ್ಪಿಸಿ ವಿಶೇಷ ಪೂಜೆ ಸಲ್ಲಿಸುವ ಸಂಪ್ರದಾಯವಿದ್ದು, ಗುರುಕುಲದಲ್ಲೂ ಸಿದ್ಧತೆ ಮಾಡಿಕೊಳ್ಳಲಾಗಿದೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಕಾ ದಿ ಫಾರೆಸ್ಟ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ರಕ್ಕಸಪುರದೋಳ್ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಓ ರೋಮಿಯೋ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
45 ಫೇಸ್ ದಿ ಇಯರ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಲ್ಯಾಂಡ್ ಲಾರ್ಡ್ (ಕ)	4 ಪ್ರದರ್ಶನಗಳು
ರಾಜಕಮಲ್	
ಪೂಕಿ (ತ)	4 ಪ್ರದರ್ಶನಗಳು
ಸಂಗಂ	
ಮೈ ಲಾರ್ಡ್(ತ)	4 ಪ್ರದರ್ಶನಗಳು
ಲಿಡೋ	
ಕರಗ (ಕ) + ಶಿವಲೀಲಾ (ಕ)	3+1 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಓ ಸುಂದರ ರಾಕ್ಷಸಿ (ಕ) + ದೈವ (ಕ)	2+2 ಪ್ರದರ್ಶನಗಳು

ಕುವೆಂಪು ಜ್ಞಾನ ತಾಣ, ಶಿವಕುಮಾರ ಸ್ವಾಮೀಜಿ ವೃತ್ತ ಅಭಿವೃದ್ಧಿಗೆ ಕೆ.ವಿ.ಮಲ್ಲೇಶ್ ಆಗ್ರಹ

ಮೈಸೂರು, ಫೆ.14– ಮೈಸೂರಿನ 'ಕುವೆಂಪು ಜ್ಞಾನ ತಾಣ' ಮತ್ತು 'ಡಾ.ಶಿವಕುಮಾರ ಸ್ವಾಮೀಜಿ ವೃತ್ತ'ದ ಅಭಿವೃದ್ಧಿಗೆ ನಗರಪಾಲಿಕೆ ಮಾಜಿ ಸದಸ್ಯ ಹಾಗೂ ಅನಿಕೇತನ ಸೇವಾ ಟ್ರಸ್ಟ್ ಅಧ್ಯಕ್ಷ ಕೆ.ವಿ.ಮಲ್ಲೇಶ್, ಜಿಲ್ಲಾಡಳಿತವನ್ನು ಒತ್ತಾಯಿಸಿದ್ದಾರೆ.



ಮಲ್ಲೇಶ್

ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅವರು, ಕುವೆಂಪುನಗರದ ಹೃದಯ ಭಾಗದಲ್ಲಿ ಹದಿಮೂರು ವರ್ಷಗಳ ಹಿಂದೆ ಸ್ಥಾಪಿತವಾದ ಕುವೆಂಪು ಜ್ಞಾನ ತಾಣವು ನಿರ್ವಹಣೆ ಕೊರತೆಯಿಂದ ಕತ್ತಲಲ್ಲಿ ಮುಳುಗಿದ್ದು, ಸಮೀಪದ ಡಾ.ಶಿವಕುಮಾರಸ್ವಾಮೀಜಿ ವೃತ್ತದ ನಿರ್ಮಾಣವೂ ಹಲವು ವರ್ಷಗಳಿಂದ ನನೆಗುದಿಗೆ ಬಿದ್ದಿರುವುದು ವಿಷಾದನೀಯ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ಕುವೆಂಪು ಅವರ ಭವ್ಯ ಪ್ರತಿಮೆ, ಗ್ರಂಥಾಲಯ, ಕಿರು ಉದ್ಯಾನವನ್ನೊಳಗೊಂಡ ಕುವೆಂಪು ಜ್ಞಾನ ತಾಣವನ್ನು 2013ರಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಉದ್ಘಾಟಿಸಿದ್ದರು. ಗ್ರಂಥಾಲಯ ಇಲಾಖೆ ವಾಚನಾಲಯ ಆರಂಭಿಸಿತ್ತು. ಮಕ್ಕಳು, ಹಿರಿಯರು ಸೇರಿದಂತೆ ಎಲ್ಲಾ ವಯೋಮಾನದವರು ನಿಗದಿತ ಸಮಯದಲ್ಲಿ ಪತ್ರಿಕೆ, ಪುಸ್ತಕಗಳನ್ನು ಓದುತ್ತಿದ್ದರು. ಹಸಿರಿನಿಂದ ನಳನಳಿಸುತ್ತಿದ್ದ ಕಿರು ಉದ್ಯಾನದಲ್ಲಿ ಓಡಾಡಿ, ಅಲ್ಲಿನ ಕಲ್ಲು ಬೆಂಚುಗಳ ಮೇಲೆ ಕುಳಿತು ಆಹ್ಲಾದಕರ ಕ್ಷಣಗಳನ್ನು ಕಳೆಯುತ್ತಿದ್ದರು.

ಆದರೆ, ಇತ್ತೀಚಿನ ವರ್ಷಗಳಲ್ಲಿ ಸೂಕ್ತ ನಿರ್ವಹಣೆ ಕೊರತೆಯಿಂದ ಜ್ಞಾನ ತಾಣ ಬಿಕೋ ಎನ್ನುತ್ತಿದೆ. ಉದ್ಯಾನ ಸೊರಗಿ ಹೋಗಿದೆ. ವಾಚನಾಲಯ ಮುಚ್ಚಿದೆ. ವಿದ್ಯುತ್ ದೀಪಗಳು ಬೆಳಗುತ್ತಿಲ್ಲ. ಮಿನಿ ಕಾರಂಜಿಯಲ್ಲಿ ನೀರು ಚಿಮ್ಮುತ್ತಿಲ್ಲ. ಅಕ್ಕಪಕ್ಕದಲ್ಲಿ ಬೃಹತ್ ಜಾಹೀರಾತು ಫಲಕಗಳು ಅವತರಿಸಿ, ಈ ತಾಣದ ಅಳಿದುಳಿದ ಸೌಂದರ್ಯವನ್ನೂ ಮರೆಮಾಚಿವೆ. ಕುವೆಂಪು ಜನ್ಮದಿನಾಚರಣೆ, ಸಂಸ್ಮರಣೆ ದಿನಗಳಂದು ಇಲ್ಲಿಗೆ ಬಂದು ಪ್ರತಿಮೆಗೆ ಹಾರ ಹಾಕಲು ಮೇಲಾಟ ನಡೆಸುವ ಅಧಿಕಾರಸ್ಥರು, ಈ ತಾಣದ ಯೋಗ್ಯ ನಿರ್ವಹಣೆ, ಸದ್ಬಳಕೆಯತ್ತ ಗಮನ ಹರಿಸುತ್ತಿಲ್ಲ. ಅನೇಕ ಬಾರಿ ಸಂಬಂಧ ಪಟ್ಟವರ ಗಮನ ಸೆಳೆದರೂ ಪ್ರಯೋಜನವಾಗಿಲ್ಲ.

ಈ ತಾಣದ ಎದುರಿನ ಡಾ.ಶಿವಕುಮಾರ ಸ್ವಾಮೀಜಿ ವೃತ್ತದ ಅಭಿವೃದ್ಧಿ ಕೆಲಸವೂ ಹಲವು ವರ್ಷಗಳಿಂದ ನನೆಗುದಿಗೆ ಬಿದ್ದಿದೆ. ಮೊದಲು ಗುತ್ತಿಗೆ ಪಡೆದವರು ಸುಗಮ ಸಂಚಾರಕ್ಕೆ ಅಡ್ಡಿಯಾಗುವಂತೆ ಅವೈಜ್ಞಾನಿಕವಾಗಿ ಕೆಲಸ ಮಾಡುತ್ತಿದ್ದ ಕಾರಣ ಬೇರೆಯವರಿಗೆ ಗುತ್ತಿಗೆ ನೀಡಲಾಯಿತು. ವೃತ್ತದ ಮಧ್ಯದಲ್ಲಿ ಕಟ್ಟಿರುವ ಎತ್ತರದ ಕಟ್ಟೆಯಿಂದ ವಾಹನ ಸವಾರರಿಗೆ ಈಗಲೂ ಸಮಸ್ಯೆಯಾಗಿಯೇ ಉಳಿದಿದೆ. ಬೇರೆ ಯಾವ ಅಭಿವೃದ್ಧಿಯೂ ಇಲ್ಲಿ ಆಗಿಲ್ಲ.

ರಾಷ್ಟ್ರಕವಿ ಡಾ.ಕುವೆಂಪು ಮತ್ತು ಡಾ.ಶಿವಕುಮಾರ ಸ್ವಾಮೀಜಿ ದೇಶ ಕಂಡ ಮಹಾನ್ ಚೇತನಗಳು. ಒಬ್ಬರು ಸಾಹಿತ್ಯ ಕೈಂಕರ್ಯದ ಮೂಲಕ ನಾಡಿನ ಪ್ರಜ್ಞೆಯನ್ನು ರೂಪಿಸಿದ ಜ್ಞಾನ ದಾಸೋಹಿ. ಮತ್ತೊಬ್ಬರು ಅನ್ನ, ಜ್ಞಾನ ದಾಸೋಹ ಮತ್ತು ಕಾಯಕದ ಮೂಲಕ ಲಕ್ಷಾಂತರ ಮಕ್ಕಳ ಬದುಕಿನಲ್ಲಿ ಬೆಳಕನ್ನು ಪಸರಿಸಿದ ಸರ್ವಶ್ರೇಷ್ಠ ಸಂತ. ಈ ಇಬ್ಬರ ಧೀಮಂತ ಬದುಕನ್ನು, ಅವರು ಭಿತ್ತಿ, ಬೆಳೆಸಿದ ವಿಚಾರ, ಆದರ್ಶ, ಮಾನವೀಯ ಮೌಲ್ಯಗಳನ್ನು ತಲೆಮಾರಿನಿಂದ ತಲೆಮಾರಿಗೆ ಪಸರಿಸುವುದು ನಮ್ಮೆಲ್ಲರ ಕರ್ತವ್ಯ. ಆದ್ದರಿಂದ, ಕುವೆಂಪು ಜ್ಞಾನ ತಾಣ ಮತ್ತು ಅದರ ಎದುರು ನಿರ್ಮಿಸಲುದ್ದೇಶಿಸಿರುವ ಶಿವಕುಮಾರ ಸ್ವಾಮೀಜಿ ವೃತ್ತವನ್ನು ಸುಗಮ ಸಂಚಾರಕ್ಕೆ ವ್ಯತ್ಯಯ ಆಗದಂತೆ, ಸಮನ್ವಯದಿಂದ ಅಭಿವೃದ್ಧಿಪಡಿಸುವ ಮೂಲಕ ಇಬ್ಬರು ಮಹಾಚೇತನಗಳಿಗೆ ಸಾರ್ಥಕ ಗೌರವ ಸಲ್ಲಿಸಬೇಕಿದೆ. ತಜ್ಞರು, ಕಾಳಜಿಯುಳ್ಳವರ ಸಲಹೆಯನ್ನು ಪಡೆದು, ಏಪ್ರಿಲ್ 1 ಸ್ವಾಮೀಜಿ ಜನ್ಮದಿನಾಚರಣೆಯೊಳಗೆ ಸ್ಪಷ್ಟ ರೂಪುರೇಷೆ ಸಿದ್ಧಪಡಿಸಿ, ಕ್ರಮ ವಹಿಸುವಂತೆ ಕೆ.ವಿ.ಮಲ್ಲೇಶ್ ಮನವಿ ಮಾಡಿದ್ದಾರೆ.

ನ್ಯೂಜಿಲೆಂಡ್ 7 ವಿಕೆಟ್‌ಗಳಿಂದ ಮಣಿಸಿದ ದಕ್ಷಿಣ ಆಫ್ರಿಕಾ

ಅಹ್ಮದಾಬಾದ್, ಫೆ.14(ವಿವಿಹೆಚ್)– ಐಸಿಸಿ ಟಿ20 ವಿಶ್ವಕಪ್–2026ರ 'ಡಿ' ಗ್ರೂಪ್‌ನ 24ನೇ ಲೀಗ್ ಪಂದ್ಯದಲ್ಲಿ ನ್ಯೂಜಿಲೆಂಡ್ ತಂಡವನ್ನು 7 ವಿಕೆಟ್‌ಗಳಿಂದ ಮಣಿಸಿದ ದಕ್ಷಿಣ ಆಫ್ರಿಕಾ ಗ್ರೂಪ್ 'ಡಿ' ನಲ್ಲಿ ಅಗ್ರಸ್ಥಾನಕ್ಕೇರಿದೆ.

ಇಲ್ಲಿನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ನ್ಯೂಜಿಲೆಂಡ್ ತಂಡ ನಿಗದಿತ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 175ರನ್ ಕಲೆಹಾಕಿ ಎದುರಾಳಿ ತಂಡಕ್ಕೆ 176ರನ್ ಗುರಿ ನೀಡಿತು.

ಈ ಸ್ಪರ್ಧಾತ್ಮಕ ಮೊತ್ತ ಬೆನ್ನತ್ತಿದ ದಕ್ಷಿಣ ಆಫ್ರಿಕಾಕ್ಕೆ ನಾಯಕ ಮಾರ್ಕ್ರಂ ಆಸರೆಯಾದರು. 44 ಎಸೆತಗಳಲ್ಲಿ 8 ಬೌಂಡರಿ, 4 ಸಿಕ್ಸರ್ ಸಹಿತ 86 ರನ್ ಗಳಿಸಿ ಅಜೇಯರಾಗಿ ಉಳಿದು ತಂಡಕ್ಕೆ ಗೆಲುವು ತಂದುಕೊಟ್ಟರು. ಇವರಿಗೆ ಸಾಥ್ ನೀಡಿದ ಡೇವಿಡ್ ಮಿಲ್ಲರ್ ಅಜೇಯರಾಗಿ 17 ಎಸೆತಗಳಲ್ಲಿ 24 ರನ್ ಕಲೆ ಹಾಕಿದರು. ಉಳಿದಂತೆ ಡಿಕಾಕ್ 20 ರನ್, ರಿಕೆಲ್ಟನ್ 21 ಹಾಗೂ ಡೇವಾಲ್ಡ್ ಬ್ರೇವಿಸ್ 21 ರನ್ ಗಳಿಸಿದರು. ಅಂತಿಮವಾಗಿ ಹರಿಣ ಪಡೆ 17.1 ಓವರ್‌ಗಳಲ್ಲಿ ಕೇವಲ 3 ವಿಕೆಟ್ ಕಳೆದುಕೊಂಡು 178 ರನ್ ಗಳಿಸಿ ಗೆಲುವಿನ ನಗೆ ಬೀರಿತು.

ನ್ಯೂಜಿಲೆಂಡ್ ಪರ ಫರ್ಗ್ಯೂಸನ್, ಜಿಮ್ಮಿ ನಿಶಾಮ್ ಹಾಗೂ ರಚಿನ್ ರವೀಂದ್ರ ತಲಾ ಒಂದೊಂದು ವಿಕೆಟ್ ಪಡೆದರು.

ಇದಕ್ಕೂ ಮೊದಲು ಬ್ಯಾಟ್ ಮಾಡಿದ ಕಿವೀಸ್ ಪಡೆಗೆ ಮಾರ್ಕೋ ಎನ್ಸನ್ ಕಾಡಿದರು. 4 ಓವರ್ ಬೌಲಿಂಗ್ ಮಾಡಿ 40 ರನ್ ಬಿಟ್ಟುಕೊಟ್ಟು ಪ್ರಮುಖ 4 ವಿಕೆಟ್ ಕಿತ್ತು, ನ್ಯೂಜಿಲೆಂಡ್ ಬ್ಯಾಟಿಂಗ್ ವಿಭಾಗಕ್ಕೆ ಪೆಟ್ಟು ನೀಡಿದರು. ಮಾರ್ಕ್ ಚಾಪ್ಮನ್ 26 ಎಸೆತಗಳಲ್ಲಿ 48 ಹಾಗೂ ಡ್ಯಾರೆಲ್ ಮಿಚೆಲ್ 24 ಎಸೆತಗಳಲ್ಲಿ 32 ರನ್ ಗಳಿಸಿದರು. ಉಳಿದಂತೆ ಫಿನ್ ಆಲೆನ್ 31, ನಿಶಾಮ್ ಅಜೇಯ 23 ರನ್ ಗಳಿಸಿದರು.

ಲುಂಗಿ ಎನ್‌ಗಿಡಿ, ಮಹಾರಾಜ್ ಹಾಗೂ ಬೋಷ್ ತಲಾ ಒಂದೊಂದು ವಿಕೆಟ್ ಪಡೆದರು. ಉತ್ತಮ ಬೌಲಿಂಗ್ ದಾಳಿ ನಡೆಸಿದ ಮಾರ್ಕೋ ಎನ್ಸನ್ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ಫೆ.16 ರಿಂದ 20ರವರೆಗೆ 38ನೇ ಅಖಿಲ ಭಾರತ ಅಂಚೆ ಸಾಂಸ್ಕೃತಿಕ ಸಮ್ಮೇಳನ

ಮೈಸೂರು, ಫೆ14(ಎಂಕೆ)– ಅಂಚೆ ಇಲಾಖೆ ಕರ್ನಾಟಕ ಅಂಚೆ ವೃತ್ತದ ವತಿಯಿಂದ ಫೆ.16 ರಿಂದ 20ರವರೆಗೆ ಮೈಸೂರಿನ ಅಂಚೆ ತರಬೇತಿ ಕೇಂದ್ರ ಮತ್ತು ಕರ್ನಾಟಕ ರಾಜ್ಯ ಮುಕ್ತ ವಿವಿ ಆವರಣದಲ್ಲಿ '38ನೇ ಅಖಿಲ ಭಾರತ ಅಂಚೆ ಸಾಂಸ್ಕೃತಿಕ ಸಮ್ಮೇಳನ' ಏರ್ಪಡಿಸಲಾಗಿದೆ ಎಂದು ಕರ್ನಾಟಕ ಅಂಚೆ ವೃತ್ತದ ನಿರ್ದೇಶಕ ಸಂದೇಶ್ ಮಹದೇವಪ್ಪ ತಿಳಿಸಿದರು.



ಕಿರು ಹೊತ್ತಿಗೆಯನ್ನು ಕರ್ನಾಟಕ ಅಂಚೆ ವೃತ್ತದ ನಿರ್ದೇಶಕ ಸಂದೇಶ್ ಮಹದೇವಪ್ಪ ಬಿಡುಗಡೆ ಮಾಡಿದರು

ಮೈಸೂರಿನ ಅಂಚೆ ತರಬೇತಿ ಕೇಂದ್ರದಲ್ಲಿ ಶನಿವಾರ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ರಾಷ್ಟ್ರಮಟ್ಟದ ಸಾಂಸ್ಕೃತಿಕ ಸಮ್ಮೇಳನದಲ್ಲಿ ದೇಶದಾದ್ಯಂತ ಅಂಚೆ ನೌಕರರ ನಡುವೆ ಸಾಂಸ್ಕೃತಿಕ ಸ್ಪರ್ಧೆ, ಸ್ನೇಹಭಾವ, ಏಕತೆ ಹಾಗೂ ಒಗ್ಗಟ್ಟಿನ ಮನೋಭಾವನೆ ಬೆಳೆಸುವ ಗುರಿಯನ್ನು ಹೊಂದಲಾಗಿದೆ ಎಂದರು.

ದೇಶದ ವಿವಿಧ ಭಾಗಗಳಿಂದ 21 ಅಂಚೆ ವೃತ್ತಗಳನ್ನು ಪ್ರತಿನಿಧಿಸುವ ಒಟ್ಟು 335 ಸಿಬ್ಬಂದಿಗಳು ತಮ್ಮ ಕುಟುಂಬದೊಂದಿಗೆ ಐದು ದಿನಗಳ ಸಾಂಸ್ಕೃತಿಕ ಸಮಾರಂಭದಲ್ಲಿ ಭಾಗವಹಿಸಲಿದ್ದು, ಅಂಚೆ ನೌಕರರ ನಡುವೆ ರಾಷ್ಟ್ರೀಯ ಏಕೀಕರಣ ಮತ್ತು ಸಾಂಸ್ಕೃತಿಕ ವಿನಿಮಯಕ್ಕೆ ಮಹತ್ವದ ವೇದಿಕೆಯಾಗಲಿದೆ ಎಂದು ಹೇಳಿದರು.

ಫೆ.16 ರಂದು ಬೆಳಗ್ಗೆ 10 ಗಂಟೆಗೆ ಮುಕ್ತ ವಿವಿ ಕಾವೇರಿ ಸಭಾಂಗಣದಲ್ಲಿ ಸಮ್ಮೇಳನದ ಉದ್ಘಾಟನಾ ಕಾರ್ಯಕ್ರಮ ನಡೆಯಲಿದ್ದು, ಅಂತರಾಷ್ಟ್ರೀಯ ಮಯೋಲಿನ್ ವಾದಕರಾದ ವಿದ್ವಾನ್ ಮೈಸೂರು ಎಂ.ನಾಗರಾಜ್ ಹಾಗೂ ವಿದ್ವಾನ್ ಡಾ.ಮೈಸೂರು ಎಂ.ಮಂಜುನಾಥ್ ಹಾಗೂ ಅಂಚೆ ಸೇವೆಗಳ ಮಹಾನಿರ್ದೇಶಕ ಜಿತೇಂದ್ರ ಗುಪ್ತಾ ಭಾಗವಹಿಸಲಿದ್ದಾರೆ.

ಹಾಗೆಯೇ ಫೆ.20ರಂದು ಬೆಳಗ್ಗೆ 8.45ಕ್ಕೆ ನಡೆಯುವ ಸಮಾರೋಪ ಸಮಾರಂಭದಲ್ಲಿ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರೂ ಹಾಗೂ ಖ್ಯಾತ ಹಿಂದೂಸ್ತಾನಿ ಶಾಸ್ತ್ರೀಯ ಗಾಯಕರಾದ ಪಂಡಿತ್ ಎಂ.ವೆಂಕಟೇಶ್ ಕುಮಾರ್ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಕರ್ನಾಟಕ ವೃತ್ತದ ಚೀಫ್ ಪೋಸ್ಟ್ ಮಾಸ್ಟರ್ ಜನರಲ್ ಶ್ರೀ ಕೆ. ಪ್ರಕಾಶ್, ಐಪಿಓಎಸ್ ಅವರು ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಮಾಹಿತಿ ನೀಡಿದರು.

ಬಳಿಕ ಸಮ್ಮೇಳನ ಕಿರು ಹೊತ್ತಿಗೆಯನ್ನು ಬಿಡುಗಡೆ ಮಾಡಲಾಯಿತು. ಮೈಸೂರು ಅಂಚೆ ತರಬೇತಿ ಕೇಂದ್ರದ ನಿರ್ದೇಶಕ ಆಶಿಶ್ ಸಿಂಗ್ ಠಾಕೂರ್, ಬೆಂಗಳೂರು ಕೇಂದ್ರ ವೃತ್ತದ ನಿರ್ದೇಶಕಿ ವಿ.ತಾರಾ ಉಪಸ್ಥಿತರಿದ್ದರು.

ಪುಸ್ತಕಗಳ ಸಂಪೂರ್ಣ ಮಾಹಿತಿ ಗ್ರಂಥಪಾಲಕರಿಗೆ ಇರಬೇಕು

ಬೆಂಗಳೂರಿನ ಕ್ರೈಸ್ಟ್ ವಿಶ್ವವಿದ್ಯಾನಿಲಯದ ಗ್ರಂಥಪಾಲಕಿ ಡಿ.ಲಕ್ಷ್ಮಮ್ಮ ಕಿವಿಮಾತು

ಮೈಸೂರು, ಫೆ14(ವಿವಿಹೆಚ್)– ಗ್ರಂಥಾಲಯ ಎಂಬುದು ಮಾಹಿತಿ ಪ್ರಪಂಚವಾಗಿದೆ. ಯಾವ–ಯಾವ ಮಾಹಿತಿಯೂ ಯಾವ ಪುಸ್ತಕದಲ್ಲಿ ದೊರೆಯುತ್ತದೆ ಎಂಬುದು ಗ್ರಂಥಪಾಲಕರಿಗೆ ತಿಳಿದಿರಬೇಕಾಗುತ್ತದೆ ಎಂದು ಬೆಂಗಳೂರಿನ ಕ್ರೈಸ್ಟ್ ವಿಶ್ವವಿದ್ಯಾನಿಲಯದ ಗ್ರಂಥಪಾಲಕಿ ಡಿ.ಲಕ್ಷ್ಮಮ್ಮ ತಿಳಿಸಿದರು.



ವಿಶೇಷ ಉಪನ್ಯಾಸ ಮಾಲಿಕೆಯಲ್ಲಿ ಗ್ರಂಥಪಾಲಕಿ ಡಿ.ಲಕ್ಷ್ಮಮ್ಮ ಮಾತನಾಡಿದರು.

ನಗರದ ಮಾನಸ ಗಂಗೋತ್ರಿಯ ಮೈಸೂರು ವಿಶ್ವವಿದ್ಯಾನಿಲಯದ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗದ ಡಾ.ಎಸ್.ಆರ್.ರಂಗನಾಥನ್ ಸಭಾಂಗಣದಲ್ಲಿ ಮೂಲಿಸಾ ವತಿಯಿಂದ ಶುಕ್ರವಾರ ನಡೆದ ವಿಶೇಷ ಉಪನ್ಯಾಸ ಮಾಲಿಕೆಯಲ್ಲಿ ಅವರು ಮಾತನಾಡಿದರು.

ಪುಸ್ತಕಗಳನ್ನು ಕೇವಲ ತೆರೆದ ಕಪಾಟುಗಳಲ್ಲಿ ಒಂದರಿಂದ ಮತ್ತೊಂದರಂತೆ ಜೋಡಿಸಿ ಇಡುವುದು, ಗ್ರಂಥಾಲಯ ಶಾಸ್ತ್ರದ ಅನ್ವಯದಂತೆ ಅನುಕ್ರಮಣಿಕೆಯನ್ನು ಸಿದ್ಧಗೊಳಿಸುವುದಷ್ಟೇ ಗ್ರಂಥಪಾಲಕರ ಕೆಲಸವಾಗಬಾರದು. ಯಾರೂ ಗಮನಿಸದ, ಓದಲು ತೆಗೆದುಕೊಂಡು ಹೋಗದಂತಹ ಗ್ರಂಥಗಳನ್ನು ಹೆಚ್ಚು ಜನರು ಓದುವಂತೆ ಮಾಡುವುದೇ ನಿಜವಾದ ಕೆಲಸವಾಗಿರುತ್ತದೆ. ಇಂತಹ ಸವಾಲುಗಳನ್ನು ಎದುರಿಸಿ, ಹೊಸತನಗಳೊಂದಿಗೆ ಮುನ್ನಡೆದಾಗ ವೃತ್ತಿ ಜೀವನದಲ್ಲಿ ಸಂತೃಪ್ತಿ ಸಿಗುತ್ತದೆ ಎಂದರು.

ಕ್ರೈಸ್ಟ್ ವಿವಿಯಲ್ಲಿ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರವನ್ನು ಆಧುನಿಕ ದಿನಮಾನಕ್ಕೆ ತಕ್ಕಂತೆ ಸಜ್ಜುಗೊಳಿಸಲಾಗಿದೆ. ಇಲ್ಲಿ ಓದುಗರ ಹೆಚ್ಚಳಕ್ಕೆ ಪೂರಕವಾಗಿ ನವೀನ ಆಲೋಚನೆಗಳ ಚಟುವಟಿಕೆಗಳನ್ನು ನಡೆಸಲಾಗುತ್ತದೆ. ವಿಶ್ವ ಪ್ರವಾಸೋದ್ಯಮ ದಿನದಂದು ಗ್ರಂಥಾಲಯದಲ್ಲಿ ಪ್ರವಾಸೋದ್ಯಮ ಹಾಗೂ ಪರಂಪರೆಗೆ ಸಂಬಂಧಿಸಿದ ಪುಸ್ತಕಗಳನ್ನು ಎಲ್ಲರ ಕಣ್ಣಿಗೂ ಎದ್ದು ಕಾಣುವಂತೆ ಜೋಡಿಸಲಾಗುತ್ತದೆ. ಆ ಮೂಲಕ ಪುಸ್ತಕಗಳ ಮಹತ್ವವನ್ನೂ ಸಾರಲಾಗುತ್ತದೆ ಎಂದರು.

ಅದೇ ರೀತಿ ಪ್ರೇಮಿಗಳ ದಿನದಂದು ಇಡೀ ಗ್ರಂಥಾಲಯವನ್ನು ಕೆಂಪು–ಗುಲಾಬಿ ಬಣ್ಣದಿಂದ ಸಿಂಗಾರ ಮಾಡಲಾಗುತ್ತದೆ. ವಿದ್ಯಾರ್ಥಿಗಳು ಪುಸ್ತಕಗಳನ್ನು ಪ್ರೇಮಿಸಬೇಕು ಎನ್ನುವ ಸಂದೇಶವನ್ನು ಸಾರಲಾಗುತ್ತದೆ ಎಂದು ತಿಳಿಸಿದರು.

ಗ್ರಂಥಾಲಯದಲ್ಲಿ ಓದುಗರನ್ನು ಹೆಚ್ಚಿಸಲು ಹಾಗೂ ಅವರಿಗೆ ಪುಸ್ತಕದ ಗುಂಗು ಹತ್ತಿಸಲು ಕಾಲ–ಕಾಲಕ್ಕೆ ರಸಪ್ರಶ್ನೆ, ಸ್ಪರ್ಧೆ ನಡೆಸಿ ಆಕರ್ಷಕ ಬಹುಮಾನ ನೀಡಲಾಗುತ್ತದೆ. ಅತಿ ಹೆಚ್ಚು ಅವಧಿ ಗ್ರಂಥಾಲಯವನ್ನು ಬಳಕೆ ಮಾಡಿಕೊಂಡವರನ್ನು ಗುರುತಿಸಿ ಅವರನ್ನು ಗೌರವಿಸಲಾಗುತ್ತದೆ. ಇಂತಹ ಕಾರ್ಯಗಳು ಬೇರೆಯವರಿಗೂ ಸ್ಫೂರ್ತಿ ನೀಡುವುದಲ್ಲದೇ, ಗ್ರಂಥಾಲಯದಲ್ಲಿ ಇರುವ ಪುಸ್ತಕಗಳಲ್ಲಿ ಇರುವ ವಿಚಾರವೂ ಪಸರಿಸುತ್ತದೆ ಎಂದರು.

ಇನ್ನು ಓದುಗರನ್ನು ಸೆಳೆಯಬೇಕಾದರೆ ಪ್ರತಿಯೊಂದು ಗ್ರಂಥಾಲಯವೂ ಆಕರ್ಷಣೀಯವಾಗಿ ಇರಬೇಕಾಗಿರುವುದು ಬಹಳ ಅವಶ್ಯವಾಗಿದೆ. ಓದುಗರನ್ನು ಆಕರ್ಷಿಸಲು ಹೊಸ ರೀತಿಯ ಕ್ರಿಯಾತ್ಮಕ ವ್ಯವಸ್ಥೆಯನ್ನು ಅನುಷ್ಠಾನಗೊಳಿಸಬೇಕಾಗುತ್ತದೆ ಎಂದರು.

ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗದ ಮುಖ್ಯಸ್ಥ ಪ್ರೊ.ಎನ್.ಎಸ್.ಹರಿನಾರಾಯಣ, ಪ್ರೊ.ಆದಿತ್ಯಾ ಕುಮಾರಿ, ಡಾ.ನಿವೇದಿತಾ, ಮೂಲಿಸಾ ಕಾರ್ಯದರ್ಶಿ ಆರ್.ರಾಕೇಶ್, ಕೆ.ಸಿ.ರಶ್ಮಿ, ಎಂ.ಎಸ್.ಸಂಜಯ ಕುಮಾರ್ ಉಪಸ್ಥಿತರಿದ್ದರು.

ಸ್ವಚ್ಛ ಮೈಸೂರಿಗಾಗಿ ಸೈಕಲಿಸ್ಟ್‌ಗಳಿಂದ ಜಾಗೃತಿ ಜಾಥಾ

ಮೈಸೂರಿನ ಜನರ ಸಹಕಾರ ಕೋರಿದ ಪಾಲಿಕೆ ಆಯುಕ್ತರು

ಮೈಸೂರು,ಫೆ.14(ಎಂಟಿವೈ)– 'ಸ್ವಚ್ಛ ಮೈಸೂರು' ಅಭಿಯಾನದ ಅಂಗವಾಗಿ ಮೈಸೂರು ಮಹಾನಗರ ಪಾಲಿಕೆ ಆಯೋಜಿಸಿದ್ದ 'ಸೈಕಲ್ ಜಾಥಾ'ದಲ್ಲಿ ವಿವಿಧ ವಯೋಮಾನದ ನೂರಾರು ಮಂದಿ ಸೈಕಲಿಸ್ಟ್‌ಗಳು ಪಾಲ್ಗೊಂಡು ಸ್ವಚ್ಛತೆ ಕಾಪಾಡುವಂತೆ ಜನರಲ್ಲಿ ಜಾಗೃತಿ ಮೂಡಿಸಿದರು.

ಸಾಂಸ್ಕೃತಿಕ ನಗರಿ ಮೈಸೂರು ನಗರವನ್ನು ನಂಬರ್ ಒನ್ ಸ್ವಚ್ಛ ನಗರವಾಗಿ ರೂಪಿಸಲು ಸಾರ್ವಜನಿಕರ ಸಹಕಾರ ಮತ್ತು ಬೆಂಬಲ ಯಾಚಿಸುವ ನಿಟ್ಟಿನಲ್ಲಿ ಮೈಸೂರು ಮಹಾನಗರ ಪಾಲಿಕೆ ವಿವಿಧ ಕಾರ್ಯಕ್ರಮಗಳನ್ನು ರೂಪಿಸಿದ್ದು, ಅದರ ಮುಂದುವರೆದ ಭಾಗವಾಗಿ ಶನಿವಾರ ಬೆಳಗ್ಗೆ ಅರಮನೆಯ ಕೋಟೆ ಆಂಜನೇಯ ಸ್ವಾಮಿ ದೇವಾಲಯದ ಬಳಿ ಆಯೋಜಿಸಿದ್ದ ಸೈಕಲ್ ಜಾಥಾಗೆ ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸೀಫ್ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಭಾಸ್ಕರ್ ನಾಯಕ್ ಚಾಲನೆ ನೀಡಿದರು.

ಈ ವೇಳೆ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸೀಫ್ ಮಾತನಾಡಿ, ಮೈಸೂರು ನಗರವನ್ನು ಸ್ವಚ್ಛ ನಗರವನ್ನಾಗಿಸುವ ನಿಟ್ಟಿನಲ್ಲಿ ಮೈಸೂರು ಮಹಾನಗರ ಪಾಲಿಕೆ ಹಲವು ಕಾರ್ಯಕ್ರಮ ರೂಪಿಸಿದೆ. ಪೌರಕಾರ್ಮಿಕ ವರ್ಗ, ಅಧಿಕಾರಿಗಳು ಮೈಸೂರಿನ ಸ್ವಚ್ಛತೆಗೆ ಶ್ರಮಿಸುತ್ತಿದ್ದಾರೆ. ಈ ಬಾರಿಯೂ ಮೈಸೂರು ಸ್ವಚ್ಛ ನಗರವಾಗಿಸುವ ನಿಟ್ಟಿನಲ್ಲಿ ಸಾರ್ವಜನಿಕರ ಸಹಕಾರ ಮತ್ತು ಬೆಂಬಲ ಬೇಕಾಗಿದೆ. ಅದಕ್ಕಾಗಿ ಸೈಕಲ್ ಜಾಥಾ ಸೇರಿದಂತೆ ವಿವಿಧ ಕಾರ್ಯಕ್ರಮಗಳನ್ನು ರೂಪಿಸಲಾಗುತ್ತಿದೆ ಎಂದು ತಿಳಿಸಿದರು.

ಕಳೆದ ವರ್ಷದ ಸ್ವಚ್ಛ ಸರ್ವೇಕ್ಷಣೆಯಲ್ಲಿ ಮೈಸೂರಿನ ಜನತೆ ಉತ್ತಮವಾಗಿ ಪಾಲ್ಗೊಂಡಿದ್ದರು. ಆ ಕಾರಣದಿಂದ 10 ಲಕ್ಷ ಜನಸಂಖ್ಯೆಯುಳ್ಳ ನಗರಗಳ ವಿಭಾಗದಲ್ಲಿ ಮೈಸೂರು ನಗರಕ್ಕೆ ಮೂರನೇ ಸ್ಥಾನ ಲಭಿಸಿದ್ದು, ರಾಷ್ಟ್ರಪತಿಗಳು ಪ್ರಶಸ್ತಿ ವಿತರಿಸಿದ್ದರು. ಈ ಬಾರಿಯೂ ಮೈಸೂರಿಗೆ ಸ್ವಚ್ಛತೆಯ ಪ್ರಶಸ್ತಿ ಲಭಿಸಬೇಕು ಎಂಬ ಆಶಯದೊಂದಿಗೆ ವಿವಿಧ ಕಾರ್ಯಕ್ರಮ ರೂಪಿಸಲಾಗುತ್ತಿದ್ದು, ಸಾರ್ವಜನಿಕರ ಸಹಕಾರ ಅಗತ್ಯವಾಗಿದೆ. ಎಲ್ಲೆಂದರಲ್ಲಿ ಕಸ ಬಿಸಾಡದೆ, ಮನೆಯಲ್ಲಿ ಹಸಿ ಮತ್ತು ಒಣ ಕಸವನ್ನು ಬೇರ್ಪಡಿಸಿ ನೀಡುವುದಕ್ಕೆ ಪಣ ತೊಡಬೇಕು. ಇದರಿಂದ ಮೈಸೂರಿನ ಸ್ವಚ್ಛತೆ ಕಾಪಾಡುವುದಕ್ಕೆ ಸಹಕಾರಿಯಾಗುತ್ತದೆ ಎಂದರು.



ಮೈಸೂರು ಮಹಾನಗರ ಪಾಲಿಕೆ ಆಯೋಜಿಸಿದ್ದ ಸೈಕಲ್ ಜಾಥದಲ್ಲಿ ಪಾಲ್ಗೊಂಡಿರುವ ಸೈಕ್ಲಿಸ್ಟ್‌ಗಳು.

ಇದೇ ವೇಳೆ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಭಾಸ್ಕರ್ ನಾಯಕ ಸೈಕ್ಲಿಸ್ಟ್‌ಗಳಿಗೆ ಸ್ವಚ್ಛತಾ ಪ್ರತಿಜ್ಞಾ ವಿಧಿ ಬೋಧಿಸಿದರು.

14 ಕಿ.ಮೀ ದೂರ: ಬಳಿಕ ಆರಂಭವಾದ ಸೈಕಲ್ ಜಾಥಾ ಕೆ.ಆರ್.ವೃತ್ತ ದೇವರಾಜ ಅರಸ್ ರಸ್ತೆ ಜೆಎಲ್‌ಬಿ ರಸ್ತೆ, ಡಾ.ಬಾಬೂ ಜಗಜೀವನ ರಾಮ್ ವೃತ್ತ, ಇರ್ವಿನ್ ರಸ್ತೆ ಸರ್ಕಾರಿ ಆಯುರ್ವೇದ ಕಾಲೇಜು, ಹಳೆ ಆರ್‌ಎಂಸಿ ವೃತ್ತ, ಬಂಬೂಬಜಾರ್, ಹೈವೆ ಸರ್ಕಲ್, ನೆಲ್ಸನ್ ಮಂಡೇಲಾ ರಸ್ತೆ, ಎಲ್‌ಐಸಿ ವೃತ್ತ, ಜೆಎಸ್‌ಎಸ್ ಮೆಡಿಕಲ್ ಕಾಲೇಜು, ದಂಡಿಮಾರಮ್ಮ ದೇವಾಲಯದ ಮುಂಭಾಗ ಸಾಗಿ ಮತ್ತೆ ಎಲ್‌ಐಸಿ ವೃತ್ತ, ನೆಲ್ಸನ್ ಮಂಡೇಲಾ ರಸ್ತೆ, ಹೈವೆ ಸರ್ಕಲ್‌ನಿಂದ ಕೆಆರ್.ಸರ್ಕಲ್ ಮೂಲಕ ದೊಡ್ಡ ಗಡಿಯಾರ ವೃತ್ತವನ್ನು ಬಳಸಿ ಮತ್ತೆ ಕೋಟೆ ಆಂಜನೇಯಸ್ವಾಮಿ ದೇವಾಲಯದ ಆವರಣ ತಲುಪಿ ಸಮಾಪ್ತಿಗೊಂಡಿತು. 14 ಕಿ.ಮೀ ದೂರದ ಈ ಸೈಕಲ್ ಜಾಥಾದಲ್ಲಿ ಸೈಕ್ಲಿಸ್ಟ್, ವಿದ್ಯಾರ್ಥಿಗಳು, ಮಹಿಳೆಯರು, ಚಿಕ್ಕ ಮಕ್ಕಳು ಪಾಲ್ಗೊಂಡು ಗಮನ ಸೆಳೆದರು. ಪಾಲಿಕೆ ವತಿಯಿಂದ 120 ಟ್ರಿಣ್ ಟ್ರಿಣ್ ಸೈಕಲ್ ನೀಡಲಾಗಿತ್ತು. ಉಳಿದವರು ತಾವೆ ಸೈಕಲ್ ತಂದು ಜಾಗೃತಿ ಜಾಥದಲ್ಲಿ ಪಾಲ್ಗೊಂಡು ಪರಿಸರ ಪ್ರಜ್ಞೆ ಮೆರೆದರು.

ಈ ಸಂದರ್ಭದಲ್ಲಿ ಮೈಸೂರು ಮಹಾನಗರ ಪಾಲಿಕೆಯ ಅಧಿಕಾರಿಗಳು, ಪರಿಸರ ಅಭಿಯಂತರರು ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಲಾಡ್ಜ್‌ವೊಂದರಲ್ಲಿ ವ್ಯಕ್ತಿ ಸಾವು


ಅನಾರೋಗ್ಯವಿದ್ದೂ ಮದ್ಯ ಸೇವಿಸಿದ ಕಾರಣ ಮೃತಪಟ್ಟಿರುವ ಶಂಕೆ

ಮೈಸೂರು,ಫೆ.14(ಪಿಎಂ)– ನಗರದ ಲಾಡ್ಜ್‌ವೊಂದರಲ್ಲಿ ವ್ಯಕ್ತಿಯೊಬ್ಬ ಅನುಮಾನಾಸ್ಪದವಾಗಿ ಸಾವನ್ನಪ್ಪಿರುವ ಘಟನೆ ಶನಿವಾರ ಮಧ್ಯಾಹ್ನ ಬೆಳಕಿಗೆ ಬಂದಿದೆ. ಅನಾರೋಗ್ಯದಲ್ಲಿ ಬಳಲುತ್ತಿದ್ದರೂ ಮದ್ಯ ಸೇವನೆ ಮಾಡಿದ್ದ ಕಾರಣ ಸಾವು ಸಂಭವಿಸಿರಬಹುದು ಎಂದು ಪೊಲೀಸರು ಶಂಕಿಸಿದ್ದಾರೆ.

ನಗರದ ಟಿಕೆ ಬಡಾವಣೆಯ ನಿವಾಸಿ ಉದಯ್ (42) ಮೃತ ವ್ಯಕ್ತಿ. ಮೆಡಿಕಲ್ ರೆಪ್ (ಔಷಧ ಮಾರಾಟ ಪ್ರತಿನಿಧಿ) ಆಗಿ ಕೆಲಸ ಮಾಡುತ್ತಿದ್ದ ಈತ, ಶುಕ್ರವಾರ ಮೈಸೂರಿನ ದೇವರಾಜ ಮೊಹಲ್ಲಾದ ಸಯ್ಯಾಜಿರಾವ್ ರಸ್ತೆಯ ಭಾಗ್ಯಲಕ್ಷ್ಮಿ ಲಾಡ್ಜ್‌ನಲ್ಲಿ ರೂಮ್ ಮಾಡಿಕೊಂಡಿದ್ದ. ಈತನು ರೂಮ್‌ನಿಂದ ಹೊರಬಾರದೇ ಇದ್ದ ಹಿನ್ನಲೆಯಲ್ಲಿ ಲಾಡ್ಜ್ ಸಿಬ್ಬಂದಿ ಅನುಮಾನಗೊಂಡು ಪೊಲೀಸರಿಗೆ ಮಾಹಿತಿ ನೀಡಿದ್ದು, ಪೊಲೀಸರು ಬಂದು ಪರಿಶೀಲಿಸಿದಾಗ ಆತ ಮೃತಪಟ್ಟಿರುವುದು ಬೆಳಕಿಗೆ ಬಂದಿದೆ.

ಅತಿಯಾದ ಮದ್ಯ ಸೇವನೆಯಿಂದ ಅನಾರೋಗ್ಯಕ್ಕೆ ತುತ್ತಾಗಿದ್ದ ಎಂಬ ಮಾಹಿತಿ ವಿಚಾರಣೆ ವೇಳೆ ಲಭ್ಯವಾಗಿದೆ. ಅನಾರೋಗ್ಯ ಇದ್ದೂ ಅತಿಯಾಗಿ ಮದ್ಯ ಸೇವನೆ ಮಾಡಿರುವ ಕಾರಣ ಆತ ಮೃತಪಟ್ಟಿರಬಹುದು. ನಿನ್ನೆ ಬಂದ ಈ ಲಾಡ್ಜ್‌ನಲ್ಲಿ ರೂಮ್ ಮಾಡಿಕೊಂಡಿದ್ದ. ಆತ ರೂಮ್‌ನಿಂದ ಹೊರ ಬಾರದೇ ಇದ್ದ ಹಿನ್ನಲೆಯಲ್ಲಿ ಲಾಡ್ಜ್ ಸಿಬ್ಬಂದಿ ಅನುಮಾನಗೊಂಡು ಮಾಹಿತಿ ನೀಡಿದರು. ಹೋಗಿ ಪರಿಶೀಲಿಸಿದಾಗ ಆತ ಮೃತಪಟ್ಟಿರುವುದು ದೃಢಪಟ್ಟಿತು. ಮೈಸೂರು ವೈದ್ಯಕೀಯ ಕಾಲೇಜಿನ ಶವಾಗಾರದಲ್ಲಿ ಆತನ ಮರಣೋತ್ತರ ಪರೀಕ್ಷೆ ನಡೆಸಿ ದೇಹವನ್ನು ವಾರಸುದಾರರಿಗೆ ಒಪ್ಪಿಸಲಾಗಿದೆ. ಈ ಸಂಬಂಧ ಅಸಹಜ ಸಾವು ಪ್ರಕರಣ ದಾಖಲಿಸಿಕೊಂಡು ತನಿಖೆಗೆ ಕ್ರಮ ವಹಿಸಲಾಗಿದೆ ಎಂದು ದೇವರಾಜ ಠಾಣೆ ಪೊಲೀಸರು ತಿಳಿಸಿದರು.

ಇಂಡಿಯನ್ ದಸ್ತಕಾರ್ ಹ್ಯಾಂಡ್ಲೂಮ್, ಹ್ಯಾಂಡಿಕ್ರಾಫ್ಟ್ ಪ್ರದರ್ಶನ–ಮಾರಾಟ




ಮೈಸೂರು, ಫೆ.14– ಮೈಸೂರಿನ ಸ್ಕೌಟ್ಸ್ ಅಂಡ್ ಗೈಡ್ಸ್ ಮೈದಾನದಲ್ಲಿ ಆಯೋಜಿಸಿರುವ ಜನಪ್ರಿಯ 'ಇಂಡಿಯನ್ ದಸ್ತಕಾರ್ ಹ್ಯಾಂಡ್ಲೂಮ್ ಮತ್ತು ಹ್ಯಾಂಡಿಕ್ರಾಫ್ಟ್' ಪ್ರದರ್ಶನ ಮತ್ತು ಮಾರಾಟಕ್ಕೆ ಗ್ರಾಹಕರಿಂದ ಉತ್ತಮ ಸ್ಪಂದನೆ ದೊರೆತಿದೆ.

ದೇಶದೆಲ್ಲೆಡೆಯಿಂದ ಆಗಮಿಸಿರುವ ಕುಶಲಕರ್ಮಿಗಳು 160ಕ್ಕೂ ಹೆಚ್ಚು ಮಳಿಗೆಗಳಲ್ಲಿ ವೈವಿಧ್ಯಮಯ ವಸ್ತುಗಳನ್ನು ಪ್ರದರ್ಶನಕ್ಕಿಟ್ಟಿದ್ದಾರೆ. ಮುರಾದಾಬಾದ್‌ನ ಹಿತ್ತಾಳೆ ಕಲಾಕೃತಿಗಳು, ಲೋಹದ ಮನೆ ಅಲಂಕಾರಿಕ ವಸ್ತುಗಳು, ಒಡಿಶಾದ ಪಟ್ಟಚಿತ್ರ, ಆಗ್ರಾದ ಅಮೃತಶಿಲೆ ಕರಕುಶಲ ವಸ್ತುಗಳು, ಭಾಗಲ್ಪುರದ ಕೈಮಗ್ಗ ಸೀರೆಗಳು, ಪಶ್ಚಿಮ ಬಂಗಾಳದ ಕೈಯಿಂದ ಚಿತ್ರಿಸಿದ ಸೀರೆಗಳು, ಮೀರತ್‌ನ ಖಾದಿ ಕುರ್ತಾ ಮತ್ತು ಖಾದಿ ಕುರ್ತಿ, ಖುರ್ಜಾದ ಮಣ್ಣಿನ ಪಾತ್ರೆಗಳು, ಕಾಶ್ಮೀರದ ಪಶ್ಮಿನಾ ಶಾಲುಗಳು, ಸೀರೆ, ಉಡುಪುಗಳು, ಕರ್ನಾಟಕದ ಹತ್ತಿ, ಧಾರವಾಡ ಮತ್ತು ಇಳ್ಕಲ್ ಸೀರೆಗಳು, ತಮಿಳುನಾಡಿನ ಕೈಮಗ್ಗ ಮನೆ ಪೀಠೋಪಕರಣಗಳು, ಝಾನ್ಸಿಯ ಕೈಮಗ್ಗ ಬೆಡ್‌ಶೀಟ್‌ಗಳು, ಜೈಪುರದ ಬೆಡ್‌ಶೀಟ್‌ಗಳು, ಆಂಧ್ರಪ್ರದೇಶದ ಕಚಂಪಲಿ ಇಕ್ಕತ್ ಟಾಪ್‌ಗಳು, ಲಕ್ನೋದ ಚಿಕ್ಕನ್ಕರಿ ಉಡುಗೆ ಮತ್ತು ಟಾಪ್‌ಗಳು, ಪಶ್ಚಿಮ ಬಂಗಾಳದ ಆಕ್ಸಿಡೀಕೃತ ಆಭರಣಗಳು, ಕೈಯಿಂದ ತಯಾರಿಸಿದ ಫಿರೋಜಾಬಾದ್ ಗಾಜಿನ ಬಳೆಗಳು, ಪಂಜಾಬ್‌ನ ಜ್ಯುತಿ, ಮಿರ್ಜಾಪುರದ ಕಾರ್ಪೆಟ್, ನೇಪಾಳಿ ಕಲ್ಲಿನ ಕಲಾಕೃತಿಗಳು, ಚನ್ನಪಟ್ಟಣದ ಮರದ ಆಟಿಕೆಗಳು, ಸಹಾರನ್‌ಪುರದ ಕರಕುಶಲ ಪೀಠೋಪಕರಣಗಳು, ಕಾಶ್ಮೀರದ ಒಣ ಹಣ್ಣುಗಳು, ಮೈಸೂರಿನ ಸೆಣಬಿನ ಕೈಚೀಲಗಳು ಸೇರಿದಂತೆ ಭಾರತದ ಪ್ರಾದೇಶಿಕ ಸಂಸ್ಕೃತಿ ಬಿಂಬಿಸುವ ವಸ್ತುಗಳು ಲಭ್ಯವಿವೆ.

ಈ ಮೇಳದಲ್ಲಿ ಪಶ್ಚಿಮ ಬಂಗಾಳದಲ್ಲಿ ಹುಲ್ಲು ಚಾಪೆಗಳನ್ನು ತಯಾರಿಸುವ ವಿಧಾನವನ್ನು ಪ್ರಾಯೋಗಿಕವಾಗಿ ಅರಿಯುವ ಅವಕಾಶ ಕಲ್ಪಿಸಲಾಗಿದೆ. ಮಾರ್ಚ್ 15ರವರೆಗೂ ಈ ಪ್ರದರ್ಶನ ಮತ್ತು ಮಾರಾಟ ಇರಲಿದ್ದು, ಬೆಳಗ್ಗೆ 10.30ರಿಂದ ರಾತ್ರಿ 9.30ರವರೆಗೆ ಭೇಟಿ ನೀಡಬಹುದು. ಹೆಚ್ಚಿನ ವಿವರಕ್ಕೆ ಮೊ.ಸಂ.9886507007ಕ್ಕೆ ಕರೆ ಮಾಡಬಹುದು ಎಂದು ಆಯೋಜಕರು ತಿಳಿಸಿದ್ದಾರೆ.

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರಾದ ಶ್ರೀಮತಿ ಸುಧಾ ಕೋಂ ಸ್ವಪ್ರಭಾನಂದಾರಾಧ್ಯರವರು, ಷೆಡ್ಯೂಲ್ ಸ್ವತ್ತಿನ ಲೆಸ್ಸಿ ಆಗಿದ್ದು, ಷೆಡ್ಯೂಲ್ ಸ್ವತ್ತನ್ನು ಮೂಲ ಮಾಲೀಕರಾದ ಆಲಮ್ಮ ಕೋಂ ಎಂ.ಕೆ. ಲಿಂಗಯ್ಯ ರವರಿಂದ ಲೀಸ್‌ಗೆ ಪಡೆದಿದ್ದು, ದಿನಾಂಕ: 16/09/2000 ರಿಂದ ಲೆಸ್ಸಿಯಾಗಿ ಷೆಡ್ಯೂಲ್ ಸ್ವತ್ತಿನ ಸ್ವಾಧೀನಾನುಭವದಲ್ಲಿರುತ್ತಾರೆ. ವಸ್ತುಸ್ಥಿತಿ ಹೀಗಿರುವಾಗ, ದಿವಂಗತ ಆಲಮ್ಮನವರ ಮಕ್ಕಳಾದ ಎಂ.ಎಲ್. ಅಶೋಕ, ಎಂ.ಎಲ್.ಗೀತ, ಎಂ.ಎಲ್. ಮಂಗಳಗೌರಿ, ತಾರಾಮಣಿ, ಎಂ.ಎಲ್. ಮಹದೇವು ಮತ್ತು ಎಂ.ಎಲ್.ಮೋಹನ ರವರುಗಳು ಷೆಡ್ಯೂಲ್ ಸ್ವತ್ತಿನ ಮೇಲೆ ಯಾವುದೇ ತರಹದ ಹಿತಾಸಕ್ತಿ, ಸ್ವಾಧೀನ ಇಲ್ಲದಿದ್ದರೂ ಸಹ ನನ್ನ ಕಕ್ಷಿದಾರರ ಸ್ವಾಧೀನಾನುಭವಕ್ಕೆ ತೊಂದರೆ ಕೊಡುವ ಉದ್ದೇಶದಿಂದ ಸ್ವತ್ತಿಗೆ ಸಂಬಂಧಿಸಿದಂತೆ ಷೆಡ್ಯೂಲ್ ಸ್ವತ್ತನ್ನು ಪರಭಾರೆ ಮಾಡುವ ಪ್ರಯತ್ನದಲ್ಲಿರುವುದು ನನ್ನ ಕಕ್ಷಿದಾರರಿಗೆ ಕಂಡು ಬಂದಿರುತ್ತದೆ. ಈ ಮೇಲ್ಕಂಡ ಕಾರಣಗಳಿಗಾಗಿ, ಯಾವುದೇ ವ್ಯಕ್ತಿ/ ಸಂಸ್ಥೆಗಳು ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ರೀತಿಯ ವ್ಯವಹಾರ, ಚಟುವಟಿಕೆಗಳನ್ನು ಕೈಗೊಂಡರೆ, ಸದರಿ ವ್ಯವಹಾರಗಳು ನನ್ನ ಕಕ್ಷಿದಾರರ ಸ್ವಾಧೀನಕ್ಕಾಗಲೀ, ಹಕ್ಕಿಗೆ ಬದ್ಧಪಡಿಸುವುದಿಲ್ಲ ಹಾಗೂ ಅಂತಹ ವ್ಯವಹಾರಗಳಿಗೆ ಅವರೇ ಜವಾಬ್ದಾರರಾಗುತ್ತಾರೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಸಿಟಿ, ದೇವರಾಜ ಮೊಹಲ್ಲಾ, ವಿನೋಬಾ ಮುಖ್ಯರಸ್ತೆ, ಶ್ರೀರಾಂಪೇಟೆ, ಸ್ವತ್ತಿನ ನಂ.1080, 1080/1–2, ಹೊಸ ನಂ.41/1 ರಲ್ಲಿ ವಿಸ್ತೀರ್ಣ ಪೂರ್ವ ಪಶ್ಚಿಮ : 19 1/2 ಅಡಿ, ದಕ್ಷಿಣೋತ್ತರ : 46 ಅಡಿ, ಒಟ್ಟು 2484 ಚದರ ಅಡಿಗಳುಳ್ಳ ನೆಲಮಹಡಿ, ಮೊದಲನೇ ಮಹಡಿ ಮತ್ತು ಎರಡನೇ ಮಹಡಿಯ ಆರ್.ಸಿ.ಸಿ. ಕಟ್ಟಡಕ್ಕೆ ಚಕ್ಕುಬಂದಿ: ಪೂರ್ವಕ್ಕೆ : ಗಲ್ಲಿ ಮತ್ತು ಅಡವಿಶೆಟ್ಟಿ ಮನೆ, ಪಶ್ಚಿಮಕ್ಕೆ : ಲಲಿತಾಬಾಯಿ ರವರ ಮನೆ, ಉತ್ತರಕ್ಕೆ : ಶ್ರೀರಾಂಪೇಟೆ ಮುಖ್ಯ ರಸ್ತೆ, ದಕ್ಷಿಣಕ್ಕೆ : ಗಲ್ಲಿ

ಶ್ರೀ ಪಾಂಡೆ ಬಿ.ಎಸ್.ಎನ್. ವಕೀಲರು,
#452, ದಯಾನಿಧಿ, ಕೆ.ಎನ್.ಅಗ್ರಹಾರ,
ಮೈಸೂರು 570 004.
ಮೊಬೈಲ್ ಸಂಖ್ಯೆ: 93421 08110

ಸಹಕಾರ ಅಭಿವೃದ್ಧಿ ಅಧಿಕಾರಿ ಹಾಗೂ ಇಲಾಖಾ ಮಧ್ಯಸ್ಥದಾರರು, ಸಹಕಾರ ಸಂಘಗಳ ಉಪ ನಿಬಂಧಕರ ಕಛೇರಿ, ಮೈಸೂರು ಜಿಲ್ಲೆ, ಮೈಸೂರು ಇವರ ಕಛೇರಿಯಿಂದ.

ದಾವಾ ಸಂಖ್ಯೆ : ಡಿಆರ್‌ಎಂ / ಆ.ದಾವಾ / ಸಿ–7 / ಕಲಂ–70 / 03 /2025–26

ಅರ್ಜಿದಾರರು	ವಿರುದ್ಧ	ಎದುರುದಾರರು
ಮುಖ್ಯ ಕಾರ್ಯನಿರ್ವಹಣಾಧಿಕಾರಿ ಗುತ್ತಿಗೆದಾರರ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ., ನಂ. 293, 'ಡಿ' ಸುಬ್ಬಯ್ಯ ರಸ್ತೆ, ಚಾಮರಾಜ ಮೊಹಲ್ಲಾ, ಮೈಸೂರು 570004.		1. ಶ್ರೀ. ಪಿ. ರವಿಶಂಕರ್ ಬಿನ್ ಪಿ.ಗಂಗಾಧರ ರಾವ್ ನಂ. 5209, 3ನೇ ಹಂತ, 8ನೇ 'ಎ' ಮೇನ್, ದಟ್ಟಗಳ್ಳಿ, ಮೈಸೂರು. 2. ಶ್ರೀ. ಮಹದೇವ ಬಿನ್. ಲೇ. ಜವರೇಗೌಡ ನಂ. 507, ಎ–1 ಬ್ಲಾಕ್, 3ನೇ ಹಂತ, ವಿಜಯನಗರ, ಮೈಸೂರು.

ನೋಟೀಸ್

ಮೇಲ್ಕಂಡ ಪ್ರಕರಣದ ಒಂದನೇ ಎದುರುದಾರರಾದ ಶ್ರೀ. ಪಿ. ರವಿಶಂಕರ್ ಬಿನ್. ಪಿ. ಗಂಗಾಧರ ರಾವ್ ಆದ ನಿಮಗೆ ಈ ಮೂಲಕ ತಿಳಿಸುವುದೇನೆಂದರೆ ನೀವು ಗುತ್ತಿಗೆದಾರರ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ., ಮೈಸೂರು. ಇಲ್ಲಿ ಪಡೆದಿರುವ ಓವರ್‌ಡ್ರಾಫ್ಟ್ ಸಾಲ ಬಾಕಿ ರೂ. 53,98,917/– ಗಳ ವಸೂಲಾತಿಗಾಗಿ ಅರ್ಜಿದಾರರು ದಾವಾ ದಾಖಲಿಸಿದ್ದು, ನಿಮಗೆ ಕಳುಹಿಸಲಾಗಿದ್ದ ನೋಂದಾಯಿತ ಅಂಚೆ ನೋಟೀಸ್ "LEFT WITHOUT INSTRUCTIONS" ಎಂಬ ಅಂಚೆ ಷರಾದೊಂದಿಗೆ ವಾಪಾಸ್ಸು ಬಂದಿದ್ದು, ಪತ್ರಿಕಾ ಪ್ರಕಟಣೆ ಮೂಲಕ ನಿಮಗೆ ಈ ಮೂಲಕ ನೋಟೀಸ್ ನೀಡಲಾಗುತ್ತಿದ್ದು, ಪ್ರಕರಣದ ವಿಚಾರಣೆಯನ್ನು ದಿನಾಂಕ 21.02.2026 ರಂದು ಶನಿವಾರ ಬೆಳಿಗ್ಗೆ 11.00 ಗಂಟೆಗೆ ಸಹಕಾರ ಸಂಘಗಳ ಉಪನಿಬಂಧಕರು, ಮೈಸೂರು ಜಿಲ್ಲೆ, ಮೈಸೂರು ರವರ ಕಛೇರಿಯಲ್ಲಿ ಈ ಕೆಳ ಸಹಿದಾರರ ಸಮ್ಮುಖದಲ್ಲಿ ನಡೆಸಲು ನಿಗಧಿಪಡಿಸಿದ್ದು, ನಿಮ್ಮ ತಕರಾರು ಇದ್ದಲ್ಲಿ ಸೂಕ್ತ ದಾಖಲೆಗಳೊಂದಿಗೆ ವಿಚಾರಣೆಗೆ ಹಾಜರಾಗುವುದು ಹಾಗೂ ತಪ್ಪಿದ್ದಲ್ಲಿ ಈ ಸಂಬಂಧ ನೀವು ಹೇಳುವುದು ಏನೂ ಇರುವುದಿಲ್ಲವೆಂದು ಪರಿಗಣಿಸಿ ನಿಮ್ಮ ಗೈರು ಹಾಜರಿಯಲ್ಲಿಯೇ ಲಭ್ಯ ದಾಖಲಾತಿಗಳ ಆಧಾರದ ಮೇರೆಗೆ ನಿಮ್ಮ ವಿರುದ್ಧ ಏಕಪಕ್ಷೀಯ ನಿರ್ಣಯವನ್ನು ಕೈಗೊಳ್ಳಲಾಗುವುದೆಂದು ತಿಳಿಯತಕ್ಕದ್ದು.

ಈ ನೋಟೀಸನ್ನು ನನ್ನ ಸ್ವ–ಸಹಿ ಹಾಗೂ ನ್ಯಾಯಾಲಯದ ಮೊಹರಿನೊಂದಿಗೆ ದಿನಾಂಕ 13.02.2026 ರಂದು ನೀಡಲಾಗಿದೆ.

ಸಹಿ/–ಸಹಕಾರ ಅಭಿವೃದ್ಧಿ ಅಧಿಕಾರಿ ಹಾಗೂ ಇಲಾಖಾ ಮಧ್ಯಸ್ಥದಾರರು, ಸಹಕಾರ ಸಂಘಗಳ ಉ.ಪ ನಿಬಂಧಕರ ಕಛೇರಿ, ಮೈಸೂರು ಜಿಲ್ಲೆ, ಮೈಸೂರು

ಮೈಸೂರು ಮಿತ್ರ – ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವು ಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು





